[Mr. DEPUTY SPEAKER in the Chair]

Budget Estimates for 1969-70—Demand for grants

Demand Nos. 21, 23 and 25.

Sri P. M. NADGOUDA (Minister for Development).—Sir, on the recommendation of the Governor, I beg to move:

"That a sum not exceeding Rs. 1,18,13,000 be granted to the Government to defray the charges which will come in course of payment during the financial year for the period ending 31st day the of March 1970, in respect of 'Rural Development'."

Mr. DEPUTY SPEAKER.—Motion moved:

"That a sum not exceeding Rs. 1,18,13,000 be granted to the Government to defray the charges which will come in course of payment during the financial year for the period ending 31st day of March 1970, in respect of 'Rural Development'."

Sri P. M. NADGOUDA.—Sir, on the remmendation of the Governor, I beg to move:

"That a sum not exceeding Rs. 2,28,78,000 be granted to the Government to defray the charges which will come in oourse of payment during the financial year for the period ending 31st day of March 1970, in respect of 'Co-operation'."

Mr. DEPUTY SPEAKER.—Motion moved:

"That a sum not exceeding Rs. 2,28,78,000 be granted to the Government to defray the charges which will come in course of payment during the financial year for the period ending 31st day of March 1970, in respect of 'Co-operation'."

Sri P. M. NADGOUDA.—Sir, on the recommendation of the Governor, I beg to move:

"That a sum not exceeding Rs. 3,03,24,000 be granted to the Government to defray the charges which will come in course of payment during the financial year for the period ending 31st day of March 1970, in respect of Community Development Projects, National Extension Service and Local Development Works'."

Mr. DEPUTY SPEAKER.—Motion moved:

"That a sum not exceeding Rs. 3,03,24,000 be granted to the Government to defray the charges which will come in course of payment during the financial year for the period ending 31st day of March 1970, in respect of 'Community Development Projects, National Extension Service and Local Development Works'."

† ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಸನ್ಮಾನ್ಯ ಸಭಾಪತಿಗಳೇ ಮಾನ್ಯ ಸಹಕಾರ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಸಹಕಾರ ಹಾಗೂ ಸ್ಥಾನಿಕ ಅಭಿವೃದ್ಧಿ ಸಂಸ್ಥೆಗಳಿಗೆ ಸಂಬಂಧಿಸಿದ ಬೇಡಿಕೆಗಳನ್ನು ನಾನು ಬಲವಾಗಿ ವಿರೋಧಿಸುತ್ತಾ ಕೆಲವು ಮಾತುಗಳನ್ನು ಈಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದರೆ ನನಗೆ ಒಂದು ಸಂತೋಷವಾಗುತ್ತದೆ, ಅದು ಏನೆಂದರೆ ಸಹಕಾರ ಚಳುವಳಿಯಲ್ಲಿ ಬಹಳ ವರ್ಷಗಳಾದನಂತರ ಕೆಲವು ಜನ ಅದನ್ನು ಅರಿತುಕೊಳ್ಳುವುದಕ್ಕೆ ಹತ್ತಿದ್ದಾರೆ ಎನ್ನುವ ಮಾತು ಸಂತೋಷದಾಯಕವಾದ ಸಂಗತಿ 1904ನೇ ಇಸವಿಯಲ್ಲಿ ಸಹಕಾರಿ ಕಾಯಿದೆ ಪಾಸಾಯಿತು. 64—65 ವರ್ಷಗಳು ದಾಟಿ ಹೋದರೂ ಕೂಡ ಸಹಕಾರಿ ರಂಗದಲ್ಲಿ ಎಷ್ಟು ಪ್ರಗತಿಯನ್ನು ಸಾಧಿಸಬೇಕೋ ಅಷ್ಟು ಪ್ರಗತಿಯನ್ನು ಸಾಧಿಸಿಲ್ಲ ಎಂದು ಹೇಳುವವರಲ್ಲಿ ನಾನೂ ಒಬ್ಬ. ಕಾಲಕ್ರಮೇಣ ಪ್ರಗತಿಯನ್ನು ಸಾಧಿಸಬೇಕಾಗುತ್ತದೆ ಎನ್ನುವಂಥಾ ಮಾತು ಬರುತ್ತನೆ. ಈಗ ನಮ್ಮ ಅಕ್ಕಪಕ್ಕದ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳು ಈ ಸಹಕಾರಿ ರಂಗದಲ್ಲಿ ಸಾಧಿಸಿರತಕ್ಕ ಪ್ರಗತಿಯನ್ನು ಹೋಲಿಸಿ ನೋಡಿದರೆ, ನಿಜವಾಗಿ ನಮ್ಮ ಪ್ರಗತಿ ಕುಂಠಿತವಾಗಿದೆ ಎಂದು ಹೇಳುವುದಕ್ಕೆ ದುಃಖವಾಗುತ್ತದೆ. ಇಡೀ ಭಾರತಾದ್ಯಂತ ಈ ಸಹಕಾರಿ ರಂಗದಲ್ಲಿ ಏನು ಸುಧಾರಣೆ ನಡೆಯಬೇಕಾಗಿತ್ತೋ ಅದು ಆಗಿಲ್ಲ, ಏನು ಪ್ರಗತಿ ಆಗಬೇಕಾಗಿತ್ತೋ ಅದು ಆಗಿಲ್ಲ ಎನ್ನುವ ವಿಷಾದಮಯವಾದ ಸ್ಥಿತಿಯನ್ನು ನಾವು ಕೇಳುತ್ತಿದ್ದೇವೆ ಮತ್ತು ನೋಡುತ್ತಿದ್ದೇವೆ. ನಮ್ಮ ಭಾರತ ಸರ್ಕಾರದ ಸಹಕಾರಿ ಸಚಿವರಾದ ಶ್ರೀ ಗುರುಪಾದ ಸ್ವಾಮಿಯವರು ಮೊನ್ನೆ ಹೈದರಾಬಾದಿನಲ್ಲಿ ಸಹಕಾರಿ ಚಳುವಳಿಯ ಬಗ್ಗೆ ಮಾತನಾಡುತ್ತಾ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ.

" We have suffered and tolerated mismanagement for long.
We cannot tolerate subsidized mismanagement any more."

ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ಈ ಒಂದು ವಾಕ್ಯವನ್ನು ಸಹಕಾರಿ ಸಚಿವರು ಮತ್ತು ಅದಕ್ಕೆ ಸಂಬಂಧಪಟ್ಟವರು ಎಲ್ಲರೂ ಗಮನಿಸಿದರೆ ಮತ್ತು ಅದರಂತೆ ಹೃತ್ಪೂರ್ವಕವಾಗಿ ನಡೆದುಕೊಳ್ಳುವ ಪ್ರತಿಜ್ಞೆಯನ್ನು ಮಾಡಿದರೆ ಸಹಕಾರಿ ರಂಗದ ಅಭ್ಯುದಯ ಆಗುತ್ತದೆ. ಸಹಕಾರಿ ರಂಗದ ಅಭ್ಯುದಯವನ್ನು ಕನ್ನಡಿಯಲ್ಲಿ ಕಾಣಬಹುದು.

ಇನ್ನೊಂದು ವಿಚಾರ, ಈಗ ಸುಮಾರು ನಾಲ್ಕೈದು ವರ್ಷಗಳಿಂದ ಅನೇಕ ಸಾರಿ ರಿಜಿಸ್ಟ್ರಾರ ಅವರ ಆಫೀಸಿಗೆ ನಾನು ಕಾಗದ ಬರೆದು ಈ ಸಹಕಾರಿ ಸಂಸ್ಥೆಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ತಿಳಿದುಕೊಳ್ಳಬೇಕೆಂದು ಪ್ರಯತ್ನ ಮಾಡಿದೆ. ಆದರೆ ಅವರಿಂದ ನನಗೆ ಉತ್ತರಬರಲಿಲ್ಲ. ಅದು ರಿಜಿಸ್ಟ್ರಾರ್ ಅವರ ಗಮನಕ್ಕೆ ಬರಲಿಲ್ಲವೋ ಏನೋ ಗೊತ್ತಾಗಲಿಲ್ಲ. ಆದರೆ ಈ ಸಾರಿ ನಾನು ಬರೆದ ಪತ್ರಕ್ಕೆ ತ್ವರಿತವಾಗಿ ಉತ್ತರ ಬಂದಿದೆ. ಅದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಈ ಸಹಕಾರಿ ಇಲಾಖೆಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ನೋಡಿದಾಗ ನನಗೆ ಅನಿಸುತ್ತದೆ, ನಿಜವಾದ ವಾಸ್ತವವಾದ ಅಂಕಿ ಅಂಶಗಳು ಅವರಿಗೆ ಬಂದಿಲ್ಲವೇನೋ ಎಂದು ಅನಿಸುತ್ತದೆ. ಮೈಸೂರು ರಾಜ್ಯದ ಸಹಕಾರಿ ರಂಗದ ಆಂದೋಳನ 100ಕ್ಕೆ 46ರಷ್ಟು ಜನಸಂಖ್ಯೆಯನ್ನು ಆವರಿಸಿಕೊಂಡಿದೆ ಎಂದು ಒಂದು ಪುಸ್ತಕದಲ್ಲಿ ಹೇಳಿದ್ದಾರೆ. ಎಂದರೆ 100ಕ್ಕೆ 46ರಷ್ಟು ಸಹಕಾರಿ ತತ್ವ ಬೆಳೆದಿದೆ, ಅಭಿವೃದ್ಧಿಯಾಗಿದೆ ಎನ್ನುವ ಭಾವನೆ ಸರ್ಕಾರಕ್ಕೆ ಬಂದಿದೆ. 2,35,86,772 ಜನಸಂಖ್ಯೆ ಇರುವ ಈ ದೇಶದಲ್ಲಿ ಇವೊತ್ತು ಸಹಕಾರ ಸಂಘಗಳಲ್ಲಿ 38½ ಲಕ್ಷ ಮಾತ್ರ ಸದಸ್ಯರಿದ್ದಾರೆ. ಈ ಕ್ಯಾಲಿಕ್ಯುಲೇಷನ್ ಹೇಗಿವೆ ಎಂದರೆ ಹಿಂದೆ ಕೇಂದ್ರ ಸರ್ಕಾರದಲ್ಲಿ ಆಹಾರ ಶಾಖೆಯಮಂತ್ರಿಗಳಾಗಿದ್ದ ಶ್ರೀಮಾನ್ ಕಿದ್ವಾಯಿ ಅವರು ಆಹಾರಕ್ಕೆ ಸಂಬಂಧಪಟ್ಟ ಅಂಕಿ ಸಂಖ್ಯೆಗಳನ್ನು ಕೊಟ್ಟ ಹಾಗೆ ಇದೆ. ಈಗ ನಾವು ವಾಸ್ತವವಾದ ಅಂಶಗಳನ್ನು ನೋಡಿದರೆ 100ಕ್ಕೆ 19ಕ್ಕಿಂತ ಹೆಚ್ಚು ಪ್ರಗತಿ ಆಗಿಲ್ಲ, ಮತ್ತು ಸಹಕಾರಿ ರಂಗದಲ್ಲಿ ಆಗತಕ್ಕಂಥ ತಪ್ಪುಗಳನ್ನು ಸುಧಾರಿಸುವುದಕ್ಕೆ ಆಗಿಲ್ಲ ಎನ್ನುವ ದೃಷ್ಟಿಯಿಂದ ಈ ವಿಚಾರವನ್ನು ವರಿಷ್ಠ ಅಧಿಕಾರಿಗಳ ಗಮನಕ್ಕೆ ನಾನು ತರಬಯಸುತ್ತೇನೆ. ಈಗ ಇವರು ಕೊಟ್ಟಿರತಕ್ಕಂಥ ಅಂಕಿ ಅಂಶಗಳು ಏನಿವೆ ಇವು ವಾಸ್ತವವಾದ ಅಂಕಿ ಅಂಶಗಳಲ್ಲ. ಇವು ಕಾಲ್ಪನಿಕವಾದ ಅಂಕಿಅಂಶಗಳು. ಈ ಕಾಲ್ಪನಿಕವಾದ ಅಂಕಿಅಂಶಗಳ ಮೇಲೆ ನಿಮ್ಮದು ಪ್ರಗತಿಯಾಗಿದೆ ಎಂದು ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತೇನೆ.

ಈ ಸಹಕಾರಿ ಸಂಘಗಳ ಮುಖಾಂತರ ಸಾಲವನ್ನು ಕೊಡುವುದರಲ್ಲಿ ಒಂದು ಕ್ರೆಡಿಟ್ ಸೆಕ್ಟಾರ್, ಎರಡು ಮಾರ್ಕೆಟ್ ಸೆಕ್ಟಾರ್, ಮೂರು ಪ್ರೋಸೆಸಿಂಗ್ ಸೆಕ್ಟಾರ್, ನಾಲ್ಕು ಇಂಡಸ್ಟ್ರಿಯಲ್ ಸೆಕ್ಟಾರ ಎಂದು ಇದೆ. ಈ ನಾಲ್ಕು ಸೆಕ್ಟಾರುಗಳಲ್ಲಿಯೂ ಹೇಗೆ ಬೆಳವಣಿಗೆಯಾಗಿದೆ ಎಂಬುದನ್ನು ನೋಡಿದರೆ ನಿಜವಾಗಿ ಸಹಕಾರ ಚಳುವಳಿಯ ನಿಜಾಂಶ ಕಂಡುಬರುತ್ತದೆ.

ಇಪ್ಪತ್ತನೆ ದಿವಸ ಕ್ರೆಡಿಟ್ ಸೆಕ್ಟಾರಿನಲ್ಲಿ ಸಹಕಾರಿ ರಂಗದ ಕರ್ತವ್ಯವನ್ನು ಸರಿಯಾಗಿ ಮಾಡಿದ್ದಾರೆಯೇ ಎಂಬುದನ್ನು ನೋಡುವುದಾದರೆ ಸಾಹುಕಾರರನ್ನು ಬಂದ್ ಮಾಡಿದ್ದಾರೆ. ಮನಿಲೆಂಡರ್ ಆಕ್ಟನ್ನು ಎ. ಡಿ. ಆರ್. ಆಕ್ಟನ್ನು ಮಾಡಿ ರೈತರು ಸಾಹುಕಾರರ ಹತ್ತಿರ ಹೋಗಬಾರದು ಎನ್ನುವ ಭಾವನೆಯನ್ನು ರೈತರಿಗೆ ಉಂಟುಮಾಡಿ ಅದನ್ನು ತಪ್ಪಿಸಿದುದಕ್ಕಾಗಿ ಸರ್ಕಾರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇತ್ತೀಚೆಗೆ ಕ್ರೆಡಿಟ್ ಸೆಕ್ಟಾರ ಎಷ್ಟರಮಟ್ಟಿಗೆ ಪ್ರಗತಿಯನ್ನು ಸಾಧಿಸಿದೆ ಎಂಬುದನ್ನು ನಾವು ನೋಡಬೇಕಾಗಿದೆ. ಕ್ರೆಡಿಟ್ ಸೊಸೈಟಿಗಳು ಬಹಳ ಸಂಖ್ಯೆಯಲ್ಲಿ ಆರ್ಗನೈಜಾಗಿವೆ. ಇವುಗಳೆಲ್ಲವೂ 100 ಕ್ಕೆ 100 ಸಹಕಾರಿ ಕ್ಷೇತ್ರದಲ್ಲಿ ಬಂದಿವೆ. ಆದರೆ ಇವು ಎಷ್ಟರಮಟ್ಟಿಗೆ ಸಾಲವನ್ನು ಜನತೆಗೆ ಕೊಡುತ್ತಿವೆ ಎಂದರೆ ಈಗ ರಿಜರ್ವ್‌ಬ್ಯಾಂಕಿನವರು ಸಹಕಾರ ಸಂಘಗಳಿಗೆ ಹಣವನ್ನು ಕೊಟ್ಟಿದ್ದಾರೆ. ಷೆಡ್ಯೂಲ ಬ್ಯಾಂಕುಗಳಿಗೆ ಹಣವನ್ನು ಕೊಟ್ಟಿದ್ದಾರೆ. ಆದರೆ ಇವುಗಳ ಮುಖಾಂತರ ಜನತೆಗೆ ಎಷ್ಟರಮಟ್ಟಿನ ಒಂದು ಸವಲತ್ತನ್ನು ಕೊಡಬೇಕಾಗಿತ್ತೋ ಅಷ್ಟರಮಟ್ಟಿನ ಸವಲತ್ತನ್ನು ಕೊಟ್ಟಿಲ್ಲ ಎಂದು ನಾನು ತಲೆಬಾಗಿ ಹೇಳುತ್ತೇನೆ. ಈ ಸಹಕಾರಿ ರಂಗದಲ್ಲಿ ತಪ್ಪು ನಡೆದಿದೆ ಎಂದು ಹೇಳುವಂಥಾ ದೃಷ್ಟಿ ಆಳುವ ಪಕ್ಷದವರಿಗೆ ಇಲ್ಲದಿದ್ದರೆ ನಾಳೆ ಒಂದುವೇಳೆ ಹೆಚ್ಚುಕಡಿಮೆ ಆದರೆ ಅದರ ಹೊಣೆಯನ್ನು ಅಥವಾ ಜವಾಬ್ದಾರಿಯನ್ನು ಎಲ್ಲರೂ ಹೊರಬೇಕಾಗುತ್ತದೆ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ವ್ಯವಸಾಯಗಾರರಿಗೆ ಮಧ್ಯಮಾವಧಿ ಸಾಲವನ್ನು ಕೊಡಲಿ ಎನ್ನುವ ದೃಷ್ಟಿಯಿಂದ ರಿಜರ್ವ್ ಬ್ಯಾಂಕಿನವರು ಶೇಕಡಾ 3 ಪರ್ಸೆಂಟು ಬಡ್ಡಿಯಂತೆ ಬೇರೆಬೇರೆ ಸಹಕಾರ ಸಂಘಗಳಿಗೆ ಹಣವನ್ನು ಸಾಲವಾಗಿ ಕೊಡುತ್ತಾರೆ. ಅದು ಅಪೆಕ್ಸ್ ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕ್, ಸೆಂಟ್ರಲ್ ಕೋ ಆಪರೇಟೀವ ಬ್ಯಾಂಕ್, ಮತ್ತು ಪ್ರೈಮರಿ ಕೋ ಆಪರೇಟೀವ್ ಬ್ಯಾಂಕುಗಳ ಮುಖಾಂತರ ರೈತರ ಕೈ ತಲುಪುವಾಗ ಅದು ಶೇಕಡಾ 9 ರೂಪಾಯಿ ಅಥವಾ 10 ರೂಪಾಯಿಗಳ ಬಡ್ಡಿಗೆ ಏರುತ್ತದೆ. ಈ ರೀತಿ ಆಗುವುದಾದರೆ ಸಹಕಾರಿ ರಂಗದಿಂದ ಜನತೆಗೆ ರೈತರಿಗೆ ಯಾವರೀತಿಯ ಒಂದು ಸೌಲಭ್ಯ ದೊರೆಯುತ್ತಿದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಜನತಾ ಹಿತದೃಷ್ಟಿಯಿಂದ ರೈತರ ಹಿತದೃಷ್ಟಿಯಿಂದ ರಿಜರ್ವ್ ಬ್ಯಾಂಕಿನವರು ಏನೊಂದು ಸಾಲದ ಸೌಲಭ್ಯವನ್ನು ಒದಗಿಸುತ್ತಾರೆಯೋ ಅದು ಅವರಿಗೆ ನೇರವಾಗಿ ತಲುಪುವುದಾದರೆ ನೆಟ್ಟಗಾಗುತ್ತದೆಯೋ ಏನೋ ಎಂದು ಅನಿಸುತ್ತದೆ. ರೈತರ ಹಿತದೃಷ್ಟಿಯಿಂದ ಈ ಪ್ರಶ್ನೆಯನ್ನು ಬಿಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಕ್ರೆಡಿಟ್ ಸೊಸೈಟಿಗಳ ಬಗ್ಗೆ ಹೇಳಬೇಕೆಂದರೆ ರೈತರಿಗೆ ವರ್ಷದ ಎಲ್ಲಾ ಕಾಲದಲ್ಲಿಯೂ ಕೂಡ ಸಾಲ ಸಿಗುವಂತಹ ಏರ್ಪಾಡಾಗಬೇಕು. ರೈತರಿಗೆ ತನಗೆ ಯಾವಾಗ ಸಾಲ ಬೇಕಾಗುತ್ತದೆಂದು ಮೊದಲೇ ತಿಳಿದುಕೊಂಡು ಮುಂಗಡ ಪತ್ರವನ್ನು ಕೊಡುವ ಸಾಮರ್ಥ್ಯವಿರುವುದಿಲ್ಲ. ಇಂತಹ ವಿಚಾರದಲ್ಲಿ ಒಳ್ಳೆಯ ವಾತಾವರಣವನ್ನು ಮಾನ್ಯ ಮಂತ್ರಿಗಳು ಉಂಟು ಮಾಡಬೇಕೇ ವಿನಹ ರಾಜಕೀಯವನ್ನು ಉಂಟುಮಾಡಬಾರದು. ತಾವು ಬೇಕಾದರೆ ಮಾತನಾಡುವಾಗ ಗಟ್ಟಿಯಾಗಿ ಮಾತನಾಡಿ. ಆದರೆ ಕೆಲಸದಲ್ಲಿ ಮೃದುತ್ವವನ್ನು ತೋರಿಸಬೇಕು. ರೈತರಿಗೆ ಸಾಲದ ಸೌಕರ್ಯ ವರ್ಷದ ಎಲ್ಲಾ ಕಾಲದಲ್ಲಿಯೂ ಸಿಗುತ್ತಿದೆ ಎಂದು ತಾವು ಹೇಳಬಹುದು. ಆದರೆ ಸೆಂಟ್ರಲ್ ಬ್ಯಾಂಕಿನ ಸ್ಥಿತಿಗತಿಯನ್ನು ನೋಡಿದ್ದೇ ಆದರೆ ಯಾವ ರೈತ ತನ್ನ ಹಿಂದಿನ ಸಾಲವನ್ನು ತೀರಿಸಿರುವುದಿಲ್ಲವೋ ಅಂತಹವನಿಗೆ ಮತ್ತೆ ಸಾಲಸಿಗುವ ಭಾವನೆ ಇಲ್ಲವಾಗಿದೆ. ಇದು ಮೊದಲು ಹೋಗಬೇಕು. ಇಂತಹ ಪ್ರಕರಣಗಳಲ್ಲಿ ರಾಜಕೀಯವನ್ನು ಬೆಳೆಸುವುದು ಸರಿಯಲ್ಲ. ಸಾಲ ಸಿಗುವ ವಿಚಾರದಲ್ಲಿ ರೈತರಿಗೆ ಯಾವ ರೀತಿಯ ಅನುಮಾನವೂ ಸಹ ಇರಬಾರದು. ಸ್ಪೆಷಲ್ ಅಗ್ರಿಕಲ್ಚರ್ ಸ್ಟೆಬಿಲೈಜೇಷನ್ ಫಂಡ್ ಎಂದು ಕ್ರಿಯೇಟ್ ಮಾಡಿದ್ದೀರಿ. ಈ ಫಂಡಿನಿಂದ ನಿಜವಾಗಿಯೂ ಒಂದು ಕಡೆಯಲ್ಲಿಯೂ ಸಹ ಉಪಯೋಗವಾಗಿಲ್ಲ. ಈ ಫಂಡನ್ನು ಸೆಂಟ್ರಲ್ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕುಗಳಿಂದ ರೈತರಿಗೆ ಕೊಡಬೇಕೆಂದು ಹೇಳಿದ್ದೀರಿ. ಆದರೆ ಯಾರಿಗೂ ಸಿಗುತ್ತಿಲ್ಲ, ಯಾರಾದರೂ ಕೂಡ ತೆಗೆದುಕೊಂಡಿದ್ದರೆ, ಅವರ ಜಮೀನಿನಲ್ಲಿ 6 ಆಣೆ ಬೆಳೆಯಾಗಿದ್ದರೂ ಕೂಡ ಅವರಿಂದ ಕಡ್ಡಾಯವಾಗಿ ವಸೂಲಿ ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಇದು ಸರಿಯಲ್ಲ. ಈ ಫಂಡಿನಿಂದ ರೈತರಿಗೆ ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿಯಾಗಿರುವುದರಿಂದ ಮತ್ತು ಈ ಫಂಡು ದುರುಪಯೋಗವಾಗುತ್ತಿರುವುದರಿಂದ ಇದನ್ನು ತೆಗೆದುಬಿಡುವುದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ಪ್ರತಿಯೊಂದು ಸಲವೂ ರೈತರು ತಮ್ಮ ಹೊಲವನ್ನು ಆಧಾರವಾಗಿಟ್ಟು ಸಾಲ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಸರ್ಕಾರದವರು ರೈತರಿಗೆ ಸಾಲ ಕೊಡುವುದು ದೇಶದ ಹಿತದೃಷ್ಟಿಯಿಂದ. ಹೆಚ್ಚು ಆಹಾರ ಬೆಳೆಯಲಿ ಎಂಬುದಾಗಿ ಸಾಲ ಕೊಡುತ್ತೀರಿ. ಇಂತಹವರ ಬಗ್ಗೆ ಘಾತುಕತನ ಮಾಡುವುದು ಸರಿಯಲ್ಲ. ಈ ಕರ್ಮಯೋಗಿಗಳು ಚೆನ್ನಾಗಿ ದುಡಿಯಬೇಕಾದರೆ ಅವರಿಗೆ ಬೇಕಾದ ಅನುಕೂಲಗಳನ್ನು ಸರ್ಕಾರದವರು ಒದಗಿಸಿಕೊಡಬೇಕು. ಇಲ್ಲದಿದ್ದರೆ

(ಶ್ರೀ ಕೆ. ಎಚ್. ಪಾಟೀಲ್)

ಮುಂದೆ ರೈತರ ರಾಜ್ಯ ಬಂದಾಗ ನಿಮಗೆ ಶಿಕ್ಷೆ ಕೊಡುವ ಸಂದರ್ಭ ಬರಬಹುದೆಂದು ಈ ಮೂಲಕ ಎಚ್ಚರಿಗೆ ಕೊಡುತ್ತಿದ್ದೇನೆ. ಈ ಕರ್ಮಯೋಗಿಗಳಿಗೆ ಕಲ್ಯಾಣ ಮಾಡಬೇಕೆಂಬ ಇಚ್ಛೆ ತಮಗಿದ್ದರೆ ಅವರಿಗೆ ಸಮಯಕ್ಕೆ ಬೇಕಾದ ಅನುಕೂಲಗಳನ್ನು ಸಾಲಗಳನ್ನು ಒದಗಿಸಿಕೊಡಬೇಕು. ಈ ಮೂಲಕ ಹೆಚ್ಚಿನ ಆಹಾರಧಾನ್ಯಗಳನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಮಾರ್ಕೆಟಿಂಗ್ ಸೊಸೈಟಿಗಳ ಬಗ್ಗೆ ಹೇಳಬೇಕೆಂದರೆ, ಈ ಸೊಸೈಟಿಗಳು ರೈತರಿಗೆ ಬೇಕಾದ ಗೊಬ್ಬರ ಮತ್ತು ಬೀಜವನ್ನು ಒದಗಿಸದೆ ಸೀಮೆಎಣ್ಣೆ, ಸಕ್ಕರೆ ಮುಂತಾದ ರೇಷನ್ ಪದಾರ್ಥಗಳನ್ನು ಮಾರಿ ಸರ್ಕಾರದಿಂದ ಸಬ್ಸಿಡಿ ಮುಂತಾದ ಅನುಕೂಲಗಳನ್ನು ಪಡೆಯುತ್ತಿದ್ದಾರೆ ಈ ವಿಚಾರವನ್ನು ನಾನು ಅನೇಕಸಲ ಹೇಳಿದ್ದೇನೆ. ನಾನು ಹೇಳುವುದು ನಿಜವಿದ್ದರೆ ನಿಮಗೆ ಹೃದಯವಿದ್ದರೆ, ವಿವೇಕವಿದ್ದರೆ ಒಪ್ಪಿಕೊಳ್ಳಿ. ಅಹೋರಾತ್ರಿ ದುಡಿಯುವ ರೈತರಿಗೆ ಬೇಕಾಗುವ ಗೊಬ್ಬರ ಬೀಜಗಳನ್ನು ಒದಗಿಸದೆ ಕೇವಲ ಚಿಮಣಿಎಣ್ಣೆ, ಸಕ್ಕರೆ, ಮುಂತಾದ ರೇಷನ್ ಪದಾರ್ಥಗಳನ್ನು ಮಾರಾಟ ಮಾಡುತ್ತಿರುವ ಈ ಸೊಸೈಟಿಗಳನ್ನು ಮಾರ್ಕೆಟಿಂಗ್ ಸೊಸೈಟಿಗಳೆಂದು ಹೇಳುವುದಕ್ಕೆ ಬರುವುದಿಲ್ಲ. ಇಂತಹ ಸೊಸೈಟಿಗಳಿಗೆ ಸಬ್‌ಸಿಡಿ ಅಥವಾ ಲೋನ ಕೊಡುವುದು ಸರಿಯಲ್ಲವೆಂದು ಮಾನ್ಯ ಸಹಕಾರ ಸಚಿವರ ಗಮನಕ್ಕೆ ತರುತ್ತೇನೆ.

ಇನ್ನು ಕ್ಯಾಟಲ್ ಫೀಡ್ ಪ್ರೊಸೆಸಿಂಗ್ ಸೊಸೈಟಿಗಳ ಬಗ್ಗೆ ಹೇಳಬೇಕೆಂದರೆ, ಗೃಹಮಂಡಲಯವರು ಮಂಜೂರ್ಮಾಡಿದ ಸಾಲವನ್ನು ಪಡೆದುಕೊಳ್ಳುವುದಕ್ಕೆ ಬೆಂಗಳೂರಿನಲ್ಲಿರುವ ಸಹಕಾರಿ ಸಂಘಗಳ ರಿಜಿಸ್ಟ್ರಾರ ಅವರ ಅನುಮತಿಯನ್ನು ಕೋರಿ ಹುಲಕೋಟೆ ದನಗಳ ಆಹಾರ ಸಹಕಾರಿ ಸಂಘದವರು ಹಾಕಿಕೊಂಡ ಅರ್ಜಿಗೆ ಅನುಮತಿಯನ್ನು ನೀಡುವುದರಲ್ಲಿ ಆಗಿರುವ ವಿಳಂಬಕ್ಕೆ ಕಾರಣವೇನು ಎಂಬ ಪ್ರಶ್ನೆಯನ್ನು ಶ್ರೀ ಕೆ. ಪಿ. ನಾಡಗೌಡರು ಕೇಳಿದ್ದಕ್ಕೆ ಶ್ರೀಮಾನ್ ಬಿ. ಎಲ್. ಗೌಡರು ಉತ್ತರ ಕೊಡುತ್ತಾ ದನಗಳ ಆಹಾರಗಳ ಸಂಸ್ಕರಣೆ ಕಾರ್ಯವನ್ನು ಸಂಘದವರು ಇನ್ನೂ ಪ್ರಾರಂಭಿಸಿಲ್ಲ, ಸಂಸ್ಕರಣೆ ಕಾರ್ಯವನ್ನಾರಂಭಿಸಿದ ನಂತರ ಸದರೀ ಸಂಘದವರ ಕೋರಿಕೆಯನ್ನು ಪರಿಶೀಲಿಸಲಾಗುವುದು ಎಂದು ಹೇಳಿದರು. ಹುಟ್ಟಿಸಿದ ದೇವರು ಅನ್ನ ನೀರನ್ನು ಕೊಡುವಂತೆ ಈ ತರಹದ ಸೊಸೈಟಿಗಳಿಗೆ ಸರ್ಕಾರದವರು ಸಹಾಯ ಕೊಡದಿದ್ದರೆ ದೈವೀ ಬಲವೊಂದು ಇದ್ದರೆ ಯಾವ ರೀತಿಯಾದರೂ ಕೂಡ ನಡೆಯುತ್ತವೆ. ದೈವೀಬಲವಿರುವ ಸೊಸೈಟಿಗಳನ್ನು ರಾಕ್ಷಸೀಬಲವಿರುವ ಸರ್ಕಾರ ಏನೂ ಮಾಡುವುದಕ್ಕಾಗುವುದಿಲ್ಲ. ಈ ರೀತಿ ಪಕ್ಷಪಾತವನ್ನು ತಾವು ತೋರುವುದಾದರೆ ನಿಮ್ಮನ್ನು ಕೇಳುವವರು ಮುಂದೆ ಬರುತ್ತಾರೆ. ವಿರೋಧಪಕ್ಷದವರಿಗೆ ನೀವು ಈ ರೀತಿ ಅನ್ಯಾಯ ಮಾಡಬಹುದು. ಆದರೆ ಇಂತಹ ಅನ್ಯಾಯಗಳನ್ನು ಕೇಳಲು ನಿಮ್ಮ ಪಕ್ಷದಲ್ಲಿ ಯಾರೂ ಇಲ್ಲವೇ? ವಿವೇಕವಿರುವ ಜಂಟಲ್ಮನ್‌ಗಳು ನಿಮ್ಮ ಕಡೆ ಇದ್ದರೆ ಅನ್ಯಾಯಗಳು ಆಗಿದ್ದರೆ, ಅವರು ಕೇಳಿಯೇ ಕೇಳುತ್ತಾರೆ. ಹುಲಕೋಟಿ ದನಗಳ ಆಹಾರ ಸಹಕಾರಿ ಸಂಘದ ಬಗ್ಗೆ ಸಹಕಾರ ಇಲಾಖೆಯ ರಿಜಿಸ್ಟ್ರಾರ್ ಅವರು ಕೊಟ್ಟಿರುವ ಒಂದು ಕಾಗದದಿಂದ ಒಂದು ಮಾತನ್ನು ಹೇಳುತ್ತೇನೆ. ಮಂಡ್ಯದಲ್ಲಿರುವ ಇಂತಹದ್ದೇ ಒಂದು ಕೋಆಪರೇಟಿವ್ ಸೊಸೈಟಿಗೆ 11 ಲಕ್ಷ ರೂಪಾಯಿಗಳನ್ನು 1966ರಲ್ಲಿ ಕೊಟ್ಟಿದ್ದಾರೆ.

ಶ್ರೀ ಬಿ. ಎಲ್. ಗೌಡ (ಸಹಕಾರ ಶಾಖೆಯ ಉಪಮಂತ್ರಿಗಳು).—ಗದಗ್‌ನಲ್ಲಿರುವ ಕೋಆಪರೇಟಿವ್ ಸೊಸೈಟಿಗೆ 4 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಕೊಟ್ಟಿಲ್ಲವೇ? ಅಲ್ಲದೆ ಈ ಸೊಸೈಟಿಗೆ ಸೆಂಟ್ರಲ್ ಫೈನಾನ್ಸ್ ಕಾರ್ಪೊರೇಷನ್‌ನಿಂದ ಸಾಲ ಸಿಕ್ಕಿಲ್ಲವೇ?

ಶ್ರೀ ಕೆ. ಎಚ್. ಪಾಟೀಲ್.—ಅದು ಸಂತೋಷ. ಮಂಡ್ಯದಲ್ಲಿರುವ ಕೋಆಪರೇಟಿವ್ ಸೊಸೈಟಿಯಲ್ಲಿ ಇನ್ನೂ ಸಂಸ್ಕರಣೆ ಕಾರ್ಯವನ್ನು ಆರಂಭಿಸದಿದ್ದರೂ ಕೂಡ 1966ರಲ್ಲಿ 11 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಅದೇ ಹುಲಕೋಟೆ ದನಗಳ ಆಹಾರ ಸಹಕಾರಿ ಸಂಘಕ್ಕೆ 2 ಲಕ್ಷ ರೂಪಾಯಿಗಳನ್ನು ಕೇಳಿದಕ್ಕೆ ಸಂಸ್ಕರಣೆ ಕಾರ್ಯವನ್ನು ಇನ್ನೂ ಆರಂಭಿಸಿಲ್ಲವಾದ್ದರಿಂದ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿವೆಯು. ಈ ರೀತಿ ರಾಜಕೀಯವನ್ನು ಮಾಡಬಾರದು. ಈ ರೀತಿಯ ರಾಜಕೀಯ ನಡೆಸುವುದು ಸರಿಯಲ್ಲ ಹಾಗೆ ಮಾಡಿದರೆ. He will be more a politician than an official. ಆದಕಾರಣ ಈ ಮಾತನ್ನು ಶ್ರೀಮಾನ್ ಬಿ. ಎಲ್. ಗೌಡರು ಹೇಳಬಾರದಾಗಿತ್ತು. ಇದನ್ನು ಉದಾಹರಣೆಗಾಗಿ ಕೊಟ್ಟಿದೆ. ಇನ್ನು ಮುಂದೆ ಇಂತಹ ಪ್ರಮಾದಗಳು ಆಗದಂತೆ ಮಾನ್ಯ ಮಂತ್ರಿಗಳು ನೋಡಿಕೊಳ್ಳಬೇಕು. ಕೆ. ಎಚ್. ಪಾಟೀಲರ ಬಗ್ಗೆ ಬೇಕಾದರೆ ತಾವು ಈ ರೀತಿ ನಡೆದುಕೊಳ್ಳಬಹುದು. ಆದರೆ ಇದರಿಂದ ಕೋಆಪರೇಟಿವ್ ಮೂವ್‌ಮೆಂಟ್ ಅಭಿವೃದ್ಧಿಯಾಗುವುದಕ್ಕೆ ಅವಕಾಶವಾಗುವುದಿಲ್ಲ. ಶ್ರೀ ವಾಲಿಮರಿಯಪ್ಪನವರು

ಶ್ರೀ ಪುಟ್ಟಸ್ವಾಮಿಯವರು ಈ ಖಾತೆಯಲ್ಲಿದ್ದಾಗ ನಮ್ಮ ಸೊಸೈಟಿಗೆ ಸಿಕ್ಕಿದ ಅನುಕೂಲಗಳು ಶ್ರೀ ನಾಡಗೌಡರು ಬಂದಮೇಲೆ ಸಿಕ್ಕಿಲ್ಲ. ಸಾಲ ಕೊಡಬೇಕೆಂದು ನಾನು ಈ ರೀತಿ ಹೇಳುತ್ತಿಲ್ಲ. ಶ್ರೀಮಾನ್ ಬಿ. ಎಲ್. ಗೌಡರು ನನ್ನ ಸ್ನೇಹಿತರು, ಅವರು ಈ ರೀತಿ ಹೇಳುವಾರವಾಗಿತ್ತು.

3-30 P. M.

ಇನ್ನು ಮಾರ್ಕೆಟಿಂಗು ಸೊಸೈಟಿಗಳಲ್ಲಿ ಮಾಲುಗಳನ್ನು ಶೇಖರಣೆ ಮಾಡಿ ಅದಕ್ಕೆ ಉತ್ತಮವಾದ ಬೆಲೆ ಬರುವಂತೆ ಮಾಡಬೇಕು. ಇಲ್ಲವಿದ್ದರೆ ಇಂತಹ ಸಂಘಗಳನ್ನು ತೆರೆಯುವುದರ ಉದ್ದೇಶ ಸಾರ್ಥಕವಾಗುವುದಿಲ್ಲ. ವ್ಯಾಪಾರಸ್ಥರು ಹೆಚ್ಚು ಲಾಭ ಸಂಪಾದನೆ ಮಾಡುತ್ತಾರೆ ಎಂದು ಇಂತಹ ಸಹಕಾರ ಸಂಘಗಳನ್ನು ಮಾಡಿರುವಾಗ ಇದರಿಂದ ಜನತೆಗೆ ಸುಲಭ ಬೆಲೆಯಲ್ಲಿ ಮಾಲುಗಳೂ ದೊರೆತು ಅದರಿಂದ ಸಾಕಷ್ಟು ಲಾಭವನ್ನೂ ಪಡೆಯುವಂತೆ ಮಾಡಬೇಕು. ಇಲ್ಲದೆ ಇದ್ದರೆ ಇಂತಹ ಸಹಕಾರ ಸಂಘಗಳಿಂದ ಹಾನಿಯುಂಟಾಗುತ್ತದೆ. ಇದನ್ನು ಇಡೀ ರಾಜ್ಯದಲ್ಲಿ ಒಂದು ರೀತಿಯಾದ ಪ್ರಾಪರ್ ಡಿಸ್ಟ್ರಿಬ್ಯೂಷನ್ ಮಾಡಿ ಇದಕ್ಕೆ ಒಂದು ಹೊಸದಾದ ರೂಪು ರೇಖೆಗಳನ್ನು ಕೊಡಬೇಕೆಂದು ಮಾನ್ಯ ಸಹಕಾರ ಮಂತ್ರಿಗಳಾದ ಶ್ರೀಮಾನ್ ನಾಡಗೌಡರಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ.

ಇನ್ನು ಇಂಡಸ್ಟ್ರಿಯಲ್ ಸಂಘಗಳನ್ನು ನೋಡುವುದಾದರೆ ಇವುಗಳ ಆಡಳಿತ ಬಹಳ ಕೆಟ್ಟು ಹೋಗಿವೆ. ಇಂಡಸ್ಟ್ರಿಯಲ್ ಸಂಘಗಳಿಗೆ ಇಷ್ಟೊಂದು ಕೋಟಿ ಹಣವನ್ನು ಹಾಕಿರುವುದು ಇಂದು ಹಾಳಾಗಿ ಹೋಗಿದೆ. ಇಂತಹ ಸಂಘಗಳನ್ನು ತೆರೆಯುವುದಕ್ಕಿಂತ ಇದನ್ನು ಮಾಡದೇ ಇದ್ದರೆ ರಾಜ್ಯಕ್ಕೆ ಕ್ಷೇಮ. ಏತಕ್ಕಾಗಿ ಇಂತಹ ಸಂಘಗಳನ್ನು ಮಾಡಿಕೊಂಡು ಆ ನಂತರ ಸೆಕ್ಷನ್ 54ರ ಪ್ರಕಾರ ಇವು ಕೆಲಸ ಮಾಡುತ್ತಿಲ್ಲ ಎಂದೇಕೆ ಆಕ್ಷೇಪಣೆ ಮಾಡಲು ಹೋಗುತ್ತೀರಿ? ಇಂತಹ ಸಂಘಗಳನ್ನು ತೆರೆಯುವ ಹವ್ಯಾಸಕ್ಕೆ ಇನ್ನು ಮುಂದಾದರೂ ಹೋಗಬೇಡಿ ಎಂದು ಸಲಹೆ ಮಾಡುತ್ತೇನೆ.

ಇನ್ನು ಫಾರ್ಮಿಂಗು ಕೋ ಆಪರೇಟಿವ್ ಸೊಸೈಟಿ ಬಗ್ಗೆ ಹೇಳಬೇಕಾದರೆ ನನ್ನ ಕಡೆಗೆ ಸರಕಾರದವರು ಒಂದು ದೊಡ್ಡ ಲಿಸ್ಟನ್ನೇ ಕೊಟ್ಟಿದ್ದಾರೆ. ಇದರಲ್ಲಿರುವ ಲಿಸ್ಟಿನಂತೆ ನೋಡುವಾಗ ಅನೇಕ ಸಂಘಗಳ ಹೆಸರುಗಳು ಕಾಣುತ್ತಿವೆ. ಆದರೆ ಒಂದು ಸಂಘದಲ್ಲಾದರೂ ಕೆಲಸ ಸರಿಯಾಗಿ ನಡೆದಿದ್ದರೆ ಇಂತಹ ಸಂಘಗಳನ್ನು ಮಾಡಿದುದರ ಉದ್ದೇಶವಾದರೂ ಸಾರ್ಥಕವಾಗುತ್ತಿತ್ತು. ಈ ಸಮಿತಿಗೆ ಹಿಂದೆ ಈ ಸಭಾ ನಾಯಕರಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರೇ ಅಧ್ಯಕ್ಷರಾಗಿದ್ದವರು. ಅವರೇ ಮಾಡಿರುವಂತಹ ಸಮಿತಿಯಲ್ಲಿ ಒಂದು ಅಕ್ಷರವಷ್ಟನ್ನಾದರೂ ಒಪ್ಪಲು ಮನಸ್ಸು ಮಾಡಿದ್ದೀರಾ ಎಂದರೆ ಯಾವುದೂ ಕಾಣುತ್ತಿಲ್ಲ. ನೀವು ನಿಮ್ಮ ನಾಯಕರ ಹಿಂಬಾಲಕರೇ ಆಗಿರುವಾಗ ಈಗಲಾದರೂ ಇಂತಹ ಸಮಿತಿಯವರು ಹೇಳಿರುವ ಮಾತಿಗೆ ಮನ್ನಣೆ ಕೊಟ್ಟು ಸ್ವಲ್ಪ ಮಟ್ಟಿಗಾದರೂ ಇದನ್ನು ಕಾರ್ಯಗತವಾಗುವಂತೆ ಮಾಡಿ ಕೀರ್ತಿಯನ್ನು ಪಡೆಯಿರಿ ಎಂದು ಹೇಳುತ್ತೇನೆ. ನಮ್ಮ ಸಹಕಾರ ಮಂತ್ರಿಗಳಾಗಿರುವ ಶ್ರೀಮಾನ್ ನಾಡಗೌಡರು ಒಂದು ರೀತಿಯಾದ ಹೊಸ ನಮೂನೆ ಆಡಳಿತವನ್ನು ಅನುಸರಿಸುತ್ತಿದ್ದಾರೆ. ಇವರು ಮಂತ್ರಿಗಳಾಗುವ ಮುನ್ನ ಈ ರೀತಿ ಇರಲಿಲ್ಲ. ವಿರೋಧ ಪಕ್ಷದವರ ಸಹಕಾರ ಸಂಘಗಳು ದೇಶದ ಅನೇಕ ಕಡೆಗಳಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿವೆ. ಹಾಗಿದ್ದರೂ ಇಂತಹ ಸಂಘಗಳವರನ್ನು ಇವರು ಸಹಕಾರಮಂತ್ರಿಗಳಾದ ಮೇಲೆ ಹತ್ತಿಕ್ಕಲು ಪ್ರಯತ್ನ ಮಾಡುತ್ತಿದ್ದಾರೆ. ಹೀಗೆ ವಿರೋಧ ಪಕ್ಷದವರನ್ನು ಹತ್ತಿಕ್ಕುವಂತೆ ಮಾಡಿದರೆ ಅವರಾಗಿಯೇ ವಿರೋಧ ಪಕ್ಷವನ್ನು ಬಿಟ್ಟು ಕಾಂಗ್ರೆಸ್ಸು ಪಕ್ಷಕ್ಕೆ ಬಂದು ಸೇರಬಹುದು ಎನ್ನುವ ಭಾವನೆಯಿಂದ ಹೀಗೆ ಮಾಡುತ್ತಿರಬಹುದು. ನಾನು ಇದರ ಬಗ್ಗೆ ಇಲ್ಲಿ ಹೆಚ್ಚು ಹೇಳಲು ಇಷ್ಟಪಡುವುದಿಲ್ಲ. ನಾನು ಈ ಸಭೆಯಲ್ಲಿ ಎಂ.ಎಲ್.ಎ. ಆಗುವುದಕ್ಕಿಂತ ಮುಂಚೆ ನಾನು ಶ್ರೀ ನಾಡಗೌಡರು ಒಳ್ಳೆಯ ಸ್ನೇಹಿತರು. ಆದರೆ ಇಲ್ಲಿ ಶ್ರೀ ನಾಡಗೌಡರು ಅಧಿಕಾರಕ್ಕೆ ಬಂದ ಮೇಲೆ ಕಡೂರಿನಲ್ಲಿರುವ ಮಾರ್ಕೆಟಿಂಗ್ ಸೊಸೈಟಿಯನ್ನು ಸಸ್‌ಪೆಂಡ್ ಮಾಡಿದಂತಹ ರೀತಿಯಲ್ಲಿ ನಾನಾದರೆ ಮಾಡುತ್ತಿರಲಿಲ್ಲ. ಸಂಘಗಳು ಯಾವುದೇ ಇರಲಿ, ಅದು ಆಳುವ ಪಕ್ಷದವರದೇ ಆಗಲಿ ವಿರೋಧ ಪಕ್ಷದವರದೇ ಆಗಲೀ ಇವೊತ್ತಿನ ದಿವಸ ಇಂತಹ ಸಂಘಗಳನ್ನು ಮಾಡಿ ಈ ರೀತಿ ಮಾರ್ಕೆಟಿಂಗು ಸೊಸೈಟಿಗಳನ್ನು ಕಟ್ಟಬೇಕಾದರೆ 20-30 ವರ್ಷಗಳ ತ್ಯಾಗ ಮಾಡಿದ್ದಾರೆ. ಇಂತಹವರ ಮೇಲೆ ಒಂದು ರೀತಿಯ ದಬಾವಣೆ ಮಾಡಿ ಜಬರ್ದಸ್ತಿನಿಂದ ಸರಕಾರ ವರ್ತನೆ ಮಾಡುವುದಾದರೆ ಮಾನ್ಯ ನಾಡಗೌಡರಂತಹ ಮಂತ್ರಿಗಳೇ ಆಗಲೀ ಅಥವಾ ಅವರಂತಹ ಹತ್ತು ಮಂತ್ರಿಗಳೇ ಆಗಲೀ ಬಂದರೂ ಇದನ್ನು ಸರಿ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಇಂತಹ ಕೆಲಸಗಳನ್ನು ಮಾಡಲು ಹೋಗಬೇಡಿ ಎಂದು ಅವರಲ್ಲಿ ನಮ್ರವಾಗಿ ಬಿನ್ನಹ ಮಾಡಿಕೊಳ್ಳುತ್ತೇನೆ. ಇವರ ಬಗ್ಗೆ ಇನ್ನೊಂದು ಕಾಲದಲ್ಲಿ ವೇಳೆ ತೆಗೆದುಕೊಂಡು ಸೂಕ್ತವಾದ ಎಲ್ಲ ವಿವರಗಳನ್ನೂ ಆಗ ಹೇಳುತ್ತೇನೆ.

(ಶ್ರೀ ಕೆ. ಎಚ್. ಪಾಟೀಲ್)

ಇನ್ನು ಪ್ರೋಸೆಸಿಂಗ್ ಆಕ್ಟಿವಿಟೀಸ್ ಎಂದು ಇಲಾಖೆಯವರು ಮಾಡುತ್ತಿದ್ದಾರೆ. ಇದರಂತೆ ಕೆಲವು ಕಡೆ ಬತ್ತದ ಗಿರಣಿ ಮಾಡಿ ಎನ್ನುತ್ತಾರೆ ಕೆಲವು ಕಡೆ ಆಯಿಲ್ ಮಿಲ್ಸ್ ಎಂದು ಬೇರೆ ಮಾಡುತ್ತಾರೆ. ಇದಕ್ಕೆಲ್ಲಾ ಬೇಕಾದಷ್ಟು ಹಣ ಕೊಡುತ್ತಿದ್ದಾರೆ. ಸುಮ್ಮನೆ ಹೀಗೆ ಮಾಡುವು ಮಾಡುವುದರಿಂದ ಸಹಕಾರ ತತ್ವ ಉದ್ಧಾರವಾದ ಹಾಗೆ ಆಗುವುದಿಲ್ಲ. ಇದು ಹೇಗಿದೆ ಎಂದರೆ 'ಕೂಸು ಹುಟ್ಟುವುದಕ್ಕೆ ಮುಂಚೆ ಕುಲಾವಿ ಹೊಲಿಸಿದಂತೆ' ಆಗಿದೆ. ನನಗೆ ಒಂದು ಷರ್ಟನ್ನು ಅಳತೆ ನೋಡದೆ ಮೊದಲೇ ಹೊಲಿಸಿಟ್ಟು ಅದನ್ನು ನಾನು ತೊಟ್ಟುಕೊಳ್ಳುವಾಗ ಇದರ ಅಗಲ ಕಡಿಮೆಯಾಗಿದೆ ಇದು ಸಾಲುವುದಿಲ್ಲ ಎಂದು ಹೇಳಲಿಕ್ಕೆ ಹೋದರೆ ಇದನ್ನು ಹೇಗಾದರೂ ಮಾಡಿ ಅಡಜಸ್ಟ್ ಮಾಡಿ ಸ್ಯೂಟ್ ಮಾಡಿಕೋ ಎಂದು ಹೇಳುವಂತೆ ನಿಮ್ಮ ಸಹಕಾರದ ಇಲಾಖೆ ಯೋಜನೆ ಗಳು ಆಗುತ್ತಿವೆ. ನಿಮಗೆ ಬೇಕಾದ ರಾ ಮೆಟೀರಿಯಲ್ಸ್ ಎಷ್ಟು ಸಿಗುತ್ತೆ ಎನ್ನುವುದೇ ಇನ್ನೂ ಸರಿಯಾಗಿ ಗೊತ್ತಾಗಿಲ್ಲ. ಇವಲ್ಲದೆ ಫಿನಿಷ್ಡ್ ಪ್ರಾಡಕ್ಟ್ಸ್‌ಗೆ ಕೂಡ ಹಾಗೆ ಇದೆ. ಇದರಲ್ಲಿ ಆಡಳಿತ ಮಾಡು ವವರೂ ಕೂಡ ಪಾದರಿಯಾಗೇ ಮಾಡುತ್ತಿದ್ದಾರೆ. ಆಡಳಿತ ಪಕ್ಷಕ್ಕೆ ಸೇರಿದವರು ಬಂದರೆ ಒಂದು ಸ್ಪಿನಿಂಗು ಮಿಲ್ಸ್ ಮಾಡಿ ಬೇಕಾದಷ್ಟು ದುಡ್ಡು ಕೊಡುತ್ತೇವೆ ಎಂದು ಹೇಳುತ್ತಾರೆ. ಆದರೆ ಗದಗ್ ಮಾರ್ಕೆಟಿಂಗು ಸೊಸೈಟಿ ಬಗ್ಗೆ ವಿಚಾರ ಮಾಡುವಾಗ ಇದು ವಿರೋಧ ಪಕ್ಷದವರಾದ ಶ್ರೀ ಕೆ. ಹೆಚ್. ಪಾಟೀಲ'ರು ಮಾಡಿರುವ ಸೊಸೈಟಿ ಎನ್ನುವ ಭಾವನೆ ಬರಕೂಡದು. ಇದಕ್ಕೆ ಬದಲಾಗಿ ಇಂತಹ ಸಂಘಗಳನ್ನು ಮಾಡಿ ಇದಕ್ಕೆ ಬೇಕಾಗುವ ಸೌಕರ್ಯಗಳನ್ನೆಲ್ಲಾ ಮಾಡುವುದರ ಕಡೆಗೆ ಗಮನ ಕೊಡಬೇಕು.

ಇನ್ನು ಮಾರ್ಕೆಟಿಂಗ್ ಕಮಿಟಿಗಳನ್ನು ಮಾಡುವುದರ ಕಡೆಗೆ ಸರಕಾರ ಲಕ್ಷ ಕೊಡಬೇಕು. ಇದರ ಬಗ್ಗೆ ಈಗಾಗಲೇ ಕೆಲವು ಕಡೆ ಹೈಕೋರ್ಟು ಆರ್ಡರುಗಳಾಗಿವೆ. ಹೈಕೋರ್ಟು ಆರ್ಡರು ಗಳನ್ನು ಅವಲಂಬನೆ ಮಾಡಿಕೊಂಡು ಲಾಭ ಪಡೆದುಕೊಂಡು ಅಂತಹವರ ಮೇಲೆ ಕೈ ಮಾಡಬೇಕು ಎನ್ನುವ ಮನೋಭಾವವನ್ನು ಕೈಬಿಡಬೇಕು. ನನಗೆ ಗೊತ್ತಿರುವ ಹಾಗೆ ಗದಗ್ ಮಾರ್ಕೆಟಿಂಗು ಸಹಕಾರ ಸಂಘ ಒಂದೇ ಅಲ್ಲ. ನಮ್ಮ ಸಹೋದ್ಯೋಗಿಗಳೂ ಇರತಕ್ಕ ಸಹಕಾರ ಸಂಘಗಳೂ ಇರಬಹುದು. ಬೇಕಾದರೆ ನಾನು ಇಂತಹ ಐದಾರು ಸಂಘಗಳ ಹೆಸರುಗಳನ್ನು ಕೊಡಬಹುದು. ಅವುಗಳ ಬಗ್ಗೆ ಇಂದು ಇಲ್ಲಿ ಪ್ರಸ್ತಾಪ ಮಾಡಲು ಹೋಗುವುದಿಲ್ಲ. ಇದರಿಂದ ಡೆಮಾಕ್ರಸಿ ಸೆಟ್ ಅಪ್ ಹಾಳಾಗಿ ಹೋಗುತ್ತದೆ. ಆದುದರಿಂದ ಇದನ್ನು ಮುರಿಯುವುದು ಬೇಡ. ಪ್ರಜಾಪ್ರಭುತ್ವ ವನ್ನು ಈ ರೀತಿ ಕೊಲೆ ಮಾಡಲು ಹೋಗಬೇಡಿ ಎಂದು ನಾನು ಇಲ್ಲಿ ಹೇಳುತ್ತೇನೆ. ನೀವೇ ಪ್ರಜಾ ಪ್ರಭುತ್ವ ತರಬೇಕು ಎಂದು ಹೇಳಿ ಅದನ್ನು ಕೊಲೆ ಮಾಡುವ ಕೊಲೆಪಾತಕರ ಹಾಗೆ ಮಾಡಲು ಹೋಗಬೇಡಿ ಎಂದು ಹೇಳುತ್ತಿದ್ದೇನೆ. ಹೈಕೋರ್ಟು ಆರ್ಡರುಗಳ ಮಾತನ್ನು ಇಲ್ಲಿ ಈಗ ಹೇಳಲು ಹೋಗುವುದಿಲ್ಲ. ಇದರ ಬಗ್ಗೆ ಮುಂದೆ ಸಮಯ ತೆಗೆದುಕೊಂಡು ಆಗ ಹೆಚ್ಚಾಗಿ ಮಾತನಾಡು ತ್ತೇನೆ. ಹೀಗೆ ಡೆಮಾಕ್ರಸಿಯನ್ನು ಕೊಲೆ ಮಾಡುವುದು ಸಮಂಜಸವಲ್ಲ ಎಂದು ಮಾತ್ರ ಇಲ್ಲಿ ಹೇಳುತ್ತೇನೆ.

ಇನ್ನೊಂದು ಮುಖ್ಯವಾದ ವಿಚಾರ ಎಂದರೆ ಕೋ ಆಪರೇಷನ್ ಡಿಪಾರ್ಟುಮೆಂಟು ಹಾಗೂ ಅಗ್ರಿಕಲ್‌ಚರಲ್ ಪ್ರೊಡ್ಯೂಸಿಂಗು ಡಿಪಾರ್ಟುಮೆಂಟು ಇವೆರಡೂ ಒಂದೇ ಇಲಾಖೆಯಲ್ಲಿರುವುದ ರಿಂದ ಇದರಲ್ಲಿ ಹೊಂದಾಣಿಕೆಯಾಗುವುದಿಲ್ಲ. ಇದರಲ್ಲಿ ಒಬ್ಬರಿಗೇ ಹತ್ತು ಇಲಾಖೆಗಳ ಕೆಲಸಗಳನ್ನು ವಹಿಸುವುದರಿಂದ ಕೆಲಸಗಳು ಚೆನ್ನಾಗಿ ಆಗುವುದಿಲ್ಲ. ಇದನ್ನು ಸರಕಾರ ವಿಚಾರ ಮಾಡಿ ಇದನ್ನು ಬೈಫರ್‌ಕೇಟು ಮಾಡಬೇಕೆಂದು ಹೇಳುತ್ತೇನೆ. ಮಾರ್ಕೆಟಿಂಗು ಕಮಿಟಿಗಳಿಗಾಗಲೀ ಕೋ ಆಪ ರೇಷನ್ ಡಿಪಾರ್ಟುಮೆಂಟು ಕೆಲಸಗಳಿಗಾಗಲೀ ಬೇರೆ ಬೇರೆಯಾಗಿ ಇಲಾಖೆ ಇದ್ದರೆ ಅನುಕೂಲ ವಾಗುತ್ತದೆ. ಈಗ ಇರುವಂತೆ ಇದ್ದರೆ ಇದರಲ್ಲಿ ಹೊಂದಾಣಿಕೆಯೇ ಇರುವುದಿಲ್ಲ. ಇದನ್ನು ಇಡೀ ಹಿಂದೂಸ್ಥಾನದಲ್ಲೇ ಬದಲಾವಣೆ ಮಾಡಬೇಕು ಎಂದು ಹೇಳುವುದಕ್ಕಿಂತ ಮೈಸೂರು ರಾಜ್ಯದವರೇ ಒಂದು ಅಮೆಂಡುಮೆಂಟನ್ನು ಕಾಯಿದೆಗೆ ತಂದು ಈಗಿರುವ ಪದ್ಧತಿಯನ್ನು ಬದಲಾವಣೆ ಮಾಡಿದರೆ ಅದರಿಂದ ಅನುಕೂಲವಾಗುತ್ತದೆ. ಇದು ಮೈಸೂರು ರಾಜ್ಯದ ಜವಾಬುದಾರಿ ಎಂದು ಇಲ್ಲಿ ಹೇಳುತ್ತೇನೆ. ಇದನ್ನು ಮಾನ್ಯ ವಿರೋಧ ಪಕ್ಷದವರು ಹೇಳಿದರು ಎಂದು ಅಧಿಕಾರದಲ್ಲಿರುವ ನಾಡಗೌಡರು ತಿಳಿಯಬಾರದು. ಇದರಿಂದ ಸಹಕಾರ ದೇಶದಲ್ಲಿ ಬೆಳೆಯಲಿಕ್ಕೆ ಅವಕಾಶವಾಗು ತ್ತದೆ. ಇದಕ್ಕಾಗಿ ಮುಂಜಾಗರೂಕತೆ ವಹಿಸಿ ಕೆಲಸ ಮಾಡುವುದು ಒಳ್ಳೆಯದು.

ಇನ್ನು ನಮ್ಮ ಪ್ರಭುತ್ವದಲ್ಲಿ ಕೆಲಸ ಮಾಡುತ್ತಿರುವಂತಹ ಕೆಳಗಿನ ಅಧಿಕಾರಿಗಳಿಂದಲೇ ಕೆಲವು ವೇಳೆ ಅನರ್ಥಗಳಾಬಹುದು. ಇದಕ್ಕಾಗಿ ನಮ್ಮ ಪಕ್ಷದ ವತಿಯಿಂದ ಇಲ್ಲಿ ಹೇಳಬಹುದಾದರೂ ಅವನ್ನು ಹೇಳುವುದಿಲ್ಲ. ನನ್ನ ಕಾನ್‌ಸ್ಟಿಟ್ಯುಯೆನ್ಸಿ ಬಗ್ಗೆ ಕೆಲಸ ಮಾಡುವ ಅಧಿಕಾರಿಗಳ ಬಗ್ಗೆ

ಕೆಲವು ವೇಳೆ ಇಲ್ಲಿ ಪ್ರಿವಿಲೇಜು ಮೋಷನ್‌ಗಳನ್ನು ತರಬಹುದಾಗಿತ್ತು. ಆದರೆ ಅಂತಹ ವಿಚಾರಗಳನ್ನು ಇಲ್ಲಿ ತಂದರೆ ನನ್ನ ಘನತೆಗೆ ಕುಂದು ಬರುತ್ತದೆ ಎಂದು ತರಲಿಲ್ಲ. ಹಾಗೆ ಬಿಟ್ಟರೆ ಇರುವ ಅಧಿಕಾರಿಗಳೆಲ್ಲಾ ಸಂಪನ್ನರು ಎಂದು ಹೇಳುವುದಕ್ಕೆ ಹೋಗುವುದಿಲ್ಲ, ನಮ್ಮ ಕಡೆಯಲ್ಲಿ ಆಗುತ್ತಿರುವುದನ್ನು ಸರಕಾರದವರು ಕಂಡೂ ಕಾಣದಂತೆ ಹೋಗುತ್ತಿದ್ದಾರೆ. ನಾನು ಬರೆದ ಕಾಗದಕ್ಕೆ ವರ್ಷಗಟ್ಟಲೆಯಾದರೂ ಉತ್ತರವೇ ಬರುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸರಕಾರಕ್ಕೆ ಬರೆದ ಪತ್ರಕ್ಕೆ ಮೂರು ದಿನಗಳಲ್ಲಿ ಉತ್ತರ ಕಳುಹಿಸುತ್ತಾರೆ. ಉತ್ತರ ಕೊಡದೇ ಇದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ನಾನು ಶೆಟ್ಟರ್ ಅವರ ಬಗ್ಗೆ ಅನೇಕ ಪತ್ರಗಳನ್ನು ಸರಕಾರಕ್ಕೆ ಬರೆದರೂ ಅವರ ಮೇಲೆ ಆಪಾದನೆಗಳನ್ನು ಮಾಡಿದ್ದರೂ ಕೂಡ ಅವರ ಮೇಲೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಅವರನ್ನು ಈಗ ರಿಟೈರು ಮಾಡಿದ್ದೀರಿ ರೂಲ್ಸು ಪ್ರಕಾರ ಇವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಮೈಸೂರು ರಾಜ್ಯದಿಂದ ಹೊರಕ್ಕೆ ಶೆಟ್ಟರು ಹೋದ ಮೇಲೆ ಇನ್ನೂ ನನಗೆ ಉತ್ತರ ಕೊಟ್ಟಿಲ್ಲ. ಇನ್ನು ಮೇಲೆ ಇದರ ವಿಚಾರಣೆಯನ್ನು ಜಾಗೃತಾ ಆಯೋಗಕ್ಕೆ ವಹಿಸಲು ಹೋದರೆ ಅವರೇನು ತಾನೇ ಮಾಡಿಯಾರು ? ನಾನು ಮುಖ್ಯ ಮಂತ್ರಿಗಳಿಗೆ ಇದರ ಬಗ್ಗೆ ಪತ್ರಗಳನ್ನು ಬರೆದರೂ ಇನ್ನೂ ಇದರ ಬಗ್ಗೆ ಯಾವ ಉತ್ತರವೂ ಸರಕಾರದ ಕಡೆಯಿಂದ ಬರಲಿಲ್ಲ. ಅವರ ಮನಸ್ಸಿನಲ್ಲಿ ಮಾನ್ಯ ನಿಜಲಿಂಗಪ್ಪನವರು ದೊಡ್ಡ ನಾಯಕರು ನಮ್ಮ ಕೆ. ಹೆಚ್. ಪಾಟೀಲರೇನೋ ಒಂದು ತಿಗಣೆ ಮರಿಯಂತಿದ್ದಾರೆ. ಇವರನ್ನು ಹೇಗೆ ಬೇಕಾದರೂ ಮಾಡಬಹುದು ಎಂದಿದ್ದಾರೇನೋ ? ಮಾನ್ಯ ಮಂತ್ರಿಗಳು ಗಿರ್ ಎನ್ನುವವರಿಗೆ ಅವರ ಹಣೆಬರಹ ಏನಾಯಿತು ಎನ್ನುವುದನ್ನು ತಾವು ನೆನಪು ಮಾಡಿಕೊಳ್ಳಬೇಕು. ಸುಮ್ಮನೆ ನಿಮ್ಮ ಹೆಸರು ಕೆಡಿಸಿಕೊಳ್ಳುವುದಕ್ಕೆ ಹೋಗಬಾರದು. ಇವೊತ್ತು ವಿರೋಧ ಪಕ್ಷದವರು ವೈಯಕ್ತಿಕವಾಗಿ ಆಪಾದನೆಗಳನ್ನು ಮಾಡುತ್ತಿಲ್ಲ. ಆದರೂ ಆಡಳಿತದ ಬಗ್ಗೆ ಹೇಳುವಾಗ ಇದನ್ನು ಉಪೇಕ್ಷೆ ಮಾಡುವುದು ಸರಿಯಲ್ಲ.

ಇನ್ನು ಮಾನ್ಯ ಮಂತ್ರಿಗಳು ಚುನಾವಣಾ ರಂಗದಲ್ಲಿ ಅಧಿಕಾರ ದುರುಪಯೋಗ ಮಾಡುವುದನ್ನು ಯಾರೂ ಒಪ್ಪಲಾರರು. ಅಧಿಕಾರಸ್ಥರನ್ನು ಹೊರದೇಶಗಳಿಗೆ ಕಳಿಸುವಾಗ ನಿಮ್ಮ ಹಿತ ಸಂಬಂಧವಿಟ್ಟುಕೊಂಡು ಕಳಿಸುತ್ತೀರಿ, ಅಧಿಕಾರಸ್ಥರಿಗೆ ಇರುವ ಮೆರಿಟ, ಅವರಿಗಿರುವ ಯೋಗ್ಯತೆ, ಅವರಿಗೆ ಇರುವ ಸೀನಿಯಾರಿಟಿ ಇವುಗಳನ್ನು ಮನಸ್ಸಿಗೆ ತೆಗೆದುಕೊಳ್ಳುತ್ತಿದ್ದೀರಾ ? ಹಿಂದುಳಿದವರು, ಹರಿಜನರು ಇವರ ಹಿತರಕ್ಷಣೆಯನ್ನು ಯಾವ ರೀತಿ ಮಾಡುತ್ತಿದ್ದೀರಿ ? ಇದಕ್ಕೆಲ್ಲ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳುತ್ತೇನೆ. ಎರಡು ಮೂರು ವರ್ಷಕ್ಕೆ ಮೇಲ್ಪಟ್ಟು ಒಂದು ಕಡೆ ಇರುವವರನ್ನು ವರ್ಗ ಮಾಡಬೇಕೆಂದು ಇದ್ದರೂ ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿ ಅನೇಕ ಜನ ಅಧಿಕಾರಿಗಳು ಹತ್ತಾರು ವರ್ಷದಿಂದ ಇದ್ದಾರೆ. ಅವರಿಗೆ ಜಹಗೀರಿ ಏನಾದರೂ ಕೊಡಲಾಗಿದೆಯೇ ? ಇಷ್ಟು ವರ್ಷಗಳವರೆಗೆ ಒಂದೇ ಆಫೀಸಿನಲ್ಲಿ ಇರುವುದಕ್ಕೆ ಕಾರಣವಾದರೂ ಏನು ? ಇದರಲ್ಲಿ ಏನಾದರೂ ಗೂಢವಿದೆಯೇ ? ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿ ಎಲ್ಲ ಅಧಿಕಾರಿಗಳನ್ನೂ ಗೆಜೆಟೆಡ್ ಮಾಡಿದ್ದೀರಿ. ರಿಜಿಸ್ಟ್ರಾರ್ ಅವರಿಗೆ ಕೊಟ್ಟಿರುವ ಅಧಿಕಾರಗಳಲ್ಲಿ ಆರ್ಬಿಟ್ರೇಟರುಗಳನ್ನು ನೇಮಕ ಮಾಡುವ ಅಧಿಕಾರವನ್ನು ಕೊಡಲಾಗಿದೆಯೇ ? ಯಾರು ಕಾಂಗ್ರೆಸ್ಸಿನವರಿದ್ದಾರೆ ಅವರು ಎಂಥವರೇ ಆಗಿರಲಿ ಆರ್ಬಿಟ್ರೇಟರ್ ಆಗಿ ನೇಮಕ ಮಾಡುತ್ತೀರಿ. ಕ್ರಿಮಿನಲ್ ಕೇಸಿನಲ್ಲಿ ಸಿಕ್ಕಿರುವವರನ್ನು ಆರ್ಬಿಟ್ರೇಟರ್ ಆಗಿ ನೇಮಕ ಮಾಡುತ್ತೀರಿ. ಆದರೆ ಸಹಕಾರ ಚಳುವಳಿಯಲ್ಲಿ ದುಡಿದಂಥ ವ್ಯಕ್ತಿಗಳನ್ನು ಆರ್ಬಿಟ್ರೇಟರ್ ಆಗಿ ನೇಮಕ ಮಾಡುತ್ತಿಲ್ಲ. ಇದಕ್ಕೆ ಏನು ಹೇಳುತ್ತೀರಿ ? ಇದು ಸಹಕಾರ ಚಳುವಳಿಯೋ ಅಥವಾ ಸ್ವಂತ ಚಳುವಳಿಯೋ ಅಥವಾ ಸಿಂಡಿಕೇಟ್ ಚಳುವಳಿಯೋ ? ಈ ದೃಷ್ಟಿಯಿಂದ ನಾನು ತಮ್ಮನ್ನು ಕೇಳುತ್ತೇನೆ, ಬಹಳ ವಿನಯಪೂರ್ವಕವಾಗಿ ಕೇಳುತ್ತೇನೆ, ಹಿಂದೆ ಆದದ್ದನ್ನು ಮರೆತುಬಿಡಿ. ಕೆ. ಎಚ್. ಪಾಟೀಲ್ ಒಂದು ಸಂಘದಲ್ಲಿದ್ದಾನೆ ಆ ಸಂಘವನ್ನು ತುಳಿಯಬೇಕು ಎನ್ನುವುದು ಸರ್ಕಾರದ ಮೂಲ ಧ್ಯೇಯವೇ ? ಕೆ. ಎಚ್. ಪಾಟೀಲನಾದ ನನ್ನನ್ನು ತುಳಿಯುವುದಕ್ಕೆ ಸಾಧ್ಯವಿಲ್ಲ, ನಾನು ಇರತಕ್ಕ ಸಂಘಗಳನ್ನು ತುಳಿಯುವುದಕ್ಕೆ ಪ್ರಯತ್ನ ಮಾಡಬಹುದು. ಆದ್ದರಿಂದ ನಾನು ನಮ್ರತೆಯಿಂದ ಹೇಳುತ್ತೇನೆ, ಹಠಸಾಧನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಡಿ. ನಿಮ್ಮ ಕೀರ್ತಿಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ನಡೆಯಿರಿ. ಶ್ರೀ ನಿಜಲಿಂಗಪ್ಪನವರು ಹೇಳಿದ್ದಾರೆ, ಅವರ ಮಾತನ್ನು ನಡೆಸಬೇಕು, ಅವರು ನನ್ನ ನಾಯಕರು ಎನ್ನುವ ದೃಷ್ಟಿಯಿಂದ ಕೆಲಸ ಮಾಡಬೇಡಿ. ಹಾಗೆ ಒಳ್ಳೆಯ ರೀತಿಯಿಂದ ಕೆಲಸ ಮಾಡುವುದಕ್ಕೆ ನಿಮ್ಮಿಂದ ಆಗದೆ ಇದ್ದರೆ ಮನೆಯೊಳಗೆ ಇದ್ದುಕೊಂಡು ಶ್ರೀ ಬಿ. ಎಲ್. ಗೌಡರಿಗೆ ಆ ಕೆಲಸವನ್ನು ವಹಿಸಿಕೊಡಿ. ಇಲಾಖೆಯಲ್ಲಿ ನಿಷ್ಪಕ್ಷಪಾತವಾಗಿ ಕೆಲಸಕಾರ್ಯಗಳು ನಡೆಯುವಂತೆ ಮಾಡಿ. ಈಗ ಅಲ್ಲಿ ನಡೆಯುವ ಕೆಲಸಕಾರ್ಯಗಳನ್ನು

(ಶ್ರೀ ಕೆ. ಹೆಚ್. ಪಾಟೀಲ್)

ನೋಡಿದರೆ ಮಂತ್ರಿಗಳ ಮೂಗಿಗೆ ನೇರವಾಗಿ ನಡೆಯುತ್ತಿರುವಂತೆ ಕಾಣುತ್ತದೆ. ಮಂತ್ರಿಗಳಿಗೂ ರಿಜಿಸ್ಟ್ರಾರ್ ಅವರಿಗೂ ಏನೋ ಒಂದುರೀತಿಯ ಸ್ವಾಮ್ಯವಿದೆ ಎಂದು ಕಾಣುತ್ತದೆ ಇಂಥದನ್ನು ಮಾಡಬೇಡಿ ಎಂದು ಹೇಳಿ, ಇಷ್ಟು ಸಮಯ ನನಗೆ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ) : ಮಾನ್ಯಅಧ್ಯಕ್ಷರೇ, ಈ ದಿವಸ ನಮ್ಮ ಸಹಕಾರ ಮಂತ್ರಿಗಳು ಇಟ್ಟಿರತಕ್ಕ ಬೇಡಿಕೆಗಳನ್ನು ಬಹಳ ಸಂತೋಷದಿಂದ ಸ್ವಾಗತಿಸುತ್ತ ನಾನು ಕೆಲವು ಮಾತುಗಳನ್ನು ಆಡುವುದಕ್ಕೆ ನಿಂತಿದ್ದೇನೆ. ಏಕೆ ಬಹಳ ಸಂತೋಷವಾಯಿತು ಎಂದರೆ ಈ ಸಹಕಾರ ಚಳುವಳಿ ಏನು ಎಂದು ಶ್ರೀ ತುಕೋಳ್ ಅವರ ವರದಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಆ ಮಾತು ನನಗೆ ಸಂಬಂಧಪಟ್ಟದ್ದು. ನಾನು ಒಬ್ಬ ರೈತ ಕುಟುಂಬದ ಹೆಣ್ಣು ಮಗಳು. ಅವರು ಹೇಳಿರುವ ವಿಷಯ ನನಗೆ ಸಂಬಂಧಪಟ್ಟದ್ದರಿಂದ ಬಹಳಷ್ಟು ಸಂತೋಷವಾಗಿದೆ. ಅದು ಈ ರೀತಿ ಇದೆ.

"The Co-operative Movement was initiated in Ind'a with a view to organise and develop a special Institutional agency primarily for the provision of credit for agriculture and generally for affording to various classes of people a means of promoting economic development in different fields, wherever Co-operative endeavour was possible to augment the resources of the people. The agricultural credit has received the widest support since the occupation of the largest section of the population is agriculture. The different spheres of activities vitally connected with agriculture *viz.*, marketing, processing, etc , have also been covered to bring about economic democracy so as to protect even the interests of the consumers."

ಆದ್ದರಿಂದ ರೈತರಿಗೆ ಸಂಬಂಧಪಟ್ಟ ಸಹಕಾರ ಚಳುವಳಿಯ ಬಗ್ಗೆ ಮಂತ್ರಿಗಳು ನಮ್ಮ ಮುಂದಿಟ್ಟಿರುವ ಬೇಡಿಕೆಗಳಿಗೆ ಮತ್ತೊಮ್ಮೆ ಸ್ವಾಗತ.

ಸಹಕಾರ ಸಂಘಗಳು ಹೇಗೆ ನಡೆಯುತ್ತಿವೆ, ನಿಜವಾಗಿ ಅವು ನಮಗೆ ಕಲ್ಪವೃಕ್ಷ ಕಾಮಧೇನು ವಾಗಿವೆಯೋ ಎಂದು ನೋಡೋಣ. ವ್ಯವಸಾಯಗಾರರೆಲ್ಲ ಅಭಿವೃದ್ಧಿಗೊಂಡಿದ್ದಾರೆ ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯಗಾರರ ಮೇಲೆ ತೆರಿಗೆಯನ್ನು ಹಾಕಿ ಅವರೆನ್ನೆಲ್ಲ ಕೆಳಗೆ ತೆಗೆದುಕೊಂಡು ಬರಬೇಕು ಎಂದು ಕೇಂದ್ರ ಸರ್ಕಾರದಲ್ಲಿ ಹೇಳಿದ್ದಾರೆ. ವ್ಯವಸಾಯಗಾರರು ಮೇಲೆ ಹೋಗುವುದಕ್ಕೆ ಸಹಕಾರ ಚಳುವಳಿ ಸಹಾಯ ಮಾಡಿವೆಯೋ ಎನ್ನುವುದಕ್ಕೆ ನಾನು ಒಂದು ಚಿಕ್ಕ ಉದಾಹರಣೆಯನ್ನು ನನ್ನ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಕೊಡುತ್ತೇನೆ. ನಮ್ಮ ಸೊಸೈಟಿಯ ಸಂಬಂಧವಾಗಿ ಇಷ್ಟು ಕಾಗದಗಳನ್ನು ಬರೆದಿದ್ದಾರೆ. ಅದನ್ನು ನನಗೆ ಒಬ್ಬಳಿಗೆ ಮಾತ್ರ ವಲ್ಲ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು, ವೀರೇಂದ್ರ ಪಾಟೀಲರು, ಚೀಫ್ ಸೆಕ್ರೆಟರಿ, ಪಿ. ಎಂ. ನಾಡಗೌಡರು, ಸಹಕಾರ ಸಂಘಗಳ ರಿಜಿಸ್ಟ್ರಾರ್ ಅವರು, ಮೀರ್ ಇಕ್ಬಾಲ್ ಹುಸೇನ್, ಡೆಪ್ಯೂಟಿ ರಿಜಿಸ್ಟ್ರಾರ್ ಆಫ್ ಕೋ ಆಪರೇಟೀವ್ ಸೊಸೈಟೀಸ್, ಮೈಸೂರು ಮತ್ತು ಕೊಡಗು, ಆರ್ಥಿಕ ಕಾರ್ಯದರ್ಶಿಗಳು, ಸಹಕಾರ ಕಾರ್ಯದರ್ಶಿಗಳು, ಇಷ್ಟು ಜನಗಳಿಗೂ ಬಂದಿದೆ. ಇದರಲ್ಲಿ ಇರುವುದು ಏನೆಂದರೆ ನಮ್ಮ ತಾಲ್ಲೂಕಿನ ಸೊಸೈಟಿಯ ಚರಿತ್ರೆ. ಆ ಚರಿತ್ರೆಯಲ್ಲಿ ಏನಾಗಿದೆ, ಇದಕ್ಕೆ ಇಷ್ಟು ಮಹತ್ವ ಏಕೆ, ಒಂದು ಸಾಧಾರಣ ಸೊಸೈಟಿಯ ವಿಚಾರದಲ್ಲಿ ಏಕೆ ಇಷ್ಟು ಹೇಳುತ್ತಿದ್ದಾರೆ ಎಂದು ಕೇಳಬಹುದು. ನಮ್ಮ ತಾಲ್ಲೂಕಿಗೆ ಅದು ಭಾರಿ ಸೊಸೈಟಿ. ನಮಗೆ ಅದೇ ಕಾಮಧೇನು ಕಲ್ಪವೃಕ್ಷವಾಗಬೇಕು. ಆ ಸೊಸೈಟಿಯಲ್ಲಿ ಒಬ್ಬ ಖದೀಮ ಸೆಕ್ರೆಟರಿ ಸೇರಿ ಕೊಂಡಿದ್ದಾನೆ. ಅತ ಅಲ್ಲಿ ಎಂಟು ಹತ್ತು ವರ್ಷದಿಂದ ಇದ್ದಾನೆ. ಅತನ ಮೇಲೆ ಏಳೆಂಟು ವರ್ಷ ಗಳಿಂದ ಚಾರ್ಜಸ್ ಬರುತ್ತಿವೆ. ತಹಸೀಲ್ದಾರರು ಬರೆದಿದ್ದಾರೆ, ಸಬ್ ಡಿವಿಜನ್ ಆಫೀಸರ್ ಬರೆದಿದ್ದಾರೆ, ಡೆಪ್ಯೂಟಿ ಕಮಿಷನರು ಬರೆದಿದ್ದಾರೆ, ಡಿವಿಜನಲ್ ಕಮಿಷನರ್ ಬರೆದಿದ್ದಾರೆ. ಏನೂ ಆಗಿಲ್ಲ. ಅತನಿಗೆ ಎಂಥ ಇನ್‌ಫ್ಲುಯೆನ್ಸ್ ಇದೆಯೋ ಅನೆಬಲವಿದೆಯೋ ಏನೋ ನನಗಂತೂ

ಗೊತ್ತಿಲ್ಲ. ಆ ಸೆಕ್ರೆಟರಿ ಏನು ಮಾಡುತ್ತಿದ್ದಾನೆ ಎಂದರೆ ಪ್ರತಿ ವರ್ಷ ಜನರಲ್ ಬಾಡಿ ಮೀಟಿಂಗ್ ಆಗುವಾಗ ಒಬ್ಬರಿಗೂ ಮಾತನಾಡಲು ಅವಕಾಶ ಕೊಡುವುದಿಲ್ಲ. ಏನು ಕೇಳಿದರೂ ಕೂಡ ಟೈಂ ಇಲ್ಲ ಎಂದು ಪ್ರೆಸಿಡೆಂಟರಿಂದ ಹೇಳಿಸಿಬಿಡುತ್ತಾನೆ. ಈ ವಿಚಾರಗಳನ್ನೆಲ್ಲ ಕಾಗದದಲ್ಲಿ ಕಾಣಿಸಿದ್ದಾರೆ. ಆಡಿಟ್ ರಿಪೋರ್ಟಿನಲ್ಲಿ 1965-66ನೇ ರಿಪೋರ್ಟಿನಲ್ಲಿ ಆಡಿಟರು 25 ಅಬ್ಜೆಕ್ಷನ್‌ಗಳನ್ನು ಹಾಕಿದ್ದರು. ಕುಳವಾರು ಪಟ್ಟಿ ಇಲ್ಲ ಎಂದರೆ ಅದಕ್ಕೆ ಉತ್ತರ ಗಮನಿಸಲಾಗುತ್ತಿದೆ, ಇನ್ನೊಂದು ವಿಷಯಕ್ಕೆ ಮುಂದಕ್ಕೆ ನೋಡಿಕೊಳ್ಳುತ್ತೇವೆಂದು ಉತ್ತರ ಕೊಟ್ಟಿದ್ದಾರೆ. 1966-67ನೇ ರಿಪೋರ್ಟಿನಲ್ಲಿ 45 ಸಾವಿರ ರೂಪಾಯಿಗಳ ಫರ್ಟಿಲೈಸರ್ ಲೆಕ್ಕ ಇಟ್ಟಿಲ್ಲ ಎನ್ನುವುದಕ್ಕೆ ಆಡಿಟರ್ ಸಲಹೆ ಗಮನಿಸಲಾಗಿದೆ ಎಂದು ತಿಳಿಸಿದ್ದಾರೆ. 75 ಸಾವಿರ ರೂಪಾಯಿ ಡಿಸ್ಟ್ರಿಕ್ಟ್ ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡು ಜೋಳವನ್ನು ಕೊಂಡುಕೊಂಡು ಮಾರಿದ್ದಾರೆ. ಸಂತೆಯಲ್ಲಿ ಹೋಗಿ ಕೊಳಗದಲ್ಲಿ ಅಳೆಸಿಕೊಳ್ಳುವುದು, ಸೊಸೈಟಿಗೆ ತೆಗೆದುಕೊಂಡು ಬಂದು ಕ್ವಿಂಟಾಲ್ ಲೆಕ್ಕದಲ್ಲಿ ಮಾರುವುದು. ಒಂದು ಕ್ವಿಂಟಾಲಿಗೆ 92 ಸೇರು ಆಗುತ್ತದೆ.. ಹೀಗೆ ಅದನ್ನು ಮಾರಿದ್ದಾರೆ. ಒಂದು ಪಲ್ಲಕ್ಕೆ 8 ಸೇರು ವಾರ ಇಟ್ಟು ಕೊಂಡು ಮಾರಿ 7 ಸಾವಿರ ರೂಪಾಯಿ ನಷ್ಟ ತೋರಿಸಿದ್ದಾರೆ.

ಯಾರ ತಲೆ ಬೋಳಿಸುವುದು ? ಇದೇನು ಕಾಮಧೇನು, ಕಲ್ಪವೃಕ್ಷವೇ ? 30-12-68 ರಲ್ಲಿ ಮೀಟಿಂಗ್ ಆಯಿತು. ಸ್ಟೆಬಿಲೈಜೇಷನ್ ಫಂಡು ರೂ. 45047-69, 10,625 ರೂಪಾಯಿ ಮೈಸೂರು ಬ್ಯಾಂಕಿನಲ್ಲಿದೆ, ಬಾಕಿ 35,000 ರೂಪಾಯಿ ಬಿಲ್ಡಿಂಗ್ ಕಟ್ಟುವುದಕ್ಕೆ ಹಾಕಿರುವುದಾಗಿ ಹೇಳುತ್ತಾರೆ. ಇದನ್ನು ಯಾರೂ ಹೇಳುವವರು, ಕೇಳುವವರು ಇಲ್ಲವೇ ? ಏನು ಆಡಿಟ್ ಮಾಡು ವುದು ! ಈ ನಷ್ಟವೇಕೆ ? ಬಿಲ್ಡಿಂಗ್ ಓಪನ್ ಮಾಡುವುದಕ್ಕೆ ಶ್ರೀ ನಾಡಗೌಡರು ಬಂದಿದ್ದರು. ಎಕ್ಸ್‌ಪೆಲ್ಲರ್ ತೆಗೆದುಕೊಂಡಿದ್ದಾರೆ, ಅದನ್ನು ತೆಗೆದುಕೊಂಡ 6 ತಿಂಗಳಿಗೆ 11 ಸಾವಿರ ರೂಪಾಯಿ ಸ್ಪೇರ್ ಪಾರ್ಟ್ಸ್ ತೆಗೆದುಕೊಂಡರು. ಹೊಸ ಎಕ್ಸ್‌ಪೆಲ್ಲರ್ ತೆಗೆದುಕೊಳ್ಳಲಿಲ್ಲ, ಸೆಕೆಂಡ್ ಹ್ಯಾಂಡ್ ತೆಗೆದುಕೊಂಡು ಕಮಿಷನ್ ಹಂಚಿಕೊಂಡಿದ್ದಾರೆ. ಲಾರಿ ಬಾಡಿಗೆ ಲಾರಿ ತೆಗೆದುಕೊಳ್ಳ ಬೇಕೆಂದು ಪೋಸ್ಟ್ ಆಫೀಸು ಮತ್ತು ಬ್ಯಾಂಕಿನಲ್ಲಿ ಹಣ ಡಿಪಾಜಿಟ್ ಮಾಡಿದ್ದಾರೆ ; ಆದರೆ ತೆಗೆದು ಕೊಂಡಿಲ್ಲ. ಟ್ರಾನ್ಸ್‌ಪೋರ್ಟೇಷನ್ನಿಗೆ 4 ಆಣೆ ಛಾರ್ಜ್ ತೆಗೆದುಕೊಂಡರೆ ಇವರು 10 ಆಣೆ ಛಾರ್ಜ್ ಮಾಡುವರು. ಸೊಸೈಟಿ ಲಾರಿ ತೆಗೆದುಕೊಂಡರೆ, ಅವರಿಗೆ ಬೇಕಾದವರಿಗೆ ಅವಕಾಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಅವರಿಗೆ ಅನುಕೂಲವಾಗುವುದಿಲ್ಲ. ಈ ಸೊಸೈಟಿ ಇಷ್ಟೆಲ್ಲಾ ಮಾಡಿದಮೇಲೆ ಲಕ್ಷಾಂತರ ರೂಪಾಯಿ ನಷ್ಟ ಬೇರೆ ಆಗಿದೆ. ಈ ಸಾರಿ ಇನ್ನೊಂದು ತಮಾಷೆ, ಕಡಲೇಕಾಯಿ ವ್ಯಾಪಾರ ಬೇರೆ ಮಾಡಿದ್ದಾರೆ, 34 ರೂಪಾಯಿಗೆ ಕ್ವಿಂಟಾಲಿನಂತೆ ತೆಗೆದು ಕೊಳ್ಳಲು ಎಲ್ಲಾ ಕಡೆ ಅಡ್ವಾನ್ಸ್ ಕೊಟ್ಟು ಸಾವಿರಾರು ಪಲ್ಲ ತೆಗೆದುಕೊಂಡರು. ಮೊನ್ನೆ ದರ ಜಾಸ್ತಿಯಾಗಿ 68 ರೂಪಾಯಾದಾಗ ಆ ದರದಲ್ಲಿ ಮಾರಿದರು. ಅಕ್ಕಿ ಸಾವಿರಾರು ಪಲ್ಲ ಮಿಲ್ ಮಾಡಿದರು, ನುಚ್ಚು ಮತ್ತು ತೌಡಿನ ಲೆಕ್ಕವಿಲ್ಲ. ಆಡಿಟ್ ಅಬ್‌ಜೆಕ್ಷನ್ ಬಂದರೆ ಕೊಡಬೇಕಾಗಿಲ್ಲ ಎಂದು ಹೇಳುತ್ತಾರೆ. ಇದೇನು ಕೊಡಬೇಕೋ, ಬೇಡವೋ ? ಜಾಯಿಂಟ್ ಡೈರೆಕ್ಟರ್ ಒಬ್ಬರು ಆಡಿಟ್ ಮಾಡುತ್ತಾರೆ. ಯಾವ ರೀತಿ ಜವಾಬ್ದಾರಿಯಿಂದ ಮಾಡುವುದು ಎಂಬುದನ್ನು ಸರಕಾರ ಹೇಳಲಿ. ಸೊಸೈಟಿಯಲ್ಲಿ ಹೀಗೆ ಕಳ್ಳತನವಾದರೆ, ಇಂಥವರಿದ್ದರೆ ಹೇಗೆ ಅದು ಮುಂದುವರೆದೀತು? ತಪ್ಪಿತಸ್ಥರಿಗೆ ರಕ್ಷಣೆ ಕೊಟ್ಟರೆ ಮುಂದುವರೆಯುವುದು ಹೇಗೆ ? ಹೀಗಾದರೆ ಏನೂ ಮಾಡುವುದಕ್ಕಾ ಗುವುದಿಲ್ಲ.

ಮೊನ್ನೆ ರಾಜ್ಯಪಾಲರ ಭಾಷಣದಲ್ಲಿ ಆಡಿಟ್ ವಿಚಾರ ಮುಂತಾದವುಗಳ ಬಗ್ಗೆ ಕೆಲವು ವಿಷಯು ಗಳನ್ನು ಹೇಳಿದ್ದಾರೆ. ಇದಾದ ಮೂರು ದಿವಸಗಳಿಗೆ ವರ್ಗ ಮಾಡಿದ್ದಾರಂತೆ. ಮಾಡಿದ ತಕ್ಷಣ ಜನತಾ ಬಜಾರಿನಿಂದ ಬೇರೆಯವರನ್ನು ಅಲ್ಲಿಗೆ ಹಾಕಿದ್ದಾರಂತೆ. ಅವರಿಗೆ ಹೆದರಿಸಿದರು. ನೀವು ಯಾರ ಕಡೆಯವರು, ನಾಗರತ್ನಮ್ಮನವರ ಕಡೆಯವರೋ ಎಂದು ಕೇಳಿದರಂತೆ. ಇಂಥ ತಾತ್ಸಾರ ಬುದ್ಧಿ ತೋರುವುದು ಸರಿಯೇ ? ನನಗೇನು ಕಮಿಷನ್ ಬೇಕೇ ; ಭಾಗ ಕೊಡಬೇಕೇ ? ಇದನ್ನು ನಾನು ಅಪೇಕ್ಷೆ ಪಡುವವಳಲ್ಲ. ಮೂರು ನಾಲ್ಕು ತಲೆಮಾರಿನಿಂದ ಇದು ನಮ್ಮಲ್ಲಿ ಬಂದಿಲ್ಲ. ಇದರಲ್ಲಿ ಯಾರೋ ಇಂಟರೆಸ್ಟೆಡ್ ಪಾರ್ಟೀಸ್ ಹೀಗೆ ಮಾಡುತ್ತಿದ್ದಾರೆಂಬುದು ಇದರಿಂದ ಸಷ್ಟವಾಗಿ ಗೊತ್ತಾಗುವುದು. ಹೀಗೆ ಕೊನೆಯ ಜಡ್ಜ್‌ಮೆಂಟ್ ಬರೆಯದೆ ವಿಧಿಯಿಲ್ಲ. ಅವರ ವಿಚಾರದಲ್ಲಿ ನಮ್ಮ ಅಸಿಸ್ಟೆಂಟ್ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್, ಜಾಯಿಂಟ್ ರಿಜಿಸ್ಟ್ರಾರ್, ಡಿ. ಸಿ. ಡಿವಿಜ ನಲ್ ಕಮಿಷನರ್ ಮುಂತಾದವರು ಕ್ರಮ ತೆಗೆದುಕೊಳ್ಳಲು ಅವರು ನಾವು ಹೆಲ್ಪ್‌ಲೆಸ್ ಎಂದು ಹೇಳುತ್ತಾರೆ. ಅವರೇ ಹೆಲ್ಪ್‌ಲೆಸ್ ಎಂದರೆ ನಾವೇನು ಮಾಡುವುದು ? ಏಕೆ ಹೀಗಾಗಬೇಕು ? ಇದು ನಿಜವಾಗಿಯೂ ಹಾವು ಸಾಯಬಾರದು ಕೋಲು ಮುರಿಯಬಾರದು ಎನ್ನುವಂತಿದೆ. ಇದು ಸಂತೋಷದ ವಿಚಾರವೇ ? ನಿಮ್ಮಗಳಿಗೆ ಇದರಲ್ಲಿ ಪರ್ಸಂಟೇಜ್ ಕೊಟ್ಟಿಲ್ಲವೋ ಏನೋ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಆಡಿಟ್ ಸೆಲ್ ವಿಚಾರದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ :

"ಲೆಕ್ಕ ಪರಿಶೋಧನೆಯ (ಆಡಿಟ್) ಗುಣ ಮತ್ತು ದಕ್ಷತೆಯನ್ನು ಉತ್ತಮಗೊಳಿಸಲು, ಜೂನಿಯರ್ ಆಡಿಟರುಗಳ ನೂರು ಹುದ್ದೆಗಳನ್ನು ಸೀನಿಯರ್ ಆಡಿಟರ್ ಹುದ್ದೆಗಳನ್ನಾಗಿ ಮೇಲ್ದರ್ಜೆಗೇರಿಸಿದೆ, ಇದರಿಂದ ಅರ್ಹತೆಪಡೆದ ಪದವೀಧರರನ್ನು ಆಡಿಟರುಗಳನ್ನಾಗಿ ನೇಮಿಸಲು ಅವಕಾಶವಾಗಿದೆ. ಈ ಆಡಿಟರುಗಳಿಗೆ ಸಾಕಷ್ಟು ಶಿಕ್ಷಣ ಕೊಡುವುದಕ್ಕೂ ಏರ್ಪಾಟುಗಳು ನಡೆದಿವೆ. ಅಲ್ಲದೆ, ಸಂಘಗಳ ಮೇಲೆ ಪರಿಣಾಮಕಾರಿಯಾದ ನಿಯಂತ್ರಣವಿರುವಂತೆ ಸರ್ಕಾರಿ ಹಂತದಲ್ಲಿ ಒಂದು ಆಡಿಟ್ ವಿಭಾಗವನ್ನು ಏರ್ಪಡಿಸಲು ಉದ್ದೇಶಿಸಿದೆ." ಇದನ್ನು ಓದಿದರೆ ಓದಿ ಓದಿ ಕೆಟ್ಟ ಕೂಚಬಟ್ಟ ಎಂಬುದು ಜ್ಞಾಪಕಕ್ಕೆ ಬರುವುದು. ಹೀಗಾಗಿದೆ ನಿಮ್ಮ ಕಥೆ.

ಇನ್ನೊಂದು ಅಂಶ, ಫರ್ಟಿಲೈಜರ್ಸ್ ವಿಚಾರ. ಕಾಮಧೇನು ಕಲ್ಪವೃಕ್ಷ ಬೇಕಾದರೆ ಇದು ಮುಖ್ಯ ಸಾಧನ. ಹೋದ ವರ್ಷ 18 ಸಾವಿರ ರೂಪಾಯಿಗಳ ಸೂಪರ್ ಫಾಸ್ಫೇಟ್ ತೆಗೆದುಕೊಂಡಿದ್ದಾರೆ, ಇದು ಕಂಟ್ರೋಲ್ ಪದಾರ್ಥವಲ್ಲ ಎಂದು ಹೇಳಬಹುದು. ಆದರೆ ಇದನ್ನು ಅನ್‌ರಿಜಿಸ್ಟರ್ಡ್ ಒಂದು ಪುಟ್ಟ ಅಂಗಡಿಯಲ್ಲಿ ತೆಗೆದುಕೊಂಡಿದ್ದಾರೆ. ನನ್ನಂಥವರಿಗೆ ಇದನ್ನು ಕೊಟ್ಟರೆ ಎರಡು ಲಾರಿ ಬಿಟ್ಟಿ ಕೊಡಬೇಕು ; 25 ಪರ್ಸೆಂಟ್ ಲಾಭ. ವ್ಯವಸಾಯ ಮಂತ್ರಿಗಳು ರೈತರಿಗೆ ಕೊಡಿಸುತ್ತಾರೆ, ಇವರಲ್ಲಿ ಇಷ್ಟು ಅವ್ಯವಹಾರವಾಗುತ್ತಿದೆ. ಮುನ್ನೂರು ರೂಪಾಯಿ ತೆಗೆದುಕೊಂಡು ಐನೂರು ರೂಪಾಯಿ ಕೊಡಿಸುವುದಿದೆ.

ಸೆಕ್ರೆಟರಿಗೆ ಸುಮಾರು 250 ರೂಪಾಯಿ ಸಂಬಳ ಇರಬಹುದು. ಆದರೆ ಅವನಿಗಿರುವ ಆಸ್ತಿ ಎಷ್ಟೆಂಬುದನ್ನು ನೋಡಬೇಕು. ಗುಂಡಲಪೇಟೆ ಬ್ಯಾಂಕಿನಲ್ಲಿ ಕರೆಂಟ್ ಅಕೌಂಟಿನಲ್ಲಿ 4,000 ರೂಪಾಯಿ ಇದೆ, ಸಿಂಡಿಕೇಟ್ ಬ್ಯಾಂಕಿನಲ್ಲಿ 3,000 ರೂಪಾಯಿ ಇದೆ, ಅವನಲ್ಲಿ 10–15 ಸಾವಿರ ರೂಪಾಯಿಗಳ ಒಡವೆ ಇದೆ, ಮೋಟಾರ್ ಸೈಕಲ್ ಇದೆ, ಒಂದೂವರೆ ಲಕ್ಷದಲ್ಲಿ ಸರಸ್ವತಿ ಪುರದಲ್ಲಿ ಮನೆ ಮಾಡಿದ್ದಾನೆ, 10,000 ರೂಪಾಯಿ ಹೌಸಿಂಗ್ ಬೋರ್ಡಿನಲ್ಲಿ ಸಾಲ ಇದೆ. ಒಂದೂವರೆ ಲಕ್ಷದ ಮನೆ ಕಟ್ಟಲು ನಮಗೇ ಯೋಗ್ಯತೆಯಿಲ್ಲ, ನಾವು ಸಾಧಾರಣ ರೈತರು ; ಅವರ ಹಾಗೆ ಮಾಡುವುದಿಲ್ಲ, ಬೆಳವಾಡಿಯಲ್ಲಿ ಒಂದು ಫ್ಲೋರ್ ಮಿಲ್ ಬೇರೆ ಆತನ ಸಂಬಂಧಿ ಹೆಸರಿನಲ್ಲಿ ತೆಗೆದುಕೊಂಡಿದ್ದಾನೆ. ಇದರಮೇಲೆ ಕ್ರಮ ತೆಗೆದುಕೊಳ್ಳಬೇಕೆಂದರೆ ಡಿವಿಜನಲ್ ಕಮಿಷನರ್ ತಾವು ಹೆಲ್ಪ್‌ಲೆಸ್ ಎಂದು ಹೇಳುತ್ತಾರೆ,

> "I know Nagarathnamma : This is the only society which is in a very bad condition. It deserves to be superseded. But I am helpless."

ಎಂದು ಅವರು ಹೇಳುತ್ತಾರೆ. ಆಡಳಿತ ಸರಿಯಾಗಿಲ್ಲವೆಂದು ಕಂಡಮೇಲೆ ಏಕೆ ಕ್ರಮ ತೆಗೆದುಕೊಳ್ಳಬಾರದು ?

4-00 P.M.

ಇನ್ನೊಂದು ಪಾರ್ಟ್, ಲೆವಿ ತೆಗೆದುಕೊಳ್ಳುವ ಅಭ್ಯಾಸ, ನನಗೆ 154 ಕ್ವಿಂಟಾಲ್ ಲೆವಿ ಕೊಡಬೇಕೆಂದು ನೋಟೀಸ್ ಬಂತು, ಕೊಟ್ಟೆ. ಕೊಟ್ಟರೆ 7 ಕ್ವಿಂಟಾಲನಷ್ಟು ಕೊಡಬೇಕಾಗಿದ್ದ ಹಣ ಹಿಡಿದುಕೊಂಡರು. ನಾನು ನೋಟೀಸ್ ಕೊಡಿ, ಕೇಸು ಹಾಕುತ್ತೇನೆ ಅಂತ ಅಂದಮೇಲೆ ದುಡ್ಡು ವಾಪಸ್ಸು ಕೊಟ್ಟರು. ಹಾಗಾದರೆ ನಾನೊಬ್ಬಳೇನೇ ಬತ್ತ ಕೊಡುವವಳು ? ನನ್ನಂತೆಯೇ ಹೆಣ್ಣು ಮಕ್ಕಳು ಎಷ್ಟೋ ಜನ ಇದ್ದಾರೆ, ಎಲ್ಲರ ತಲೆ ಮೇಲೆ ಹೊಡೆದು ಹೋದ ವರ್ಷ ಆ ಸೊಸೈಟಿ ಎರಡು ಲಕ್ಷ ರೂಪಾಯಿ ಲಾಭ ಮಾಡಿದೆ. ಒಂದು ಮೀಟಿಂಗ್‌ಗೆ 5 ಖಾರ 5 ಸಿಹಿ ತರಿಸಿದ್ದರಂತೆ. ಯಾರದು ಏನು ಹೋಯಿತು, ಸಿಕ್ಕಿದ್ದೇ ಸಾಕು, ತಿಂದೂ ತಿಂದೂ ಹೀಗಾಗಿದ್ದಾರೆ. ಬಿಟ್ಟಿ ಸಿಕ್ಕರೆ 10 ಖಾರ 10 ಸಿಹಿ ಮಾಡಿಸಿಕೊಂಡು ತಿನ್ನುತ್ತಾರೆ (ನಗು).

ಮಂಗಳೂರಿನಲ್ಲಿ ಕೆಲವು ಸೊಸೈಟಿಗಳು ಇವೆ, ಅದರಲ್ಲೂ ಅಡಿಕೆ ಸೊಸೈಟಿಗಳು, ಆಡೀಟರ್ಸ್ ಎಲ್ಲಾ ಅಲ್ಲಿಯವರೇ, ವರ್ಷದ ಕೊನೆಗೆ ಹೋಗಿ ಟಿಕ್‌ಮಾರ್ಕ್ ಹಾಕುವುದು. ಎಷ್ಟೋ ಅಷ್ಟೆ ಅವರು ಮಾಡುವುದು. ಕ್ರಾಸ್ ಮಾರ್ಕ್ ಹಾಕುತ್ತಾರ್, ಕ್ರಾಸ್ ಚೆಕ್ ಮಾಡುತ್ತಾರ್, ಸ್ಟಾಕ್ ಚೆಕ್ ಮಾಡುತ್ತಾರೆ ಅಂದರೆ ಏನೂ ಇಲ್ಲ. ಅವರಿಗೂ ಒಂದು ಫರ್ಸೆಂಟೇಜ್ ಕೊಟ್ಟರೆ ಮುಗಿದೇ

ಹೋಯಿತು. ನಮ್ಮ ಸೊಸೈಟಿಯಲ್ಲಿ 3 ಲಕ್ಷ ರೂಪಾಯಿ ಆಸ್ತಿ ಮಾಡಿಕೊಂಡಿದ್ದಾನೆ, ಒಂದೂವರೆಸಾವಿರ ರೂಪಾಯಿ ಬರತಕ್ಕ ಯಾವ ಸರದಾರ ತಾನೆ ಈ ರೀತಿ ಮಾಡುವುದಕ್ಕೆ ಆಗುತ್ತದೆ? ಇದು ಸೋಷಿಯಲಿಸಂ. ಇಂತಹ ಸೊಸೈಟಿಗಳು ಇರುವುದಕ್ಕಿಂತ ನಮ್ಮಲ್ಲಿ ಸೊಸೈಟಿಗಳೇ ಇಲ್ಲ ಅಂತ ಹೇಳಿ ಇಲ್ಲಿಗೆ ಮುಗಿಸಿಬಿಟ್ಟರೆ ಸುಮ್ಮನೆ ತಣ್ಣಗೆ ಇದ್ದುಬಿಡುತ್ತೇವೆ. ಜನರನ್ನು ಉದ್ಧಾರ ಮಾಡಬೇಕೆಂದರೆ ನಿಜವಾಗಿಯೂ ಚೆನ್ನಾಗಿ ಕೆಲಸ ಮಾಡುವ ಕಡೆ ಶ್ರೀಮಾನ್ ಕೆ. ಎಚ್. ಪಾಟೀಲರವರು ಹೇಳುವ ಹಾಗೆ ಬುದ್ಧಿವಂತರನ್ನು ಬೇರೆ ಕಡೆಗೆ ಹಾಕಿ ಎಂದು ಹೇಳಿ ಇಷ್ಟು ಕಾಲಾವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಸ್ವಾಮಿ, ಈ ಸಹಕಾರದ ಇಲಾಖೆಯ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಹೇಳಿದ್ದಾರೆ. ಯಾವ ಈ ದೇಶದ ರೈತ ಜನತೆ ಒಂದು ಕೋಟಿ ತೊಂಭತ್ತು ಲಕ್ಷ ಜನತೆ ಉದ್ಧಾರವಾಗಬೇಕಾಗಿತ್ತೋ ಶರವೇಗದಲ್ಲಿ ಈ ಇಲಾಖೆಯ ಸಹಾಯದಿಂದ ಹೇಗೆ ಅಭಿವೃದ್ಧಿಯಾಗಬೇಕಾಗಿತ್ತೋ ಯಾವ ಸಹಕಾರ ಸಂಸ್ಥೆಗಳ ಮುಖಾಂತರ ರೈತಾಪಿ ಜನರ ಆರ್ಥಿಕ ಸಮಾನತೆ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಈ ಇಲಾಖೆ ಪ್ರಾರಂಭವಾಗಿ ಮಹಾತ್ಮಾಗಾಂಧಿ ನೆಹರು ಇವರೆಲ್ಲರ ಅಭಿಪ್ರಾಯ ಪ್ರಕಾರ ಈ ಸಹಕಾರ ಸಂಸ್ಥೆಗೆ ಕೊಟ್ಟಂಥ ಕೋಟಿ ಕೋಟಿ ಗಟ್ಟಲೆ ರೂಪಾಯಿ ರೈತರಿಗೆ ಸಿಕ್ಕಿ ಅವರ ಉದ್ಧಾರವಾಗುತ್ತದೆ ಎಂದು ಹೇಳಿದರೂ ಏನು ಆಸೆ ಪಟ್ಟಿದ್ದರೂ ಅದಕ್ಕಾಗಿ ಇವತ್ತು ಬಂದಿರತಕ್ಕ ಈ ಒಂದು ಡಿಮ್ಯಾಂಡು ಏನಿದೆ ಇದನ್ನು ಎಷ್ಟು ಸಂತೋಷಕರವಾಗಿ ಮತ್ತು ವಾತ್ಸಲ್ಯದಿಂದ ಪುಷ್ಟೀಕರಿಸಬೇಕಾಗಿತ್ತೋ ಅವಕ್ಕೆ ವಿರುದ್ಧವಾಗಿ ಈ ಇಲಾಖೆ ಕೆಲಸ ಮಾಡುತ್ತಿರುವುದರಿಂದ ಈ ಇಲಾಖೆ ಬಹು ಬೇಗ ಮುಕ್ತಾಯವಾಗುವುದು ಒಳ್ಳೆಯದು ಎಂದು ಹೇಳಬೇಕಾಗಿದೆ. ಏಕೆಂದರೆ ಈಗಿರತಕ್ಕ ಸಹಕಾರ ಸಂಸ್ಥೆಗಳಲ್ಲಿ ಸುಮಾರು ನೂರಕ್ಕೆ ತೊಂಭತ್ತಭಾಗ ಸ್ತಬ್ಧವಾಗಿವೆ, ಯಾವ ಸಮಾಜವಾದವನ್ನು ಸಹಕಾರ ಸಂಸ್ಥೆಗಳ ಮುಖಾಂತರ ಮಾಡಿ ಈ ದೇಶದ ಆರ್ಥಿಕಾಭಿವೃದ್ಧಿಯನ್ನು ಮಾಡಬೇಕೆಂದಿದ್ದೆವೋ ಅದೆಲ್ಲಾ ಕುಂಠಿತವಾಗಿರುವುದಕ್ಕೆ ಕಾರಣ ನಮ್ಮ ಮೈಸೂರು ದೇಶದಲ್ಲಿ ಬಂದಂತಹ ಒಂದು ರಾಜಕೀಯ ವಾತಾವರಣ, ಕಾರಣ ಕಳೆದ ಹನ್ನೆರಡು ವರ್ಷಗಳಲ್ಲಿ ಪ್ರಾರಂಭವಾಯಿತು ಎಂದು ಕಾಣುತ್ತದೆ. ಹಿಂದೆ ಮುಖ್ಯಮಂತ್ರಿಯಾಗಿ ಶ್ರೀಮಾನ್ ನಿಜಲಿಂಗಪ್ಪನವರು ಅಧಿಕಾರ ವಹಿಸಿಕೊಂಡು ಈ ದೇಶದ ರಾಜಕೀಯ ಸೂತ್ರವನ್ನು ಹದಿನೈದು ತಿಂಗಳಲ್ಲಿ ಕಳೆದುಕೊಂಡ ನಂತರ ಅನೇಕ ಚಟುವಟಿಕೆಗಳು ನಡೆದಿವೆ. ಅವರು ಅಧಿಕಾರ ಕಳೆದುಕೊಂಡ ನಾಲ್ಕು ವರ್ಷ ಏನು ಅವಧಿಯಲ್ಲಿ ಇವರನ್ನು ಸೂಕ್ಷ್ಮವಾಗಿ ಒಂದು ಗುಂಪು ಕಾಯುತ್ತಿತ್ತು ಆ ಗುಂಪು ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷರ ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದು ಅಲ್ಲದೆ ಕಾಂಗ್ರೆಸ್ ಸಂಸ್ಥೆಯ ಧ್ಯೇಯ ಧೋರಣೆಗಳನ್ನು ವಿರೋಧ ಮಾಡುತ್ತಿತ್ತು. ಅಧಿಕಾರ ಕಳೆದುಕೊಂಡು ಕ್ರೋಧನಾಗಿದ್ದಂಥ ಶ್ರೀ ನಿಜಲಿಂಗಪ್ಪನವರನ್ನು ಆಕರ್ಷಿಸಿ ರಾಜಕಾರಣದಲ್ಲಿ ಪ್ರವೇಶ ಮಾಡಿತು. ಅದೇ ಈ ದೇಶದ ಕಾಂಗ್ರೆಸ್ ನೀತಿನಿಯಮಕ್ಕೆ ವಿರುದ್ಧವಾಗಿದ್ದ ವರ್ತಕರ ಗುಂಪು.

ಆಗ ಮೈಸೂರು ದೇಶದಲ್ಲಿ ಇದ್ದಂಥ ನಮ್ಮ ನಾಯಕರೆಲ್ಲರೂ ಈ ಒಂದು ಸಮಾಜವಾದವನ್ನು ಮರೆಯಬೇಕಾದಂಥ ಸನ್ನಿವೇಶ ಬಂತು. ಆಗ ಆ ಗುಂಪು ಯೋಚನೆ ಮಾಡಿತು. ಈ ಒಂದು ಸನ್ನಿವೇಶದಲ್ಲಿ ರಾಜ್ಯ ಸೂತ್ರವನ್ನು ಹಿಡಿಯಲು ಏನು ಮಾಡಬೇಕು? ಆಗ ಅವರಿಗೆ ಇತಿಹಾಸ ಹೊಳೆಯಿತು. ಔರಂಗಜೇಬನಿಗೆ ಖಾಯಿಲೆಯಾಗಿತ್ತು. ಅತನ ನಂತರ ತಾನೇ ಸಾಮ್ರಾಜ್ಞಿಯಾಗಬೇಕೆಂದು ಅವನ ತಂಗಿ ಆಸೆಪಟ್ಟಳು. ತನ್ನ ಚಾರರನ್ನು ಕರೆದು ಹಕೀಮರನ್ನು ಕರೆದುಕೊಂಡು ಬನ್ನಿ ಎಂದು ಹೇಳಿದಳು. ಆಕೆಯ ಆಸೆ ಏನಾದರೂ ಮಾಡಿ ಆತನಿಗೆ ವಿಷವನ್ನಾದರೂ ಕುಡಿಸಿ ಸಾಮ್ರಾಜ್ಞಿಯಾಗಬೇಕೆಂದಿತ್ತು. ಅದಕ್ಕೆ ಅವಳು ಆ ಹಕೀಮ ಹೇಗಿರಬೇಕು; ಎಂದು ಹೇಳುವಾಗ ಆತನ ಗುಣಗಳನ್ನು ಹೇಳುತ್ತಾಳೆ. ಅತನಿಗೆ ದುಡ್ಡಿನ ಮೇಲೆ ಬಹಳಷ್ಟು ಮೋಹ ಇರಬೇಕು. ಅದಕ್ಕಾಗಿ ಅವನು ಏನು ಬೇಕಾದರೂ ಮಾಡುವುದಕ್ಕೆ ಸಿದ್ಧವಾಗಿರುತ್ತಾನೆ. ಅಂಥಹ ಗುಣ ಇರತಕ್ಕ ಹಕೀಮರನ್ನು ಕರೆದುಕೊಂಡು ಬಾ ಎಂದು ಹೇಳುತ್ತಾಳೆ. ಅದನ್ನೆಲ್ಲಾ ಹೇಳುತ್ತಾ ಹೋದರೆ ಬಹಳ ಇದೆ. ಇಂತಹ ಆಲೋಚನೆ ಮಾಡಿದಂಥ ಗುಂಪು ಕಾಂಗ್ರೆಸ್ ಅಧ್ಯಕ್ಷ ಪದವಿ ಹೊಂದಿದ್ದಂಥ ಶ್ರೀ ನಿಜಲಿಂಗಪ್ಪನವರನ್ನು ಜೊತೆ ಸೇರಿಸಿಕೊಂಡು, ಅಂಥ ಜನರನ್ನು ಕಾಂಗ್ರೆಸ್ ಶಾಸಕರಾಗಿ ಮತ್ತು ಮುಖಂಡರಾಗಿ ಸೇರಿಸಲು ವ್ಯವಸ್ಥೆ ಮಾಡಿತು. ಆ ಸಂದರ್ಭದಲ್ಲಿ ಅನೇಕ ಹಿರಿಯ ಕಾಂಗ್ರೆಸ್ಸಿಗರ ಸಂಸ್ಥೆಯಿಂದ ಉಚ್ಚಾಟನೆಯಾದರು. ಕೆಲವರು ಸಂಸ್ಥೆಯನ್ನು ತ್ಯಜಿಸಿ ಹೊರ ಹೊರಟರು. ಅಂತಹ ಒಂದು ಪರಿಸ್ಥಿತಿಯುಂಟಾಗುವುದಕ್ಕೆ ಈಗಿನ ಕಾಂಗ್ರೆಸ್ ನೀತಿಯೇ ಕಾರಣವಾಗಿದೆ. ಈಗಲೂ ನಮ್ಮ ದೇಶದಲ್ಲಿ ಮತ್ತು ನಮ್ಮ ಎದುರಿಗೆ ಅನೇಕ ಮಹನೀಯರೂ ಇದ್ದೀರಿ. ನಿಮ್ಮನ್ನು ನೋಡಿದಾಗ ಬಹಳ ಪ್ರೀತಿ ಗೌರವ ಅನುಕಂಪ ಬರುತ್ತದೆ.

(ಶ್ರೀ ವಿ. ಎಲ್. ಶಿವಪ್ಪ)

ನೀವು ಪ್ರಾಮಾಣಿಕವಂತರು. ಈ ದೇಶದಲ್ಲಿ ಯೋಚನೆ ಮಾಡತಕ್ಕ ಜನ ಇಲ್ಲ. ಅಲ್ಲಿ ಗಂಭೀರವಾಗಿ ಯೋಚನೆ ಮಾಡತಕ್ಕ ಜನ ಇದ್ದಾರೆ. ಆದರೆ ಅದರ ಹಿಂಬಾಲಕರು ಹೆಚ್ಚು ಸಂಖ್ಯೆಯಲ್ಲಿ ಇದ್ದಾರೆ. ಅವರು ಹೇಳಿದಂತೆ ಕೇಳತಕ್ಕ ಜನರು ಹೆಚ್ಚಾಗಿ ಈ ಸಮಾಜವಾದ ಸ್ತಬ್ಧವಾಗಿದೆ. ಪ್ರಾಮಾಣಿಕವಾಗಿ ಹೇಳುವಂತಹ, ಹೇಳಿದಂತೆ ಮಾಡುವಂತಹ ಒಂದು ಆದರ್ಶಗುಣ ನಿಮ್ಮಲ್ಲಿ ಹೊರಟುಹೋಗಿದೆ. ಇದೇ ಡಿಮ್ಯಾಂಡಿನ ಮೇಲೆ ಮಾತನಾಡುತ್ತಾ ಹಿಂದೆ ತಿಪಟೂರು ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿ ವಿಷಯ ಹೇಳಿದ್ದೆ. ಅದನ್ನು ಒಬ್ಬರೂ ಕೂಡ ವಿಚಾರ ಮಾಡಿಲ್ಲ. ಹೊಸ ಆಕ್ಟ್ ಬಂದ ಮೇಲೆ ಕಮಿಟಿ ಆಫ್ ಮ್ಯಾನೇಜ್‌ಮೆಂಟ್ ನೇಮಕ ಮಾಡಬಹುದು ಅಂತ ತಿಳಿದುಕೊಂಡಿದ್ದೆವು. ಅದನ್ನೂ ಮಾಡಲಿಲ್ಲ. ಎಂಟು ತಿಂಗಳಿನಿಂದ ಮೀಟಿಂಗ್ ನಡೆದಿಲ್ಲ. ಸೆಪ್ಟಂಬರ್ ತಿಂಗಳಿನಲ್ಲಿ ಒಂದು ಕಾಗದ ಈ ಇಲಾಖೆಯ ಅಧಿಕಾರಿಗಳಿಗೆ ಬರೆದು ಕಳುಹಿಸಿಕೊಟ್ಟೆ. ಫೆಬ್ರವರಿಯಲ್ಲಿ ಅದು ಎನ್‌ಕ್ವೈರಿಗೆ ಬಂತು. ಶ್ರೀಮಾನ್ ಕೆ. ಎಚ್. ಪಾಟೀಲರವರು ಬಹಳ ಸೊಗಸಾಗಿ ಮಾರ್ಕೆಟಿಂಗ್ ಆಕ್ಟ್ ಕಾನೂನುಗಳು ಏನಿವೆ ಎಂಬುದನ್ನು ಅದನ್ನು ತಾವು ರಾಜಕೀಯ ಕಾನೂನನ್ನಾಗಿ ಇಟ್ಟುಕೊಂಡಿದ್ದೀರಿ ಎಂದು. ಅದರಲ್ಲಿ ಅನೇಕ ಪ್ರಾಮಾಣಿಕವಾಗಿ ವಿಚಾರಗಳನ್ನು ನಮೂದು ಮಾಡಿದ್ದೇನೆ. ಅದು ವಿಚಾರಣೆಗೆ ಅರ್ಹವಾದದ್ದು. ಅದನ್ನು ಸರ್ಕಾರದವರು ಖಂಡಿತ ವಿಚಾರ ಮಾಡತಕ್ಕ ವಿಷಯ ಅದು. ಅಲ್ಲಿ ಏನೇನು ನಡೆಯುತ್ತದೆ ಎಂಬುದನ್ನು ಅಲ್ಲಿಗೆ ಆಫೀಸರ್‌ಗಳು ಬಂದಿದ್ದಾಗ ಎಲ್ಲವನ್ನೂ ತಿಳಿಸಲಾಗಿದೆ. ಅಲ್ಲಿ ಒಬ್ಬ ಇನ್ ಛಾರ್ಜ್ ಸೆಕ್ರೆಟರಿ ಇದ್ದಾರೆ. ಅಲ್ಲಿನ ರೂಲ್ಸ್ ಪ್ರಕಾರ ಕೊಬರಿ ಮಾರ್ಕೆಟ್ ಯಾರ್ಡಿಗೆ ಬಂದ ತಕ್ಷಣ ಅದನ್ನು ಆ ರೈತನ ಸಮಕ್ಷಮ ಕೂಡಲೇ ತೂಕ ಮಾಡಬೇಕೆಂದಿದೆ. ಅನಂತರ ಆ ಮಾಲು ವರ್ತಕನ ಕಡೆಗೆ ಹೋಗಬೇಕೆಂದಿದೆ. ಆದರೆ ಅಲ್ಲಿ ಈಗ ತಿಂಗಳಾದರೂ ಆ ಕೊಬರಿ ತೂಕ ನಡೆಯುತ್ತಿಲ್ಲ. ಆ ರೈತನ ಗೈರಹಾಜರಿಯಲ್ಲಿ ವರ್ತಕನಾದವನು ಎಷ್ಟು ಬೇಕಾದರೂ ತೂಕ ಮಾಡಿಕೊಳ್ಳಬಹುದು. ಅವನು ಏನು ಬೇಕಾದರೂ ಮಾಡಬಹುದು. ಆದರೆ ನ್ಯಾಯವಾಗಿ ರೈತನ ಸಮಕ್ಷಮ ಆಗಬೇಕಾದ ತೂಕ ಆಗುತ್ತಿಲ್ಲ. ಆದರೆ ಅಲ್ಲಿಗೆ ಒಬ್ಬ ಖಾಯಂ ಸೆಕ್ರೆಟರಿಗಳನ್ನು ಹಾಕತಕ್ಕ ವಿಚಾರದಲ್ಲಿ ಇಲಾಖೆ ಮಂತ್ರಿಗಳು ನಾನು ಹೇಳುವ ತನಕ ನೀವು ಯಾರನ್ನೂ ಅಲ್ಲಿಗೆ ಸೆಕ್ರೆಟರಿಗಳನ್ನಾಗಿ ನೇಮಕ ಮಾಡಬಾರದೆಂದು ಇಲಾಖಾಧಿಕಾರಿಗೆ ಆಜ್ಞೆ ಹೋಗಿದೆಯೆಂದು ನಾನು ವರ್ತಮಾನ ಕೇಳುತ್ತಿದ್ದೇನೆ. ಅಲ್ಲಿಯೇ ಒಬ್ಬ ಒಕ್ಕಲಿಗರ ಹುಡುಗ ಅಕೌಂಟೆಂಟಾಗಿ ಕೆಲಸ ಮಾಡುತ್ತಿದ್ದ ಆತನನ್ನು ಅಲ್ಲಿಗೆ ಸೂಪರಿಂಟೆಂಡೆಂಟ್ ಆಗಿ ಪ್ರಮೋಟ್ ಮಾಡಿದ್ದರು. ಆತನು ಅಲ್ಲಿ 10 ವರ್ಷಗಳಿಂದ ಕೆಲಸಮಾಡಿಕೊಂಡಿದ್ದ. ಅಲ್ಲಿಗೆ ಈಗಿರತಕ್ಕ ಅಧ್ಯಕ್ಷರು ಬಂದ ಮೇಲೆ ಆ ಸೂಪರಿಂಟೆಂಡೆಂಟ್ ಕೆಲಸದಲ್ಲಿದ್ದ ಒಕ್ಕಲಿಗರ ಹುಡುಗನನ್ನು ರಿವರ್ಟ್ ಮಾಡಿ ಆ ಜಾಗಕ್ಕೆ ಒಬ್ಬ ಲಿಂಗಾಯತರ ಹುಡುಗನನ್ನು ಈಗ ತಂದು ಕೂಡಿಸಿದ್ದಾರೆ. ಈ ದಿವಸ ಅತ ಅಲ್ಲಿ ಹೇಳಿದ ಹಾಗೆ ಕಾರ್ಯ ನಡೆಯಬೇಕು. ಆತನ ಆಜ್ಞೆ ಮೀರಿ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ ಅಲ್ಲಿರತಕ್ಕ ಅಧ್ಯಕ್ಷರಿಗೂ ಅವರಿಗೂ ಬಹಳ ಸಂಬಂಧ. ಈ ವಿಚಾರವನ್ನು ನಾವು ಅನೇಕಾವರ್ತಿ ಹೇಳಿದ್ದೇವೆ. ನಾವು ರೈತಾಪಿ ಜನರು. ನಮಗೆ ಆ ರೈತರ ಕಷ್ಟನಷ್ಟಗಳು ಏನೆಂಬುದು ಚೆನ್ನಾಗಿ ಗೊತ್ತಿದೆ. ನಾವು ನಮ್ಮ ಮನೆಗಳಲ್ಲಿ ಒಂದು ತೆಂಗಿನ ಕಾಯನ್ನು ಒಡೆದರೆ ಅದನ್ನು ಮೂರು ದಿನ ಬಳಸುತ್ತೇವೆ. ಅಂದರೆ ನಮಗೆ ತೆಂಗಿನಕಾಯನ್ನು ಬಳಸತಕ್ಕದ್ದು ಗೊತ್ತಿಲ್ಲ ಎಂದಲ್ಲ. ಗೊತ್ತಿದೆ ಆದರೆ ಅದರ ಬೆಲೆ ಏನೆಂಬುದನ್ನು ನಾವು ಅರಿತವರಾದ್ದರಿಂದ ಹಾಗೆ ಖರ್ಚು ಮಾಡುವುದಕ್ಕೆ ಮನಸ್ಸು ಬರುತ್ತಿಲ್ಲ. ಈ ಮಾರುಕಟ್ಟೆ ಕಮಿಟಿ ಮೀಟಿಂಗುಗಳನ್ನು ಕಳೆದ 8 ತಿಂಗಳಿಂದಲೂ ಕರೆದಿಲ್ಲ. ಅಲ್ಲಿ ನಡೆಯುತ್ತಿದ್ದ ಕಟ್ಟಡದ ಕೆಲಸ ಅರ್ಧಮಧ್ಯದಲ್ಲೇ ನಿಂತುಹೋಗಿದೆ. ಅಲ್ಲಿ 35 ವರ್ಷಗಳಿಂದಲೂ ಮೆಂಬರಾಗಿದ್ದಂಥ ಒಬ್ಬ ಸದಸ್ಯರನ್ನು ಇವರು ಏಕಾಏಕಿ ನಿವೃತ್ತಿಮಾಡಿದ್ದಾರೆ. ಅಲ್ಲಿ ಇಷ್ಟು ಅವ್ಯಾವನದ ಕೆಲಸಗಳು ನಡೆಯುತ್ತಿದ್ದರೆ ನಾವೇಕೆ ಅಲ್ಲಿ ಅದಕ್ಕಾಗಿ ಒಂದೂಕಾಲು ಲಕ್ಷರೂಪಾಯಿಗಳನ್ನು ತೆರಿಗೆ ರೂಪದಲ್ಲಿ ಕೊಡಬೇಕು ? ರೈತರು ಇಷ್ಟು ತೆರಿಗೆ ಭಾರವನ್ನು ಏಕೆ ಹೊರಬೇಕು ? ನಾವು ವ್ಯಥಾ ದುಡ್ಡನ್ನು ಏಕೆ ಖರ್ಚು ಮಾಡಬೇಕು ? ಅಲ್ಲಿ ಈ ಸೌಭಾಗ್ಯಕ್ಕೆ ಅಷ್ಟು ಖರ್ಚು ಮಾಡಿ ಒಂದು ಆಕ್ಷನ್ ಷೆಡ್ ಏಕೆ ಕಟ್ಟಿಸಬೇಕು ? ಅಲ್ಲಿ ನಡೆಯುತ್ತಿರುವ ವಿಚಿತ್ರ ಇಷ್ಟೇ ಎಂದು ಹೇಳುವುದಕ್ಕಾಗುವುದಿಲ್ಲ. ಆ ಮಾರ್ಕೆಟ್ ಯಾರ್ಡಿಗೇನು ಶಾಪ ಬಂದಿದೆಯೋ ತಿಳಿಯದು. ನಾವು ಆ ಮಾರ್ಕೆಟ್ ಯಾರ್ಡಿನ ಬಗ್ಗೆ ಏನೇ ಸತ್ಯಾಂಶದಿಂದ ಕೂಡಿರತಕ್ಕ ಎಷ್ಟೇ ದೂರುಗಳನ್ನು ಹೇಳಿದರೂ, ತುಂಬಿದ ಸಭೆಯಲ್ಲಿ ದ್ರೌಪದಿಯ ಸೀರೆಯನ್ನು ಸೆಳೆಯುತ್ತಿದ್ದಾಗ ಪಾಂಡವರು ತಮ್ಮ ಕೋಪವನ್ನು ಹೇಗೆ ಸ್ಥೈರಣೆ ಮಾಡಿಕೊಂಡಿದ್ದರೋ ಹಾಗೆ ಈ ಸರ್ಕಾರದವರೂ ಕೂಡ ಶಾಂತವಾಗಿದ್ದಾರೆ. ಅಲ್ಲೇನು ಪಾಪದ ಕೆಲಸಗಳು ನಡೆಯುತ್ತಿವೆ, ನಾನು ಇಲ್ಲಿ ಇಷ್ಟು ಹೇಳುತ್ತಿದ್ದೇನೆ, ಇದರಲ್ಲಿ ಸತ್ಯವಾದುದೆಷ್ಟು ಅಸತ್ಯವಾದುದೆಷ್ಟು ಎಂಬುದನ್ನಾದರೂ ಪರೀಕ್ಷೆ ಮಾಡಲು ಅಲ್ಲಿ ಒಂದು ಇನ್‌ಸ್ಪೆಕ್ಷನ್

ಮಾಡಲು ಇಲ್ಲಿಯವರೆಗೂ ಸರ್ಕಾರದವರೇನಾದರೂ ಪ್ರಯತ್ನ ಮಾಡಿದ್ದಾರೆಯೇ ಎಂದರೆ ಅದಿಲ್ಲ. ನಾನೂ ಕೂಡ ಅಲ್ಲಿ ಒಂದು ಕೊಬ್ಬರಿ ಅಂಗಡಿಯನ್ನು ಇಟ್ಟುಕೊಂಡಿದ್ದೇನೆ. ಅಲ್ಲಿ ಎಷ್ಟು ಪಾಪದ ಕೆಲಸಗಳು ನಡೆಯುತ್ತಿವೆ ಎಂಬುದನ್ನು ಒಂದಾವರ್ತಿ ನಾನು ಹಿಂದೆ ಇಲ್ಲಿ ಇಲಾಖಾ ಮಂತ್ರಿಗಳಾಗಿದ್ದ ಮಾನ್ಯ ಪುಟ್ಟಸ್ವಾಮಿಯವರಿಗೆ ಮನವರಿಕೆ ಮಾಡಿಸಿದ್ದೇನೆ. ಅವರು ಅಲ್ಲಿರತಕ್ಕ ಮಾರ್ಕೆಟ್‌ಸಮಿತಿಯನ್ನು ನೋಡಿಕೊಂಡು ಬಂದಿದ್ದಾರೆ. ಆದಾಗ್ಯೂ ಅವರಿಗೆ ಇಲ್ಲಿ ಸತ್ಯವಾದದ್ದನ್ನು ಹೇಳುವುದಕ್ಕೆ ಅವಕಾಶವಿಲ್ಲ. ಅವರಿಗೆ ಕಾಲಬಾರದೆ ಅವರು ಸುಮ್ಮನೆ ಕುಳಿತಿದ್ದಾರೆ. ಅಲ್ಲಿಗೆ ಮಾಲನ್ನು ತರತಕ್ಕ ರೈತರಿಗೊಂದು ಯೋಗ್ಯವಾದ ಬೆಲೆ ಮತ್ತು ನಿಖರವಾದ ಒಂದು ತೂಕ ಈ ಎರಡು ಅನುಕೂಲಗಳನ್ನು ಮಾಡಿಕೊಡದ ಮೇಲೆ ಏತಕ್ಕೆ ಅಲ್ಲಿ ಅದನ್ನು ಒಂದು ಮಾರ್ಕೆಟ್ ಕಮಿಟಿ ಎಂದು ಏತಕ್ಕೆ ಮಾಡಿದ್ದಾರೆ? ಅದರಿಂದ ಆಗತಕ್ಕ ಪ್ರಯೋಜನವಾದರೂ ಏನು? ನಾವೂ ನೀವು ಈ ದಿವಸ ಇಲ್ಲಿ ಸೇರಿರುವುದಾದರೂ ಏತಕ್ಕೆ? ನಮಗೆಲ್ಲಾ ಆ ಜನರು ಏತಕ್ಕೆ ಓಟುಗಳನ್ನು ಕೊಟ್ಟು ಕಳುಹಿಸಿದ್ದಾರೆ? ನಾವು ಇಲ್ಲಿಗೆ ಬಂದಿರತಕ್ಕದ್ದು ಒಂದು ಘನ ಉದ್ದೇಶದ ಸಾಧನೆಗಾಗಿ. ಆದರೆ ಅದರ ಸಾಧನೆಗೆ ಯೋಗ್ಯವಾದ ಕೆಲಸಗಳನ್ನು ನಾವಿಲ್ಲಿ ಈ ದಿವಸ ಮಾಡುವುದಕ್ಕಾಗುತ್ತಿಲ್ಲ. ಎಲ್ಲರೂ ಸುಮ್ಮನೆ ಕೈಕಟ್ಟಿಕುಳಿತಿದ್ದೇವೆ. ನಾನು ಈ ವಿಚಾರಗಳನ್ನು ಹೇಳುತ್ತಿದ್ದಂತೆಯೇ ಮಾನ್ಯ ಸಚಿವರು ಸಭೆಯಿಂದ ಹೊರಗೆ ಹೋಗುತ್ತಿದ್ದಾರೆ. ಇಲ್ಲಿ ಶ್ರೀಮಾನ್ ಬಿ.ಎಲ್. ಗೌಡರು ಇದ್ದಾರೆ. ಆದರೆ ಅವರೇನೋ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವುದರಲ್ಲಿ ಬಹಳ ಹುಷಾರಾಗಿದ್ದಾರೆ, ಅಷ್ಟೆ. ಅದರೆ ನಾನು ಈ ದಿವಸ ಇಲ್ಲಿ ಏನೇನು ಆಪಾದನೆಗಳನ್ನು ಮಾಡುತ್ತಿದ್ದೇನೆ ಅವುಗಳನ್ನೆಲ್ಲಾ ಬರವಣಿಗೆಯಲ್ಲೂ ಕೂಡ ಈ ಹಿಂದೆಯೇ ಮಂತ್ರಿಗಳಿಗೆ ಬರೆದು ಅದಕ್ಕೆ ನನ್ನ ರುಜು ಹಾಕಿ ಕಳುಹಿಸಿದ್ದೇನೆ. ಅವರೇನೂ ಸಾರ್ಥಕವಾಗಲಿಲ್ಲ ಆದರೆ ಈ ಸಹಕಾರ ಸಂಸ್ಥೆಗಳ ವಿಚಾರವನ್ನು ಶ್ರೀಮಾನ್ ಕೆ. ಎಚ್. ಪಾಟೀಲರೂ ಮತ್ತು ಶ್ರೀಮತಿ ನಾಗರತ್ನಮ್ಮನವರೂ ಬಹಳ ಚೆನ್ನಾಗಿ ಹೇಳಿದ್ದಾರೆ. ಅಲ್ಲಿ ತಾಲ್ಲೂಕ್ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಲೆಖ್ಖಗಳು ಮೂರು ವರ್ಷಗಳಿಂದಲೂ ಆಡಿಟ್ಟಾಗಿಲ್ಲ. ಆ ಜನರಲ್ ಬಾಡಿಯ ಸದಸ್ಯರೇ ಅನೇಕರು ಇಲ್ಲಿಯ ಲೆಕ್ಕಪತ್ರಗಳು ಕಳೆದ ಮೂರು ವರ್ಷಗಳಿಂದ ಆಡಿಟ್ಟಾಗಿಲ್ಲ, ಹಣಕಾಸಿನ ವಿಚಾರದಲ್ಲಿ ಬಹಳ ಅನುಮಾನಗಳು ಬರುತ್ತಿವೆ ಎಂದು ರೆಗ್ಯುಲೇಷನ್ ಮಾಡಿ ಬರೆದಿದ್ದಾಯಿತು. ಅಷ್ಟೆಲ್ಲಾ ಆದ ಮೇಲೆ ಆ ವ್ಯವಸಾಯೋತ್ಪನ್ನ ಮಾರಾಟ ಸಂಘದ ಲೆಖ್ಖವನ್ನೂ 1966-1967ರ ಒಂದು ವರ್ಷದ ಲೆಖ್ಖವನ್ನು 1968ನೇ ಡಿಶೆಂಬರ್‌ನಲ್ಲಿ ಪ್ರಾರಂಭ ಮಾಡಿ 1969ನೇ ಫೆಬ್ರುವರಿಯಲ್ಲಿ ಆಡಿಟ್ ಮಾಡಿ ಮುಗಿಸಿದರು. ಈ ಹದಿಮೂರು ತಿಂಗಳು ಒಂದು ವರ್ಷದ ಲೆಖ್ಖ ಆಡಿಟ್ ಮಾಡಲು ಕಾಲ ಬೇಕೆ. ತೊಂದರೆ ಕೊಡಲು, ಇಲ್ಲ ಸಲ್ಲದ ವರದಿ ಬರೆಯಿಸಲು ಈ ಸರ್ಕಾರ ಪ್ರಯತ್ನ ಮಾಡಿತು. ಈ ಆಡಿಟ್ ಬಗ್ಗೆ ಆ ಇಲಾಖೆಯವರೇ ಹೇಳಿದಂತೆ ನಾನು ಬರೆದುಕೊಂಡಿದ್ದೇನೆ. ಅವರು ಹೇಳತಕ್ಕ ಮೂರು ಮುಖ್ಯ ಮಂತ್ರಗಳೆಂದರೆ ಒಂದು—ಅವರು ಹೇಳಿದಂತೆ ಕೇಳಬೇಕು, ಅವರು ಹೇಳಿದಂತೆ ಮಾಡಬೇಕು ಮತ್ತು ಕೊಟ್ಟಿದ್ದನ್ನು ವಾಪಸ್ಸು ಕೇಳಬಾರದು. ಈ ಮೂರು ಅವರ ಮಂತ್ರಗಳು. ಅಲ್ಲಿ 1966—67ಕ್ಕೆ ಮಾತ್ರ ಲೆಕ್ಕಗಳು ಆಡಿಟ್ಟಾಗಿವೆ. ಆ ಮಾರ್ಕೆಟಿಂಗ್ ಸೊಸೈಟಿ ಸರ್ಕಾರಕ್ಕೆ 27 ಸಾವಿರ ರೂಪಾಯಿಗಳ ಇನ್‌ಕಂಟ್ಯಾಕ್ಸನ್ನು ಒಂದು ವರ್ಷದ ಆದಾಯಕ್ಕೆ ಕೊಡುತ್ತಿದೆ. ಅಂಥ ಒಂದು ಸಂಸ್ಥೆಯ ಲೆಕ್ಕ ಪತ್ರಗಳನ್ನು ಆಡಿಟ್ ಮಾಡುವುದಕ್ಕೆ ಮೂರಾವರ್ತಿ ಆಡಿಟರನ್ನು ಹಾಕಿದರು. ಅದನ್ನು ಆಡಿಟ್ ಮಾಡಿಸುವುದರಲ್ಲಾದರೂ ಎಷ್ಟು ನಿಧಾನ! ಅದಕ್ಕೆ ಕಾರಣ ಇವರ ಎದುರಿನಲ್ಲಿ ಯಾರೂ ಪತಿವ್ರತೆಯರೂ ಇರಬಾರದೆಂದೋ ತಪ್ಪು ಮಾಡಿದವರನ್ನು ಗಲ್ಲಿಗೆ ಹಾಕಲಿ, ಬೇಡವೆನ್ನುವುದಿಲ್ಲ. ಆದರೆ ಒಳ್ಳೆಯ ಕೆಲಸವನ್ನು ಮಾಡಿದ ಜನಕ್ಕೆ ಇವರು ಪುರಸ್ಕಾರವನ್ನು ತೋರಿಸಲೇಬೇಕು. ಅಲ್ಲಿ ಎಷ್ಟೋ ಇಂಥ ಅನೇಕ ಸೊಸೈಟಿಗಳು ಆಡಿಟ್ಟಾಗಿಲ್ಲ. ಬಾಣಸಂದ್ರದಲ್ಲಿ ಇಂಥದೇ ಒಂದು ಸಣ್ಣ ಸಹಕಾರ ಸಂಸ್ಥೆ ಇದೆ. ಅಲ್ಲಿ 55 ಸಾವಿರ ರೂಪಾಯಿಗಳ ದುರುಪಯೋಗ ಆಗಿದೆ. ಅಂಥಾದ್ದರಲ್ಲಿ 44 ಸಾವಿರ ಮಿಸ್‌ಅಪ್ರೋಪ್ರಿಯೇಟಾಗಿದೆ. ಅದು ಅಲ್ಲಿ ಕೆಲಸ ಮಾಡುತ್ತಿದ್ದ ಸೆಕ್ರೆಟೆರಿಯ ಮೇಲೆ ಬಂದಿದೆ. ಆತನಲ್ಲಿ ಆ ಲುಕ್ಸಾನನ್ನು ತುಂಬುವಷ್ಟು ಆಸ್ತಿಯಿಲ್ಲ. ಈ ದಿವಸ ಒಬ್ಬ ರೈತನೇನಾದರೂ ಸರ್ಕಾರಕ್ಕೆ ಕೊಡತಕ್ಕ ಒಂದು ಕಾಸನ್ನು ಕೊಡದೆ ತಪ್ಪಿದಲ್ಲಿ ಆತನ ಆಸ್ತಿಯನ್ನು ಹರಾಜ್ ಮಾಡಿ ಆತನಿಗೆ ಕೈಗೆ ಕೈಕೋಳ ಹಾಕುತ್ತಾರೆ. ಹಾಗೆ ಜಮಾ ಮಾಡಿದ ದುಡ್ಡನ್ನು ಇಲ್ಲಿ ಯಾವ ರೀತಿ ವೆಚ್ಚ ಮಾಡಲಾಗುತ್ತಿದೆ? ಯಾರು ಎಷ್ಟು ದುಡ್ಡನ್ನು ತಿಂದರೂ ಕೇಳತಕ್ಕವರೇ ಇಲ್ಲ. ಇಂಥಾ ಸನ್ನಿವೇಶವಿರುವಾಗ ಇಲ್ಲಿ ಪ್ರಾಮಾಣಿಕರಾದ ಜನಗಳು ಇರುವುದಕ್ಕೆ ಅವಕಾಶವೆಲ್ಲಿದೆ? ಯೋಗ್ಯ ಜನರು ಬಾಳುವುದಕ್ಕೂ ಕೂಡ ಅವಕಾಶವಾಗುತ್ತಿಲ್ಲ. ರಾಜ್ಯದಲ್ಲಿರತಕ್ಕ ಶೇ: 90ರಷ್ಟು ಬಡಜನರು ಈ ಸರ್ಕಾರದಿಂದ ಎಂದು ಉದ್ಧಾರವಾಗುವುದು? ಇಲ್ಲಿ ಆಡಳಿತ ನಡೆಸುತ್ತಿರುವುದು ಪ್ರಜಾಸತ್ತಾತ್ಮಕ ತತ್ವಗಳಲ್ಲಿ—ಸಾಮ್ರಾಜ್ಯಶಾಹಿ ತತ್ವಗಳು ಆಡಳಿತ ನಡೆಸುತ್ತವೆ. ಈ ದಿವಸ ಈ ಆಡಳಿತ ನಡೆಸುತ್ತಿರುವ ಸರ್ಕಾರ ನೂರಕ್ಕೆ ಶೇ $1\frac{1}{2}$.

(ಶ್ರೀ ವಿ. ಎಲ್. ಶಿವಪ್ಪ)

ಪರ್ಸೆಂಟ್ ಬಡ್ಡಿ ತೆಗೆದುಕೊಳ್ಳುವುದಕ್ಕೆ ಅಜ್ಜಿ ಮಾಡಿದ್ದಾರೆ. 2 ಸಾವಿರದ ಒಳಗೆ ಉತ್ಪತ್ತಿಯಿರ ತಕ್ಕ ವ್ಯವಸಾಯಗಾರರಿಗೆ ವಿನಾಯಿತಿ ದೊರೆಯಬೇಕೆಂದು ಆ ಕಾನೂನಿನಲ್ಲಿದೆ. ಯಾರಾದರೂ ರೈತನ ಮೇಲೆ ಈ ದಿವಸ ಒಂದು ದಾವಾ ಹಾಕಿದರೆ ಅದಕ್ಕೆ ಫಾಯಿಸೆ ಎಷ್ಟು, ಬಡ್ಡಿ ದರವೇನು ಎಂಬುದೊಂದು ತಿಳಿಯದೇ ಪ್ರಯತ್ನ ಮಾಡುತ್ತಿಲ್ಲ. ನಾವು ಈ ದಿವಸ 2000 ಕೊಬ್ಬರಿಯನ್ನು ಮಾರಿದರೆ 2 ಸಾವಿರ ಬರುತ್ತೆ. ಅದರಲ್ಲಿ ಅವನ ಹೊಟ್ಟೆಗೇನು ? ಬಟ್ಟೆಗೇನು ಅವನು ಜೀವನ ಹೇಗೆ ನಡೆಸಬೇಕು ? ಆ ಹಣದಲ್ಲಿ ರೈತನು ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಅದರಿಂದ ದಯವಾಡಿ ಇದನ್ನು 2 ಸಾವಿರದಿಂದ 4 ಸಾವಿರದವರೆಗೂ ಏರಿಸಬೇಕು. 4 ಸಾವಿರ ರೂಪಾಯಿ ಉತ್ಪತ್ತಿ ಬರುವವನು ವ್ಯವಸಾಯಗಾರನೆಂದು ಪರಿಗಣಿಸಲು ಸರ್ಕಾರ ಅಜ್ಜಿ ಮಾಡಬೇಕು.

ಇನ್ನು ಲ್ಯಾಂಡ್ ಮಾರ್ಟಿಗೇಜ್ ಬ್ಯಾಂಕಿನಲ್ಲಿ ಏನು ಅಭಿವೃದ್ಧಿಯಾಗಿದೆ ಎಂದು ನೋಡುವು ದಾದರೆ, 57-58ರಿಂದ 62-63ನೇ ಸಾಲಿನವರೆಗೆ ರೈತರಿಗೆ ಸಾಲ ತೀರುವಳಿಗೆ ಸಾಲ ಒದಗಿಸು ತ್ತಿದ್ದಾರೆ. ಇತ್ತೀಚೆಗೆ ಭೂಅಭಿವೃದ್ಧಿಗೋಸ್ಕರ ಕೊಡಬೇಕೆಂದು ಮಾಡಿದ್ದಾರೆ. ಆಗ ಬುದ್ಧಿವಂತ ಜನ ಸಾಲ ಯಾರಿಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೋ ಅಂತಹವರಿಗೆ ಕೊಡುತ್ತಿದ್ದರು. ಸಾಲ ಅವರಿಗೆ ಇಲ್ಲದಂತೆ ಅನುಕೂಲ ಮಾಡಿಕೊಡಬೇಕೆಂಬ ಆಲೋಚನೆ ಬಂತು. ಈಗ ಸಾಲ ಬಾಕಿ ಎಷ್ಟೋ ನಿಂತಿದೆ. ಆಗ ಸಾಲ ಬಹಳವಾಗಿ ಕೊಡುತ್ತಿದ್ದೆವು ಎಂಬುದಾಗಿ ಹೇಳಿದ್ದೀರಿ. ಆಗ ಸ್ಪೆಷಲ್ ಸ್ಕೀಮ್ಸ್ ಮಾಡಿದ್ದರು. ಅದರಲ್ಲಿ ಸೇಕಡ 10ರಷ್ಟು ಜನ ಸಾಲ ತೆಗೆದುಕೊಂಡು ಆ ಸಾಲ ತೀರಿಸುತ್ತಿದ್ದರು. ಈಗ ಸಾಲಗಾರರ ತೀರುವಳಿಗೋಸ್ಕರ ಕೊಡುತ್ತಿದ್ದ ಸಾಲವನ್ನು ನಿಲ್ಲಿಸಲಾಗಿರುತ್ತೆ ಇನ್ನುಳಿದ ಸೇಕಡ 90ರಷ್ಟು ಜನ ಸಾಲಗಾರರ ಕೈಲಿ ಇದ್ದಾರೆ. ಅವರು ಯಾವಾಗ ನಮ್ಮಂತೆ ನಿಮ್ಮಂತೆ ಆಗುವುದು, ಯಾವಾಗ ಅವರು ಈ ರೀತಿ ಬರುವುದು ಎಂದು ಯೋಚನೆ ಮಾಡಬೇಕಾಗಿದೆ. ಸಾಧಾರಣವಾಗಿ ಸೇಕಡ 80ರಷ್ಟು ಜನರಾದರೂ ಸಾಲ ತೀರಿಸಿ ಕೋಟ್ಯಾಂತರ ರೂಪಾಯಿಗಳನ್ನು ಹಿಂದಕ್ಕೆ ಪಡೆಯುವಂತ ಅವಕಾಶ ಬರಬೇಕು, ಸಾಲ ತೀರುವಳಿ ಬಗ್ಗೆ ಸ್ವಲ್ಪ ಪರ್ಸಂಟೇಜ್ ಫಿಕ್ಸ್ ಮಾಡಬೇಕು. ನಮ್ಮ ಹಳೆಯ ಮೈಸೂರು ಸಂಸ್ಥಾನವನ್ನು ಜಪಾನ್ ಕಡೆಯ ಸಹಕಾರ ಸಂಘಗಳವರು ಹೊಗಳಿದ್ದಾರೆ. ಇಂತಹ ಮಾದರೀ ಸಂಸ್ಥಾನದಲ್ಲಿ ಬೇಕಾದಷ್ಟು ಸುಖವನ್ನು ಅನುಭವಿಸಿದ್ದಾರೆ. ಇಲ್ಲಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್‌ಗಳು ಹಿಂದೆ ಬೇಕಾದಷ್ಟು ಇದ್ದುವು. ಸಾಲ ಕೊಟ್ಟಿದ್ದುವು. ಆದ್ದರಿಂದ ಸಾಲ ವಾಪಸ್ಸು ಬರುವುದೂ ಸಹ ಕಡಿಮೆಯಾಗಿದೆ ಹೊಸ ಮೈಸೂರಿನಲ್ಲಿ ಇಂತ ಬ್ಯಾಂಕುಗಳಿರಲಿಲ್ಲ ಅಲ್ಲಿ ಈಗ ಹೊಸದಾಗಿ ಬ್ಯಾಂಕುಗಳು ಸ್ಥಾಪನೆಯಾಗಿವೆ. 40–80 ಸಾವಿರ ರೂಪಾಯಿಗಳವರೆಗೆ ಸಾಲ ಕೊಡುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಸೆಂಟ್ ಪರ್ಸೆಂಟ್ ಸಹ ಸಾಲ ವಾಪಸ್ಸು ಕೊಟ್ಟಿದ್ದಾರೆ. ಈಗ ಪರ್ಸೆಂ ಟೇಜ್ ಕಲೆಕ್ಷನ್ ಮೇಲೆ ಹೊಸದಾಗಿ ಸಾಲ ಒದಗಿಸುವ ಈ ಯೋಜನೆಯಲ್ಲಿ ಈಗ ಬರುವ ಸ್ಪೆಷಲ್ ಸ್ಕೀಂ ಸೌಕರ್ಯಗಳು ಹಳೇ ಮೈಸೂರಿಗೆ ಸಿಕ್ಕುವಂತ ಪರಿಸ್ಥಿತಿ ಹೋಗಿದೆ. ಯಾರು ಮುಂಚೆಯಿಂದ ಸಾಲ ಕೊಟ್ಟಿದಂತ ಬ್ಯಾಂಕು ಇದ್ದವೋ ಅಂತಹವರಿಗೆ ರ್ಪಂಟೇಜ್ ಸಹ ಕೊಡುವುದಕ್ಕಾಗುವುದಿಲ್ಲ. ದೇಶ ಕಟ್ಟುವಾಗ ಅದು ಸರಿಯಾದ ರೀತಿಯಲ್ಲಿ ಉಪಯೋಗವಾಗ ಬೇಕು. ಸೇಕಡ 90ಕ್ಕಿಂತ ಕಡಮೆಯಾಗಿದ್ದರೆ ನಾವು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಇದರಿಂದ ನಾವು ಉಳಿಯುತ್ತೇವೋ ಇಲ್ಲವೋ ಎಂದು ಕಡೆಯದಾಗಿ ಹೇಳುವ ಮಾತನ್ನು ನೀವು ಕೂಲಂಕಷವಾಗಿ ವಿಚಾರ ಮಾಡಿ. ಐದು ವರ್ಷಗಳಿಂದ ಮಳೆ ಇಲ್ಲ. ರೈತಾಪಿ ಜನಗಳು ಸತ್ಯ ವಂತರು. ಪಾಪ ಮಾಡುವ ಜನರಲ್ಲ. ಕೊಡದೇ ಇರುವ ಸಂದರ್ಭಗಳು ಅಷ್ಟು ಇಲ್ಲ. ಕೆಲವು ಸಂದರ್ಭಗಳಲ್ಲಿ ಕೊಟ್ಟ ಸಾಲ ವಾಪಸು ಬರುವುದೂ ಸಹ ಹೋಗಿದೆ. ಆದ್ದರಿಂದ ಪರ್ಸಂಟೇಜ್ ಫಿಕ್ಸ್ ಮಾಡಿ. ಅವರನ್ನು ಅನಾಹುತ ಮಾಡುವುದು ಸರಿಯಲ್ಲ. ದಯಮಾಡಿ ಅದನ್ನು ಸೇಕಡ 50ಕ್ಕೆ ಇಳಿಸಿ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕು. ಈಗ ಶೇಕಡ 2 ರೂಪಾಯಿಗಳು ಧರ್ಮ ಬಡ್ಡಿಯಾಗಿದೆ. ಅದಕ್ಕೂ ಮುಂದೆ ಒಂದು ರೂಪಾಯಿಗಿಂತ ಕಡಿಮೆ ತೆಗೆದುಕೊಳ್ಳುತ್ತಿದ್ದರು. ಹಾಗೆ ತೆಗೆದುಕೊಂಡರೇನೇ ಆಗ ಪಾಪ ಬರುತ್ತದೆಂದು ಹೇಳುತ್ತಿದ್ದರು. ಇವತ್ತು ಧರ್ಮದ ಬಡ್ಡಿ 3—3½—4 ರೂಪಾಯಿಯಂತೆ ಸೇಕಡಾವಾರ ಸಂಪಾದನೆ ಮಾಡುತ್ತಿದ್ದಾರೆ. ಹೀಗಾದರೆ ಇನ್ನು 100 ವರ್ಷಗಳಾದರೂ ಅವರಿಗೆ ಈ ಸ್ಥಿತಿ ಸರಿಹೋಗುವುದಿಲ್ಲ. ನೀವು ಶ್ರೀಮಂತರ ಮನೆ ನೋಡಿ, ದೇಶದಲ್ಲೆಲ್ಲಾ ಹೀಗೆಯೇ ಇದೆಯೆಂಬುದಾಗಿ ಹೇಳಬೇಡಿ. ರೈತರ ವಿಚಾರ ನೋಡಿ. ನಾವು ಅವರನ್ನು ಜನರೆಂದು ಕರೆಯಬೇಕೋ ಬೇಡವೋ ಎಂಬುದಾಗಿ ರೈತನ ಸ್ಥಿತಿ ಇದೆ. ರೂರಲ್ ಏರಿಯಾದಲ್ಲಿ ಸ್ವಲ್ಪಮಟ್ಟಿಗೆ ಈಗ ಆದಾಯದ ಪರ್ಸಂಟೇಜ್ ಜಾಸ್ತಿಯಾಗುತ್ತದೆ. ಆದರೆ ಅರ್ಬನ್ ಏರಿಯಾದಲ್ಲಿ ಮಹಡಿ ಮೇಲೆ ಮಹಡಿಗಳು ಹಣದ ಮೇಲೆ ಹಣ ಬೆಳೆಯುತ್ತಿದೆ. ಹಳ್ಳಿಯ ರೈತರಿಗೆ ಬೆಳಗ್ಗೆ

ಯಾದರೆ ಸೂರ್ಯ ಹುಟ್ಟಿದಂದಿನಿಂದ ಸಾಯಂಕಾಲದವರೆಗೆ ಕೆಲಸ. ಅಲ್ಲಿನ ಸುಖ ಅವರಿಗೆ ಹೇಗಿದೆ ಎಂಬುದನ್ನು ನೋಡಿದರೆ ಹೆಂಡತಿಗೆ ಸೀರೆ ಇಲ್ಲ. ಮಕ್ಕಳುಮರಿಗಳನ್ನು ಸಾಕಿ ಅವರಿಗೆ ಮದುವೆ ಮಾಡಿ ಸರಿಯಾದ ಉಡುಗೊರೆಗಳನ್ನು ಕೊಡುವ ಶಕ್ತಿ ಇಲ್ಲ. ಒಟ್ಟಿನಲ್ಲಿ ಈ ಇಲಾಖೆಯು ಪವಿತ್ರತೆ ಕೆಟ್ಟು ಹೋಗದಂತೆ ಜನರಿಗೆ ಅನುಕೂಲ ಮಾಡಿಕೊಡಬೇಕು.

ಇನ್ನು ಕೋಆಪರೇಟಿವ್ ಡಿಪಾರ್ಟ್‌ಮೆಂಟಿನಲ್ಲಿ ಕೋಕೋನಟ್ ಡೆವಲಪ್‌ಮೆಂಟ್ ಸ್ಕೀಮ್ಸ್ ಏನಿವೆ ಅವುಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಇದರ ಬಗ್ಗೆ ತುಮಕೂರು ಜಿಲ್ಲೆಗೆ ಹೆಚ್ಚಿಗೆ ಪ್ರಾಶಸ್ತ್ಯ ಕೊಟ್ಟಿಲ್ಲ. ಚಿತ್ರದುರ್ಗ ಮತ್ತು ಸಾಗರ ಇಂತಹ ಕಡೆಗಳಲ್ಲಿ ಬೇಕಾದಷ್ಟು ಪ್ರಾಶಸ್ತ್ಯ ಕೊಟ್ಟಿದ್ದಾರೆ. ಖುಷ್ಕಿ ಜಮೀನಿನಲ್ಲಿ ನಾವು ಬಾಗಾಯಿತು ಮಾಡುತ್ತೇವೆ. ನೀವು ಈ ಸ್ಕೀಮ್ಸ್ ನೋಡಲಿಲ್ಲ. ನೀವು ಒಂದು ಸಾರಿ ನಮ್ಮಲ್ಲಿಗೆ ಬಂದು ಆ ಏರಿಯಾ ಏನು, ಅಲ್ಲಿ ಎಷ್ಟು ತೆಂಗಿನ ಗಿಡಗಳನ್ನು ಬೆಳೆಸಬಹುದು—ಹೀಗೆ ವಿಶೇಷವಾದಂಥ ಸ್ಪೆಷಲ್ ಸ್ಕೀಮುಗಳನ್ನು ಮಾಡಿ ಹಣ ಒದಗಿಸಿದರೆ ಲಕ್ಷಾಂತರ ಎಕರೆಗಳಲ್ಲಿ ಚೆನ್ನಾಗಿ ಸಾಗುವಳಿ ಮಾಡುವುದಕ್ಕೆ ಅವಕಾಶ ವಾಗುತ್ತದೆ. ಗುಬ್ಬಿ ತುರುವೇಕೆರೆ, ಚಿಕ್ಕನಾಯಕನಹಳ್ಳಿ, ತಿಪಟೂರು, ಇಂತಹ ಕಡೆಗಳಲ್ಲಿ ತೆಂಗು ಬೆಳೆ ಆಗಿರುವುದನ್ನು ನೋಡಬೇಕು. ಅಲ್ಲಿಗೂ ಆ ರೀತಿ ಕೊಡುವ ಅವಕಾಶವನ್ನು ಮಾಡಿ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಈಗ ಮಾರ್ಕೆಟ್ ಕಮಿಟಿ ಚೇರ್‌ಮನ್ ಅವರು ಹೈಕೋರ್ಟಿಗೆ ಅಪೀಲು ಹೋಗಿದ್ದಾರೆ. ಅಕೌಂಟೆಂಟ್, ಆಗಿ ಇದ್ದವರನ್ನು ಸೂಪರಿಂಟೆಂಡೆಂಡ್ ಆಗಿ ಮಾಡಿದ್ದು ಸರಿ ಎಂದು ರಿಜಿಸ್ಟ್ರಾರ್ ಆಫೀಸಿನಲ್ಲಿ ಸರಿಯೆಂದು ಆರ್ಡರ್ ಆಯಿತು. ಅದು ಸರ್ಕಾರಕ್ಕೂ ಹೋಗಿ ಹೈಕೋರ್ಟಿಗೆ ಹೋಗಿದೆ. ಈ ಕೇಸನ್ನು ನಾವು ಚರ್ಚೆಮಾಡುವುದಿಲ್ಲ. ಅದು ಸರಿ, ತಪ್ಪು ಎಂದೂ ಹೇಳುವುದಿಲ್ಲ. ಅಧಿಕಾರಿ ಯಾರೇ ಆಗಿರಲಿ ಸಂಬಂಧಪಟ್ಟ ಇಲಾಖೆಯಿಂದ ಅಧಿಕಾರ ಕೊಟ್ಟರೆ ಅವರೇ ಸ್ವಂತವಾಗಿ ಹೈಕೋರ್ಟಿಗೆ ಹೋಗಿದ್ದಾರೆಯೇ, ಹಣ ಖರ್ಚು ಮಾಡಲು ಯಾರು ಅಧಿಕಾರ ಕೊಟ್ಟರು ಕಾನೂನು ಬೇಡವೇ ಇದಕ್ಕೆ ಒಂದು ಕಮಿಟಿ ಇಲ್ಲ. ಯಾವ ಕಮಿಟಿ ಮೀಟಿಂಗ್ ಕರೆದಿಲ್ಲ. ನಿಮ್ಮನ್ನೂ ಅವರು ಪ್ರಾರ್ಥನೆ ಮಾಡಲಿಲ್ಲ. ಹೈಕೋರ್ಟಿಗೆ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇನೆಂದು ಹೇಳಿದರೆ ಇಂತಹ ಸರ್ವಾಧಿಕಾರ ಕಮಿಟಿ ಇದೆಯೆಂದು ಹೇಳಿದರೆ, ನೀವೇನು ಮಾಡುತ್ತೀರಿ ಅಂದರೆ ಸುಮ್ಮನೆ ಜಪ ಮಾಡುತ್ತೀರಿ. ಈ ವಿಚಾರವನ್ನು ಹೇಳಿದ ಕೂಡಲೇ ಚಳಿ ಜ್ವರ ಬರುತ್ತದೆ. ಆಮೇಲೆ ನಿಮಗೆ ಬೇಕಾದವರನ್ನು ನಾಮಿನೇಷನ್ ಮಾಡುತ್ತೀರಿ. ಯಾವ ರೈತ ಯೋಗ್ಯ ಜನರಾಗಿದ್ದಾನೋ ಯಾರು ಇದುವರೆಗೆ ಕಮಿಟಿಯಲ್ಲಿ ಇದ್ದಾರೆಯೋ ಅಂತಹವರನ್ನು ಹಾಕಬೇಕು.

ಶ್ರೀ ಬಿ. ಎಲ್. ಗೌಡ.—ವರ್ತಕರನ್ನು ಈಗಿನ ಹೊಸ ಕಾನೂನಿನಲ್ಲಿರುವ ಹಾಗೆ ಮಾಡುವುದಿಲ್ಲ.

ಶ್ರೀ ವಿ. ಎಲ್. ಶಿವಪ್ಪ.—ವರ್ತಕರು ಏಕೆ ಬೇಕು ವರ್ತಕರು ಹೇಳಿದವರನ್ನು ಹಾಕಿದರೆ ಸಾಕು, ಅಂದರೆ ಅವರು ಹೇಳಿದ್ದನ್ನು ನೀವು ಕೇಳುತ್ತೀರಿ. ಅವರನ್ನು ರುಜು ಹಾಕಿ ಎಂದು ಹೇಳಿದರೆ ಸಾಕು, ಹಾಕುತ್ತಾರೆ. ಆದ್ದರಿಂದ ನೀವು ನಿಜವಾಗಿ ರೈತರಿಗೋಸ್ಕರ ದ್ರೋಹ ಮಾಡಬೇಡಿ. ಇಲ್ಲದಿದ್ದರೆ ಈಗಿನ ನಾಮಿನೇಷನ್ ಪದ್ಧತಿ ಬೇಡ. ಎಲೆಕ್ಷನ್ ಮಾಡಿ. ಯಾರೇ ಬರಲಿ, ತಿಳು ವಳಿಕೆಯ ಜನರು ಬರುತ್ತಾರೆ. ಈಗಿರುವ ಮಾರ್ಕೆಟ್ ಕಮಿಟಿಯನ್ನು ತೆಗೆದು ಎಲೆಕ್ಷನ್ ಮಾಡ ಬೇಕು. ಆ ಕಮಿಟಿಯು ಅಧ್ಯಕ್ಷರ ಮೇಲೆ ಏನಾದರೂ ಹಿಡಿತ ಬೇಕು. ಯಾರಾದರೂ ಹಣ ಖರ್ಚು ಮಾಡಿದ್ದರೂ, ಅವರು ನಿಮ್ಮ ಸರ್ಕಾರದ ಮೇಲೆಯೇ ಹೈಕೋರ್ಟಿಗೆ ಅಪೀಲು ಹೋದರೆ ಇನ್ನೇನು ಹೇಳಿದರೇನು? ವ್ಯವಸ್ಥಿತವಾದಂಥ ಮಾರ್ಕೆಟ್ ಕಮಿಟಿ ಮಾಡುತ್ತೇವೆಂದು ಹೆಸರಿಟ್ಟಿದ್ದೀರಿ. ಈಗ ಹೇಳಿರತಕ್ಕ ಮಾತಿನಂತೆ ವ್ಯವಸ್ಥೆ ಮಾಡಿ, ಅದನ್ನು ಕೂಡಲೇ ಮಾಡಬೇಕೆಂದು ಹೇಳಿ, ಅಧ್ಯಕ್ಷರು ನನಗೆ ಇಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದರಿಂದ ನಾನು ಅವರನ್ನು ವಂದಿಸಿ, ನನ್ ಮಾತನ್ನು ಮುಗಿಸುತ್ತೇನೆ.

4–30 P.M.

[CHAIRMAN (SMT. K. LEELAVATHI RAI) in the Chair.]

ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಮುಂದಿರತಕ್ಕಂತಹ ಸಹಕಾರ, ಗ್ರಾಮಾಭಿವೃದ್ಧಿ ಹಾಗೂ ರಾಷ್ಟ್ರೀಯ ವಿಸ್ತರಣಾ ಯೋಜನೆ ಮತ್ತು ಸಾಮುದಾಯ ಅಭಿವೃದ್ಧಿ ಬಗ್ಗೆ ಆರು ಕೋಟಿ 50 ಲಕ್ಷ 15 ಸಾವಿರ ರೂಪಾಯಿಯ ಈ

(ಶ್ರೀ ಎನ್. ಚಿಕ್ಕೇಗೌಡ)

ಒಂದು ಬೇಡಿಕೆಯನ್ನು ಸ್ವಾಗತಿಸುತ್ತಾ, ಕೆಲವು ಮಾತುಗಳನ್ನು ಹೇಳುತ್ತೇನೆ. ಇವತ್ತಿನ ದಿವಸ ನಮ್ಮ ಮುಂದೆ ಇರತಕ್ಕಂತಹದ್ದು ಮುಖ್ಯವಾದ ಖಾತೆ ಹಾಗೂ ರೈತರಿಗೆ ಜೀವನಾಡಿಯಾಗಿರತಕ್ಕ ಇಲಾಖೆ; ಈ ಸಹಕಾರಿ ಇಲಾಖೆ. ಈ ವಿಚಾರದಲ್ಲಿ ವಿರೋಧಪಕ್ಷದ ಮಾನ್ಯ ಸದಸ್ಯರೂ ಹಾಗೂ ಇತರ ಕೆಲವು ಸದಸ್ಯರು ಮಾತನಾಡಿದ್ದಾರೆ. ಇವತ್ತು ಸಹಕಾರ ಇಲಾಖೆಯ ಬಗ್ಗೆ ಎಲ್ಲರೂ ಹೇಳುತ್ತಿರುವುದು ಹೆಚ್ಚಾಗಿದೆ. ಇಡೀ ರಾಜ್ಯದಲ್ಲಿ ಹಾಗೂ ದೇಶದಲ್ಲಿ ಈ ಸಹಕಾರಿ ಕ್ಷೇತ್ರ ಎಷ್ಟು ಹರಡಬೇಕೋ, ಮತ್ತು ಇದು ರೈತರಿಗೆ ಎಷ್ಟು ಸಾಲ ಸೌಲಭ್ಯಗಳನ್ನು ಒದಗಿಸಬೇಕೋ, ಅದು ದೊರಕಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇದಕ್ಕೆ ಮುಖ್ಯವಾದ ಕಾರಣವನ್ನು ಅನೇಕ ವಿರೋಧಪಕ್ಷದ ಸದಸ್ಯರು ಹೇಳಿದ್ದಾರೆ. ನಾನು ಹೇಳುವಂತದ್ದಾದರೂ, ಯಾವ ವ್ಯಕ್ತಿಯನ್ನಾದರೂ ದೂಷಣೆ ಮಾಡಿ ಹೇಳುತ್ತಿಲ್ಲ. ಇವತ್ತು ಅಲ್ಲಿ ಅನೇಕ ಪಟ್ಟಭದ್ರರು ಸೇರಿಕೊಂಡು, ಸಹಕಾರಿ ಕ್ಷೇತ್ರವನ್ನು ಹಾಳುಮಾಡುತ್ತಿದ್ದಾರೆ. ಇವತ್ತು ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟ್‌ಗೆ ಚುನಾವಣೆ ನಡೆಯಬೇಕೆಂದು ಹೇಳುತ್ತಿದ್ದಾರೆ. ಆದರೂ ಅನೇಕ ಪಟ್ಟಭದ್ರರು ಸೇರಿಕೊಂಡು ಅಲ್ಲೂ ಸೇರಿಕೊಂಡು ಇದನ್ನು ಮಾಡುತ್ತಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಸಹಕಾರಿ ಸಂಘಗಳ ಅಂಕಿಅಂಶಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದರಲ್ಲಿ ಎಷ್ಟು ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿದೆ ಎಂಬುದನ್ನು ನೋಡಬೇಕು. ಇದರಲ್ಲಿ ಎಷ್ಟು ಸಂಸ್ಥೆಗಳು ಜೀವಂತವಾಗಿ ಉಳಿದಿವೆ, ಅಥವಾ ಹೆಸರನ್ನು ಇಟ್ಟುಕೊಂಡು, ಸೀಲನ್ನು ಇಟ್ಟುಕೊಂಡು, ಚುನಾವಣೆ ಬಂದಾಗ ಓಟು ಮಾಡತಕ್ಕದ್ದು ಎಷ್ಟು? ಏನಾದರೂ ಸರ್ಕಾರದಿಂದ ಸಹಾಯವನ್ನು ಎಷ್ಟು ಪಡೆಯುತ್ತಿವೆ ಎಂದೆಲ್ಲಾ ಕೊಟ್ಟಿದ್ದರೆ ಚೆನ್ನಾಗಿತ್ತು. ಸಹಕಾರಕ್ಕೆ ಸರ್ಕಾರದವರು ಮತ್ತು ಯೂನಿಯನ್ ಎಷ್ಟು ಕೊಟ್ಟಿದ್ದಾರೆ ಎಂಬುದು ಕಾಣುತ್ತಾ ಇಲ್ಲ. ಇವತ್ತು ಸಹಕಾರ ಸಂಘಗಳ ಮುಖಾಂತರ ರೈತರಿಗೆ ಕೊಟ್ಟಿರತಕ್ಕಂತಹ ಸಾಲ ಸೌಲಭ್ಯಗಳ ವಿಚಾರದಲ್ಲಿ ಬಹಳ ಕಠಿಣವಾಗಿ ಹೇಳಬೇಕಾಗುತ್ತದೆ. ಇವತ್ತು ಯಾರು ಸಹಕಾರ ಸಂಘಗಳ ಅಥವಾ ಬ್ಯಾಂಕುಗಳ ಮುಖಾಂತರ ಸಾಲಸೌಲಭ್ಯಗಳನ್ನು ಪಡೆದಿದ್ದಾರೋ, ಅವರು ಸಕಾಲದಲ್ಲಿ ಅದನ್ನು ಮರುಪಾವತಿ ಮಾಡದೆ ಎಷ್ಟೋ ಕೋಟ್ಯಾಂತರ ರೂಪಾಯಿಗಳು ಬಾಕಿ ಇದೆ. ಇದರಿಂದ ನಿಜವಾಗಿಯೂ ಸಹಕಾರದಲ್ಲಿ ನಿರೀಕ್ಷಿಸಿದಷ್ಟು ಕೆಲಸಕಾರ್ಯಗಳು ನಡೆಯುತ್ತಾ ಇಲ್ಲವೆಂದು ತಿಳಿಯುತ್ತದೆ. ಇವತ್ತು ಗುಜರಾತ್, ಮಹಾರಾಷ್ಟ್ರಗಳಲ್ಲಿ ಸಹಕಾರ ಸಂಘಗಳ ಮೂಲಕ ರೈತರಿಗೆ ಕೊಡತಕ್ಕ ಅಗ್ರಿಕಲ್ಚರಲ್ ಕ್ರೆಡಿಟ್ ವರ್ಷೇ ವರ್ಷೇ ಸಕಾಲದಲ್ಲಿ ವಾಪಸ್ಸು ಕೊಡುವುದರಿಂದ, ಅಲ್ಲಿ ಅದನ್ನು ಸರಿಯಾಗಿ ನಡೆಸಿಕೊಂಡು ಹೋಗಿ, ರೈತರಿಗೆ ತುಂಬಾ ಅನುಕೂಲವಾಗುತ್ತದೆ. ಅನೇಕ ಸದಸ್ಯರು ಇದನ್ನು ಹೇಳಿದ್ದಾರೆ. ನಮ್ಮ ರಾಜ್ಯದಲ್ಲೂ ಈ ರೀತಿ ನಡೆದಿರುವುದಕ್ಕೆ ಕಾರಣವೇನು? ನಮ್ಮ ಸಹಕಾರಿ ಸಂಘಗಳಲ್ಲಿರತಕ್ಕಂತಹ ಆಡಳಿತ ವರ್ಗ, ಅಧಿಕಾರಿ ವರ್ಗವೇ ಕಾರಣವೇ, ಎಂದು ನೋಡಬೇಕಾಗಿದೆ. ಅಲ್ಲಿ ಇವತ್ತು ಅನೇಕ ದುರ್ವ್ಯವಹಾರಗಳು ನಡೆಯುತ್ತಿವೆ. ಇವತ್ತು ಈ ಸಹಕಾರಿ ಸಂಘಗಳ ಕಾಯಿದೆ, ರೂಲ್ಸ್ ಏನಿದೆ, ಅದನ್ನು ಖಂಡಿತವಾಗಿಯೂ ಬದಲಾವಣೆ ಮಾಡಬೇಕಾದುದು ಅತ್ಯಗತ್ಯ, ಸರ್ಕಾರದವರು ಈ ದೆಸೆಯಲ್ಲಿ ಯೋಚನೆ ಮಾಡುತ್ತಿದ್ದಾರೆಂದು ತಿಳಿದುಬಂದಿದೆ. ಇದನ್ನು ಆದಷ್ಟು ಜಾಗ್ರತೆ ತಂದು ದೇಶದಲ್ಲಿ ಆಗತಕ್ಕ ಹಣದ ಅವ್ಯವಹಾರವನ್ನು, ನಿಲ್ಲಿಸಲು ಕಾನೂನಿನಲ್ಲಿ ಬಿಗಿಯಾಗಿ, ಕಠಿಣವಾಗಿ ಅಳವಡಿಸಬೇಕು. ಕಳೆದ ವರ್ಷ ಮದರಾಸಿನಲ್ಲಿ ನಡೆದಂತಹ ಅಖಿಲ ಭಾರತ ಮಟ್ಟದಲ್ಲಿ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳು ಸೇರಿದಂತಹ ಸಮ್ಮೇಳನದಲ್ಲಿ ಠರಾವು ಆಗಿದೆ. ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂತವರು, ಅವರ ಕಾಲಾವಧಿ ಮುಗಿದ ನಂತರ ಮತ್ತೆ ಸ್ಪರ್ಧಿಸಬಾರದು ಎಂದು. ಅದನ್ನು ಕೂಡ ಇಲ್ಲಿ ತಿದ್ದುಪಡಿ ಮಾಡತಕ್ಕ ಸಂದರ್ಭದಲ್ಲಿ ಸಹಕಾರ ಮಂತ್ರಿಯವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕಾರಣವೇನೆಂದರೆ, ಈಗಾಗಲೇ ಪಟ್ಟಭದ್ರವಾಗಿ ಅಲ್ಲಿಯೇ ಅವರು ಕೂತು ಅನೇಕ ಲೋಪದೋಷಗಳನ್ನು ಮಾಡುತ್ತಾರೆ. ಅನೇಕ ವರ್ಷಗಳಲ್ಲಿ ಇದ್ದು ಅಲ್ಲಿ ನಡೆದ ಲೋಪದೋಷಗಳನ್ನು ಮರೆಮಾಚಲು ಪ್ರಯತ್ನಿಸುತ್ತಿರುವರು. ನಮ್ಮ ಹೊಸಕೋಟೆಯಲ್ಲಿ ಚುನಾವಣೆ ಬರುವ ಕಾಲದಲ್ಲಿ, ಅಲ್ಲಿ ಓಡಾಡುವ ವಾಹನಗಳನ್ನು ಎಲ್ಲಾ ನೋಡಿದರೆ, ಅದು ಸಾರ್ವತ್ರಿಕ ಚುನಾವಣೆಗಿಂತಲೂ, ಅಖಿಲಭಾರತಮಟ್ಟದ ಚುನಾವಣೆಗಿಂತಲೂ ದೊಡ್ಡದಾಗಿ ವಾಹನಗಳೆಲ್ಲಾ ಓಡಾಡಿ ನಡೆಯುತ್ತಿತ್ತು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇದಕ್ಕೆಲ್ಲಾ ಹಣವೆಲ್ಲಿಂದ ಬರುತ್ತದೆ? ಶ್ರೀಮತಿ ನಾಗರತ್ನಮ್ಮನವರು ಹಾಗೂ ಇತರರೂ ಹೇಳಿದ್ದಾರೆ. ಅಲ್ಲಿ ಒಬ್ಬ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯ ಸೆಕ್ರೆಟರಿಯ ಆಸ್ತಿ ಏನೆಂಬುದನ್ನು ತನಿಖೆ ಮಾಡಿ ನೋಡಿದರೆ, ಗೊತ್ತಾಗುತ್ತದೆ. ಸರಸ್ವತೀಪುರದಲ್ಲಿ ಮೂರು ಲ ರೂಪಾಯಿಯ ಮನೆಯನ್ನು ಕಟ್ಟಿದ್ದಾನೆ ಎಂದು ಹೇಳಿದರು. ಬೆಂಗಳೂರಿನಲ್ಲೂ ಕೆಲವರು ಮನೆ

ಯನ್ನು ಕಟ್ಟಿಕೊಂಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಒಬ್ಬರು ಇದ್ದಾರೆ. ಅವರಿಗೆ ಇಂಟರ್‌ನ್ಯಾಷನಲ್ ಹೋಟೇಲ್ ಸ್ಟ್ಯಾಂಡರ್ಡ್ ಆಗಬೇಕಾಗಿದೆ. ಇವರಿಗೆ ಎಲ್ಲಾ ದುಡ್ಡು ಎಲ್ಲಿಂದ ಬರುತ್ತದೆ. ಇಂಥ ಸಹಕಾರಿ ಸಂಘಗಳಿಗೆ ಸೇರಿಕೊಂಡು ಅದನ್ನು ಮಾಡುತ್ತಿದ್ದಾರೆ. ಮುಖ್ಯವಾಗಿ ನಾನು ಕಳೆದ ಬಜೆಟ್ ಸೆಷನ್ನಿನಲ್ಲಿ ಹೊಸಕೋಟೆ ತಾಲ್ಲೂಕಿನಲ್ಲಿರತಕ್ಕಂತಹ ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಸೊಸೈಟಿ ಮತ್ತು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮತ್ತು ಇತರ ಸಹಕಾರಿ ಸಂಘಗಳ ವಿಚಾರವನ್ನು ಹೇಳಿದ್ದೆ. ಅಲ್ಲಿರುವ ಹಾಲಿನ ಉತ್ಪಾದಕರ ಸಂಘ, ತೋಟದ ಬೆಳೆಗಾರರ ಸಂಘ ಈ ವಿಚಾರದಲ್ಲೂ ಹೇಳಿದ್ದೇನೆ. ಈಗಲೂ ಇದನ್ನು ಪುನಃ ಹೇಳುತ್ತಿದ್ದೇನೆ. ಅಲ್ಲಿ ನಡೆಯತಕ್ಕ ದುರ್ವ್ಯವಹಾರಗಳ ಬಗ್ಗೆ, ಹೇಳಿದ್ದೇನೆ. ಇತ್ತೀಚೆಗೆ ಬಂದ ಮಾಹಿತಿ ಪ್ರಕಾರ, ಅಲ್ಲಿ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ 4-5 ಲಕ್ಷ ರೂಪಾಯಿ ಹಣ ದುರ್ವಿನಿಯೋಗವಾಗಿದೆ. ಅದಕ್ಕೆ ಸಂಬಂಧಪಟ್ಟ ರಿಜಿಸ್ಟ್ರಾರ್ ಸುಮಾರು 17 ಚಾರ್ಜಸ್ ಫ್ರೇಮ್ ಮಾಡಿ, ಅಲ್ಲಿನ ಡೈರೆಕ್ಟರ್ ಮತ್ತು ಮ್ಯಾನೇಜರಿಗೆ ಷೋಕಾಸ್ ನೋಟೀಸ್ ಕೊಟ್ಟಿದ್ದಾರೆ. ಬರೇ ಅದು ಮಾತ್ರ ಮಾಡಿದರೆ ಸಾಲದು. ಈ ರೀತಿ ಬೇರೆ ತಾಲ್ಲೂಕುಗಳಲ್ಲೂ ಏನೂ ಆಡಿಟ್ ಇಲ್ಲ. ಇವನ್ನು ಮಾನ್ಯ ಹಣಕಾಸಿನ ಮಂತ್ರಿಯವರು ತಮ್ಮ ಭಾಷಣದಲ್ಲೂ ಹೇಳಿದ್ದಾರೆ. ಅದನ್ನು ಮಾಡುತ್ತೇವೆಂದು ಹೇಳಿದರೆ ಸಾಲದು. ಇವತ್ತು ಹೇಗೆ ಪಿ.ಡಬ್ಲ್ಯು.ಡಿ. ಯಲ್ಲಿ ಸೆಲ್, ಎಂ.ಎಸ್.ಇ.ಬಿ.ಯಲ್ಲಿರುವ ಸೆಲ್ ಇಟ್ಟು ಸರ್ಪ್ರೈಸ್ ಚೆಕ್ ಮಾಡಿ ಹೇಗೆ ಹಿಡಿಯುತ್ತಾರೋ, ಹಾಗೆ ತಕ್ಷಣದಲ್ಲಿ ಈ ಆಡಿಟ್ ಸೆಲ್ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಇವೊತ್ತು ಲೋಕಲ್ ಆಡಿಟ್ ಸೆಲ್ಲಿನವರು ಇವರು, ಮ್ಯಾನೇಜರು, ಯಾರಾದರೂ ಬರೆದು ಕೊಟ್ಟಿದ್ದಕ್ಕೆ ರುಜು ಹಾಕುತ್ತಾರೆಂದು ಹೇಳಿದರೆ, ಅತಿಶಯೋಕ್ತಿಯಾಗಲಾರದು. ಇವತ್ತು ಇಲ್ಲಿ ಮುಖ್ಯ ರಿಜಿಸ್ಟ್ರಾರವರೂ ಇದ್ದಾರೆ; ಸಂಬಂಧಪಟ್ಟ ಜಾಯಿಂಟ್ ರಿಜಿಸ್ಟ್ರಾರೂ ಇದ್ದಾರೆ. ಈ ರೀತಿ ಹಣವನ್ನು ಸರ್ಕಾರದಿಂದ ಪಡೆದು ಈ ರೀತಿ ದುರ್ವಿನಿಯೋಗವಾಗಿ, ಹಣಕಾಸಿನ ಈ ಏಜೆನ್ಸಿ ಕುಸಿದು ಬಿದ್ದರೆ, ದೇಶವೇ ಕುಸಿದು ಬೀಳುತ್ತದೆ. ಇದರಿಂದ ದೇಶಕ್ಕೆ ಅಪಕೀರ್ತಿ ಬರುತ್ತದೆ. ಇದಕ್ಕೆ ಒಂದು ಕಾರಣ, ಈ ರೀತಿ ಮಾಡಿದವರಿಗೆ ಉಗ್ರವಾದ ಶಿಕ್ಷೆಯಾಗಲಿ ಅದನ್ನು ವಸೂಲು ಮಾಡತಕ್ಕ ಯಾವ ಒಂದು ಕಟ್ಟಾಯದ ಕ್ರಮವೇ ಇಲ್ಲದಿರುವುದು ಕಾರಣ ನಮಗೆಲ್ಲಾ ಗೊತ್ತಿದ್ದ ಹಾಗೆ ಕ್ರಿಮಿನಲ್ ಪ್ರೊಸಿಜರ್ ಕೋಡಿನಲ್ಲಿ ಏನಾದರೂ ಸಣ್ಣ ಕಳ್ಳತನ ಮಾಡಿದಾಗ, ಉಗ್ರವಾದ ಶಿಕ್ಷೆ ಕೊಡತಕ್ಕದ್ದು ಕಾನೂನಿನಲ್ಲಿ ಇದೆ. ಆದರೆ ಸಹಕಾರಿ ಕಾಯಿದೆ ಏನಿದೆ, ಅದು ಬಹಳ ಸಡಿಲವಾಗಿದೆ. ಈ ಕಾಯಿದೆಯನ್ನು ಪೂರ್ಣವಾಗಿ ಬದಲಾಯಿಸಿ, ಹೊಸ ಕಾಯಿದೆ ಮಾಡಿ, ಈ ರೀತಿ ಮಾಡಿದವರಿಗೆ ತಕ್ಕ ಶಿಕ್ಷೆ ವಿಧಿಸುವಂತಾಗಬೇಕು. ಈಗ ಇರುವಂತದ್ದು ಬರೇ ಪ್ರೈಮರಿ ಬ್ಯಾಂಕ್ ಹೇಗೆ ಕೆಲಸ ಮಾಡಬೇಕು ಎಂಬುದನ್ನೆಲ್ಲಾ ಇದೆ. ಮಿಕ್ಕ ವಿಷಯ ಏನೂ ಇಲ್ಲ. ಈಗ ಸರ್ಕಾರದ ಮುಂದೆ ಏನೇನು ದೂರುಗಳು ಬರುತ್ತವೆ. ಅವುಗಳನ್ನೆಲ್ಲಾ ವಿಚಾರಿಸಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಆ ತರತಕ್ಕ ತಿದ್ದುಪಡಿಯಲ್ಲಿ ಅಡಕವಾಗಿರಬೇಕು. ಇನ್ನೂ ಅನೇಕ ವಿಚಾರಗಳನ್ನು ಇದರ ಬಗ್ಗೆ ಹೇಳಬೇಕಾಗಿದೆ.

ಸಹಕಾರಿ ಬ್ಯಾಂಕು ಮತ್ತು ಸಹಕಾರಿ ಸೊಸೈಟಿಗಳ ವಿಷಯದಲ್ಲಿ ಹೇಳುವುದಾದರೆ ನಮ್ಮ ಬೆಂಗಳೂರು ಜಿಲ್ಲೆಯಲ್ಲಿರತಕ್ಕ ಬೆಂಗಳೂರು ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪರೇಟೀವ್ ಬ್ಯಾಂಕ್ ಏನಿದೆ, ಅದರಲ್ಲಿ ಬಹಳ ಅನ್ಯಾಯಗಳು ಆಗಿವೆ. ಆ ಬ್ಯಾಂಕಿನ ಅಧ್ಯಕ್ಷರು ಈ ಮನೆಯ ಒಬ್ಬರು ಸದಸ್ಯರಾಗಿದ್ದಾರೆ. ಇವರ ವಿಚಾರದಲ್ಲಿ ಕಳೆದ ಬಜೆಟ್ ಅಧಿವೇಶನದಲ್ಲಿ ನಾನು ಅನೇಕ ವಿಚಾರಗಳನ್ನು ಹೇಳಿದ್ದೇನೆ. ಈ ಸಾರಿಯೂ ಸಹ ಈ ಬ್ಯಾಂಕಿನ ಬಗ್ಗೆ ನಾನು ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಈ ಒಂದು ಬ್ಯಾಂಕಿನಲ್ಲಿ ಸರ್ವೇಸಾಮಾನ್ಯವಾಗಿ ವೈಯ್ಯಕ್ತಿವಾದ ದೋಷಾರೋಪಣೆಗಳ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಈ ಬಿ. ಡಿ. ಸಿ. ಸಿ. ಬ್ಯಾಂಕಿನ ಆಡಳಿತ ಅನೇಕ ವರ್ಷಗಳಿಂದ ಒಬ್ಬರ ಕೈಯ್ಯಲ್ಲಿಯೇ ಇದೆ. ಚುನಾವಣೆಯ ಮೂಲಕ ಒಬ್ಬರೇ ಅನೇಕ ವರ್ಷಗಳಿಂದ ಈ ಬ್ಯಾಂಕಿಗೆ ಅಧ್ಯಕ್ಷರಾಗಿ ಚುನಾಯಿತರಾಗುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಬಹುದು ನಾನು ಚುನಾವಣೆಯಲ್ಲಿ ಅಧ್ಯಕ್ಷನಾಗಿ ಆರಿಸಿ ಬಂದಿದ್ದೇನೆ ಎಂದು. ಜನಗಳು ಚುನಾಯಿಸಿದ್ದಾರೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಇವರು ಇಷ್ಟು ವರ್ಷಗಳಿಂದ ಒಂದೇ ಸಮನಾಗಿ ಈ ಬ್ಯಾಂಕಿಗೆ ಅಧ್ಯಕ್ಷರಾಗಿ ಬರುವುದಕ್ಕೆ ಏನು ಒಂದು ಅನುಕೂಲತೆ ಬೇಕೋ ಅದನ್ನು ಇವರು ಮಾಡಿಕೊಂಡಿದ್ದಾರೆ. ಇವರಿಗೆ ಸಂಬಂಧಪಟ್ಟಹಾಗೆ ತಾಲ್ಲೂಕು ಮಟ್ಟದಲ್ಲಿ, ಹೋಬಳಿಮಟ್ಟದಲ್ಲಿ, ಗ್ರಾಮಮಟ್ಟದಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಿ ಅವುಗಳಿಗೆ ಏನೇನು ಸೌಲಭ್ಯಗಳು ಬೇಕೋ ಎಲ್ಲವನ್ನೂ ಒದಗಿಸಿದ್ದಾರೆ. ಕಾನೂನಿನ ಪರಿಮಿತಿಯೊಳಗೆ ಇಲ್ಲದ, ರಿಜರ್ವ್‌ಬ್ಯಾಂಕಿನ ಆದೇಶಕ್ಕೆ ವಿರುದ್ಧವಾಗಿ, ರಿಜಿಸ್ಟ್ರಾರ್ ಅವರು, ಸರ್ಕಾರದವರು ಮಾಡಿರತಕ್ಕ ಕಾಯಿದೆಗಳಿಗೆ ವಿರುದ್ಧವಾಗಿ ಅನೇಕ ಕೆಲಸಗಳನ್ನು ಅನೇಕ ತಪ್ಪುಗಳನ್ನು ಮಾಡಿದ್ದಾರೆ ಆ ಪೈಕಿ ಒಂದೆರಡು ವಿಷಯಗಳನ್ನು ಮಾತ್ರ ನಾನು ಹೇಳುತ್ತೇನೆ. ನನ್ನ ತಾಲ್ಲೂಕಿಗೆ

(ಶ್ರೀ ಎನ್. ಚಿಕ್ಕೇಗೌಡ)

ಸಂಬಂಧಪಟ್ಟ ಒಂದು ವಿಷಯುವನ್ನು ಹೇಳುವುದಾದರೆ ತೋಟದ ಬೆಳೆಗಾರರ ಮತ್ತು ಹಾಲಿನ ಸಹಕಾರ ಸಂಘಗಳಿಗೆ ಕೊಟ್ಟಂತಹ ಹಣವನ್ನು ಸುಮಾರು 50 ಸಾವಿರ ರೂಪಾಯಿಗಳನ್ನು ಅಲ್ಲಿನ ಡೈರೆಕ್ಟರುಗಳು ದುರುಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಆ ಹಣವನ್ನು ಯಾವ ಉದ್ದೇಶಕ್ಕಾಗಿ ಕೊಟ್ಟಿದ್ದರೋ ಅದಕ್ಕೆ ಅವರು ಉಪಯೋಗಮಾಡಿಲ್ಲ. ಅವರು ಹಸುಗಳನ್ನು ಕೊಂಡುಕೊಂಡಿಲ್ಲ. ಹಣವೂ ಇಲ್ಲ. ಆ ಹಾಲಿನ ಉತ್ಪಾದಕರ ಸಹಕಾರ ಸಂಘಗಳು ಸೂಪರ್ ಸೀಡ್ ಮಾಡುವ ಹಂತದಲ್ಲಿವೆ.

ಆಮೇಲೆ ದೊಡ್ಡಬಳ್ಳಾಪುರ ಸೆಂಟ್ರಲ್ ಕನ್ಸ್ಯೂಮರ್ಸ್ ಕೋಅಪರೇಟೀವ್ ಸೊಸೈಟಿಗೆ ಒಂದು ಲಕ್ಷ ರೂಪಾಯಿಗಳ ಲೋನ್ ಮಂಜೂರು ಮಾಡಿದ್ದಾರೆ ನನಗೆ ತಿಳಿದಮಟ್ಟಿಗೆ ಈ ಬ್ಯಾಂಕಿಗೆ ಕೊಟ್ಟಿರತಕ್ಕ ಒಂದು ಲಕ್ಷ ರೂಪಾಯಿಗಳ ಸಾಲ ಏನಿದೆ. ಇದು ರಿಜರ್ವ್‌ಬ್ಯಾಂಕಿನ ತತ್ವಕ್ಕೆ ವಿರುದ್ಧವಾಗಿದೆ.

ಮತ್ತೊಂದು ಮುಖ್ಯವಾದ ವಿಷಯವೇನೆಂದರೆ ಈ ತಾಲ್ಲೂಕು ಅಗ್ರಿಕಲ್ಚರಲ್ ಕೋ-ಅಪರೇಟೀವ್ ಸೊಸೈಟಿಗೆ, ಕಾಟೇಜ್ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಯಲ್ ಸೊಸೈಟಿಗೆ 70 ಸಾವಿರ, ರೂಪಾಯಿಗಳ ಸಾಲವನ್ನು ಕೊಟ್ಟಿದ್ದಾರೆ. ಆ ಸೊಸೈಟಿಗಳು ನಷ್ಟದಲ್ಲಿ ಕೆಲಸ ಮಾಡುತ್ತಿವೆ. ಇದಕ್ಕೆ ಸಂಬಂಧಪಟ್ಟ ಒಂದು ಕಂಪ್ಲೈಂಟನ್ನು ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಈ ವಿಷಯದಲ್ಲಿ ವಿಚಾರಣೆಮಾಡಬೇಕು ಎಂದು ನಾನು ಸೂಚನೆ ಮಾಡುತ್ತೇನೆ.

ಡಿಸ್ಟ್ರಿಕ್ಟ್ ಅಗ್ರಿಕಲ್ಚರಲ್ ಪ್ರೊಡ್ಯೂಜ್ ಮಾರ್ಕೆಟಿಂಗ್ ಸೊಸೈಟಿ ವಿಜಯಪುರಂ ಒಂದು ಸೊಸೈಟಿಗೆ ಕೀ ಲೋನ್ ಸುಮಾರು 40 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಸಹಕಾರಿ ಖಾತೆಯ ಸಂಬಂಧಪಟ್ಟ ಅಧಿಕಾರಿಗಳ ಆದೇಶವನ್ನು ಮೀರಿ ಆ ಸೊಸೈಟಿಗೆ ಸಾಲವನ್ನು ಕೊಟ್ಟಿದ್ದಾರೆ.

ನನ್ನ ತಾಲ್ಲೂಕಿಗೆ ಸಂಬಂಧಪಟ್ಟ ಒಂದು ಕೋ-ಅಪರೇಟೀವ್ ಬ್ಯಾಂಕಿಗೆ ಇವರು ಡೈರೆಕ್ಟರಾಗಿ ದ್ದಾರೆ. ನಾಲ್ಕು ವರ್ಷಗಳಿಂದ ಆ ಸಹಕಾರಿ ಬ್ಯಾಂಕಿನ ಚುನಾವಣೆಯನ್ನು ನಡೆಸದೆ ಆ ಡೈರೆಕ್ಟರನ್ನೇ ಉಳಿಸಿಕೊಳ್ಳಬೇಕೆಂದು ಒಂದು ಪಾರ್ಟಿಮಾಡಿಕೊಂಡು ಕೋರ್ಟು ವ್ಯವಹಾರದಲ್ಲಿ ಸಾಕಷ್ಟು ಆಸಕ್ತಿ ವಹಿಸಿ ಬ್ಯಾಂಕಿನ ಹಿತದೃಷ್ಟಿಯನ್ನು ಕಾಪಾಡಬೇಕೆಂದು ಅವರನ್ನೇ ಮುಂದು ವರಿಸಿಕೊಂಡು ಹೋಗುತ್ತಿದ್ದರು. ಈಗ ಆ ಬಗ್ಗೆ ಹೈಕೋರ್ಟಿನಿಂದ ಸ್ಟೇ ಆರ್ಡರ್ ಬಂದಿದೆ.

ಸ್ವಾಮಿ, ನಾನು ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಮಹಾಚುನಾವಣೆಗಳು 5 ವರ್ಷಗಳಿಗೊಂದು ಸಾರಿ ನಡೆದು, 5 ವರ್ಷಗಳಾದ ಮೇಲೆ ಮಂತ್ರಿ ಮಂಡಲದವರು ತಮ್ಮ ಅಧಿಕಾರ ಮುಗಿದ ನಂತರ ನಿವೃತ್ತರಾಗುತ್ತಾರೆ. ಆದರೆ ಈ ಬಿ. ಡಿ. ಸಿ. ಸಿ. ಬ್ಯಾಂಕಿನ ಅಧ್ಯಕ್ಷರು ಮತ್ತು ಡೈರೆಕ್ಟರುಗಳು ಮಾತ್ರ ಪುನಃ ಪುನಃ ಇವರೇ ಅಧಿಕಾರಕ್ಕೆ ಬರುತ್ತಾರೆ. ಅದಕ್ಕೋಸ್ಕರ ನಾನು ಸಹಕಾರ ಇಲಾಖೆಯ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ ಈ ಸಹಕಾರಿ ಕಾಯಿದೆಯಲ್ಲಿ ಒಂದ ತಿದ್ದುಪಡಿ ಮಾಡಿ ಕೋ-ಅಪರೇಟೀವ್ ಬ್ಯಾಂಕ್ ಮತ್ತು ಕೋ-ಅಪರೇಟೀವ್ ಸೊಸೈಟಿಯ ಅಧ್ಯಕ್ಷರುಗಳು ಮತ್ತು ಡೈರೆಕ್ಟರುಗಳು ತಮ್ಮ ಅಧಿಕಾರಾವಧಿ ಮುಗಿದನಂತರ ನಿವೃತ್ತರಾಗಬೇಕು. ಅವರೂ ಕೋರ್ಟಿಗೆ ಹೋದರೂ ಮತ್ತು ಅಧಿಕಾರಕ್ಕೆ ಬರುವುದಕ್ಕೆ ಅವಕಾಶವಿಲ್ಲದಂಹ ಒಂದು ತಿದ್ದುಪಡಿಯನ್ನು ಈ ಸಹಕಾರಿ ಕಾನೂನಿನಲ್ಲಿ ತರಬೇಕು ಎಂದು ನಾನು ಸೂಚನೆ ಮಾಡುತ್ತೇನೆ.

ಇನ್ನೊಂದು ವಿಷಯ. ಬೆಂಗಳೂರು ಡಿಸ್ಟ್ರಿಕ್ಟ್ ಬ್ಯಾಂಕಿನವರು ಬೆಂಗಳೂರು ಡಿಸ್ಟ್ರಿಕ್ಟ್ ನಾನ್ ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿಗಳಿಗೆ ಅತಿಹೆಚ್ಚಿನ ಸಾಲವನ್ನು ಕೊಟ್ಟಿದ್ದಾರೆ. 10ಲಕ್ಷ ರೂಪಾಯಿಗಳನ್ನು ನ್ಯಾಷನಲ್ ಟೂರಿಸ್ಟ್ ಕಂಪೆನಿಗೆ ಕೊಟ್ಟಿದ್ದಾರೆ. ಆದರೆ ರಿಜರ್ವ್ ಬ್ಯಾಂಕಿನವರು ಅಗ್ರಿಕಲ್ಚರಲ್ ಸೊಸೈಟಿಗಳಿಗೆ ಹೆಚ್ಚಿನ ಹಣವನ್ನು ಕೊಡಬೇಕೆಂದು ಆದೇಶವನ್ನು ಕೊಟ್ಟಿದ್ದಾರೆ. ಈ ಕೆಲವು ವಿಷಯಗಳನ್ನು ನಾನು ಹೇಳಿದ್ದೇನೆ. ಈ ಬ್ಯಾಂಕಿನಲ್ಲಿರತಕ್ಕ ಕೆಲವು ಅಧಿಕಾರಿಗಳು ಪಟ್ಟಭದ್ರಹಿತಗಳಾಗಿದ್ದಾರೆ. ಈ ಬ್ಯಾಂಕಿನ ಮ್ಯಾನೇಜರು, ಬ್ಯಾಂಕಿನ ಅಧ್ಯ ರ ಪರಮ ಆಪ್ತಕಾರ್ಯದರ್ಶಿಗಳಾಗಿದ್ದಾರೆ. ಅವರನ್ನು ಬೊಂಬಾಯಿಗೆ ಟ್ರೇನಿಂಗಿಗೆ ಕಳುಹಿಸಿದಂಥಾ ಕಾಲದಲ್ಲಿ ಅವರನ್ನು ಏರೋಪ್ಲೇನಿನಲ್ಲಿ ಕಳುಹಿಸುವುದಕ್ಕೆ ಅವಕಾಶ ಇಲ್ಲದಿದ್ದರೂ ಕೂಡ ಅವರು ಬೊಂಬಾಯಿಗೆ ಏರೋಪ್ಲೇನಿನಲ್ಲಿ ಹೋಗುವಂತ ಕ್ಲೇಮ್ ಪಡೆದಿದ್ದಾರೆ. ಬ್ಯಾಂಕಿನ

ಒಳಗಡೆ ಅವರಿಗೆ ಮನೆಯನ್ನು ವಾಸಕ್ಕೆ ಕೊಟ್ಟಿದ್ದಾರೆ ಅವರೇ ಬ್ಯಾಂಕಿನಲ್ಲಿ ಸರ್ವಾಧಿಕಾರಿಯಾಗಿದ್ದಾರೆ. ಇವರನ್ನು ಬೇರೆಕಡೆಗೆ ಟ್ರಾನ್ಸ್‌ಫರ್ ಮಾಡುವ ಅವಕಾಶವನ್ನು ಕಲ್ಪಿಸಬೇಕು. ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಖಾಸಗೀಯವರೇ ಇದ್ದಾರೆ. ಅಲ್ಲಿಗೆ ಸಂಬಂಧಪಟ್ಟ ಸಹಕಾರಿ ಖಾತೆಯ ಅಧಿಕಾರಿಗಳನ್ನು ಹಾಕಬೇಕು ಎಂದು ನಾನು ಸೂಚನೆಮಾಡುತ್ತೇನೆ.

ಇನ್ನೊಂದು ವಿಷಯ ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ವಿಷಯದಲ್ಲಿ ಹೇಳುವುದಾದರೆ ಕೇಂದ್ರ ಭೂಅಭಿವೃದ್ಧಿ ಬ್ಯಾಂಕಿನಿಂದ 32500 ಬಾವಿಗಳಿಗೆ ಹಣವನ್ನು ಸಾಲ ಕೊಟ್ಟಿದ್ದಾರೆ. ಅದರಲ್ಲಿ 9948 ಬಾವಿಗಳು ಮಾತ್ರ ಪೂರ್ತಿಯಾಗಿದೆ ಎಂದು ಗೊತ್ತಾಗಿದೆ. ಇದಕ್ಕೆ ಕಾರಣವೇನೆಂದರೆ ಅನೇಕರು ಈ ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ನಮ್ಮ ದೇಶದಲ್ಲಿರತಕ್ಕ 168 ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳಲ್ಲಿ 100ಕ್ಕೆ-90 ಬ್ಯಾಂಕುಗಳು ಡೀಫಾಲ್ಟ್ ಆಗಿವೆ. ಹೊಸಕೋಟೆ ತಾಲ್ಲೂಕಿನಲ್ಲಿರತಕ್ಕ ಒಂದು ಪ್ರೈಮರಿಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಲ್ಲಿ ಈಗ ಒಂದುವರ್ಷದಿಂದ ಹೊಸ ಸಾಲವನ್ನು ಕೊಡುವುದಕ್ಕೆ ಆಗಿಲ್ಲ. ಇದರಿಂದ ರೈತರಿಗೆ ತೊಂದರೆಯಾಗಿದೆ ಸಂಬಂಧಪಟ್ಟವರು ಇದನ್ನು ಸರಿಪಡಿಸಬೇಕು ಎಂದು ನಾನು ಹೇಳುತ್ತೇನೆ.

ಗೋಡೌನ್ ಕಟ್ಟಿಸುವ ಬಗೆ ಹೇಳುವುದಾದರೆ, ಅನೇಕ ಸಹಕಾರ ಸಂಘಗಳು ಹತ್ತಾರು ವರ್ಷಗಳಿಂದ ಗೋಡೌನ್ ಕಟ್ಟುವುದು ನಿಂತುಹೋಗಿದೆ. ನನ್ನ ಕ್ಷೇತ್ರದಲ್ಲಿ ಸೂಲಿಬೆಲೆ ಎನ್ನುವ ಗ್ರಾಮದಲ್ಲಿ ಗೋಡೌನ್ ಕಟ್ಟಿಸಲು ಫೌಂಡೇಷನ್ ಸ್ಟೋನ್ ಹಾಕಿ 12—14 ವರ್ಷಗಳಾಗಿವೆ. ಆ ಕಟ್ಟಡಕ್ಕೆ ಫೌಂಡೇಷನ್ ಸ್ಟೋನ್ ಹಾಕಿದ ಯೂನಿಯನ್ ಅಗ್ರಿಕಲ್ಚರಲ್ ಮಂತ್ರಿಗಳಾದ ದಿವಂಗತ ದೇಶ್‌ಮುಖ್ ಅವರು ಸತ್ತುಹೋಗಿ ಸ್ವರ್ಗದಲ್ಲಿದ್ದಾರೆ ಅವರ ಆತ್ಮಕ್ಕೆ ಶಾಂತಿ ಇಲ್ಲ. ಆ ಕಟ್ಟಡಕ್ಕೆ ಫೌಂಡೇಷನ್ ಸ್ಟೋನ್ ಹಾಕಿ ಕಟ್ಟಡ ಬೇಸ್‌ಮೆಂಟ್‌ವರೆಗೂ ಬಂದಿದೆ. 10—15 ವರ್ಷಗಳಾದರೂ ಆ ಕೆಲಸವನ್ನು ಪೂರ್ತಿಮಾಡಿಲ್ಲ. ಇದರ ಬಗ್ಗೆ ಕಂಟ್ರಾಕ್ಟರದಾಗಲೀ, ಟೆಕ್ನಿಕಲ್ ಕನ್‌ಸ್ಟ್ರಕ್ಷನ್ ಬಗ್ಗೆಯಾಗಲಿ ಡಿಫೆಕ್ಟ್ಸ್ ಇದ್ದರೆ ಅದನ್ನು ಸರಿಪಡಿಸಿ ಆ ಕೆಲಸವನ್ನು ಪೂರ್ತಿಮಾಡುವುದಕ್ಕೆ 15 ವರ್ಷಗಳು ಬೇಕೇ ? ಈ ಕಡೆ ಸರ್ಕಾರದವರು ಗಮನ ಕೊಟ್ಟು ಆ ಕಟ್ಟಡವನ್ನು ಪೂರ್ತಿಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಪಂಚಾಯಿತಿ ರಾಜ್ಯದ ಬಗ್ಗೆ ಹೇಳುವುದಾದರೆ ಈ ಬಗ್ಗೆ ಮಾನ್ಯಮಂತ್ರಿಗಳು ಉತ್ಸಾಹ ಶಾಲಿಗಳಾಗಿದ್ದಾರೆ. ಇವೊತ್ತಿನ ಡಿವರ ಪಂಚಾಯಿತಿ ರಾಜ್ಯದ ಕಾನೂನಿಗೆ ಸಂಬಂಧಪಟ್ಟಹಾಗೆ ಶ್ರೀ ಮಾನ್ ಕೊಂಡಜ್ಜಿ ಬಸಪ್ಪನವರ ಸಮಿತಿಯವರು ಕೊಟ್ಟಿರತಕ್ಕ ವರದಿಯ ಆಧಾರದಮೇಲೆ ತಯಾರು ಮಾಡಿರತಕ್ಕ ಮಸೂದೆಯನ್ನು ಈ ಸಭೆಯ ಮುಂದೆ ಆದಷ್ಟು ಜಾಗ್ರತೆ ತರಬೇಕು. ಯಾರೋ ಕೆಲವರು ಸೇರಿಕೊಂಡು ಇದನ್ನು ತರಕೂಡದು, ಇದನ್ನು ತಡೆಹಿಡಿಯಬೇಕು ಎನ್ನುವ ಪ್ರಯತ್ನವನ್ನು ಮಾಡುತ್ತಿದ್ದಾರೆ ಎಂದು ಗೊತ್ತಾಗಿದೆ. ಆ ತತ್ವವನ್ನು ನಾವು ಒಪ್ಪಿಕೊಂಡಿರುವುದರಿಂದ ಅದನ್ನು ಆಚರಣೆಗೆ ತರದಿದ್ದರೆ ತಪ್ಪಾಗುತ್ತದೆ. ಅಧಿಕಾರ ವಿಕೇಂದ್ರೀಕರಣವಾಗಿ ಅದು ಹಳ್ಳಿಗಳಿಗೆ ಹಂತಹಂತವಾಗಿ ಮುಟ್ಟಬೇಕಾಗಿದೆ. ಈ ತತ್ವವನ್ನು ನಾವು ಈಗಾಗಲೇ ಒಪ್ಪಿಕೊಂಡಿರುವುದರಿಂದ ಅದನ್ನು ತಡೆಹಿಡಿಯುವುದು ಸರಿಯಲ್ಲ. ಸಂಬಂಧಪಟ್ಟ ಮಂತ್ರಿಗಳು ಈ ಬಗ್ಗೆ ಆದಷ್ಟು ಜಾಗ್ರತೆ ಬಿಲ್ಲನ್ನು ಈ ಸಭೆಯ ಮುಂದೆ ತಂದು, ಆ ಬಗ್ಗೆ ದೀರ್ಘವಾದ ಚರ್ಚೆಯಾಗುವುದಕ್ಕೆ ಅವಕಾಶ ಮಾಡಿಕೊಟ್ಟು, ಈ ಸಭೆಯು ಒಪ್ಪಿದಂತೆ ಬಿಲ್ಲನ್ನು ಪಾಸ್ ಮಾಡುವುದು ಒಳ್ಳೆಯದು. ಈ ಬಗ್ಗೆ ಮಂತ್ರಿಗಳು ದೊಡ್ಡಮನಸ್ಸು ಮಾಡಿ ದೀಕ್ಷೆ ತೊಟ್ಟು ಜಾಗ್ರತೆ ಬಿಲ್ಲನ್ನು ತರಬೇಕು. ಮತ್ತು ಈ ಬಗ್ಗೆ ಈ ದಿನ ಮಾನ್ಯಮಂತ್ರಿಗಳು ಉತ್ತರ ಕೊಡುವಾಗ ಯಾವಾಗ ತರುತ್ತೀರಿ ಎಂಬುದನ್ನು ತಿಳಿಸಬೇಕು.

ಇನ್ನು ಕಮ್ಯುನಿಟಿ ಡೆವಲಪ್‌ಮೆಂಟ್ ಬಗ್ಗೆ ಹೇಳಬೇಕೆಂದರೆ, ಅಲ್ಲಿ ಕೆಲಸ ಮಾಡುವ ಅಧಿಕಾರಿಗಳ ಬಗ್ಗೆ ಅನೇಕ ವಿಷಯಗಳನ್ನು ಕೆಲವರು ಹೇಳುತ್ತಾರೆ. ಕೆಲವರು ಚೆನ್ನಾಗಿ ಕೆಲಸ ಮಾಡುತ್ತಾರೆ, ಮತ್ತೆ ಕೆಲವರು ಮಾಡುತ್ತಿಲ್ಲ. ಈ ಎಸ್.ಇ.ಓ.ಗಳ ಸ್ಥಿತಿ ಅಂತರಿಕ್ಷ ಪಿಶಾಚಿಗಳಂತೆ ಆಗಿದೆ. ಇವರ ಲೀನ್ ವಿಲ್ಯಾಇಲಾಖೆಯಲ್ಲಿ ಇದೆ. ಇವರ ಸಂಬಳಸಾರಿಗೆ ಬಗ್ಗೆ ಪ್ರಮೋಷನ್ ಬಗ್ಗೆ ತುಕೋಳ್ ಕಮೀಷನ್ ಅವರು ಅನ್ಯಾಯ ಮಾಡಿದ್ದಾರೆಂದು ಅವರು ಹೇಳುತ್ತಿದ್ದಾರೆ. ಈ ಅನ್ಯಾಯವನ್ನು ಸರ್ಕಾರದವರು ಸರಿಪಡಿಸಬೇಕು. ಇದೇ ರೀತಿ ಬಿ.ಡಿ.ಓ.ಗಳು ಡಿಸ್‌ಗಸ್ಟೆಡ್ ಸೋಲ್ಜರ್ಸ್ ಆಗಿದ್ದಾರೆ. ಇವರಿಗೆ ಪ್ರಮೋಷನ್ ಸಿಗುವುದು ಕಷ್ಟವಾಗಿದೆ. ಬೇರೆ ರೀತಿಯ ಅನುಕೂಲಗಳು ಇಲ್ಲವಾಗಿದೆ. ಇದನ್ನು ಸರ್ಕಾರದವರು ಸರಿಪಡಿಸಬೇಕು. ಈಗ ರಾಷ್ಟ್ರೀಯ ವಿಸ್ತರಣಾ ಯೋಜನೆ ಕೆಲಸ, ಕಮ್ಯುನಿಟಿ ಡೆವಲಪ್‌ಮೆಂಟ್ ಕೆಲಸ ಮತ್ತು ತಾಲ್ಲೂಕ್‌ಬೋರ್ಡಿನ ಕೆಲಸ ಬೇರೆ ಬೇರೆಯಾಗಿ ನಡೆಯುತ್ತಿದೆ. ಹಣಕಾಸಿನ ಖರ್ಚುಗಳು ಸಹ ಬೇರೆ ಬೇರೆ ಇದೆ.

(ಶ್ರೀ ಎನ್. ಚಿಕ್ಕೇಗೌಡ)

ಇವೆಲ್ಲವೂ ಕೂಡ ಒಂದೇ ಆಗಿ ಕೆಲಸ ಮಾಡಿ, ಒಂದೇ ಲೆಕ್ಕವನ್ನು ಇಡುವಂತೆ ಮಾಡಲು ಪಂಚಾಯತ್ ರಾಜ್ ಬಿಲ್ಲನ್ನು ಜಾಗ್ರತೆ ತರಬೇಕೆಂದು ಕೇಳಿಕೊಂಡು ನನಗೆ ಇಷ್ಟು ಕಾಲ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಅಧ್ಯಕ್ಷಿಣಿಯವರೇ, ಕಳೆದ ವರ್ಷವೂ ಕೂಡ ಮಾನ್ಯ ಸದಸ್ಯರಾದ ಶ್ರೀಮಾನ್ ಚಿಕ್ಕೇಗೌಡರು ಮಾತನಾಡಿದ ಮೇಲೆ ನನಗೆ ಮಾತನಾಡುವ ಅವಕಾಶ ಸಿಕ್ಕಿತು. ಈ ವರ್ಷವು ಕೂಡ ಅದೇ ರೀತಿಯಾಗಿದೆ. ಅವರು ಕೇಳಿದ ಪ್ರಶ್ನೆಗಳಿಗೆ ನಾನು ಉತ್ತರ ಕೊಡಬೇಕೆನ್ನುವ ಸದುದ್ದೇಶದಿಂದ ನನಗೆ ಅವರ ನಂತರ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆಂದು ಭಾವಿಸುತ್ತೇನೆ. ಅವರು ನನ್ನ ವಿಚಾರದಲ್ಲಿ ಮಾಡಿದ ಪ್ರತಿಯೊಂದು ಆಪಾದನೆಗಳಿಗೂ ಕೂಡ ಉತ್ತರ ಕೊಡುವುದಕ್ಕೆ ಸಾಕಷ್ಟು ಕಾಲಾವಕಾಶ ಕೊಡಬೇಕೆಂದು ಮಾನ್ಯ ಅಧ್ಯಕ್ಷಣಿಯವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಸಹಕಾರ ಇಲಾಖೆಯಲ್ಲಿ ನಿರ್ವಹಿಸುತ್ತಿರುವ ಕೆಲಸಕಾರ್ಯಗಳ ಬಗ್ಗೆ ಅನೇಕ ಜನ ತಮ್ಮ ಮೆಚ್ಚುಗೆಯನ್ನು ಸೂಚಿಸಿದ್ದಾರೆ. ಮತ್ತು ಜನರು ಮೆಚ್ಚತಕ್ಕಂಥ ಅನೇಕ ಕೆಲಸಕಾರ್ಯಗಳು ಈ ಸಹಕಾರ ಇಲಾಖೆಗಳಲ್ಲಿ ನಡೆದಿವೆ. ನಮ್ಮ ರಾಜ್ಯದ ಸಹಕಾರ ಇಲಾಖೆಗಳಲ್ಲಿ ಅನೇಕ ತರಹದ ವಸ್ತುಭಂಡಾರಗಳಿವೆ. ಸಹಕಾರ ಸಂಘಗಳು ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಮಾಡಿವೆ ಮತ್ತು ಲಕ್ಷಾಂತರ ರೂಪಾಯಿಗಳ ಲಾಭವನ್ನು ಸಂಪಾದಿಸಿವೆ. ಭೂಅಭಿವೃದ್ಧಿ ಬ್ಯಾಂಕ್‌ಗಳು ಸಹ ಚೆನ್ನಾಗಿ ಕೆಲಸ ಮಾಡುತ್ತಿವೆ. ಈ ರಾಜ್ಯದಲ್ಲಿ 21 ಜನ ಸದಸ್ಯರಿಂದ ಕೂಡಿದ ಅನೇಕ ಸಹಕಾರ ಸಂಘಗಳು ಇವೆ. ಇಂತಹ ಎಲ್ಲಾ ಸಹಕಾರ ಸಂಘಗಳು ಕೆಟ್ಟುಹೋಗಿಲ್ಲ. ಕೆಟ್ಟುಹೋಗಿರುವುವು ಕೂಡ ಇವೆ. ಅದಕ್ಕೆ ಕಾರಣಗಳು ಅನೇಕವು ಇರಬಹುದು. ಕೆಟ್ಟುಹೋದಾಗ ಅದನ್ನು ಸರಿಪಡಿಸುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಯಾವ ಒಂದು ಸಂಸ್ಥೆಗಳು ಚೆನ್ನಾಗಿ ವ್ಯವಹಾರ ಮಾಡುತ್ತಾ ಜನರಿಗೆ ಬೇಕಾದ ಅನುಕೂಲಗಳನ್ನು ಒದಗಿಸಿಕೊಡುತ್ತಿರುತ್ತವೋ ಅಂತಹ ಸಂಸ್ಥೆಗಳಿಗೆ ಸರ್ಕಾರದವರು ಹೆಚ್ಚಿನ ಮುತುವರ್ಜಿ ವಹಿಸಿ ಅವುಗಳಿಗೆ ಬೇಕಾದ ಸಹಾಯವನ್ನು ಒದಗಿಸಿಕೊಡಬೇಕು. ಈ ರೀತಿ ಸಹಾಯವನ್ನು ಮಾಡಿದರೆ ಹೆಚ್ಚಿನ ಸಂಸ್ಥೆಗಳಲ್ಲಿ ಯಾವ ಒಂದು ಲೋಪದೋಷಗಳು ಬರುವುದಕ್ಕೆ ಅವಕಾಶವಿರುವುದಿಲ್ಲವೆಂದು ನನ್ನ ಅಭಿಪ್ರಾಯವಾಗಿದೆ. ಈ ಸಂಸ್ಥೆಗಳಿಗೆ ಸರ್ಕಾರದವರು ಕೊಡುತ್ತಿರುವ ಧನಸಹಾಯ ಕಡಿಮೆ ಇದೆ ಎಂಬುದು ನಿಜ. ಈಗ ಕೊಡುತ್ತಿರುವುದು ಸಾಲದು. ಈ ಬಗ್ಗೆ ಹೆಚ್ಚು ಧನಸಹಾಯ ಕೊಡುವುದಕ್ಕೆ ಸರ್ಕಾರದವರು ದೀರ್ಘವಾಗಿ ಆಲೋಚನೆ ಮಾಡಬೇಕು. ಮೂಲಭೂತವಾಗಿ ಈ ಸಂಘಗಳಿಗೆ ಏನೇನು ಸಹಾಯಗಳು ಬೇಕಾಗಿರುತ್ತದೋ ಅದೆಲ್ಲವನ್ನೂ ಒದಗಿಸಿಕೊಡುವುದಕ್ಕೆ ಸರ್ಕಾರದವರು ವಿಚಾರ ಮಾಡಬೇಕು. ಸಾಕಷ್ಟು ಅನುಕೂಲಗಳು ಇಲ್ಲದಿರುವುದರಿಂದಲೇ ಸಹಕಾರ ಸಂಘಗಳು ಸಮರ್ಪಕವಾಗಿ ಕೆಲಸ ಮಾಡಲು ತೊಂದರೆಯಾಗಿದೆ. ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡಬೇಕಾದರೆ ಸಾಕಷ್ಟು ಹಣ ಬೇಕಾಗುತ್ತದೆ. ಸೇವಾ ಮನೋಭಾವದಿಂದ ನಿಷ್ಕಾಮವಂತರಾಗಿ ಕೆಲಸ ಮಾಡುವವರು ಬೇಕಾಗುತ್ತದೆ. ಮತ್ತು ಆಯಾ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ರೈತರ ಸಂಘಟನೆ ಇರಬೇಕಾಗುತ್ತದೆ. ಸಹಕಾರ ಸಂಘಗಳು ಪ್ರತಿದಿನ 8 ಗಂಟೆಗಳು ಕೆಲಸ ಮಾಡಬೇಕಾಗುತ್ತದೆ. ಸಂಬಳ ಪಡೆಯುವ ಕಾರ್ಯದರ್ಶಿ ಇರಬೇಕಾಗುತ್ತದೆ. ಇದೆಲ್ಲಾ ಅನುಕೂಲಗಳು ಇದ್ದರೆ ಸಂಸ್ಥೆಗಳು ಚೆನ್ನಾಗಿ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಯಾವ ಸೊಸೈಟಿಗಳಲ್ಲಿ ಸಂಬಳ ಪಡೆಯದ ಕಾರ್ಯದರ್ಶಿ ಮತ್ತು ಅಧ್ಯಕ್ಷರು ಇರುತ್ತಾರೋ ಯಾವ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳದೆ ಕೆಲಸ ಮಾಡುತ್ತಾರೋ, ಅಂತಹ ಸೊಸೈಟಿಗಳು ಮುಂದೆ ಬರುವುದು ಕಷ್ಟವಾಗುತ್ತದೆ. ಇಂತಹ ಸೊಸೈಟಿಗಳು ಸಹ ಇರುವುದು ನಮಗೆ ಕಂಡುಬರುತ್ತಿದೆ. ಈ ಕಾರಣದಿಂದ ಸರ್ಕಾರದವರು ಅಪೆಕ್ಸ್ ಬ್ಯಾಂಕಿನಿಂದ ಹಿಡಿದು ಭೂಅಭಿವೃದ್ಧಿ ಬ್ಯಾಂಕ್‌ವರೆಗೆ ಎಲ್ಲಾ ಬ್ಯಾಂಕ್‌ಗಳಿಗೆ ಸಾಕಷ್ಟು ಹಣದ ಸಹಾಯಕೊಟ್ಟು ಪೂರ್ಣಕಾಲದವರೆಗೆ ಸಂಬಳ ತೆಗೆದುಕೊಂಡು ಕೆಲಸ ಮಾಡುವ ಕಾರ್ಯದರ್ಶಿಯನ್ನು ನೇಮಕ ಮಾಡಿ ಎಲ್ಲಾ ಬ್ಯಾಂಕ್‌ಗಳು ಕೂಡ ಚೆನ್ನಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಸಮಾಜವಾದವನ್ನು ನಾವು ಒಪ್ಪಿಕೊಂಡಿದ್ದೇವೆ. ಇವತ್ತಿನದಿವಸ ಶಕ್ತಿ ಇಲ್ಲದ ರೈತರ ಸಹಾಯಕ್ಕೆ ಹೋಗುತ್ತಿರುವವರು ಎಂದರೆ ಸಹಕಾರ ಸಂಘಗಳು ಮಾತ್ರ ಎಂದು ನಾನು ಧೈರ್ಯವಾಗಿ ಹೇಳುತ್ತೇನೆ. ಆದರೆ ಇವತ್ತಿನ ದಿವಸ ರೈತರಿಗೆ ಸಾಕಷ್ಟು ಸಹಾಯ ಮಾಡುವುದಕ್ಕೆ ಸಹಕಾರ ಸಂಘಗಳಿಗೆ ಸಾಧ್ಯವಿಲ್ಲವಾಗಿದೆ. ಉದಾಹರಣೆಗೆ ಹೇಳುವುದಾದರೆ ಜಿಲ್ಲಾ ಬ್ಯಾಂಕ್‌ನಿಂದ ರೈತರಿಗೆ ಸಾಲದ ರೂಪದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಕೊಡಲಾಗಿದೆ. ಕಾರಣಾಂತರಗಳಿಂದ ಬೆಳೆ ಸರಿಯಾಗಿ ಆಗದೆ ಅಥವಾ ಬೆಳೆಗಳಿಗೆ ರೋಗ ಬಂದು ಸಾಲವನ್ನು ವಾಪಸ್ ಕೊಡುವ

ಶಕ್ತಿ ರೈತರಿಗೆ ಇಲ್ಲವಾಗಿದೆ. ಇಂತಹ ಸಮಯದಲ್ಲಿ ಸಾಲವನ್ನು ವಾಪಸ್ ಕೊಡಲು ರೈತರಿಗೆ ಒಂದೆರಡು ವರ್ಷಗಳ ಹೆಚ್ಚಿನ ಸಮಯ ಕೊಡಬೇಕಾಗುತ್ತದೆ ಮತ್ತು ಅವರಿಗೆ ಮತ್ತೆ ಸಾಲ ಬೇಕಾದರೆ ಕೊಡಬೇಕಾಗುತ್ತದೆ. ಮತ್ತೆ ಸಾಲವನ್ನು ಕೊಡುವ ಶಕ್ತಿ ಅಪೆಕ್ಸ್ ಬ್ಯಾಂಕ್‌ಗೆ ಮತ್ತು ಜಿಲ್ಲಾ ಬ್ಯಾಂಕ್‌ಗಳಿಗೆ ಇಲ್ಲದಿರುವುದರಿಂದ ಸರ್ಕಾರದವರು ಹಣದ ಸಹಾಯ ಮಾಡಬೇಕು. ಈ ಮೂಲಕ ಈ ಬ್ಯಾಂಕ್‌ಗಳು ಮತ್ತೆ ರೈತರಿಗೆ ಸಹಾಯ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಸರ್ಕಾರದ ಮುಂದೆ ಹೇಳುತ್ತಿದ್ದೇನೆ. ಈ ಬ್ಯಾಂಕ್‌ಗಳು ಜನರಿಂದ ಎಂಟೂವರೆ ಪರ್ಸೆಂಟಿನಂತೆ ಹಣವನ್ನು ಸಾಲವಾಗಿ ಪಡೆದು ರೈತರಿಗೆ ಐದೂವರೆ ಪರ್‌ಸೆಂಟಿನಂತೆ ಕೊಡಬೇಕಾಗುತ್ತದೆ. ಆದಕಾರಣ ಸರ್ಕಾರದವರು ಸಾಕಷ್ಟು ಸಹಾಯಧನವನ್ನು ಕೊಡುವುದು ಒಳ್ಳೆಯದು. ರಿಜರ್ವ್ ಬ್ಯಾಂಕ್‌ನವರು ಈ ಬ್ಯಾಂಕ್‌ಗಳು ಸರಿಯಾಗಿ ಕೆಲಸ ಮಾಡುತ್ತಿವೆಯೋ ಇಲ್ಲವೋ ಎಂಬ ಬಗ್ಗೆ ಪ್ರತಿಯೊಂದು ಹಂತದಲ್ಲಿಯೂ ತನಿಖೆ ಮಾಡುತ್ತಿರುವುದರಿಂದ, ಸರ್ಕಾರದವರು ಆ ಬಗ್ಗೆ ಬೇಕಾದ ಸಹಾಯಗಳನ್ನು ಮಾಡಲು ಮುಂದೆ ಬರಬೇಕು. ರಿಜರ್ವ್ ಬ್ಯಾಂಕಿನವರು ಪ್ರತಿಯೊಂದು ಬ್ಯಾಂಕ್‌ನಲ್ಲಿಯೂ 28 ಪರ್‌ಸೆಂಟ್ ಲಿಕ್ವಿಡ್ ಅಸೆಟ್ಸ್ ಇರಬೇಕೆಂದು ಹೇಳುತ್ತಾರೆ. ಈ ನಿಯಮವನ್ನು ಪಾಲಿಸುವ ಶಕ್ತಿ ಜಿಲ್ಲಾ ಬ್ಯಾಂಕ್‌ಗಳಿಗೆ ಇಲ್ಲದಿರುವುದರಿಂದ ಸಹಾಯ ಮಾಡುವುದಕ್ಕೆ ಸರ್ಕಾರದವರು ಮುಂದೆ ಬರಬೇಕು. ಸರ್ಕಾರದವರಿಗೆ ಆಗದಿದ್ದರೆ ಅಪೆಕ್ಸ್ ಬ್ಯಾಂಕ್‌ನಿಂದಲಾದರೂ ಕೂಡ ಸಹಾಯ ಮಾಡಿಸಬೇಕು. ಇಲ್ಲದಿದ್ದರೆ ಈ ಬ್ಯಾಂಕ್‌ಗಳು ಕೆಲಸ ಮಾಡುವುದು ಕಷ್ಟವಾಗುತ್ತದೆ. ಹಳೆಯ ಸಾಲವನ್ನು ವಸೂಲು ಮಾಡುವವರೆಗೆ ಹೊಸ ಸಾಲವನ್ನು ಕೊಡುವುದಕ್ಕಾಗುವುದಿಲ್ಲವೆಂದು ರಿಜರ್ವ್ ಬ್ಯಾಂಕ್‌ನವರು ಷರತ್ತು ಹಾಕಿದಾಗ ಅಂತಹ ಸಮಯದಲ್ಲಿ ಸಂಬಂಧಪಟ್ಟ ಜಿಲ್ಲಾ ಬ್ಯಾಂಕ್‌ಗಳು ಮುಳುಗುತ್ತವೋ ಅಥವಾ ತೇಲುತ್ತವೋ ಎಂದು ಸರ್ಕಾರದವರು ಸುಮ್ಮನೆ ನೋಡುತ್ತಾ ಕುಳಿತುಕೊಳ್ಳುವ ಬದಲು ಅಂತಹ ಬ್ಯಾಂಕ್‌ಗಳಿಗೆ ಹಣದ ಸಹಾಯ ಮಾಡಿ ಮತ್ತೆ ಶಕ್ತಿ ಬರುವಂತೆ ಮಾಡಬೇಕು. ಆ ರೀತಿ ಮಾಡದಿದ್ದರೆ ಸಹಕಾರ ಸಂಘಗಳು ಯಾವ ರೀತಿ ಮುಂದಕ್ಕೆ ಬರುವುದಕ್ಕೆ ಸಾಧ್ಯವಾಗುತ್ತದೆ ? ಮೊದಲಿನಿಂದ ಹಣ ಒದಗಿಸತಕ್ಕ ಜವಾಬುದಾರಿ ಸರಕಾರಕ್ಕೆ ಇರಬೇಕು ಎಂದು ಇಲ್ಲಿ ಒತ್ತಿ ಒತ್ತಿ ಹೇಳುತ್ತಿದ್ದೇನೆ.

5-00 P.M.

ಶ್ರೀಮಾನ್ ಚಿಕ್ಕೇಗೌಡರು ಬೆಂಗಳೂರು ಜಿಲ್ಲಾ ಬ್ಯಾಂಕು ಬಗ್ಗೆ ಕೆಲವು ವಿಷಯಗಳನ್ನು ಅವರು ಹೇಳುತ್ತಾ ಕೆಲವಾರು ಅಂಶಗಳನ್ನು ಬಹುಶಃ ಅರ್ಥವಾಗದೆ ಹೇಳಿದ್ದಾರೆ. ಬೆಂಗಳೂರು ಜಿಲ್ಲಾ ಬ್ಯಾಂಕಿಗೆ ಎರಡು ಕೋಟಿ ಡಿಪಾಸಿಟ್ ಬಂದಿದೆ. ರೈತರಿಗೆ ಸಾಲವನ್ನು ತೀರಿಸುವುದಕ್ಕಾಗಿ ಒಂದು ಕೋಟಿ ಕೊಟ್ಟಿದೆ. ಇನ್ನು ಒಂದು ಕೋಟಿ ರೂಪಾಯಿಗಳನ್ನು ಕನ್‌ಸ್ಯೂಮರ ಆಕ್ಟಿವಿಟೀಸ್‌ಗಾಗಿ ಕೊಟ್ಟಿದೆ. ಕೋಆಪರೇಟೀವ್ ವರ್ಕರ್ಸ್ ಸೊಸೈಟೀಸ್‌ಗೆ ಸಹಾಯ ಕೊಟ್ಟಿದೆ. ಮಾರ್ಕೆಟಿಂಗು ಸೊಸೈಟೀಸ್‌ಗೆ ಕೊಟ್ಟಿದೆ. ಮತ್ತು ಇತರ ಅನೇಕ ಸೊಸೈಟಿಗಳಿಗೂ ಸಹಾಯವನ್ನು ಕೊಟ್ಟಿದೆ. ನ್ಯಾಷನಲ್ ಟೂರಿಸ್ಟ್ ಕೋಆಪರೇಟಿವ್ ಸೊಸೈಟಿ ಎನ್ನುವುದು ವೆಹಿಕಲ್ಸ್‌ಗಳನ್ನು ಇಟ್ಟುಕೊಂಡು ವ್ಯವಹಾರ ನಡೆಸುತ್ತಿದೆ, ಇದಕ್ಕೆ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದೇನೋ ನಿಜ. ನಮ್ಮ ರಾಜ್ಯದಲ್ಲಿ ಇಡೀ ದಕ್ಷಿಣ ಇಂಡಿಯಾದಲ್ಲೆಲ್ಲಾ ಇದು ಬಹಳ ಉತ್ತಮವಾಗಿ ಕೆಲಸ ಮಾಡಿದೆ. ಇದು ಒಂದು ದೊಡ್ಡ ರೋಡು ಟ್ರಾನ್ಸ್‌ಪೋರ್ಟು ಸಂಸ್ಥೆಯಾಗಿದೆ. ಈಚೆಗೆ ಆಲ್ ಇಂಡಿಯಾ ಟೂರಿಸ್ಟ್ಸ್ ಕಾನ್‌ಫರೆನ್ಸ್ ನಡೆದಾಗ ಅಲ್ಲೂ ಕೂಡ ಇಂತಹ ಒಂದು ಸಹಕಾರ ಸಂಸ್ಥೆ ಬಹಳ ಉತ್ತಮವಾಗಿ ಕೆಲಸ ಮಾಡುತ್ತಿದೆ ಎಂದು ಅವರ ಮೆಚ್ಚಿಗೆಯನ್ನೂ ಪಡೆದಿರುವಂತಹ ಸಂಸ್ಥೆ ಇದು. ಇವೊತ್ತು ಇದಕ್ಕೆ ಕೊಟ್ಟ ಸಾಲ ಓವರ್‌ಡ್ಯೂ ಆಗಿದೆ. ಇದಕ್ಕೆ ಕಾರಣ ಇಷ್ಟು. ಇದಕ್ಕೆ ಸಾಲವನ್ನು ಮೊದಲು ಕೊಡುವಾಗ, ಎರಡು ವರ್ಷದೊಳಗೇ ಸಾಲವನ್ನು ಮರು ಪಾವತಿ ಮಾಡಬೇಕೆಂದು ಇತ್ತು. ಆದರೆ ಈ ಸಂಘದ ಸದಸ್ಯರುಗಳು ಹೆಚ್ಚು ಕಾಲಾವಕಾಶ ಬೇಕೆಂದು ಕೇಳಿದುದರಿಂದ ನಾಲ್ಕು ವರ್ಷಗಳ ಅವಕಾಶವನ್ನು ಎಲ್ಲ ಸದಸ್ಯರಿಗೂ ಕೊಟ್ಟಿತು. ಆದರೂ ಸಾಲದ ಹಣವನ್ನು ಮರುಪಾವತಿ ಮಾಡಲು ಅವರಿಗೆ ಶಕ್ತಿ ಬರಲಿಲ್ಲ ಮತ್ತು ಸರಕಾರದವರು ಕೂಡ ಇದಕ್ಕೆ ಸಹಾಯಮಾಡಲು ಮುಂದೆ ಬರಲಿಲ್ಲ. ಎರಡು ವರ್ಷದೊಳಗೆ ಇವರು ವಾಪಸು ಮಾಡದೇ ಇರಲು ಇಂತಹ ಒಂದು ಪರಿಸ್ಥಿತಿ ಬಂತು. ಇದರಮೇಲೆ ಹತ್ತು ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವ ವೆಹಿಕಲ್ಸ್‌ಗಳೆಲ್ಲಾ ಸಂಘಕ್ಕೆ ಆಧಾರವಾಗಿವೆ. ಇಂತಹ ಸಹಕಾರ ಸಂಘದಿಂದ ನಷ್ಟವೇನೂ ಆಗುವುದಿಲ್ಲ. ಸದ್ಯದಲ್ಲಿ ಡಿಫಾಲ್ಟ್ ಆಗಿರಬಹುದು. ಇದನ್ನು ಸರಿಪಡಿಸುವ ಕಾರ್ಯಕ್ರಮವೂ ಇದೆ. ಸರಕಾರವೇ ಕ್ಯಾಪಿಟಲ್ ಮೂಲಕವಾಗಿ ಹಣ ಒದಗಿಸಿದರೆ ಇದೂಕೂಡ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆ ಎಂದು ನನಗನಿಸುತ್ತದೆ.

(ಶ್ರೀ ಜಿ. ರಾಮೇಗೌಡ)

ಇನ್ನು ಬೆಂಗಳೂರು ಜಿಲ್ಲೆಯಲ್ಲಿರುವ ಮೆಷಿನರಿ ಮಾರ್ಕೆಟಿಂಗು ಕೋಆಪರೇಟೀವ್ ಸೊಸೈಟಿಗೆ 40 ಸಾವಿರ ಕೊಟ್ಟಿದೆ. ಇದಕ್ಕೆ ಬ್ಯಾಂಕಿನವರು ಷೂರಿಟಿ ಕೊಟ್ಟಿದ್ದಾರೆ. ಈ ಸೊಸೈಟಿ ಡಿಫಾಲ್ಟ್ ಆಗಿದೆ ಇದನ್ನು ಸೂಪರ್ ಸೀಡು ಮಾಡಬೇಕೆಂದು ನೋಟೀಸು ಕೊಡಬಹುದು. ಈ ಸೊಸೈಟಿಯವರು ಸುಮಾರು ನಲವತ್ತು ಸಾವಿರ ಜಿಂಕು ಷೀಟುಗಳನ್ನು ತರಿಸಿ ಅವನ್ನು ಜಿಲ್ಲಾ ಬ್ಯಾಂಕಿನ ಕಸ್ಟಡಿಯಲ್ಲೇ ಇಟ್ಟಿದ್ದಾರೆ. ಇದಕ್ಕೆ ಮಂಜೂರಾಗಿರುವ ಹಣ ನಲವತ್ತು ಸಾವಿರ ಮಾತ್ರ. ಇಲ್ಲಿರುವ ಜಿಂಕು ಷೀಟುಗಳನ್ನು ಜಿಲ್ಲಾ ಬ್ಯಾಂಕುಗಳವರೇ ಕಸ್ಟಡಿಯಲ್ಲಿಟ್ಟುಕೊಂಡು ಇದರಿಂದ ಬರುವ ಹಣದಿಂದ ಹಿಂದಿನ ಸಾಲವನ್ನು ತೀರಿಸಿಕೊಳ್ಳುವ ಅವಕಾಶಇದೆ ಮತ್ತು ಸುಮಾರು ಹತ್ತು ಸಾವಿರದಷ್ಟು ಲಾಭ ಪಡೆಯುವ ಅವಕಾಶ ಕೂಡ ಇದೆ ಎಂದು ಹೇಳಿದರೆ ಅದೇನೂ ತಪ್ಪಾಗಲಾರದು. ಸಹಕಾರ ಸಂಘಗಳನ್ನು ಬೆಳೆಸಿ ಉದ್ಧಾರ ಮಾಡಬೇಕು ಎನ್ನುವ ಉದ್ದೇಶದಿಂದ ಕೊಟ್ಟ ಹಣವನ್ನು ಅವರಿಂದ ವಾಪಸು ತೆಗೆದುಕೊಂಡು ಇದರ ಜೊತೆಗೆ ಲಾಭವನ್ನು ಸಂಪಾದಿಸುತ್ತಿರುವಾಗ ಇಂತಹ ಸಂಸ್ಥೆಗಳನ್ನು ಸರಿಯಾದ ಸ್ಥಿತಿಯಲ್ಲಿ ನಡೆಯುವಂತೆ ಮಾಡಬೇಕು. ಇಂತಹ ಸಂದರ್ಭಗಳಲ್ಲಿ ಸರ್ಕಾರವೇ ಮುಂದೆಬಂದು ಸಹಾಯ ಮಾಡಿ ಡಿಫಾಲ್ಟ್ ಆಗುವುದನ್ನು ತಪ್ಪಿಸಿ ಅವು ಇನ್ನೂ ಚೆನ್ನಾಗಿ ಕೆಲಸ ಮಾಡುವಂತೆ ಸಹಾಯ ಮಾಡಬೇಕು. ಇದನ್ನು ತಿಳಿದುಕೊಂಡು ಸಮಯೋಚಿತವಾಗಿ ಜಿಲ್ಲಾ ಬ್ಯಾಂಕಿನವರು ಮುಳುಗಿ ಹೋಗುತ್ತಿರುವ ಸಂಘಗಳನ್ನು ಉಳಿಸಿಕೊಟ್ಟು ರೈತರಿಗೆ ಸಹಾಯ ಮಾಡಲು ಕೆಲಸ ಮಾಡುತ್ತಿದೆ ಎಂದು ಹೇಳಿದರೆ ಇದೇನು ತಪ್ಪಾಗಲಾರದು.

ಇನ್ನೂ ಒಂದೆರಡು ವಿಷಯಗಳನ್ನು ಹೇಳಿದ್ದಾರೆ. ಕಾಟೇಜು ಇಂಡಸ್ಟ್ರಿಯಲ್ ಕೋಆಪರೇಟೀವ್ ಸೊಸೈಟಿಗೆ ನಮ್ಮ ಬ್ಯಾಂಕಿನಿಂದ ನೇರವಾಗಿ ನಾವು ಸಾಲ ಕೊಟ್ಟಿಲ್ಲ. ಸರಕಾರದವರು ಇಂಡಸ್ಟ್ರೀ ಇಲಾಖೆಗೆ ಸಂಬಂಧಪಟ್ಟ ಹಾಗೆ ಕೋಆಪರೇಷನ್ ಇಲಾಖೆಯ ಜಾಯಿಂಟ್ ರಿಜಿಸ್ಟ್ರಾರ್‌ರವರ ಶಿಫಾರಸು ಪಡೆದು ಇವರಿಗೆ ಸಾಲ ಕೊಟ್ಟಿದ್ದಾರೆ. ಇವರಿಗೆ ಪರದೇಶಗಳಿಂದ ಎಂದರೆ ಜಪಾನ್ ದೇಶದ ಮೂಲಕ ರೇಯಾನ್ ಸಿಲ್ಕ್ ಬರುತ್ತದೆ. ಇದರ ಒಂದು ಆಧಾರದ ಮೇಲೆ ಸಾಲ ಕೊಡುತ್ತಿದ್ದಾರೆ. ಇದೂ ಅಲ್ಲದೆ ಪರದೇಶಗಳ ಸಿಲ್ಕ್ ಜೊತೆಯಲ್ಲಿ ಕಂಪೀಟ್ ಮಾಡಲು ಅನುಕೂಲವಾಗುವಂತೆ ಇದರ ಕಸ್ಟಮರುಗಳಿಗೆ ಸಿಲ್ಕ್ ತರಿಸಲು ಮತ್ತು ಸಹಕಾರ ಸಂಘದ ಸದಸ್ಯರುಗಳಿಗೆ ರಾ ಮೆಟೀರಿಯಲ್ ಒದಗಿಸಿಕೊಡುವ ಉದ್ದೇಶದಿಂದ ಇವರಿಗೆ ಸಾಲ ಕೊಟ್ಟಿದ್ದಾರೆ. ಇವರಿಗೆ ಸಕಾಲದಲ್ಲಿ ರಾ ಮೆಟೀರಿಯಲ್ಸ್‌ಗಳನ್ನು ಒದಗಿಸದೇ ಹೋದರೆ ತೊಂದರೆಯಾಗುತ್ತದೆ. ಸೆಂಟ್ರಲ್ ಗವರ್ನಮೆಂಟಿನ ರೆಸ್‌ಪಾನ್ಸಿಬಿಲಿಟಿ ಮೇಲೆ ಅಪೇಕ್ಸ್ ಬ್ಯಾಂಕಿನಿಂದ ಸಾಲ ಪಡೆದಿದ್ದಾರೆ ಮತ್ತು ಇಲ್ಲಿರುವ ಸದಸ್ಯರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ಉದ್ದೇಶದಿಂದ ಸಹಾಯ ಮಾಡಿದ್ದಾರೆ ಇದಕ್ಕಾಗಿ ಗ್ಯಾರಂಟೀ ಕೂಡ ಇದೆ. ಇದರ ಹಣ ಈಗಾಗಲೇ ಮುಕ್ಕಾಲು ಪಾಲಿನಷ್ಟು ಬಂದಿದೆ. ಇದರಲ್ಲೇನೂ ತಪ್ಪು ವ್ಯವಹಾರವಾಗುತ್ತಿಲ್ಲ ಎನ್ನುವುದನ್ನು ಈ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಇನ್ನು ಜಿಲ್ಲಾ ಬ್ಯಾಂಕಿನ ಮ್ಯಾನೇಜರಿಗೆ ಹೆಚ್ಚಿನ ಅನುಕೂಲವನ್ನು ಮಾಡಿಕೊಟ್ಟಿದ್ದಾರೆ ಎಂದು ಹೇಳಿದರು. ಈ ಬ್ಯಾಂಕಿನ ಆವರಣದಲ್ಲಿ ಒಂದು ವಾಸದ ಮನೆ ಇದೆ. ಈ ವಾಸದ ಮನೆಯಲ್ಲಿ ಇಲ್ಲಿರುವ ಮ್ಯಾನೇಜರು ವಾಸಮಾಡಬಹುದು ಎಂದು ಬೋರ್ಡಿನವರ ಹಾಗೂ ಜನರಲ್ ಬಾಡಿಯವರ ಅನುಮತಿಯ ಮೇಲೆಯೇ ಇದನ್ನು ಕೊಡಲಾಗಿದೆ. ಬ್ಯಾಂಕಿನಲ್ಲಿ ಬಹು ಯಶಸ್ವಿಯಾಗಿ ಕೆಲಸಮಾಡುವ ಜವಾಬುದಾರಿ ವಹಿಸಿರುವ ಮ್ಯಾನೇಜರಿಗೆ ವಾಸಕ್ಕೆಸ್ವಲ್ಪ ರಿಯಾಯಿತಿದರದಲ್ಲಿ ಬಾಡಿಗೆಗೆಕೊಟ್ಟರೆ, ಇದೇನೂ ತಪ್ಪಾಗಲಾರದು. ಇವೊತ್ತು ರಾಜ್ಯಗಳಲ್ಲಿ ಇರುವ ಎಲ್ಲಾ ಜಿಲ್ಲಾಬ್ಯಾಂಕುಗಳಲ್ಲಿರುವ ಮ್ಯಾನೇಜರುಗಳನ್ನು ಎಲ್ಲೂ ವರ್ಗ ಮಾಡುತ್ತಿಲ್ಲ. ಇಲ್ಲಿರುವವರು ಬಹಳ ದಿನದಿಂದ ಇದ್ದಾರೆ ಎಂದು ಇವರನ್ನು ವರ್ಗ ಮಾಡಬೇಕೆಂದು ಹೇಳುವುದು ಸರಿಯಲ್ಲ. ಆದರೆ ಇವಕ್ಕೆ ಒಂದು ತಿದ್ದುಪಡಿ ತಂದು ಒಂದು ಬ್ಯಾಂಕಿನಿಂದ ಇನ್ನೊಂದು ಬ್ಯಾಂಕಿಗೆ ವರ್ಗಾಯಿಸಬೇಕು ಎಂದು ಒಂದು ನಿಯಮ ಜಾರಿಗೆ ತಂದರೆ, ಅದನ್ನು ನಾನೂ ಅನುಮೋದಿಸುತ್ತೇನೆ. ಇದರಿಂದ ಆಡಳಿತ ಮಟ್ಟ ಇನ್ನೂ ಚೆನ್ನಾಗಿ ಅಗುತ್ತದೆ ಎಂದರೆ ನನಗೆ ತುಂಬಾ ಸಂತೋಷವಾಗುತ್ತದೆ. ಆದರೆ ಇದರಲ್ಲಿರುವ ಮ್ಯಾನೇಜರು ಹಾಗೂ ಅಧ್ಯಕ್ಷರು ಇಬ್ಬರೂ ಒಟ್ಟಿಗೆ ಕಲೆತು ವ್ಯವಹಾರ ಮಾಡುತ್ತಾರೆಂದರೆ, ಇದು ಮಾಡಬೇಕಾದದು ಅಗತ್ಯ. ಮ್ಯಾನೇಜರು ಹಾಗೂ ಅಧ್ಯಕ್ಷರು ಕೂಡಿ ವ್ಯವಹಾರ ಮಾಡದೇ ಹೋದರೆ ಅದು ಸರಿಯಾದ ವ್ಯವಹಾರವೇ ಆಗುವುದಿಲ್ಲ ಎಂದು ಇಲ್ಲಿ ಹೇಳಬಯಸುತ್ತೇನೆ. ಇದರಲ್ಲೇನೋ ಸ್ಪೆಷಾಲಿಟಿ ಏನೂ ಇಲ್ಲ. ಏನೋ ಕೊಟ್ಟಿರುವ ಮನೆಯ ಬಾಡಿಗೆಯಲ್ಲಿ ಸ್ವಲ್ಪ ರಿಯಾಯಿತಿ ಮಾಡಲಾಗಿದೆ. ಇನ್ನು ಯಾವ ವಿಧವಾದ ಅನುಕೂಲವನ್ನು ಇವರಿಗೆ ಕಲ್ಪಿಸಿ ಕೊಟ್ಟಿಲ್ಲ.

ಈ ರೀತಿ ಅಪಾದನೆ ಮಾಡುವುದು ಸರಿಯಲ್ಲ. ಯಾರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೋ ಅವರಿಗೆ ಇನ್ನೂ ಚೆನ್ನಾಗಿ ಪ್ರೋತ್ಸಾಹ ಕೊಡಬೇಕಾದುದು ಧರ್ಮ. ಯಾವಾಗ ಸಹಕಾರ ಇಲಾಖೆಯವರು ಒಂದು ಬ್ಯಾಂಕು ಮಾಡಿ ಅದಕ್ಕೆ ಒಂದು ಬೋರ್ಡನ್ನು ಕೊಟ್ಟಿರುವಾಗ, ಇದು ಚೆನ್ನಾಗಿ ಕೆಲಸ ಮಾಡಲು ಇನ್ನೂ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಡಬೇಕು.

ಇನ್ನು ಸಹಕಾರ ಸಂಘಗಳು ಎಷ್ಟೋ ಕಡೆ ಚೆನ್ನಾಗಿ ಕೆಲಸ ಮಾಡುತ್ತಿವೆ. ಹಾಗೇ ಜಿಲ್ಲಾ ಬ್ಯಾಂಕುಗಳು ಇರುವ ಕಡೆಗಳಲ್ಲೂ ಬ್ಯಾಂಕುಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ಬೆಂಗಳೂರು ಸಿಟಿ ಎನ್ನುವುದು ಕಾಸ್ಮೊಪಾಲಿಟನ್ ಸಿಟಿಯಂತೆ ಆಗಿದೆ. ಇಲ್ಲಿ ಅನೇಕ ತರಹ ಜನರು ಬಂದು ಕೈಗಾರಿಕೆಗಳನ್ನು ಮಾಡುತ್ತಿದ್ದಾರೆ ಮತ್ತು ಸೊಸೈಟಿಗಳನ್ನು ಮಾಡಿದ್ದಾರೆ. ವರ್ಕರ್ಸ್ ಕೋ ಆಪರೇಟೀವ್ ಸೊಸೈಟಿ ಇವೆ. ಹೀಗೆ ನಮ್ಮ ಬೆಂಗಳೂರು ಸಿಟಿಯಲ್ಲೇ ಸುಮಾರು ಒಂದು ನೂರು ಸೊಸೈಟಿಗಳಿವೆ. ಮಾರವಾಡಿಗಳಿಂದ ಸಾಲ ಪಡೆದು ಹೆಚ್ಚು ಬಡ್ಡಿ ತೆರುವ ಜನಕ್ಕೆ ಅನುಕೂಲ ಮಾಡಬೇಕೆಂದು ಇಂತಹ ಸಹಕಾರ ಸಂಘಗಳನ್ನು ಮಾಡಿ ಇಲ್ಲಿನ ಕೆಲಸಗಾರರಿಗೆ ಶೇಕಡ ಎರಡರಷ್ಟು ಬಡ್ಡಿಯ ಮೇಲೆ ಸಾಲ ಕೊಟ್ಟು ಶೇಕಡಾ ಹತ್ತರಷ್ಟು ಹೆಚ್ಚು ಬಡ್ಡಿ ಕೊಡುವುದನ್ನು ತಪ್ಪಿಸಲು ಇಂತಹ ಸಂಘಗಳನ್ನು ಮಾಡಿ ಮಾರವಾಡಿಗಳ ಕಷ್ಟದಿಂದ ಇವರನ್ನು ತಪ್ಪಿಸಲಾಗಿದೆ ಮತ್ತು ಈ ಸಂಘಗಳು ಉತ್ತಮವಾಗಿ ಕೆಲಸವಮಾಡುತ್ತಿವೆ ಎಂದು ಇಲ್ಲಿ ಹೇಳಲು ಇಚ್ಛಿಸುತ್ತೇನೆ. ವ್ಯವಸಾಯವೇ ಮುಖ್ಯವಾಗಿರುವ ರೈತರಿಗೆ ಏಕೆ ಅನುಕೂಲ ಮಾಡಲಿಲ್ಲ ಎಂದೂ ಹೇಳಿದರು. ವ್ಯವಸಾಯಗಾರರಿಗೇ ಪರಿಹಾರ ಕೊಡುವುದಕ್ಕಾಗಿ ಸುಮಾರು 46 ಲಕ್ಷ ಸಾಲ ಕೊಡಲಾಗಿದೆ ಮತ್ತು ಇನ್ನೂ ಒಂದು ಕೋಟಿಯಷ್ಟು ಕೊಡುವ ಬೇರೆ ವ್ಯವಸ್ಥೆಯೂ ಇದೆ. ಇದರಲ್ಲಿ ಯಾವ ತಪ್ಪೂ ಇಲ್ಲ ಮತ್ತು ಯಾವ ದುರುದ್ದೇಶವೂ ಇಲ್ಲ ಎಂದು ಇಲ್ಲಿ ಹೇಳಲು ಇಚ್ಛಿಸುತ್ತೇನೆ.

ಒಬ್ಬರೇ ಅಧ್ಯಕ್ಷರಾಗಿ ಬಹಳ ಕಾಲದಿಂದಲೂ ಸಂಸ್ಥೆಯಲ್ಲಿದ್ದುಕೊಂಡು ಬರುತ್ತಿದ್ದಾರೆಂದು ಹೇಳಿದರು. ಮುಖ್ಯವಾಗಿ ಇದು ಡೆಮಾಕ್ರಸಿ ಎಂದು ಹೇಳಬೇಕಾಗಿದೆ. ಒಂದು ದೃಷ್ಟಿಯಿಂದ ಕಾನೂನು ಪ್ರಕಾರ ಇದು ನಡೆಯುತ್ತಿದೆ. ಇದರಲ್ಲಿ ಯಾವ ತೊಂದರೆಯೂ ಬರುವುದಿಲ್ಲ ಮತ್ತು ಒಳ್ಳೆಯ ಅನುಭವವೂ ಬರುತ್ತದೆ. ಮಾನ್ಯ ಉಪಮಂತ್ರಿಗಳಾದ ಶ್ರೀಮಾನ್ ಬಿ. ಎಲ್. ಗೌಡರು ಉಪಮಂತ್ರಿಗಳಾಗುವುದಕ್ಕೆ ಮುಂಚೆ ಅವರು ಎಂ.ಎಲ್.ಎ. ಆಗಿದ್ದಾಗ ತಾಲ್ಲೂಕು ಬೋರ್ಡು ಹಾಗೂ ಅನೇಕ ಜಿಲ್ಲಾ ಬ್ಯಾಂಕುಗಳಲ್ಲಿ ಪ್ರೆಸಿಡೆಂಟರಾಗಿದ್ದರು ಮತ್ತು ಮಾರ್ಕೆಟಿಂಗು ಸೊಸೈಟಿಯಲ್ಲಿ ಪ್ರೆಸಿಡೆಂಟರಾಗಿಯೂ ಇದ್ದರು. ಇದರಿಂದ ಯಾರೂ ಇಲ್ಲಿ ಪಟ್ಟಭದ್ರಹಿತ ರಕ್ಷಣೆ ಮಾಡುತ್ತಾರೆ ಎಂದು ಹೇಳುವುದು ಸರಿಯಲ್ಲ.

ಶ್ರೀ ಎನ್. ಚಿಕ್ಕೇಗೌಡ.—ನಾನು ಪಟ್ಟಭದ್ರ ಹಿತರಕ್ಷಣೆ ಮಾಡುತ್ತಾರೆ ಎಂದು ಹೇಳಲಿಲ್ಲ. ಚುನಾವಣೆಯಾಗೇ ಇಲ್ಲಿ ಬರುತ್ತಿದ್ದಾರೆಂದು ಹೇಳಿದೆ.

ಶ್ರೀ ಜಿ. ರಾಮೇಗೌಡ.—ನೀವು ಹೇಳಿದಿರಿ ಎಂದು ನಾನು ಹೇಳಲಿಲ್ಲ. ಉದಾಹರಣೆಯಾಗಿ ಒಂದು ಸಂಸ್ಥೆಯಲ್ಲಿ ಒಬ್ಬರೇ ಅಧ್ಯಕ್ಷರಾಗಿ ಚುನಾವಣೆಯಾಗಿ ಬಂದರೆ ಅವರು ಚೆನ್ನಾಗಿಯೇ ಕೆಲಸ ಮಾಡುತ್ತಾರೆ ಎಂದು ಹೇಳಲು ಇದನ್ನು ಹೇಳಬೇಕಾಯಿತು. ಇದರ ತತ್ವವನ್ನು ನಾನು ಒಪ್ಪುತ್ತೇನೆ. ಇದನ್ನು ಪ್ರಜಾಸತ್ತಾತ್ಮಕವಾಗಿ ಮಾಡಿ ಒಂದು ಕಾನೂನನ್ನು ಮಾಡಿ ತಂದರೆ ಅದನ್ನೂ ನಾನು ಒಪ್ಪುತ್ತೇನೆ. ಕೆಲಸ ನಡೆಯುವುದಿಲ್ಲ ಎನ್ನುವ ಮಾತನ್ನು ನಾನು ಒಪ್ಪುವುದಿಲ್ಲ. ಕೆಲಸಗಳನ್ನು ಚೆನ್ನಾಗಿ ನಡೆಸಿಕೊಂಡು ಲೋಪಬಾರದ ಹಾಗೆ ಮಾಡಿ ನೀವು ಮಾಡಿರುವ ಧ್ಯೇಯ ಧೋರಣೆಗಳನ್ನು ಪರಿಪಾಲನೆ ಮಾಡಿಕೊಂಡು ಹೋಗತಕ್ಕಂತಹ ಸಂಸ್ಥೆಗಳಲ್ಲಿ ಒಬ್ಬರೇ ಅಧ್ಯಕ್ಷರು ಇದ್ದರೆ ಅದರಿಂದೇನೂ ತಪ್ಪಾಗಲಾರದು. ಇದಕ್ಕೆ ಬೇಕಾದರೆ ಒಂದು ತಿದ್ದುಪಡಿಮಾಡಿ ಕಾನೂನು ತಂದರೆ ಅಂತಹ ಕನ್‌ವೆನ್‌ಷನ್ನನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ನಾನು ಅನುಮೋದಿಸುತ್ತೇನೆ. ಅದನ್ನು ಈ ಒಂದು ಜಿಲ್ಲೆಗೇ ಅಲ್ಲ ಇಡೀ ರಾಜ್ಯಕ್ಕೆ ಅನ್ವಯಿಸಬೇಕು.

ಮೈಸೂರು ರಾಜ್ಯದಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು ಒಳ್ಳೆಯ ಕೆಲಸ ಮಾಡುತ್ತಿವೆ. ಇವು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿವೆಯೋ ಅದೇ ರೀತಿಯಲ್ಲಿ ರಾಜ್ಯದಲ್ಲಿರುವ ಎಲ್ಲ ಬ್ಯಾಂಕುಗಳೂ ಕೆಲಸ ಮಾಡಬೇಕು ಎಂದು ನನ್ನ ಉದ್ದೇಶ. ಈಗ ಪ್ರೈಮರಿ ಸಹಕಾರ ಬ್ಯಾಂಕುಗಳು ನೂರಕ್ಕೆ 90 ಭಾಗ ಸಾಲ ವಸೂಲು ಮಾಡಿದರೆ ಮರುಸಾಲ ಕೊಡುವುದಕ್ಕೆ ಸಾಧ್ಯ ಎಂದು ಸರ್ಕಾರ ಒಂದು ಕಟ್ಟು ಮಾಡಿದೆ; ಸ್ಟೇಟ್ ಸೆಂಟ್ರಲ್ ಬ್ಯಾಂಕ್ ಒಂದು ಕಟ್ಟು ಮಾಡಿದೆ. ಇದು ಸರಿಯಲ್ಲ. ನಾನಾ ಕಾರಣಗಳಿಂದ ರೈತರು ತೆಗೆದುಕೊಂಡಿರುವ ಸಾಲವನ್ನು ವಾಪಸು ಕೊಡುವುದಕ್ಕೆ ಅನುಕೂಲವಾಗುವುದಿಲ್ಲ. ಹಾಗಿರುವಾಗ ಬೇಸಿಗೆ ಕಾಲದಲ್ಲಿ ಬಾವಿಗೆ ಕೊಡತಕ್ಕ ಅಭಿವೃದ್ಧಿ ಸಾಲವನ್ನು ನಿಲ್ಲಿಸತಕ್ಕದ್ದು ಬಹಳ ಕಠಿಣವಾದುದು. ಸರ್ಕಾರ ಇದನ್ನು ಪರಿಶೀಲನೆ ಮಾಡಬೇಕು ಸುಮಾರು

(ಶ್ರೀ ಜಿ. ರಾಮೇಗೌಡ)

70 ಭಾಗ ಎಲ್ಲಿ ವಸೂಲಾಗಿದೆಯೋ ಅಂಥ ಕಡೆಗೆ ಸಾಲ ಕೊಟ್ಟು ಬೇಸಿಗೆಯಲ್ಲಿ ಬಾವಿ ತೆಗೆಯುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಕಳಕಳಿಯಿಂದ ಹೇಳುತ್ತೇನೆ.

ಸೆಂಟ್ರಲ್ ಹೋಲ್‌ಸೇಲ್ ಸೊಸೈಟಿಗೆ ಸಾಲ ಕೊಟ್ಟಿದ್ದಾರೆ, ಸಹಕಾರ ವಸ್ತು ಭಂಡಾರಕ್ಕೆ ಲಕ್ಷಾಂತರ ರೂಪಾಯಿ ಸಾಲ ಕೊಟ್ಟಿದ್ದಾರೆ. ಈ ಸಹಕಾರ ಸಂಸ್ಥೆಗಳು ಸೇಕಡ 10 ರಷ್ಟು ಹಣ ಹಾಕಿದರೆ ಸಾಕು ಎಂದು ಗ್ಯಾರಂಟಿ ನಿಂತಿದ್ದಾರೆ. ಇದು ಶ್ಲಾಘನೀಯವಾದುದು. ಇದೇ ರೀತಿ ಗ್ಯಾರಂಟಿಯನ್ನು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಕೆಲಸ ಮಾಡತಕ್ಕ ಮಾರ್ಕೆಟಿಂಗ್ ಸೊಸೈಟಿಗಳಿಗೆ ಕೊಡಿ ಎಂದರೆ ಸರ್ಕಾರ ಕೊಡುತ್ತಿಲ್ಲ. ಇದರಿಂದ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕೆಲಸ ಮಾಡತಕ್ಕ ಮಾರ್ಕೆಟಿಂಗ್ ಸೊಸೈಟಿಗಳಿಗೆ ವ್ಯವಹಾರ ನಡೆಸುವುದು ಬಹಳ ಕಷ್ಟವಾಗಿದೆ. ಆದುದರಿಂದ ರಾಜ್ಯ ಮಟ್ಟದಲ್ಲಿ ಕೆಲಸ ಮಾಡತಕ್ಕ ಸಹಕಾರ ಸಂಘಗಳಿಗೆ ಯಾವ ರೀತಿಯಲ್ಲಿ ಗ್ಯಾರಂಟಿಯನ್ನು ಕೊಟ್ಟಿದೆಯೋ ಅದೇ ರೀತಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿರುವ ಸೊಸೈಟಿಗಳಿಗೂ ಕೊಡುವುದು ಬಹಳ ಆವಶ್ಯಕ. ಇದನ್ನು ಸರ್ಕಾರ ಗಮನಿಸಬೇಕು. ಇದನ್ನು ಮಾಡದೆ ಹೋದರೆ ರೈತನು ಬೆಳೆಯತಕ್ಕ ಪದಾರ್ಥಗಳನ್ನು ತೆಗೆದುಕೊಂಡು ಮಾರ್ಕೆಟಿಂಗ್ ವ್ಯವಸ್ಥೆಯನ್ನು ತಾಲ್ಲೂಕು ಮಟ್ಟದಲ್ಲಿ ಮಾಡಬೇಕೆಂದು ಏನು ಹೇಳುತ್ತಿದ್ದಾರೆ ಅದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ರಾಜ್ಯ ಮಟ್ಟದಲ್ಲಿರುವ ಸಹಕಾರ ಸಂಘಗಳಿಗೆ ಕೊಡುವ ಸೌಕರ್ಯಗಳನ್ನು ತಾಲ್ಲೂಕುಮಟ್ಟದ ಸಹಕಾರ ಸಂಘಗಳಿಗೂ ಕೊಡಿಸಬೇಕು.

ನಮ್ಮ ರಾಜ್ಯದಲ್ಲಿ ಆಡಿಟ್ ಮಾಡುವ ಪದ್ಧತಿ ಖಂಡಿತ ಸರಿಯಾಗಿಲ್ಲ. ಎಲ್ಲ ಮಾನ್ಯ ಸದಸ್ಯರು ಹೇಳುವುದರಲ್ಲಿಯೂ ನಿಜಾಂಶವಿದೆ. ಯಾವಾಗ ಒಂದು ವರ್ಷದ ತನಕ ಸಹಕಾರ ಸಂಘಗಳ ವ್ಯವಹಾರವನ್ನು ಆಡಿಟ್ ಮಾಡುವುದಿಲ್ಲ ಮತ್ತು ಎರಡು ಮೂರು ತಿಂಗಳಿಗೆ ಒಮ್ಮೆಯಾದರೂ ಆಡಿಟ್ ಮಾಡಲು ಬರುತ್ತಾರೆ ಎನ್ನುವ ಭಯ ಸಹಕಾರ ಸಂಘಗಳನ್ನು ನಡೆಸತಕ್ಕ ಅಧಿಕಾರ ವರ್ಗದವರಿಗೆ ಇರುವುದಿಲ್ಲ ಆಗ ಮನುಷ್ಯರಿಗೆ ಇರತಕ್ಕ ಕೆಟ್ಟ ಗುಣದಿಂದ ಹಣದ ದುರುಪಯೋಗ ಎನ್ನುವುದರ ಕಡೆಗೆ ಅವರ ಮನಸ್ಸು ಹೋಗುತ್ತದೆ. ಒಂದೆರಡು ತಿಂಗಳಿಗೆ ಒಂದು ಸಲವಾದರೂ ಆಡಿಟ್ ಮಾಡುವ ವ್ಯವಸ್ಥೆ ಬಂದರೆ ಮಿಸ್ ಅಪ್ರೋಪ್ರಿಯೇಷನ್, ಮಿಸ್‌-ಯೂಟಿಲೈಸೇಷನ್ ಇವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಬಿಟ್ಟು ವರ್ಷ ಆದ ಮೇಲೆ ಆಡಿಟ್ ಮಾಡಿದರೆ ಅದು ಪೋಸ್ಟ್ ಮಾರ್ಟಂ ಮಾಡಿದ ಹಾಗೆ ಆಗುತ್ತದೆ, ಆಗತಕ್ಕ ಅನ್ಯಾಯಗಳನ್ನು ತಡೆಯುವುದಕ್ಕೆ ಏನೂ ಸಹಾಯಕವಾಗುವುದಿಲ್ಲ. ಸರ್ಕಾರದ ಆಡಿಟರುಗಳ ಮೂಲಕ ಆಡಿಟ್ ಮಾಡುವ ವ್ಯವಸ್ಥೆಯನ್ನು ಮಾಡುವುದಕ್ಕಾಗುವುದಿಲ್ಲವೆಂದರೆ, ಯಾರಾದರೂ ಖಾಸಗಿ ಆಡಿಟರುಗಳನ್ನು ನೇಮಿಸಿಕೊಂಡು ಕೆಲಸ ಮಾಡುವುದಕ್ಕೆ ಒಂದು ಅವಕಾಶವನ್ನು ಮಾಡಬೇಕು. ಖಾಸಗಿಯವರು ಸರಿಯಾಗಿ ಮಾಡುತ್ತಾರೆಂಬ ಭರವಸೆಯಿಲ್ಲ ಎನ್ನುವುದಾದರೇ ಸರ್ಕಾರದವರೇ ಒಂದು ಕಾರ್ಯಕ್ರಮ ಹಾಕಿಕೊಂಡು ಇಂಟರ್ ಮೀಡಿಯೆಟ್ ಆಡಿಟ್ ಮಾಡುವ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಸರ್ಕಾರದವರು ಆಡಿಟ್ ಮಾಡುವಾಗ ಸುಮ್ಮನೆ ಮಾಡುವುದಿಲ್ಲ. ಲಕ್ಷಾಂತರ ರೂಪಾಯಿ ವಸೂಲು ಮಾಡುತ್ತಾರೆ. ಹೀಗಿರುವಾಗ ಒಂದು ತಿಂಗಳಿಗೋ ಎರಡು ತಿಂಗಳಿಗೋ ಆಡಿಟ್ ಮಾಡಿಸುವುದಕ್ಕೆ ಏಕೆ ಸಾಧ್ಯವಾಗುವುದಿಲ್ಲ ಎಂದು ಕೇಳುತ್ತೇನೆ. ಆ ಕೆಲಸ ಮಾಡುವುದಕ್ಕೆ ಸಿಬ್ಬಂದಿ ಜಾಸ್ತಿ ಬೇಕಾದರೆ ಅದನ್ನು ನೇಮಿಸಿಕೊಂಡು ಸೊಸೈಟಿಗಳಿಂದ ಅದಕ್ಕೆ ತಗಲುವ ವೆಚ್ಚವನ್ನು ಚಾರ್ಜ್ ಮಾಡಿದರೆ ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಆದ್ದರಿಂದ ಎರಡು ಮೂರು ತಿಂಗಳಿಗೆ ಒಂದು ಸಲವಾದರೂ ಇಂಟರ್‌ಮೀಡಿಯೆಟ್ ಆಡಿಟ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಜಿಲ್ಲಾ ಬ್ಯಾಂಕುಗಳಲ್ಲಿ ಸಾಲ ಸರಿಯಾಗಿ ವಸೂಲಾಗಿಲ್ಲ ಎಂದು ರಿಸರ್ವ್‌ಬ್ಯಾಂಕಿನ ಅಪಾದನೆ ಇದೆ ಅಪೆಕ್ಸ್ ಬ್ಯಾಂಕಿನ ಅಪಾದನೆ ಇದೆ. ಸಾಲ ತೆಗೆದುಕೊಂಡಿರುವುದನ್ನು ಕೊಡದೆ ಇದ್ದರೆ ಎಕ್ಸ್‌ಟೆನ್‌ಷನ್ ಮೆಥಡ್ಸ್ ಮಾಡುತ್ತಾರೆ. ಹಾಗೆ ಮಾಡದೆ ದಾವ ಮಾಡಿ, ಡಿಕ್ರಿ ತೆಗೆದುಕೊಂಡು ಜಾರಿ ಕ್ರಮ ನಡೆಸಬೇಕು. ಲಕ್ಷಾಂತರ ರೂಪಾಯಿಗಳ ಸಹಸ್ರಾರು ಕೇಸುಗಳು ಸರ್ಕಾರದ ಮುಂದೆ ಇವೆ. ಅದನ್ನು ಕ್ರಮವಾಗಿ ನಡೆಸಿಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಿಲ್ಲ. ನಿಮ್ಮಲ್ಲಿರುವ ವ್ಯವಸ್ಥೆಯನ್ನು ನೀವು ಕ್ರಮವಾಗಿ ಮಾಡುವುದಕ್ಕೆ ಶಕ್ತಿ ಇಲ್ಲವೆ ಇದ್ದರೆ ಏನೂ ಸಂಬಳ ತೆಗೆದುಕೊಳ್ಳದೆ ಏನೂ ಆಶೆಯನ್ನು ಇಟ್ಟುಕೊಳ್ಳದೆ ಕೆಲಸ ಮಾಡತಕ್ಕ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಇವರನ್ನು ಜಬರ್ದಸ್ತಿನಿಂದ ಕೇಳುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯ, ಎಷ್ಟರಮಟ್ಟಿಗೆ ಕಾರ್ಯಕ್ರಮ ನಡೆಸುತ್ತೀರಿ ಎನ್ನುವುದನ್ನು ಆಲೋಚನೆ ಮಾಡಬೇಕು. ನಾನು ಬೆಂಗಳೂರು

ಜಿಲ್ಲೆಯ ಉದಾಹರಣೆಯನ್ನು ಕೊಡುವುದಾದರೆ 11 ತಾಲ್ಲೂಕುಗಳಿಗೆ ಇಬ್ಬರು ಸೇಲ್ ಆಫೀಸರುಗಳನ್ನು ಕೊಟ್ಟಿದ್ದಾರೆ. ನಾಲ್ಕು ಜನರನ್ನು ಕೊಡಿ ಎಂದು ಐದು ವರ್ಷಗಳಿಂದ ಕೇಳಿದರೂ ಗಮನ ಕೊಟ್ಟಿಲ್ಲ. ಇದೇ ಸಭೆಯಲ್ಲಿ ಪ್ರತಿ ವರ್ಷ ಬಜೆಟ್ ಭಾಷಣದಲ್ಲಿ ಹೇಳಿದ್ದೇನೆ, ಪ್ರತಿಯೊಂದು ತಾಲ್ಲೂಕಿಗೂ ಒಬ್ಬೊಬ್ಬ ಸೇಲ್ ಆಫೀಸರ್ ಇರಬೇಕು, ಎಕ್ಸ್‌ಟೆನ್‌ಷನ್ ಮೆಥಡ್ಸ್‌ಗಿಂತ ಕೋಯರ್ಸಿವ್ ಮೆಥಡ್ಸ್ ತೆಗೆದುಕೊಳ್ಳಬೇಕು, ಆಗ ನಾವು ಕೊಟ್ಟಿರತಕ್ಕ ಹಣ ವಾಪಸು ಬರುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿದ್ದೇನೆ. ಯಾವ ಸೊಸೈಟಿಯಲ್ಲಿಯೇ ಆಗಲಿ ಎಷ್ಟು ಗಂಟೆ ಕಾಲ ಕೆಲಸ ಮಾಡತಕ್ಕ ಒಬ್ಬ ಕಾರ್ಯದರ್ಶಿ ಇರುತ್ತಾನೆ ? ಆತನು ಎಷ್ಟು ಮಾತ್ರ ಕೆಲಸ ಮಾಡಬಲ್ಲ ? ಇದರಿಂದ ಪ್ರತಿಯೊಬ್ಬರಿಂದಲೂ ಸಾಲ ಮರು ಪಾವತಿಯಾಗಲು ಒತ್ತಾಯ ಮಾಡತಕ್ಕ ಪರಿಸ್ಥಿತಿ ಇರುವುದಿಲ್ಲ. ಅಂಥ ಸಂದರ್ಭಗಳಲ್ಲಿ ಅವನು ಕೊಡಬೇಕಾದ ಸಾಲವನ್ನು ಮತ್ತೆ ಕನ್‌ವರ್ಟ್ ಮಾಡಿ ಪುನಃ ಸಾಲ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ, ಈಗಲೂ ಮಾಡುತ್ತಿದ್ದೇವೆ, ಮುಂದೆಯೂ ಮಾಡುತ್ತೇವೆ. ಕಾಲಕ್ಕೆ ಸರಿಯಾಗಿ ಕ್ರಮಗಳನ್ನು ತೆಗೆದುಕೊಳ್ಳುತ್ತಾ ಹೋದರೆ ಈ ರೀತಿಯ ತೊಂದರೆಗಳು ಆಗುತ್ತ ಇರಲಿಲ್ಲ.

ಈಗಿರುವ ಕಾನೂನಿನಲ್ಲಿ ಕೆಲವು ತೊಡಕುಗಳಿವೆ. ಒಂದು ಸಂಘದಲ್ಲಿ ಏನಾದರೂ ಅನ್ಯಾಯವಾದರೆ ನೇರವಾಗಿ ನಾವು ಅದರ ಅಧಿಕಾರವನ್ನು ವಹಿಸಿ ಅದನ್ನು ಸರಿಪಡಿಸತಕ್ಕ ವ್ಯವಸ್ಥೆಯನ್ನು ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಸೂಪರ್‌ಸೆಷನ್ ಮಾಡಬೇಕಾಗುತ್ತದೆ. ಈಗಿರುವ ಸೂಪರ್‌ಸೆಷನ್ ಮಾಡುವ ಕ್ರಮವನ್ನು ಬದಲಾಯಿಸಬೇಕು ಎಂದು ಐದು ವರ್ಷಗಳಿಂದ ಸರ್ಕಾರವನ್ನು ಕೇಳುತ್ತಿದ್ದೇವೆ. ಅವರಿಗೆ ನೋಟೀಸ್ ಕೊಡಬೇಕು, ಅದಕ್ಕೆ ಅವರು ಜವಾಬು ಕೊಡಬೇಕು, ಆಮೇಲೆ ಕ್ರಮ ತೆಗೆದುಕೊಳ್ಳಬೇಕು. ಅದರ ಮೇಲೆ ಅಪೀಲು ಉಂಟು. ಯಾರಾದರೂ ಕಾಂಗ್ರೆಸ್‌ನವರಿದ್ದರೆ ಮೂರುಸಲ ಅಪೀಲು ಹಾಕಿದರೂ ಎಕ್ಸ್‌ಟೆನ್‌ಷನ್ ಕೊಡುವುದಕ್ಕೆ ಹೋಗುತ್ತಾರೆ. ಇದರಲ್ಲಿ ಭಾರೀ ರಾಜಕೀಯವಿದೆ. ಇದರಿಂದ ಅರ್ಥ ತೊಂದರೆ ಬರುತ್ತದೆ. ಸರ್ಕಾರದವರೇ ಹೀಗೆ ಮಾಡುವಾಗ ನಾವೂ ನಮ್ಮ ಅಧಿಕಾರದಲ್ಲಿ ಏನೇನು ಮಾಡುವುದಕ್ಕೆ ಶಕ್ತಿ ಇರುತ್ತದೋ, ಆ ರಾಜಕೀಯವನ್ನು ಉಪಯೋಗಿಸಿಕೊಳ್ಳುತ್ತೇವೆ. ನೀವೇ ಅದಕ್ಕೇ ಗುರುಗಳು. ಈ ಸರ್ಕಾರ ಎಲ್ಲದರಲ್ಲಿಯೂ ರಾಜಕೀಯವನ್ನು ತಂದೊಡ್ಡಿದೆ. ಸರ್ಕಾರದವರು ಮಾಡಿರುವ ಮೆಥಡ್ ನೋಡಿಕೊಂಡು ಅಲ್ಪಸ್ವಲ್ಪ ಅಧಿಕಾರವಿರುವವರು ಸ್ವಲ್ಪ ಸ್ವಲ್ಪ ರಾಜಕೀಯ ಮಾಡುತ್ತೇವೆ. ಇದಕ್ಕೆಲ್ಲ ಇವರೇ ನಮ್ಮ ಗುರುಗಳು. ಯಾವುದಾದರೂ ಸಂಘದಲ್ಲಿ ಅನ್ಯಾಯ ನಡೆದರೆ ಅದನ್ನು ಒಂದು ತಿಂಗಳಲ್ಲಿ ಸೂಪರ್‌ಸೀಡ್ ಮಾಡುವಂತೆ ತಿದ್ದುಪಡಿಯನ್ನು ತಂದರೆ ಈಗ ನಡೆಯುತಕ್ಕ ಅನ್ಯಾಯಗಳಲ್ಲಿ ಶೇಕಡ 50 ಭಾಗವನ್ನು ತಡೆಗಟ್ಟಬಹುದು.

ಜನರಲ್‌ಬಾಡಿ ಮೀಟಿಂಗ್ ಮಾಡುವ ವಿಷಯದಲ್ಲಿ ಎಷ್ಟೋ ಸೊಸೈಟಿಗಳು ಮೂರು ನಾಲ್ಕು ವರ್ಷದಿಂದ ಮಾಡಿಲ್ಲ. ಕಾರಣವೇನೆಂದರೆ ಯಾರು ಯಾರು ಡಿಫಾಲ್ಟರ್ ಇದ್ದಾರೆ ಅವರಿಗೆ ಮೂರು ತಿಂಗಳ ನೋಟೀಸ್ ಕೊಡಬೇಕೆಂದು ಹೇಳುತ್ತೀರಿ. ಮೂರು ತಿಂಗಳ ನೋಟೀಸ್ ಅನಾವಶ್ಯಕ. ನೀವು ಅದರ ಅವಧಿಯನ್ನು ಕಡಿಮೆ ಮಾಡಿ ಒಂದು ತಿಂಗಳು ಮಾಡಿ ಎಂದು ಮೂರು ವರ್ಷದಿಂದ ಕೇಳಿಕೊಳ್ಳುತ್ತಿದ್ದೇವೆ. ಅದರ ಕಡೆ ಗಮನ ಕೊಟ್ಟಿಲ್ಲ. ಆದ್ದರಿಂದ ನಿಮ್ಮ ರೂಲ್ಸ್ ರೇಗ್ಯುಲೇಷನ್ಸ್‌ಗೆ ಯಾರಾದರೂ ಆ ಕಡೆಯವರು ಕೇಳಿದಾಗ ಮಾಡುತ್ತೀರಿ. ನಿಮ್ಮ ಕಾನೂನುಗಳೇ ಲೈಸೆನ್ಸ್ ಆಗಿರುವಾಗ ಅದನ್ನು ತಪ್ಪಿಸಬೇಕು ಎನ್ನುವುದನ್ನು ನಾವು ಒತ್ತಿ ಒತ್ತಿ ಹೇಳುತ್ತಿದ್ದೇವೆ. ಹೀಗೆ ಸುಲಭವಾಗಿ ಬದಲಾಯಿಸತಕ್ಕ ವಿಧಿಗಳನ್ನು ಕೂಡ ಬದಲಾಯಿಸದೆ ಇರುವುದರಿಂದ ಇದರಲ್ಲಿ ಏನೋ ಮರ್ಮವಿರಬೇಕು ಎಂದು ಕಾಣುತ್ತದೆ. ಏನೇ ಆದರೂ ಸಹ ಕೆಲವು ಮಾರ್ಪಾಡುಗಳನ್ನು ಈಗಿನ ಕಾನೂನಿನಲ್ಲಿ ಮಾಡಬೇಕಾದುದು ಮುಖ್ಯ.

[MR. DEPUTY SPEAKER in the Chair.]

ಜಿಲ್ಲಾ ಬ್ಯಾಂಕು ಚೆನ್ನಾಗಿ ಕೆಲಸಮಾಡಿದೆ, ಅದಕ್ಕೆ ಸಾಲ ಕೊಡಬಹುದು. ಆದರೆ ಸರಕಾರ ಏನೂ ಸಹಾಯ ಮಾಡುವುದಿಲ್ಲ. ಜಿಲ್ಲಾ ಬ್ಯಾಂಕಿನಲ್ಲಿ ಡಿಪಾಜಿಟ್ ಮಾಡಿದೆ, ಕಂಟ್ರಾಕ್ಟ್ ಪಡೆಯುವುದು, ಲೈಸೆನ್ಸ್ ತೆಗೆದುಕೊಳ್ಳುವುದು ಮುಂತಾದ್ದಕ್ಕೆ ಸಂಬಂಧಪಟ್ಟ ಡಿಪಾಜಿಟ್‌ಗೆ ಸರಕಾರ ಗ್ಯಾರಂಟಿ ಕೊಡುವುದಿಲ್ಲ, ಸರಕಾರವೇ ಜಿಲ್ಲಾ ಬ್ಯಾಂಕನ್ನು ನಂಬದಿದ್ದರೆ ಒಬ್ಬ ಅಧಿಕಾರಿ ಅಥವ ರೈತನನ್ನು ನಂಬುವುದು ಹೇಗೆ ? ಬೇರೆಯವರು ಹೇಗೆ ನಂಬುವುದು ? ನಮ್ಮಲ್ಲಿ ಇಟ್ಟುಕೊಂಡಿರುವ ಡಿಪಾಜಿಟ್ಟಿಗೆ ಸರಕಾರ ಗ್ಯಾರಂಟಿ ಕೊಡುವುದಿಲ್ಲ, ನಮ್ಮಲ್ಲಿ 2 ಕೋಟಿ ಇದ್ದರೆ ಸರಕಾರ 5 ಲಕ್ಷಕ್ಕೆ ಗ್ಯಾರಂಟಿ ಕೊಡುವುದು, ಇದಕ್ಕೆ ಬಡ್ಡಿ ಕಡಮೆ ಮಾಡಬೇಕೆಂದು ಹೇಳುವುದು. ನಮ್ಮನ್ನು ನೀವು ನಂಬುವುದಿಲ್ಲ, ಕೆಲವು ಮಾರ್ಪಾಡು ನೀವು ಮಾಡಿಕೊಳ್ಳಬೇಕು, ಹಾಗೆ ಮಾಡಿದಾಗ ನಮಗೆ

(ಶ್ರೀ ಜಿ. ರಾಮೇಗೌಡ)

ಸ್ವಲ್ಪ ಅನುಕೂಲವಾಗುವುದು. ಸರಕಾರಕ್ಕೆ ಸಹಕಾರ ಸಂಘಗಳ ಮೇಲೆ ಮನಸ್ಸಿಲ್ಲ ಎಂಬುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಬೆಂಗಳೂರು ಡೈರಿಗೆ ಸಹಕಾರ ಸಂಘಗಳಿಂದ ಹಾಲನ್ನು ತರಿಸಿಕೊಳ್ಳಬೇಕು ಎಂದು ಲಾಲ್ ಬಹದ್ದೂರ್ ಶಾಸ್ತ್ರಿಗಳು ಕೂಡ ಹೇಳಿರುವಾಗ ಅರ್ಧ ಭಾಗ ಕೂಡ ಸಹಕಾರ ಸಂಘಗಳಿಂದ ತೆಗೆದುಕೊಳ್ಳುವುದಿಲ್ಲ. ಹೀಗಿರುವಾಗ ಮಂತ್ರಿಗಳು, ಉಪಮಂತ್ರಿಗಳು ಮತ್ತು ಕಾರ್ಯದರ್ಶಿಯವರು ಡೈರಿಯವರಮೇಲೇನು ಕ್ರಮ ತೆಗೆದುಕೊಂಡಿದ್ದಾರೆ! ಸಹಕಾರ ಸಂಘಗಳ ಹಿತರಕ್ಷಣೆ ಮಾಡಬೇಕೆಂದು ಕೋಟಿಗಟ್ಟಲೆ ಹಣ ಕೊಟ್ಟು ದನಗಳನ್ನು ತೆಗೆದುಕೊಂಡಿರುವಾಗ ಹಾಲನ್ನು ಸಹಕಾರ ಸಂಘಗಳಿಂದ ತೆಗೆದುಕೊಳ್ಳುತ್ತಿಲ್ಲ, ದನಗಳನ್ನು ತೆಗೆದುಕೊಂಡಿರುವವರಿಗೆ ಮೇವು ಹಾಕುವುದಕ್ಕೆ ಕೂಡ ಶಕ್ತಿಯಿಲ್ಲ. ಹೀಗಾದರೆ ನೀವೇನು ಸಹಕಾರ ಸಂಘಗಳನ್ನು ಕಾಪಾಡುವುದು! ನೀವು ಮಾಡಿರುವ ಸಂಘಗಳನ್ನು ನೀವೇ ಕಾಪಾಡದಿದ್ದರೆ ಬೇರೆ ಏನು ತಾನೆ ನೀವು ಮಾಡುತ್ತೀರಿ! ನಿಮಗೆ ಸಂಘಗಳನ್ನು ರಿಜಿಸ್ಟರು ಮಾಡುವುದಕ್ಕೆ ಅಧಿಕಾರವಿದೆ. ದೂರದೃಷ್ಟಿಯಿಟ್ಟು ರಿಜಿಸ್ಟರು ಮಾಡಿ ಜಿಲ್ಲಾ ಬ್ಯಾಂಕನ್ನು ಕಾಪಾಡಬೇಕು. ಜಿಲ್ಲಾ ಬ್ಯಾಂಕಿಗೆ ನೀವು ಶಕ್ತಿ ಕೊಟ್ಟಿರುವುದೇನು! ನಿಮ್ಮ ಸಹಕಾರ ಸಂಘಗಳ ಯೋಗಕ್ಷೇಮವನ್ನು ಸರಿಯಾಗಿ ನೀವು ನೋಡಿಕೊಳ್ಳಬೇಕಾದರೆ ಹಾಹಾಕಾರವೆದ್ದಾಗ ನೀವು ಮುಂದೆ ಬರಬೇಕು, ಇಲ್ಲದಿದ್ದರೆ ಸರಿಯಾಗುವುದಿಲ್ಲ. ಆದುದರಿಂದ ನಾಳೆಯಾದರೂ 210 ಹಾಲು ಮಾರಾಟದ ಸಹಕಾರ ಸಂಘಗಳೇ ನಿವೆ ಅವುಗಳಿಂದಲೇ ಬೆಂಗಳೂರು ಡೈರಿಗೆ ಹಾಲು ಸರಬರಾಜಾಗುವಂತೆ ಮಾಡಬೇಕು. ಹಾಗೆ ಮಾಡಿ ಈ ಸಂಘಗಳು ಸರಿಯಾಗಿ ಕೆಲಸಮಾಡಲು ಅವಕಾಶ ಕೊಡಬೇಕು, ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಬೇಕು, ಅವರು ಕ್ಯಾಬಿನೆಟ್ ಸಚಿವರಿರಬಹುದು, ಅವರಲ್ಲಿ ಸಹಾನುಭೂತಿ ಇರಬಹುದು, ಅವರಿಗೆ ತಿಳಿಸಬೇಕು. ಈ ಸಂಘಗಳ ಹಿತರಕ್ಷಣೆ ಮಾಡದಿರುವುದು ಮಹಾಪಾಪ. ಇಂಥ ಉದಾಹರಣೆಗಳು ಬೇಕಾದಷ್ಟಿವೆ, ಅವುಗಳ ಕಡೆ ಗಮನಕೊಡಬೇಕು. ರಿಜಿಸ್ಟರಾದ ಮಾತ್ರಕ್ಕೇ ಸಂಘಗಳು ಬೆಳೆಯುವುದಿಲ್ಲ. ಅದನ್ನು ಕಾಪಾಡುವ ಶಕ್ತಿ ನಿಮಗಿರುವುದರಿಂದ ಅದನ್ನು ಉಪಯೋಗಿಸಿ ಸಂಘಗಳು ಸರಿಯಾಗಿ ಕೆಲಸಮಾಡುವಂತೆ ಸಹಾಯ ಮಾಡಬೇಕು. ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಸಾಲ ವಸೂಲುಮಾಡಿ ಕೊಡಿಸಿ, ಹಾಲು ಸಹಕಾರ ಸಂಘಗಳಿಂದ ಬರುವಹಾಗೆ ಮಾಡಿ. ಆದಾಯ ಬಂದರೆ ಸರಕಾರಕ್ಕೆ ಬರುವುದು. ಪ್ರತಿ 3 ತಿಂಗಳಿಗೊಂದು ಸಲ ಆಡಿಟ್ ಆಗಬೇಕು, ಇದಕ್ಕೆ ಅವಕಾಶ ಮಾಡಿ ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲವಾಲ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಸಹಕಾರಿ ಡಿಮ್ಯಾಂಡನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಕೋಆಪರೇಟಿವ್ ಇಲಾಖೆ ಬಹಳ ಚೆನ್ನಾಗಿ ಕೆಲಸಮಾಡುತ್ತಿದೆ. ನಮ್ಮ ದೇಶವನ್ನು ಉದ್ಧಾರಮಾಡಬೇಕು, ಅಭಿವೃದ್ಧಿ ಮಾಡಬೇಕು ಎಂದು ಸರಕಾರ ಸಹಕಾರ ಸಂಘಗಳನ್ನು ಸ್ಥಾಪಿಸಲು ಅವಕಾಶ ಕೊಟ್ಟು ಸಹಾಯ ನೀಡಿದೆ. ಎಲ್ಲರಿಗೂ ಅನುಕೂಲವಾಗಬೇಕು ಎಂದು ಸರಕಾರ ಸೊಸೈಟಿಗಳನ್ನು ಸ್ಥಾಪಿಸಿರುವಾಗ ಕೆಲವರು ಆ ಸಂಘಗಳಲ್ಲಿ ಸೇರಿಕೊಂಡು ಅವುಗಳನ್ನು ಹಾಳುಮಾಡುತ್ತಿದ್ದಾರೆ. ಅದಕ್ಕೆ ಅವಕಾಶವಿಲ್ಲದಂತೆ ಸರಕಾರ ಬಿಗಿಯಾದ ಕಾನೂನುಮಾಡಬೇಕು. ತಪ್ಪು ಮಾಡುವವರಿಗೆ ಶಿಕ್ಷೆಮಾಡಲು ತಕ್ಕ ಕಾನೂನು ಮಾಡಬೇಕೆಂದು ವಿನಯದಿಂದ ಹೇಳುತ್ತೇನೆ. ನಾವು ನೋಡಿದಹಾಗೆ ಏನೂ ಇಲ್ಲದಿರುವವರು ಮೂರು ಸೊಸೈಟಿಗಳನ್ನು ಹಾಳುಮಾಡಿ ಒಂದು ಲಕ್ಷ ರೂಪಾಯಿ ಮನೆಮಾಡಿ ನಮ್ಮ ಕಣ್ಣು ಮುಂದೆ ತಿರುಗಾಡುತ್ತಿದ್ದಾರೆ. ನಮಗೇ ಇಲ್ಲದಿರುವ ಅವಕಾಶ ಇವರಿಗೆ ಹೇಗೆ ಬಂತು? ಇಂಥವರನ್ನು ಶಿಕ್ಷೆಗೆ ಗುರಿಮಾಡಲು ಕಾನೂನು ಮಾಡಬೇಕು. ಸರಕಾರ ಜನರಿಗೆ ಸೌಲತ್ತು ಮಾಡಬೇಕೆಂದು ಕಾನೂನುಬದ್ಧವಾಗಿ ಹಣ ಖರ್ಚುಮಾಡುವುದು. ಬಹಳ ಕೆಲಸ ಆಫೀಸುಗಳಲ್ಲಿ ಪೆಂಡಿಂಗ್ ಇದೆ, ಕೇಳಿದರೆ ಏನಾದರೂ ನೆಪ ಹೇಳುತ್ತಾರೆ. ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನಲ್ಲಿ, ಹೌಸಿಂಗ್ ಸೊಸೈಟಿಯಲ್ಲಿ ಒಂದೂ ಪೆಂಡಿಂಗ್ ಇಲ್ಲ. ಆದರೆ ತಾಲ್ಲೂಕು ಮಟ್ಟದಲ್ಲಿ ಕುಂಟುತ್ತಿದೆ. ಪ್ರೆಸಿಡೆಂಟರಲ್ಲಿ ನಿಲ್ಲುವುದು ಮತ್ತು ತಾಲ್ಲೂಕು ಮಟ್ಟದಲ್ಲಿ ಕಳ್ಳರಿದ್ದಾರೆ, ತೊಂದರೆಮಾಡುತ್ತಾರೆ. ಲಗಾಮು ಹಿಡಿದು ಸರಕಾರ ಬಿಗಿ ಮಾಡಬೇಕು. ನಿಜ ಯಾರು ಹೇಳುತ್ತಾರೆಂಬುದನ್ನು ನೋಡಿ ಇಲಾಖೆಯಲ್ಲಿ ವಿಚಾರಮಾಡಿ ನೋಡಬೇಕು. ಸಹಕಾರ ಇಲಾಖೆಯಿಂದ ಪ್ರಯೋಜನವಾಗುವುದು ಗೊತ್ತಿದೆ, ಸಿಬ್ಬಂದಿ ಬೆಳೆದಿವೆ, ಅಭಿವೃದ್ಧಿ ಕಾರ್ಯ ಎಷ್ಟೋ ಆಗಿದೆ, ಕಟ್ಟಡವಾಗಿದೆ, ಎಲ್ಲಾ ರೀತಿಯ ಅನುಕೂಲವಾಗಿದೆ. ಚೆನ್ನಾಗಿ ನಡೆಕೊಂಡುಹೋದರೆ ಸರಕಾರ ಭದ್ರವಾಗಿರುತ್ತದೆ. ನಾವೇ ಕಳ್ಳರಾದರೆ ಸರಕಾರ ಹೇಗೆ ಭದ್ರವಾಗಿರುವುದು? ಯಾರು ಸರಿಯಾಗಿ ಕೆಲಸಮಾಡುತ್ತಾರೆ, ಯಾರು ಮಾಡುತ್ತಿಲ್ಲ ಎಂಬುದನ್ನು ಪರೀಕ್ಷೆಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಮಾಡಬೇಕು.

5-30 P.M.

ಸರ್ಕಾರದವರು ಬೇಕಾದಷ್ಟು ದುಡ್ಡು ಖರ್ಚು ಮಾಡುತ್ತಿದ್ದಾರೆ, ದುಡ್ಡು ಕೊಟ್ಟಿಲ್ಲ ಎಂದು ನಾನು ಎಂದಿಗೂ ಅಂದಿಲ್ಲ. ನಡುವೆ ಕಳ್ಳರು ಸೇರಿಕೊಂಡು ನಮ್ಮ ಕಾಂಗ್ರೆಸ್‌ನ್ನು, ಮಿನಿಸ್ಟರುಗಳನ್ನು ಬಯ್ಯುವುದಕ್ಕೆ ಶುರು ಮಾಡುತ್ತಾರೆ, ಈ ರೀತಿ ಆಗದಂತೆ ಡಿಪಾರ್ಟ್‌ಮೆಂಟಿನವರು ಚನ್ನಾಗಿ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಮೀಟಿಂಗ್ ಕರೆದು ಸಂಬಂಧಪಟ್ಟ ದೊಡ್ಡ ಅಧಿಕಾರಿಗಳಿಗೆ, ಸಣ್ಣಪುಟ್ಟ ಅಧಿಕಾರಿಗಳಿಗೆ ಕೆಲಸಕಾರ್ಯಗಳನ್ನು ಭದ್ರವಾಗಿ ನಡೆಸಬೇಕೆಂದು ತಿಳಿಸಬೇಕು. ಆ ರೀತಿ ಅವರು ಮಾಡದೇಹೋದರೆ ತಕ್ಷಣ ಅವರನ್ನು ಸಸ್ಪೆಂಡ್ ಮಾಡುತ್ತೇವೆ ಎಂದರೆ ಸರಕಾರ ಭದ್ರವಾಗಿ ನಡೆಯುತ್ತದೆ. ಸುಮ್ಮಸುಮ್ಮನೆ ಕಳ್ಳರು ಸೇರಿಕೊಂಡು ಅದು ಹಾಗೆ, ಇದು ಹೀಗೆ ಎಂದರೆ ಒಳ್ಳೆಯದಲ್ಲ, ಕಾಂಗ್ರೆಸ್‌ನ್ನು ಬಯ್ಯುವುದು ಸರಿಯಲ್ಲ ಎಂದು ಹೇಳುತ್ತೇನೆ.

ಅಧ್ಯಕ್ಷರೇ, ಹರಿಜನರ ಹೌಸಿಂಗ್ ಸೊಸೈಟಿಗೆ ಮೂರೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಇನ್ನೂ ಮೂರೂವರೆಕೋಟಿ ರೂಪಾಯಿ ಸಾಲಾ ಕೇಳಿದ್ದೇವೆ. ಅದನ್ನು ತೀವ್ರವಾಗಿ ಮಂಜೂರು ಮಾಡಬೇಕೆಂದು ಹಣಕಾಸಿನ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ ನಮ್ಮ ಹರಿಜನರು ಇನ್ನೂ ಬಹಳ ಜನರು ಇದ್ದಾರೆ ಇಷ್ಟೇ ಜನರು ಅಂತ ತಿಳಿದುಕೊಳ್ಳಬೇಡಿ, ಅವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಸೌಲಭ್ಯಗಳನ್ನು ತಾವು ಮಾಡಿಕೊಡಬೇಕು. 200 ರೂಪಾಯಿನ ಮರಗಳನ್ನು ಮುಫತ್ತಾಗಿ ಕೊಡುತ್ತೇವೆ ಎಂದು ಹೇಳುತ್ತೀರಿ. ಎಲ್ಲಿ ಬಿ.ಡಿ.ಓ ಅವರ ಇರುತ್ತಾರೆ, ತಾಲ್ಲೂಕು ಬೋರ್ಡ್ ಚೇರ್ಮನ್‌ರು ಇರುತ್ತಾರೆ ಅವರ ಮುಖಾಂತರ ಹರಿಜನರಿಗೆ ಈ ಸೌಲಭ್ಯ ಒದಗಿಸಿಕೊಡಬೇಕೆಂದು ಪದೇ ಪದೇ ಸರ್ಕಾರಕ್ಕೆ ಹೇಳಿದ್ದೇನೆ. ಇದನ್ನು ನೆನಪಿನಲ್ಲಿಟ್ಟುಕೊಂಡು ಮಾನ್ಯ ಹಣಕಾಸಿನ ಮಂತ್ರಿಗಳು ಮಾಡಿಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

† **Sri V. N. PATIL** (Humnabad).—Sir, I wish to oppose this Demand as this Demand is one of the demands which pertains to a Department which is more embedded on corrupt foundation rather than on philanthropic attitude.

The Community Development is a strange thing. Some hospitals are being run by the N. E. S. or the Community Development Department. The composition and functioning of the Hospitals could be compared to an orphan child under a guardian. I shall quote the instance of the Makkaleri Primary Health Centre run by the N. E. S. or the C. D. department. Four years back Electric wiring was done to the Hospital; the entire village has been electrified; but still no service connection is given to the Hospital. We have written to the concerned officials time and again. Still for the last four years, no service connection is given. When the Medical Officer is approached, he says that he is helpless because the Hospital is directly under the Community Development Department. This is one of the instances to show the sorry state of affairs in the Commuity Development Department.

Mr. DEPUTY SPEAKER.—The hon. Member must conclude soon.

ಶ್ರೀಮತಿ ನಾಗಮ್ಮ.—ಮಾನ್ಯ ಸದಸ್ಯರು ಕನ್ನಡದಲ್ಲಿ ಭಾಷಣ ಮಾಡಬೇಕು.

Sri V. N. PATIL.—I am sorry Smt. Nagamma has been interrupting and insisting that I should speak in Kannada. The Chair should ask her to keep quiet. I will give the gist of my speech to her at the end.

Another unfortunate thing about this Community Development and National Extension Scheme is that in the name of Community Development, individual, private and personal advancement of the so-called of

(SRI V. N. PATIL)

the Congress leaders is becoming the order of the day. In this connection, let me bring one or two instances to the notice of the Government. Under the Community Development Scheme, bullocks are expected to be supplied to the poor Harijan families in rural areas. I will give you facts and figures to show that out of 100 bullocks, hardly two are working in the fields and the rest could be found in the houses of Patels, Patwaris and Shanubhogs. Is this community development? The vested interests are usurping the concessions and help given to the poor people. When will this be put an end to?

Let me come to the Co-operation Department. Previously we used to hear that the Public Works and Police Departments had become hot beds of corruption. Now it is seen that the Co-operation Department also is not lagging behind any of those two Departments. There are various defects in the working of the Department. The first is, the objectives and real motivies of the Department are not properly propagated. The Co-operative Union which actually supplies some literature about the utility of the Department, remains at the Race Course Road and does precious little. It does service to nobody except perhaps to some authors and writers who bring out in black and white some publications. There is the Co-operative Societies Act and regulations and they can be adopted. Instead of that the Co-operative Union is publishing pamphlets full of figures and articles of purely academic and literary interest at a very heavy cost, at least five times costlier than the normal cost. It is sheer criminal waste of public money.

Now I will touch another point about the Primary Land Development Bank. Money is given for sinking wells. It is only Congressmen or those who work to promote the interests of the Congress Party that get this money. I have concrete instances with me. A boy of 21 years, who happens to be a farmer and who loves hard work, wanted to dig a well and when he put a dynamite to a hard rock, it exploded and unfortunately he lost his right leg in the accident. I know the boy's name also. He has got his aged father and mother and two sisters. The well had been dug up to 21 feet. He never wanted to invite any Minister to inaugurate it. He approached the Chairman of the Primary Land Development Bank, who incidentally happened to be a Congressman, for help. The Chairman scolded him saying, "With what face have you come to me when you did not vote for the Congress Party in the elections?" That Chairman had not that ordinary human sympathy towards a poor fellow who had lost one of his legs. As a Communist, I hesitate to say how he would have been dealt with. He would have been shot in public street. We are said to be heading towards democratic socialism! Is this socialism? The Chairman of the Primary Land Development Bank did not grant loan to this poor fellow. Apart from that, the Chairman of Humnabad Taluka has a peculiar notion of loan distribution. A minimum of 10 per cent is his commission and out

of the well-sinking loan of Rs. 5,000, unless he has a commission of Rs 500, no loan papers would be forwarded to Bangalore. This is the practice. If this is the case, then 'Co-operation' is for Ali Baba and forty thieves and not for the common people, honest people.

I shall now come to the co-operative sugar factory in our district. That is suffering from birth pangs. An order was placed with one firm at Poona for machinery costing Rs. 1,18,00,000. The Pandavapura Sugar Factory also placed an order with the same firm for the same machinery and secured 5 per cent commission; it could be found in the sugar factory's accounts books. But in the case of the Bidar Sugar factory where that commission vanished nobody knows; it is nowhere to be found in the accounts books of that factory. When we contacted the officials they said that they had positively given that commission and that that was their practice. This commission comes to Rs. 7 lakhs. Whether Managing Directors swallowed it or whether the Ex-Chairman or the present Chairman swallowed it is not known but it is a common rumour in Bidar District that these forty thieves have swallowed that amount.

Coming to the jowar distribution scheme, one rich man had jowar. He wanted to sell it at Rs. 120 per quintal. The rate did not go up to that level. So, he stored it for 3 years and it became rotten. Who is going to give patronage to that rich man? He found a good patron in the chairman of the TAPCMS, Bidar. Best of jowar was taken from the TAPCMS, Bidar and in exchange for that he was prepared to give 600 bags of worm-eaten jowar which was supplied to the people of Bidar. The Municipal President of Bidar seized several bags and brought it to the notice of the Commissioner. We were the unfortunate witnesses to it at the Food Committee meetings. So far. these criminals are not booked. May be, one or two clerks might have been booked. That is the situation in your co-operative movement. I am told that the Chairman of that society makes unaccountable money out of wrong deals. Five years ago he had not even a five-rupee note in his purse and today such a person gets patronage. We want good jowar to be supplied to the people of Bidar. You are taking good jowar in the name of levy and legalising this blackmarket and supplying them with rotten and the worst kind of jowar. Even Hitler would have been ashamed of this deal and even Goebells would have been ashamed to propagate such an idea of co-operation. This is no co-operation; this is testing the patience of the masses. If you go on doing these things, what will be your political future after 1972? You will be nowhere.

Coming to another society, namely the wholesale Co-operative Stores, Bidar, the President of this society was pleased to purchase one lorry for Rs. 60,0 0. The amount earned by way of income from that lorry was Rs. 60,000 and the amount spent on it for repairs was Rs. 62,000. The Chairman of this society happens to be an Advocate, a personal friend of mine, who has already constructed three houses within a period of three years. If this is co-operation, please do not co-operate

(SRI V. N. PATIL)

with such co-operators. Nobody is opposed to Co-operation, at any rate not the Communists or Socialists who believe in socialism. We want to further the casue of socialism not by piecemeal methods. Don't be proud of the wrong doings of your people. Take the strongest possible action if you have still got conscience left in you. That is my challenge to you.

† ಶ್ರೀ ಎ. ಮುನಿಯಪ್ಪ (ಬಾಗೆಪಲ್ಲಿ ರಿಜರ್ವ್).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡುಗಳನ್ನು ನಾನು ಸ್ವಾಗತಿಸುತ್ತಾ ಒಂದರೆಡು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ.

ಈ ಒಂದು ಸಹಕಾರ ತತ್ವಗಳ ಆಡಳಿತ ನಮ್ಮ ಇಂಡಿಯಾ ದೇಶದಲ್ಲಿ ಮುಂದುವರಿಯಬೇಕು ಎಂಬ ಉದ್ದೇಶ ಏನಿದೆ, ನಮ್ಮ ರಾಜ್ಯಸರ್ಕಾರದ ಉದ್ದೇಶ ಕೂಡ ಅದೇ ಆಗಿದೆ. ಆ ಉದ್ದೇಶ ಏನೋ ಒಳ್ಳೆಯದೆ. ಆದರೆ ಅದೇನು ಕಾರಣದಿಂದಲೋ ಅಥವಾ ಆ ಕಾನೂನಿನಲ್ಲಿ ಏನು ಒಂದು ಲೋಪದೋಷವಿದೆಯೋ ಈ ಸಹಕಾರ ತತ್ವದಿಂದ ದೇಶದಲ್ಲೆ ಅಸಹಕಾರವೇ ಹೆಚ್ಚಾಗಿ ಬೆಳೆಯುತ್ತಿದೆ. ಆದರೆ ನಮ್ಮ ಶ್ರೀ ನಾಡಗೌಡರ ಅಡ್ಮಿನಿಷ್ಟ್ರೇಷನ್ನಿನಲ್ಲಿ ಇವುಗಳ ಆಡಳಿತ ಒಳ್ಳೆಯ ಸ್ಥಿತಿಯಲ್ಲಿ ನಡೆಯಬಹುದು ಎಂದು ನಾವೆಲ್ಲರೂ ಭಾವಿಸಿದ್ದೆವು. ಆದರೆ ಅದೇಕೋ ಬದಲಾಯಿತು. ತೆಲುಗಿನಲ್ಲಿ ಒಂದು ಗಾದೆ ಇದೆ. ''ದೊಂಗಲು ದೋಪಿಡಿ ಅಯ್ಯಿಂದಿ'' ಎಂಬುದಾಗಿ ಅಂದರೆ ಈ ಸಹಕಾರ ಸಂಸ್ಥೆಗಳು ಕಳ್ಳರು ಸೇರಿಕೊಳ್ಳುವುದಕ್ಕೆ ಒಂದು ಒಳ್ಳೆಸ್ಥಾನಗಳಾಗಿವೆ. ಕೆಲವು ಸಹಕಾರ ಸಂಸ್ಥೆಗಳಲ್ಲಿ ಪ್ರತಿ ಒಂದು ವರ್ಷವೂ ಒಂದು ಜನರಲ್‌ಬಾಡಿ ಮೀಟಿಂಗನ್ನು ಮಾಡುತ್ತಾರೆ. ಅದರಲ್ಲಿ ಆಡಿಟರು ಕೊಟ್ಟಿರತಕ್ಕ ವರದಿಯನ್ನು ಚರ್ಚೆ ಮಾಡುತ್ತಾರೆ. ಅದಕ್ಕೆ ತಕ್ಕ ಸಮಾಧಾನ ಏನೋ ಹೇಳುತ್ತಾರೆ. ಆದರೆ ಅದರ ಪರಿಸಮಾಪ್ತಿ ಅಲ್ಲಿಗೆ ಮುಗಿದಂತೆ ಆದರೆ ಆ ಆಡಿಟರು ತನ್ನ ವರದಿಯಲ್ಲಿ ಪ್ರತಿವರ್ಷವೂ ಇಂತಿಂಥ ಸೊಸೈಟಿಯಲ್ಲಿ ಇಷ್ಟು ಹಣ ದುರುಪಯೋಗವಾಗಿದೆ ಎಂದು ಖಚಿತವಾಗಿ ಹೇಳಿದ್ದರೂ ಅದರ ಬಗ್ಗೆ ಸರ್ಕಾರದವರೇನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಆದರೆ ಈ ಜನರಲ್‌ಬಾಡಿ ಮೀಟಿಂಗ್‌ಗಳು ನಾಮಕಾವಸ್ಥೆಯೆಂದು ನಾನು ತಿಳಿದುಕೊಂಡಿದ್ದೇನೆ. ಆಡಿಟರ್ಸ್ ಏನು ಹೇಳಿದರೂ ಕೂಡ ಮುಂದಿನವರ್ಷದ ಜನರಲ್‌ಬಾಡಿ ಮೀಟಿಂಗ್‌ನಲ್ಲಿ ಅದೇ ಆಡಿಟ್ ರಿಪೋರ್ಟ್ ಇರುತ್ತದೆ. ಆದ್ದರಿಂದ ಈ ಆಡಿಟ್ ರಿಪೋರ್ಟ್ ವಿಚಾರದಲ್ಲಿ ಸರ್ಕಾರದವರು ಒಂದು ವ್ಯವಸ್ಥೆ ಮಾಡದೇ ಇದ್ದರೆ ಖಂಡಿತವಾಗಿ ಈ ದೇಶ ಉಳಿಯುವುದಿಲ್ಲ. ಈಗ ಈ ಮಾನ್ಯ ಸಭೆಯ ಆ ಕಡೆ, ಈ ಕಡೆಯ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ. ಅಲ್ಲಿನ ಲೋಪದೋಷಗಳು ಸರಿಹೋಗಿವೆಯೆಂದು ಅನೇಕರು ಹೇಳುತ್ತಿದ್ದಾರೆ. ನಿಮ್ಮ ಒಂದು ಸಹಕಾರತತ್ವದ ಬುನಾದಿ ಸರಿಯಾಗಿರಬೇಕೆಂದು ಹೇಳುತ್ತಿದ್ದೇನೆ. ಏಕೆಂದರೆ ಅದರ ತತ್ವವನ್ನು ಸರಿಯಾಗಿ ಪರಿಪಾಲನೆ ಮಾಡುತ್ತಾ ಇಲ್ಲ. ಅದಕ್ಕೆ ಒಂದಲ್ಲ, ಒಂದು ನಿದರ್ಶನ ಇದೆ. ಮೆಜಸ್ಟಿಕ್‌ನಲ್ಲಿ 4 ಅಣೆಯು ಒಂದು ಫೌಂಟೆನ್‌ಪೆನ್ ಮಾರುತ್ತಾರೆ. ಅದನ್ನು ಯಾರಾದರೂ ಕಳ್ಳತನಮಾಡಿದರೆ ಪೋಲೀಸಿನವರು ಅವನನ್ನು ಹಿಡಿಯುತ್ತಾರೆ. ಅವನಿಗೆ 3 ತಿಂಗಳು ಸಜಾ ವಿಧಿಸುತ್ತಾರೆ. ಲಕ್ಷಗಟ್ಟಲೆ ತಿನ್ನುವವರು ರಾಜಾರೋಷವಾಗಿ ಹಾಗೆಯೇ ಓಡಾಡಿಕೊಂಡು ಇರುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಕೋಲಾರ ಡಿಸ್ಟ್ರಿಕ್ಟ್‌ಬ್ಯಾಂಕ್‌ನಲ್ಲಿ ಒಬ್ಬ ಮ್ಯಾನೇಜರ್ 97 ಸಾವಿರ ರೂಪಾಯಿಗಳನ್ನು ತಿಂದು 2 ವರ್ಷಗಳವರೆಗೂ ರಾಜನಾಗಿ ಓಡಾಡುತ್ತಾ ಇದ್ದಾನೆ. ಚಿನ್ನದ ಗಣಿಯಲ್ಲಿ ಒಬ್ಬ ಸೆಕ್ರೆಟರಿ ಒಂದು ಲಕ್ಷ 60 ಸಾವಿರ ರೂಪಾಯಿಗಳನ್ನು ತಿಂದಿದ್ದಾನೆ. ಏನು ಮಾಡಿದಿರಿ? ಚಿಕ್ಕಬಳ್ಳಾಪುರದ ಮಾರ್ಕೆಟಿಂಗ್ ಸೊಸೈಟಿಯಲ್ಲಿ 1 ಲ 81 ಸಾವಿರ ರೂಪಾಯಿಗಳನ್ನು ದುರುಪಯೋಗ ಮಾಡಿದ್ದಾರೆಂದು ಆಡಿಟ್ ರಿಪೋರ್ಟಿನಲ್ಲಿ ಬಂದಿದೆ. ಈ ವಿಚಾರವನ್ನು ಸುಮಾರು 3 ವರ್ಷಗಳಿಂದ ಮಾನ್ಯ ಶ್ರೀ ಪುಟ್ಟಸ್ವಾಮಿಯವರಿಗೂ ನಾವು ಹೇಳುತ್ತಿದ್ದೇವೆ. ಅವರೂ ಕೇಳುತ್ತಿದ್ದಾರೆ. ಇನ್ನು ಇದರ ಬಗ್ಗೆ ಏನು ಮಾಡಬೇಕೋ ಗೊತ್ತಿಲ್ಲ. ಮಾನ್ಯ ಶ್ರೀ ಬಿ. ಎಲ್. ಗೌಡ ಮತ್ತು ಶ್ರೀ ಪಿ. ಎಂ. ನಾಡಗೌಡ ಅವರು ಈ ಸಹಕಾರ ತತ್ವದಲ್ಲಿ ಏನೂ ಉಳಿಯುವುದಿಲ್ಲವೆಂದು ಕ್ಲೋಸಿಂಗ್ ಫಂಕ್ಷನ್ನಿಗೆ ಬಂದಿದ್ದಾರೆ ಎಂದು ಕಾಣುತ್ತದೆ ಆದ್ದರಿಂದ ನನ್ನ ಸಲಹೆಯೇನು ಅಂದರೆ, ಕರ್ನಾಟಕದ ಶ್ರೀ ಪಿ. ಎಂ. ನಾಡಗೌಡ ಅವರು ಹಳೆಯ ಮೈಸೂರಿಗೆ ಬರಲಿ, ಹಳೆಯ ಮೈಸೂರಿನ ಶ್ರೀ ಬಿ. ಎಲ್. ಗೌಡ ಅವರು ಕರ್ನಾಟಕಕ್ಕೇ ಹೋಗಲಿ.

ಶ್ರೀ ವಿ. ಎಲ್. ಶಿವಪ್ಪ.—ಇಬ್ಬರೂ ಒಂದೇ ಕಡೆ ಸೇರಬಾರದೆಂದು ನಿಮ್ಮ ಅಭಿಪ್ರಾಯವೋ ?

ಶ್ರೀ ಎ. ಮುನಿಯಪ್ಪ.—ಏಕೆಂದರೆ ಇಬ್ಬರೂ ಭಾಗಮಾಡಿಕೊಂಡರೆ ಅದನ್ನು ಚೆನ್ನಾಗಿ ಮುಚ್ಚಿಕೊಂಡು ಬರುವುದಕ್ಕೆ ಸಾಧ್ಯವಾಗುತ್ತದೆ. ಈ ಸಹಕಾರ ತತ್ವದಲ್ಲಿ ಈಗ ಏನೊಂದು ಅಕ್ರಮ ನಡೆಯುತ್ತಿದೆಂಬುದನ್ನು ನೋಡಬೇಕು. ದೇವನಹಳ್ಳಿ ತಾಲ್ಲೂಕು ಬಾಗಲೂರು ಗ್ರಾಮದ ಹರಿಜನರ ವಿಚಾರದಲ್ಲಿ ಅಲ್ಲಿನ ಸೆಕ್ರೆಟರಿಗಳು ಹರಿಜನರ ಹತ್ತಿರ ರಿಕಾರ್ಡ್ಸ್ ಬಿಲ್ಡಪ್ ಮಾಡಿ 3 ಕಾಸೂ ಸಿಗಲಿಲ್ಲವೆಂದು ಹರಿಜನರ ಮನೆಗೆ ಜಫ್ತಿ ಹೋಗಿದ್ದಾರೆ. ಇದು ನ್ಯಾಯವೇ, ಇದು ಸಹಕಾರ ತತ್ವವೇ, ನಮ್ಮಲ್ಲಿ ಬಾಗೇಪಲ್ಲಿ ಮಾರ್ಕೆಟಿಂಗ್ ಸೊಸೈಟಿ ಮತ್ತು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಎಂದು ಇದೆ. ನಿಮ್ಮ ಅಡ್ಮಿನಿಸ್ಟ್ರೇಷನ್ ಹೇಗಿದೆ ಎಂದರೆ, ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಸೆಕ್ರೆಟರಿಯವರನ್ನು ವರ್ಗಮಾಡಿ 4 ತಿಂಗಳು ಆದರೂ ಅವರನ್ನು ಇನ್ನೂ ರಿಲೀವ್ ಮಾಡಲಿಲ್ಲ. ನೀವು ಏನು ಮಾಡುತ್ತೀರಿ? ಅಡ್ಮಿನಿಸ್ಟ್ರೇಷನ್ ಅಂದರೆ ಒಂದು ಇತಿಮಿತಿ ಇರಬೇಕು. ಯಾವ ಮನುಷ್ಯನೇ ಆಗಲೀ ಷೇರುಗಳನ್ನು ಜಾಸ್ತಿ ತೆಗೆದುಕೊಂಡರೆ, ಸರ್ಕಾರದಿಂದ ಅನುಕೂಲ ಜಾಸ್ತಿ ಬರುತ್ತದೆ. ಕೆಲವರು ಷೇರುಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ನಾನು ಮಾನ್ಯ ಮಂತ್ರಿಗಳಿಗೂ ಮತ್ತು ಮಾನ್ಯ ಉಪಮಂತ್ರಿಗಳಿಗೂ ಹೇಳಿದ್ದೇನೆ. ಷೇರುಗಳನ್ನು ನಾವು ಕಟ್ಟುತ್ತೇವೆ ಎಂಬುದಾಗಿ ರೈತರು ಮುಂದೆ ಬಂದರೇ ಬೇಡ ಇನ್ನೂ ರಿಕಾರ್ಡ್ಸ್ ಬಿಲ್ಡಪ್ ಮಾಡಬೇಕು ಎಂಬುದಾಗಿ ರಿಜಿಸ್ಟ್ರಾರವರು ಹೇಳುತ್ತಿದ್ದಾರೆ. ಇಂತಿಂಥ ಸೊಸೈಟಿಯಲ್ಲಿ ಇಂತಹ ಅಕ್ರಮಗಳು ನಡೆಯುತ್ತಿವೆ ಎಂಬುದಾಗಿ ಮಾನ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಅವರು ಹಳ್ಳಿಗಳಿಗೆ ತಿಂಗಳಿಗೊಂದುಸಾರಿ ಭೇಟಿಗಾಗಿ ಹೋಗಿ ಭೇಟಿ ಮಾಡಿಕೊಂಡು ಬರುತ್ತಾರೆ. ನಾವು ಏನು ಹೇಳಿದ್ದೇವೋ ಅದಕ್ಕೆ ವಿರುದ್ಧವಾಗಿ ಅಧಿಕಾರಿಗಳಿಂದ ಕೆಲಸಗಳನ್ನು ಮಾಡಿಸುತ್ತಾರೆ. ಆದ್ದರಿಂದ ಅಡ್ಮಿನಿಸ್ಟ್ರೇಷನ್ ಬಹಳ ಬಿಗಿಯಾಗಿ ಆಗಬೇಕು ನಮ್ಮ ಮಾನ್ಯ ಶ್ರೀ ನಾಡಗೌಡ ಸಾಹೇಬರಿಗೆ ಹೋದ ಅಸೆಂಬ್ಲಿಯಲ್ಲಿಯೇ ಹೇಳಿದ್ದೇನೆ. ಗುಡಿಬಂಡೆ ತಾಲ್ಲೂಕಿನ ಹರಿಜನ ಸೊಸೈಟಿಯಲ್ಲಿ ಅಲ್ಲಿನ ಸೊಸೈಟಿಯ ಇನ್‌ಸ್ಪೆಕ್ಟರ್ 2 ಸಾವಿರ ರೂಪಾಯಿಗಳನ್ನು ತಿಂದು ಈಗ ಹರಿಜನರಿಗೆ ಅಲ್ಲಿ ಬಟ್ಟೆಬರೆಗಳೇ ಇಲ್ಲ. ಈಗ ಅಲ್ಲಿಗೆ ಬೇರೆಯವರನ್ನು ಹಾಕಿದ್ದಾರೆ. ಅವರಿಗೆ ಚಾರ್ಜ್ ಕೊಡಿಸಿ ಎಂದು ನಾನು 6 ತಿಂಗಳುಗಳಿಂದಲೂ ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ. 40 ಸಾವಿರ ರೂಪಾಯಿಗಳು ಹೌಸಿಂಗ್‌ಬೋರ್ಡ್ ದುಡ್ಡು, ಷೆಡ್ಯೂಲ್ಡ್ ಕ್ಯಾಸ್ಟ್ ದುಡ್ಡು ಆ ಸೊಸೈಟಿಯಲ್ಲಿದೆ. ಮೂರು ದಿವಸಗಳಲ್ಲಿ ನಮಗೆ ರಿಪೋರ್ಟ್ ಮಾಡಬೇಕೆಂದು ಮಾನ್ಯ ಮಂತ್ರಿಗಳು ರಿಜಿಸ್ಟ್ರಾರ್ ಅವರಿಗೆ ಹೇಳಿದರು. ಇನ್ನೂ 3 ದಿನಗಳು ಆಗಲಿಲ್ಲವೇ? ಏಕೆ ಈ ರೀತಿ ಮಾಡುತ್ತಾರೆ? ಈ ರೀತಿಯಾಗಿ ಸೊಸೈಟಿಗಳನ್ನು ಮುಂದುವರಿಸಿದರೆ ಖಂಡಿತವಾಗಿ ನಮಗೆ ರಕ್ಷಣೆ ಸಿಗುತ್ತದಯೇ? ಬೇಕಾದಷ್ಟು ಸೊಸೈಟಿಗಳನ್ನು ಈಗ ಸ್ಥಾಪನೆಮಾಡುತ್ತಿದ್ದಾರೆ. ಮಂತ್ರಿಗಳಾಗಿದ್ದರೂ ಅವರು ಅನೇಕ ಸಂದರ್ಭಗಳಲ್ಲಿ ಕೇವಲ ಒಂದು ಸಾವಿರ ರೂಪಾಯಿಗಳ ಚೆಕ್ಕನ್ನು ಬರೆಯುವುದಕ್ಕಾಗುವುದಿಲ್ಲ. ಸಹಕಾರ ಸಂಘದ ಕಾರ್ಯದರ್ಶಿ ಐದಾರು ಸಾವಿರ ರೂಪಾಯಿಗಳನ್ನು ತನ್ನ ಜೇಬಿನಲ್ಲಿ ಇಟ್ಟುಕೊಳ್ಳಬಹುದೇ? ಸಹಕಾರ ಸಂಘದ ಡೆಫಿನಿಷನ್ ಈ ರೀತಿ ಇದೆ. ''ಸ'' ಅಂದರೆ, ಸರ್ಕಾರ ಅಥವಾ ಸಾರ್ವಜನಿಕರ, ''ಹ'' ಅಂದರೆ, ಹಣವನ್ನು, ''ಕಾ'' ಅಂದರೆ, ಕಾಳಸಂತೆಕೋರರು ತಿಂದು, ''ರ'' ಅಂದರೆ, ರಾಜಾರೋಷವಾಗಿ, ''ಸಂ'' ಅಂದರೆ ಸ್ವಾಹಾಕಾರಮಾಡುವುದರಲ್ಲಿ, ''ಘ'' ಅಂದರೆ ಘಟ್ಟಿಗರು ಎಂದು ಅರ್ಥಮಾಡಬಹುದು. ನಾನು ಈ ರೀತಿಯಾಗಿ ಅರ್ಥಮಾಡಿಕೊಂಡಿದ್ದೇನೆ. ರಾಜಕೀಯದೃಷ್ಟಿಯಲ್ಲಿ ಒಂದೇ ತಾಲ್ಲೂಕಿನಲ್ಲಿ ಎರಡು ಸೊಸೈಟಿಗಳನ್ನು ಮಾಡುವುದು, ಒಂದೇ ಊರಿನಲ್ಲಿ 2 ಸೊಸೈಟಿಗಳನ್ನು ರಿಜಿಸ್ಟರ್ ಮಾಡುವುದು, ಖಂಡಿತವಾಗಿ ದೇಶಕ್ಕೆ ಒಳ್ಳೆಯದಲ್ಲ. ಚಿಕ್ಕಬಳ್ಳಾಪುರದ ಹೌಸಿಂಗ್ ಸೊಸೈಟಿ ತೆಗೆದುಕೊಂಡರೆ ಅಲ್ಲಿ ಸದಸ್ಯರಿಗೆ ಸಾಲ ಕೊಡುತ್ತಾರೆ. ಅಲ್ಲಿ ಸಾಲ ತೆಗೆದುಕೊಂಡಿರುವವರ ತಾತ ಏನಾದರೂ ಸಾಲ ಮಾಡಿದ್ದರೆ, ಆ ಸಾಲ ಇನ್ನೂ ಬಾಕಿ ಇದ್ದರೆ ಅದಕ್ಕೆ ಬಡ್ಡಿಯನ್ನು ಅವರಿಂದ ವಸೂಲು ಮಾಡುತ್ತಾರೆ. ಇದು ಸರಿಯಲ್ಲ. ಆದರೆ ಮಾನ್ಯ ಶ್ರೀ ರಾಮೇಗೌಡರು ಸುಮಾರು 3 ವರ್ಷಗಳಿಂದಲೂ ಚಿಕ್ಕಬಳ್ಳಾಪುರದಲ್ಲಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಪ್ರೆಸಿಡೆಂಟ್‌ರವರು ಹಾಗೂ ಸದಸ್ಯರು ಎಲ್ಲಾ ಕಾಂಗ್ರೆಸ್ಸಿನವರು ಎಂಬುದಾಗಿ ಹೇಳಿದರು. ಹಾಗಿದ್ದರೆ, ಕಾಂಗ್ರೆಸ್ಸಿನವರು ಅಲ್ಲದೇ ಇರುವವರು ಅಲ್ಲಿ ಇಲ್ಲವೇ? ಒಂದುವೇಳೆ ಜಮೀನು ಆಧಾರ ಮಾಡದೇ ಇದ್ದರೆ, ಕಾನೂನುಬದ್ಧವಾಗಿ ವ್ಯವಹಾರ ಮಾಡದೇ ಇದ್ದರೆ, ಅವರ ಮನೆಯ ಹತ್ತಿರ ಹೋಗಿ, ಚಪ್ಪಾಳೆ ಹೊಡೆಸುವುದು, ತಮಟೆ ಹೊಡೆಸುವುದು, ಡಂಗುರ ಬಾರಿಸುವುದು—ಅಲ್ಲದೆ ಪೋಲೀಸಿನವರನ್ನು ಕರೆದುಕೊಂಡು ಹೋಗಿ ಗಲಾಟೆಮಾಡಿಸುವುದು-ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಸರಿಯಾದ ರೀತಿಯಲ್ಲಿ ಅಧಿಕಾರಿಗಳು ನಡೆಯಬೇಕು.

ಇನ್ನು ರೆವಿನ್ಯೂ ಮಂತ್ರಿಗಳಾದ ಮಾನ್ಯ ಶ್ರೀ ರಾಚಯ್ಯನವರು ಪ್ರತಿಯೊಂದು ಬಾವಿಗೂ ಪಂಪುಸೆಟ್ ಕೊಡುವಾಗ ಸೇಕಡ 15 ರಷ್ಟು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಮೀಸಲಾಗಿಡಬೇಕೆಂದು

(ಶ್ರೀ ಎ. ಮುನಿಯಪ್ಪ)

ಆರ್ಡರ್ ಮಾಡಿರುವುದು ಇದೆ. ಅದರ ಮೇಲೆ ಅವರು ನಿಗಾ ಕೊಟ್ಟಿದ್ದಾರೆಂದು ನಾನು ತಿಳಿಯುತ್ತೇನೆ. ಹರಿಜನರ ವಿಚಾರ ಪರಿಶ್ರಮವನ್ನು ಅವರು ಚೆನ್ನಾಗಿ ತಿಳಿದುಕೊಂಡಿದ್ದಾರೆಂದು ನನಗೆ ಕಾಣುತ್ತದೆ. ಒಟ್ಟಿನಲ್ಲಿ ಹರಿಜನರ ವಿಚಾರಗಳಲ್ಲಿ ಇನ್ನೂ ಹೆಚ್ಚಿಗೆ ದಯೆ ಇರಬೇಕು. ಹೌಸಿಂಗ್ ಬೋರ್ಡಿನಲ್ಲಿ ಹರಿಜನರಿಗೆ ಪ್ರಾತಿನಿಧ್ಯವನ್ನು ಒದಗಿಸುವುದಕ್ಕೆ ಸರ್ಕಾರದವರು ಸೂಕ್ತ ವ್ಯವಸ್ಥೆ ಮಾಡುತ್ತಾರೆಂದು ಹೇಳಿದ್ದರೂ ಅದನ್ನು ಇನ್ನೂ ಮಾಡುತ್ತಾ ಇಲ್ಲ. ಈ ಒಂದು ವಿಚಾರದಲ್ಲಿ ನೀವು ಒಂದು ವರ್ಷದಿಂದ ಏನು ಮಾಡಿದ್ದೀರಿ ? ಇದರ ಬಗ್ಗೆ ನಮ್ಮ ಮಾನ್ಯ ನಾಡಗೌಡರು ಮತ್ತು ಬಿ. ಎಲ್. ಗೌಡರು ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ನಮ್ಮ ಬಿ. ಎಲ್. ಗೌಡರು, ಕೋಪರೇಟಿವ್ ಆಡಳಿತದಲ್ಲಿ ಪರಿಣತರು, ಆದರೆ ಅವರು ಚಕ್ರವ್ಯೂಹದಲ್ಲಿ ಅಭಿಮನ್ಯು ಸಿಕ್ಕಿದ ಹಾಗೆ ಇದ್ದಾರೆ. ಅವರು ಈಚೆಗೆ ಬರಬೇಕಾದರೆ ಏನು ಮಾಡಬೇಕು ? ಅದರಲ್ಲಿ ಅನುಭವ ಹೊಂದಿರ ತಕ್ಕವರು ಅವರು. ಈ ಇಲಾಖೆಯ ಪದ್ಧತಿಯಲ್ಲಿ ಏನಾದರೂ ಏರುಪೇರುಗಳು ಇದ್ದರೆ, ಅದನ್ನು ಬಹಳ ಯಶಸ್ವಿಯಾಗಿ, ಸರಿಪಡಿಸುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು. ನಿಮಗೆ ಒಬ್ಬರಿಗೆ ಆಗದಿದ್ದರೆ, ಇಬ್ಬರೂ ಸೇರಿಕೊಂಡು ಒಂದು ದೇಶದ ಹಿತದೃಷ್ಟಿಯಿಂದ, ಒಂದು ಆಡಳಿತದ ಹಿತದೃಷ್ಟಿಯಿಂದ ಸಹಕಾರಿ ತತ್ವವನ್ನು ಅಸಹಕಾರಿ ತತ್ವವಾಗಿ ಮಾಡುವುದಕ್ಕೆ ಅವಕಾಶ ಕೊಡದೆ, ದೇಶದಲ್ಲಿ, ಬಡ ಜನರಿಗೆ, ಹರಿಜನರಿಗೆ ಒಂದು ನ್ಯಾಯ ದೊರಕಿಸಿಕೊಡುವುದಕ್ಕೆ ಬಹಳ ಇಫೆಕ್ಟಿವ್ ಆಗಿ, ಕೆಲಸ ಮಾಡಿ, ಮುಂದಿನ ಬಜೆಟ್ ಸೆಷನ್ನಿನೊಳಗೆ ಅದನ್ನು ಮಾಡಿಕೊಡಬೇಕು, ಮತ್ತು ಎಲ್ಲರಿಂದಲೂ ಶಹಾಬಾಸ್‌ಗಿರಿಯನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-00 P.M.

† ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ (ಬಹ್ಮಾವರ್).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಮಂಡಿಸಿರತಕ್ಕಂತಹ ಗ್ರಾಮಾಭಿವೃದ್ಧಿ ಸಹಕಾರ, ಸಾಮುದಾಯಿಕ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ವಿರೋಧಿಸುತ್ತಾ ನಾಲ್ಕು ಮಾತುಗಳನ್ನು ಆಡಬಯಸುತ್ತೇನೆ. ದೇಶದಲ್ಲಿ ರೈತರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಾಗಬೇಕು ಎಂಬ ದೃಷ್ಟಿಯಿಂದ ಸರಕಾರ ಹೇರಳ ಹಣವನ್ನು ಈ ಸಹಕಾರಿರಂಗದಲ್ಲಿ ತೊಡಗಿಸಿದೆ. ಆದರೆ ಸಹಕಾರಿ ಸಂಘಗಳ ಕಾರ್ಯಚಳುವಟಿಕೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ನಿರೀಕ್ಷೆಗೆ ಅನುಗುಣವಾಗಿ ಕೆಲಸ ಆಗುತ್ತಿಲ್ಲ; ಎಂಬುದನ್ನು ಯಾರು ಬೇಕಾದರೂ ಹೇಳಬಹುದಾಗಿದೆ. ಅನೇಕ ಸದಸ್ಯರು ತಮ್ಮ ಕಡೆ ಸಹಕಾರ ಸಂಘಗಳಲ್ಲಿರುವ ಲೋಪದೋಷಗಳನ್ನು ಹೇಳಿದರು. ನನಗಾದರೂ ಈ ವಿಚಾರದಲ್ಲಿ ಆಳವಾದ ಅನುಭವ ಪರಿಶ್ರಮ ಇಲ್ಲದಿದ್ದರೂ ನಮ್ಮ ಸಮೀಪದ ಒಂದು ಪ್ರಾಥಮಿಕ ಸಹಕಾರಿ ಸಂಘ ನಡೆಕೊಳ್ಳುವ ರೀತಿ ನೀತಿಗಳನ್ನು ಇಲ್ಲಿ ಹೇಳಬಯಸುತ್ತೇನೆ. ಸಾಮಾನ್ಯವಾಗಿ ಶೇಕಡಾ 75ರಷ್ಟು ಹಳ್ಳಿಗಳಲ್ಲಿ ಈ ಸಹಕಾರಿ ಸಂಘಗಳು ಅವ್ಯವಸ್ಥಿತ ರೀತಿಯಲ್ಲಿ ನಮ್ಮ ಹಳ್ಳಿಯಲ್ಲಿ ನಡೆದಂತೇ ನಡೆಯುತ್ತವೆ ಎಂದು ನಾನಾದರೂ ಭಾವಿಸುತ್ತೇನೆ.

ನಮ್ಮಲ್ಲಿನ ಸಹಕಾರಿ ಸಂಘ ಒಬ್ಬ ದಕ್ಷ ಅಧ್ಯಕ್ಷರ ಆಡಳಿತದಲ್ಲಿ ಸಾಮಾನ್ಯವಾಗಿ ಚೆನ್ನಾಗಿಯೇ ನಡೆಯುತ್ತಿತ್ತು. ಆದರೆ ಹಳ್ಳಿಯಲ್ಲಿನ ಗುಂಪುಗಾರಿಕೆಗೆ ಅನುಗುಣವಾಗಿ ಇನ್ನೊಂದು ವರ್ಗ ಸದ್ರಿ ಸಂಘವನ್ನು ಕೈಯಲ್ಲಿ ತೆಗೆದುಕೊಳ್ಳಲು ಪ್ರಯತ್ನಿಸಿತು. ಬಹಳ ಸುಲಭವಾಗಿ ಈ ಕೆಲಸವನ್ನು ಮಾಡಬಹುದಾಗಿದೆ. ಸಾಮಾನ್ಯವಾಗಿ ಸದಸ್ಯನಾಗಬೇಕಾದರೆ 10 ರೂಪಾಯಿಗಳ ಶೇರು ಹಣವನ್ನು ಕಟ್ಟಿದರಾಯ್ತು. ಈ ಪ್ರಕಾರ ಸುಮಾರು ನೂರು ಮಂದಿ ಸದಸ್ಯರನ್ನು ಗುಟ್ಟಾಗಿ ಮಾಡಲಾಯ್ತು. ಒಂದು ದಿನ ಬೆಳಿಗ್ಗೆ ಜನರಲ್ ಬಾಡಿಯ ಅಧಿವೇಶನ ಆಗುತ್ತದೆ, ಆಡಳಿತ ಮಂಡಲಿಗೆ ಚುನಾವಣೆ ನಡೆಯಲಿದೆ ಎಂದು ಪ್ರಕಟಿಸಲಾಯ್ತು. ಸರಿ, ಹೊಸ ನಾಮಿನೇಶನ್ ಹಾಕಲಾಯ್ತು. ಆಡಳಿತೆಯಲ್ಲಿದ್ದ ಅಧ್ಯಕ್ಷರು ಬಹಳ ಕ್ರಮಬದ್ಧವಾಗಿ ಸಾಲಗಳನ್ನು ಹಂಚಿ ವಸೂಲು ಮಾಡುತ್ತಿದ್ದರು. ಇದನ್ನು ಮೆಚ್ಚದ ಕೆಲವು ಪುಢಾರಿಗಳು ಇಂಥ ಅಧ್ಯಕ್ಷರು ನಮಗೆ ಬೇಡ ಎಂದು ಚುನಾವಣೆಯಲ್ಲಿ ಅಧ್ಯಕ್ಷರನ್ನು ಸೋಲಿಸಿದರು. ಸರಿ, ಸಹಕಾರಿ ಸಂಘದ ಆಡಳಿತ ಮಂಡಳಿ ಹೊಸ ಜನರ ಕೈಗೆ ಬಂತು. ಇವರು ಧರ್ಮರಾಯನಂತಹ ಮನುಷ್ಯ, ಅವರಿಗೆ ದುಡ್ಡಿನ ಲೆಕ್ಕವೇ ಅವರಿಗಿಲ್ಲ. ಕೇಳಿದವರಿಗೆಲ್ಲಾ ಸಾಲ ಕೊಟ್ಟು, ಬಹಳ ಒಳ್ಳೆಯ ಮನುಷ್ಯ ಎಂದು ಹೆಸರು ಪಡೆದರು, ಸಾಲ ಮರುಪಾವತಿಯಾಗಲಿಲ್ಲ. ಈ ಮನುಷ್ಯ ಕೇಳಲಿಕ್ಕೆ ಹೋಗಲಿಲ್ಲ. ಹೋದರೆ ನಿಷ್ಠುರವಾಗುತ್ತದೆ ಎಂದು. ಈ ಪ್ರಕಾರ ಸೊಸೈಟಿ ಡಿಫಾಲ್ಟಿಂಗ್ ಸೊಸೈಟಿಯಾಯಿತು. ಸರಿ,

ಪುನಃ ಸಾಲ ಸ್ಯಾಂಕ್ಷನ್ ಆಗಲಿಲ್ಲ. ಈಗ ಅತ್ತ ಸಾಯದೆ, ಇತ್ತ ಬದುಕದೆ ಇದೆ. ಈ ಮಧ್ಯೆ ಕೆಲವು ಸ್ನೇಹಿತರಿಗೆ ಕೈಗಡ ಸಾಲ ಕೊಟ್ಟರು. ಅವರು ಅದನ್ನು ಹಿಂದಕ್ಕೆ ಕೊಡಲಿಲ್ಲ. ಅದನ್ನು ಅಜಸ್ಟ್‌ಮೆಂಟ್ ಮಾಡಲು ಕೆಲವರು ಸಾಲ ಸಂದಾಯ ಮಾಡಿದವರಿಗೆ ರಶೀದಿ ಕೊಡಲಿಲ್ಲ. ಸರಿ ಈಗ ಸುಮಾರು 6, 7 ಸಾವಿರ ರೂಪಾಯಿಗೆ ದೇವರೇ ಗತಿ.

ಇನ್ನು ಕಳೆದ ಜುಲೈ ತಿಂಗಳಲ್ಲಿ ಬಾರಿ ನೆರೆ ನಮ್ಮ ಊರಲ್ಲಿ ಬಂತು. ಸರ್ಕಾರ ಆಹಾರ ಧಾನ್ಯಗಳನ್ನು ರವಾನಿಸಿ ನಿಯಮದಂತೆ ಸಹಕಾರಿ ಸಂಘಗಳ ಮುಖಾಂತರ ವಿತರಣೆ ಮಾಡುವ ವ್ಯವಸ್ಥೆಗೆ ಪ್ರಯತ್ನಿಸಿತು. ಆದರೆ ಹೆಚ್ಚಿನ ಸಹಕಾರಿ ಸಂಘಗಳು ಡಿಫಾಲ್ಟಿಂಗ್ ಸೊಸೈಟಿಗಳಾಗಿದ್ದು ಆಹಾರಧಾನ್ಯಗಳನ್ನು ಖರೀದಿಸುವ ಪರಿಸ್ಥಿತಿಯಲ್ಲಿರಲಿಲ್ಲ. ಅನಂತರ ನೆರೆ ಬಂದು ಹೋದ 15 ದಿನಗಳ ನಂತರ ಸೆಂಟ್ರಲ್ ಕೊ-ಆಪರೇಟಿವ್ ಬ್ಯಾಂಕ್ ಏನೋ ಅಜಸ್ಟ್ ಮಾಡಿಕೊಂಡು ಆಹಾರ ಧಾನ್ಯಗಳನ್ನು ಖರೀದಿಸುವಂತಾಯ್ತು. ಬಹಳ ಪ್ರಮಾಣದಲ್ಲಿ ಮೈಲೋ ಹಂಚಿದರು. ಇದನ್ನು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಿಂದ ತಂದು ಮಾರುವುದು ರಗಳೆ ಕೆಲಸವೆಂದು ತೋರಿತು ಅಧ್ಯಕ್ಷರಿಗೆ. ಸರಿ, ಪೇಟೆಯಲ್ಲಿ ಚೀಲ ಒಂದಕ್ಕೆ 6 ರೂ. ಜಾಸ್ತಿ ರೇಟಿಗೆ ಮಾರಿಬಿಟ್ಟರು. ಅನಂತರ ಅದು ಅಧಿಕಾರಿಗಳಿಗೆ ತಿಳಿದು ಕೊನೆಗೆ ತಾನು ಮಾರಿದ್ದನ್ನು ಅವರೇ ಕ್ರಯಕ್ಕೆ ಹಿಂದಕ್ಕೆ ಪಡೆದುಕೊಂಡು ಲೆಕ್ಕ ಸರಿಮಾಡಿದರು. ಅದೇ ರೀತಿಯಲ್ಲಿ ಅನೇಕರಿಗೆ ಗೊಬ್ಬರವನ್ನು ಸೊಸೈಟಿಗಳು ಸಪ್ಲೈ ಮಾಡುತ್ತಿದ್ದಾರೆ. ಅದನ್ನೂ ಅಲ್ಲಿ ಬ್ಲಾಕ್ ಮಾರ್ಕೆಟ್ ಮಾಡುತ್ತಿದ್ದಾರೆ, ಸಕ್ಕರೆಯನ್ನು ಕೂಡ ಗೋಣಿಗಟ್ಟಲೆ ಮಾರಾಟ ಮಾಡಿದರೆ 100 ರಿಂದ 150ರ ವರೆಗೆ ಲಾಭವಾಗುತ್ತದೆ. ಅದನ್ನು ಮಾಡಿದರು. ಇಂಥ ಸನ್ನಿವೇಶಗಳನ್ನು ತಡೆಯುವುದಕ್ಕೆ ನಾವು ಏನು ಮಾಡುವುದಕ್ಕೆ ಸಾಧ್ಯ ಎಂಬುದನ್ನು ಮಾನ್ಯ ಸಚಿವರು ತಿಳಿದುಕೊಳ್ಳಬೇಕಾಗುತ್ತದೆ. ಇದರಿಂದ ನಮ್ಮ ಕಡೆ ಇಂಥ ಕೆಲಸಗಳಿಗೆ ಆನೆಸ್ಟ್ ಜನರು ಬರುವುದಿಲ್ಲ. ಡಿಸ್ ಆನೆಸ್ಟ್ ಆಗಿರುವವರೇ ಹೆಚ್ಚು ಜನರು ಇದಕ್ಕೆ ಬರುತ್ತಿದ್ದಾರೆ. ಸಾರ್ವಜನಿಕ ಹಣವನ್ನು ಹಾಳು ಮಾಡುತ್ತಿದ್ದಾರೆ. ಇದರ ಬಗ್ಗೆ ಒಂದೆರಡು ಸಲಹೆಗಳನ್ನು ನಾನು ಕೊಡುತ್ತೇನೆ. ಯಾವುದೇ ಒಂದು ಜವಾಬ್ದಾರಿಯಿಲ್ಲದೆ, ಆಸ್ತಿಪಾಸ್ತಿ ಏನೂ ಇಲ್ಲದೆ ಒಬ್ಬನನ್ನು ಡೈರೆಕ್ಟರ್ ಮಾಡುವ ಬದಲಿಗೆ ಇಂಥವರಿಗೆ, ಇಂತಿಷ್ಟು ಆಸ್ತಿ ಇದ್ದವರಿಗೆ ಅಲ್ಲಿ ನೇಮಿಸುವುದು ಅಗತ್ಯವೆಂದು ಹೇಳುತ್ತೇನೆ. ಅದಲ್ಲದೆ, ಆಡಿಟ್ ಸೆಲ್ ಏನಿದೆ, ಅದು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಒಂದು ವರ್ಷ, ಎರಡು ವರ್ಷ ಅದರ ಆಡಿಟ್ಟೇ ಆಗುವುದಿಲ್ಲ. ಇದಕ್ಕೆ ನಮ್ಮ ಸರ್ಕಾರದವರು ಒಂದು ಹೊಸ ಯೋಜನೆಯನ್ನು ಹಾಕಿಕೊಳ್ಳಬೇಕು. ಇಂದು ನಮ್ಮಲ್ಲಿ ಅನೇಕ ಖಾಸಗಿ ಆಡಿಟರ್ಸ್ ಇದಾರೆ. ಅಂಥವರಿಗೆ ಇದನ್ನು ಟೆಂಡರ್ ಕಾಲ್ ಫಾರ್ ಮಾಡಿ, ಸಾಮಾನ್ಯವಾಗಿ ಒಂದು ಜಿಲ್ಲೆ ಅಥವಾ ಒಂದು ತಾಲ್ಲೂಕಿಗೆ ಸಂಬಂಧಪಟ್ಟ ಸೊಸೈಟಿಗಳನ್ನು ಆಡಿಟಿಗೆ ಕೊಡಬಹುದು. ಇದರಿಂದ ಅವರಿಗೂ ಕೆಲಸವಾದ ಹಾಗೆ ಆಗುತ್ತದೆ, ಮತ್ತು ಸೊಸೈಟಿಗೆ ಖರ್ಚು ಕಡಿಮೆಯಾಗಿ, ಸುವ್ಯವಸ್ಥಿತವಾಗಿ ಆಡಳಿತ ನಡೆಯುತ್ತದೆ. ಉತ್ತಮ ಮಟ್ಟದ ಆಡಿಟ್ ಆಗಬಹುದು ಎಂದು ನಾನು ಭಾವಿಸುತ್ತೇನೆ. ಇದಲ್ಲದೆ ಸಾಲ ಇಂತಿಷ್ಟು ಪರ್‌ಸೆಂಟ್ ವಸೂಲು ಮಾಡದಿದ್ದ ಪಕ್ಷದಲ್ಲಿ ಡೈರೆಕ್ಟರುಗಳು ಸ್ವತಃ ಡಿಫಾಲ್ಟರ್ಸ್ ಆದರೆ, ಅವರು ತಮ್ಮ ಸದಸ್ಯತ್ವವನ್ನು ಕಳೆದುಕೊಳ್ಳುವ ನಿಯಮವನ್ನು ಮಾಡಬೇಕಾಗಿದೆ.

ಪ್ರಾಥಮಿಕ ಸಂಘಗಳು ರೈತನ ಬೆಳೆಯನ್ನು ಸಾಲ ಮರುಪಾವತಿ ರೂಪದಲ್ಲಿ ಪಡೆಯುವ ಕ್ರಮ ಏನೂ ಯಶಸ್ವಿಯಾಗಿಲ್ಲ. ರೈತ ತನ್ನ ಬೆಳೆಗೆ ಸಾಕಷ್ಟು ರೇಟು ಪಡೆಯುವುದಿಲ್ಲ. ಉದಾಹರಣೆಗೆ ಸ್ವಲ್ಪ ಸಮಯದ ಹಿಂದೆ ಒಂದು ಕಿಲೋ ಮೆಣಸಿಗೆ 4, 4-50 ರೂಪಾಯಿ ಕ್ರಯ ಇತ್ತು. ಈಗ ಆ ಮೆಣಸು ಬೆಳೆಸುತ್ತಿದ್ದಂತೆ ಅದು 1 ರೂಪಾಯಿ 1-50ಕ್ಕೆ ಬಂದು ನಿಂತಿದೆ.

ಮಧ್ಯಮವರ್ಗದ ರೈತರು ಅದರಿಂದ ಬಹಳ ಲುಕ್ಸಾನು ಹೊಂದುತ್ತಾರೆ. ಪ್ರಾಥಮಿಕ ಸಂಘಗಳವರು ಮಾತ್ರ ಅಂಥಾ ಫಸಲುಗಳನ್ನು ಕ್ರಯಕ್ಕೆ ಪಡೆದು ತಾಲ್ಲೂಕು ಮಟ್ಟದ ಸಂಘಗಳಲ್ಲಿಯೂ, ಅಲ್ಲಿಂದ ಸೆಂಟ್ರಲ್ ಮಾರ್ಕೆಟಿಂಗ್ ಸೊಸೈಟಿಗೂ ರವಾನಿಸುವ ವ್ಯವಸ್ಥೆಯಾಗಬೇಕು. ಅದು ಸರಿಯಾಗಿ ನಡೆಯುತ್ತಿಲ್ಲ.

ಇದೂ ಅಲ್ಲದೆ ಕೋ ಆಪರೇಟೀವ್ ಫಾರ್ಮಿಂಗ್ ವಿಷಯದಲ್ಲಿ ನಾನು ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಸಹಕಾರಿ ಪದ್ಧತಿಯಲ್ಲಿ ಬೇಸಾಯ ಮಾಡುವ ದೃಷ್ಟಿಯಿಂದ 541 ಬೇಸಾಯ ಸಂಘಗಳನ್ನು ಸ್ಥಾಪಿಸಲಾಗಿದೆ. ಇದಕ್ಕೆ ಸರಕಾರದಿಂದ ಸುಮಾರು 63 ಲಕ್ಷ ರೂಪಾಯಿ ಸಹಾಯ ಧನ ಒದಗಿಸಿದೆ ಎಂದು ತಿಳಿಯಿತು. ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ರಾಜ್ಯ ಮಟ್ಟದಲ್ಲಿ ವಿವಿಧ ಅಧಿಕಾರಿಗಳನ್ನು ನೇಮಿಸಲಾಗಿದೆಯೆಂದೂ ತಿಳಿಯಿತು. ಇದಿನ್ನೂ ಎಕ್ಸ್‌ಪೆರಿಮೆಂಟಲ್ ಸ್ಟೇಜಿನಲ್ಲಿ ಇದೆ. ರಿಜಿಸ್ಟ್ರಾರ್ ಆಫ್ ಕೋ ಆಪರೇಟೀವ್ ಸೊಸೈಟಿಯವರು ಪಬ್ಲಿಷ್ ಮಾಡಿರುವ ಪುಸ್ತಕದಲ್ಲಿ ಹೇಳಿದಂತೆ "ಜನ ಜಾಗೃತಿ ಹೆಚ್ಚಾಗಿ ಬೆಳೆದಲ್ಲಿ ಒಳ್ಳೆಯ ಮುಂದಾಳುತನ

(ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ)

ದೊರೆತಲ್ಲಿ ಈ ಸಹಕಾರಿ ಬೇಸಾಯಿ ಸಂಘಗಳು ಯಶಸ್ವಿಯಾಗಬಹುದು " ಎಂದು ಬರೆಸಿದ್ದಾರೆ. ಆದರೆ ಈ ಜನಜಾಗೃತಿ ಒಳ್ಳೆಯ ಮುಂದಾಳುತನ ನಾವು ನಿರೀಕ್ಷಿಸಿದಷ್ಟು ಸಿಕ್ಕುವ ಧೈರ್ಯ ನನಗಾದರೂ ಇಲ್ಲವಾಗಿದೆ. ಇಂಥಾ ಎಕ್ಸ್‌ಪರಿಮೆಂಟಿಗೆ ನಮ್ಮ ಬಡಬೋರೆಗೌಡನ ದುಡ್ಡು ಎಷ್ಟು ಕಡಿಮೆ ಖರ್ಚು ಮಾಡಿದರೆ ಅಷ್ಟೂ ಒಳ್ಳೆಯದು. ನಮ್ಮ ಕಡೆ ಜಾಯಿಂಟ್ ಫ್ಯಾಮಿಲಿ ಕೃಷಿ ಕುಟುಂಬಗಳು ಜನರ ಸ್ವಾರ್ಥದಿಂದ ಒಡೆದು ಹರಿದು ಹಂಚಿದ್ದನ್ನು ನೋಡುವಾಗ ಈ ಸಂಘಗಳು ಯಶಸ್ಸನ್ನು ಸಾಧಿಸಲಾರವು. ಒಂದೇ ರಕ್ತ ಸಂಬಂಧದ ಒಂದು ಕುಟುಂಬದವರು ಕೃಷಿಯನ್ನು ಯೋಗ್ಯ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಆಗಿಲ್ಲ ಎಂದಮೇಲೆ ಕೋ-ಆಪರೇಟೀವ್ ಫಾರ್ಮಿಂಗ್ ಸೊಸೈಟಿಗಳು ಯಾವ ರೀತಿಯಲ್ಲಿ ಲಾಭದಾಯವಾಗಿ ನಡೆಯುತ್ತವೆ ಎಂಬುದು ನನಗೆ ತೋರುವುದಿಲ್ಲ. ಕಮ್ಯುನಿಟಿ ಡೆವಲಪ್‌ಮೆಂಟ್ ವಿಷಯವನ್ನು ಹೇಳುವುದಾರೆ, ಈ ಕಮ್ಯುನಿಟಿ ಡೆವಲಪ್‌ಮೆಂಟ್ ಇಲಾಖೆಯಿಂದ ನಿರೀಕ್ಷಿಸಿದಷ್ಟು ಕೆಲಸ ಮಾಡುತ್ತಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಎನ್. ಇ. ಎಸ್. ಸ್ಕೀಮಿನಲ್ಲಿ ಅಧಿಕಾರಿಗಳ ಸಂಖ್ಯೆ ಹೆಚ್ಚಾಗಿದೆ. ಈ ಬಾಬಿಗೆ ಕೊಡತಕ್ಕಂಥ ಹಣದಲ್ಲಿ ಶೇಕಡಾ 75ರಷ್ಟು ಅಧಿಕಾರಿಗಳ ಸಂಬಳಸಾರಿಗೆಗೇ ಹೋಗುತ್ತದೆ. ಮತ್ತು ಅಧಿಕಾರಿಗಳಿಗೆ ಮನೆ ಮಠಗಳನ್ನು ಕಟ್ಟಿಸುವ ಬಗ್ಗೆಯೂ ಹೆಚ್ಚಿನ ಹಣ ವ್ಯಯವಾಗುತ್ತದೆ. ಅಭಿವೃದ್ಧಿಕಾರ್ಯಗಳಿಗೆ ಸಾಮಾನ್ಯವಾಗಿ ಶೇಕಡಾ 25ರಷ್ಟು ಹಣ ಮಾತ್ರ ಉಪಯೋಗವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ. ಇದರಲ್ಲಿ ಶೇಕಡಾ 10 ಪರ್ಸೆಂಟ್ ಹಣವನ್ನು ಕಂಟ್ರಾಕ್ಟರುಗಳು ತೆಗೆದುಕೊಂಡು ಅಭಿವೃದ್ಧಿ ಕೆಲಸಗಳಿಗೆ ಕೇವಲ 15 ಪರ್ಸೆಂಟ್ ಮಾತ್ರ ವ್ಯಯವಾಗುತ್ತಿದೆ ಎಂದು ನಾನು ಹೇಳಬಯಸುತ್ತೇನೆ.

ತಾಲ್ಲೂಕು ಬೋರ್ಡುಗಳು ಮತ್ತು ಪಂಚಾಯಿತಿಗಳ ಬಗ್ಗೆ ಹೇಳುವುದಾದರೆ ಅವು ನಿರೀಕ್ಷಿಸಿದಷ್ಟು ಕೆಲಸ ಮಾಡುತ್ತಿಲ್ಲ. ಈ ತಾಲ್ಲೂಕು ಬೋಡುಗಳು ಯಾವುದೇ ಅಭಿವೃದ್ಧಿ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಅದಕ್ಕೆ ಹೆಚ್ಚಿನ ಹಣವನ್ನು ಖರ್ಚುಮಾಡಿ ಕೆಲಸವನ್ನು ಮಾಡುತ್ತಿಲ್ಲ ಎಂದು ನಾನು ಕಳಕಳಿಯಿಂದ ಹೇಳಬೇಕಾಗಿದೆ. ಇವರು ತಮ್ಮ ಕೈಕೆಳಗಿರುವ ಶಾಲೆಗಳ ಉಪಾಧ್ಯಾಯರನ್ನು ಆಸ್ಪತ್ರೆಗಳ ಡಾಕ್ಟರುಗಳನ್ನೂ ಮತ್ತು ನರ್ಸುಗಳನ್ನೂ ಟ್ರಾನ್ಸ್‌ಫರ್ ಮಾಡುವುದರಲ್ಲಿ ನಿರತರಾಗಿದ್ದಾರೆ. ತಾಲ್ಲೂಕು ಬೋರ್ಡುಗಳಲ್ಲಿ ಹೆಚ್ಚು ರಾಜಕೀಯ ಇದೆ. ನಮ್ಮ ತಾಲ್ಲೂಕು ಬೋರ್ಡು ಅಧ್ಯಕ್ಷರು ಸಂಕುಚಿತ ಮನೋಭಾವನೆಯನ್ನು ತಾಳುವುದು ಸರಿಯಲ್ಲ. ಯಾವುದೋ ಒಂದು ಕಾರಣಕ್ಕಾಗಿ ಒಬ್ಬ ಡಾಕ್ಟರನ್ನು 24 ಗಂಟೆಯಲ್ಲಿ ಬೇರೆಕಡೆಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಇಂಥಾ ಕ್ರಮ ಸರಿಯಲ್ಲ. ವಿಶಾಲ ಮನೋಭಾವನೆಯನ್ನು ತಳೆದು ನಮ್ಮ ದೇಶದ ಹಿತದೃಷ್ಟಿಯಿಂದ ಕೆಲಸಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಿ ಇಷ್ಟು ಮಾತನಾಡುವುದಕ್ಕೆ ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಚಂಪಾಬಾಯಿ ಭೋಗಲೆ (ಕಾಗವಾಡ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಮಂಡಿಸಿರತಕ್ಕ ಡೆವಲಪ್‌ಮೆಂಟ್, ಎನ್.ಇ.ಎಸ್. ಸಾಮುದಾಯಿಕ ಅಭಿವೃದ್ಧಿ ಯೋಜನೆಗಳು ಮತ್ತು ಸಹಕಾರ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಅನುಮೋದಿಸುತ್ತಾ ನಾನು ಕೆಲವು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಈಗ ದೇಶದಲ್ಲಿ ಕನ್‌ಸ್ಯೂಮರ್ಸ್ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ. ಸರ್ಕಾರದ ಕಡೆಯಿಂದ ಲಕ್ಷಾಂತರ ರೂಪಾಯಿಗಳು, ಕೋಟ್ಯಾಂತರ ರೂಪಾಯಿಗಳು ನಾನಾ ರೀತಿಯಲ್ಲಿ ಹರಿಯುತ್ತಿವೆ. ಆದರೆ ಆ ರೂಪಾಯಿಗಳು ಯಾವ ರೀತಿ ವೆಚ್ಚವಾಗಿ ಹೋಗುತ್ತಿದೆ ಎಂಬುದು ಆಡಿಟ್ ರಿಪೋರ್ಟನ್ನು ನೋಡಿದರೆ ಗೊತ್ತಾಗುದೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಸರ್ಕಾರದ ಹಣ ಲಕ್ಷಗಟ್ಟಲೆ ಹಣ ಲುಕ್ಸಾನು ಆಗಿರುವ ಬಗ್ಗೆ ರಿಪೋರ್ಟ್ ಬರುತ್ತಿದೆ. ಇನ್ನು ಮುಂದೆ ಪ್ರತಿವರ್ಷ ಹೀಗೆ ಲುಕ್ಸಾನು ಆದರೆ ಸರ್ಕಾರ ಅಧೋಗತಿಗೆ ಹೋಗುತ್ತದೆ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಸಾಕಷ್ಟು ಹಣವನ್ನು ಒದಗಿಸಿ ದೇಶದಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಸಾಕಷ್ಟು ಪ್ರಯತ್ನವನ್ನು ಮಾಡಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಸಹಕಾರಿ ಸಂಘಗಳ ಮುಖಾಂತರ ಜನತೆಯ, ರೈತರ ಹಿತರಕ್ಷಣೆಯನ್ನು ಮಾಡಬೇಕೆಂದು ಸರ್ಕಾರದವರು ಉದ್ದೇಶವನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಆದರೆ ಈ ಸಹಕಾರಿ ಸಂಘಗಳು ಮಾಯಾಬಜಾರ್ ಆಗುವುದಕ್ಕೆ ಹತ್ತಿವೆ. ಇದರಿಂದ ದೇಶ ಅಧೋಗತಿಗೆ ಹೋಗುತ್ತಿದೆ ಪ್ರತಿಯೊಬ್ಬ ಕನ್‌ಸ್ಯೂಮರ್ ದೃಷ್ಟಿಯಿಂದ ಸರ್ಕಾರದವರು ಸ್ಕೂಲ್‌ಬೋರ್ಡ್ ತರಹ ಒಂದ

ಬೋರ್ಡ್ ರಚನೆ ಮಾಡಿ ಅವರುಗಳ ಮೇಲ್ವಿಚಾರಣೆಯಲ್ಲಿ ಸಹಕಾರ ಸಂಘಗಳಿಂದ ಜನತೆಗೆ ಅಕ್ಕಿ, ಜೋಳ, ಗೋಧಿ, ಸಕ್ಕರೆ ಮುಂತಾದ ಆಹಾರಧಾನ್ಯಗಳು ಸರಿಯಾಗಿ ವಿತರಣೆಯಾಗುವಂತೆ ನೋಡಿಕೊಳ್ಳುವಂಥಾ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸರ್ಕಾರದವರು ಸಹಕಾರ ಸಂಘಗಳ ಮುಖಾಂತರ ಜನತೆಗೆ ವಿತರಣೆ ಮಾಡುವುದಕ್ಕೆ ಕೊಟ್ಟಂತಹ ಆಹಾರಧಾನ್ಯಗಳು ಏನಿವೆ ಅವು ಜನತೆಗೆ ಸರಿಯಾದ ರೀತಿಯಲ್ಲಿ ಹಂಚಿಕೆಯಾಗಬೇಕು. ಅವು ಕಾಳಸಂತೆಯಲ್ಲಿ ಮಾರಾಟವಾಗುವುದಕ್ಕೆ ಅವಕಾಶವನ್ನು ಕೊಡಕೂಡದು ಎಂದು ನಾನು ಹೇಳುತ್ತೇನೆ. ವಿರೋಧ ಪಕ್ಷದವರು ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಬಿಗಿಯಿಲ್ಲ ಎಂದು ಹೇಳುತ್ತಿದ್ದಾರೆ. ಅಂಥಾ ಒಂದು ಟೀಕೆಗೆ ಸರ್ಕಾರದವರು ಅವಕಾಶ ಕೊಡದೆ ಆಡಳಿತದಲ್ಲಿ ಸ್ವಲ್ಪ ಬಿಗಿ ಮಾಡಬೇಕೆಂದು ನಾನು ಕಳಕಳಿಯಿಂದ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ನಾನು ಈಗ ಸುಮಾರು 27 ಹರಿಜನ ಸಂಘ ಸಂಸ್ಥೆಗಳನ್ನು ನಾನು ಕಟ್ಟಿದ್ದೇನೆ. ಅಸ್ಪೃಶ್ಯತಾ ನಿವಾರಣೆಯ ದೃಷ್ಟಿಯಿಂದ, ಹರಿಜನರ ಏಳಿಗೆಯ ದೃಷ್ಟಿಯಿಂದ ಒಂದು ಸಂಘಕ್ಕೆ 10 ಸಾವಿರ ರೂಪಾಯಿಗಳ ಗ್ರಾಂಟ್ ಪಡೆಯಬೇಕಾದರೆ ಒಂದು ಡಿಪಾರ್ಟ್‌ಮೆಂಟಿನಿಂದ ಇನ್ನೊಂದು ಡಿಪಾರ್ಟ್‌ಮೆಂಟಿಗೆ ಕಾಗದಗಳು ವರ್ಷಾನುಗಟ್ಟಲೇ ಓಡಾಡುತ್ತವೆ. ಇದು ಸರಿಯಲ್ಲ. ಹರಿಜನರ ಸಂಘಗಳಿಗೆ ಸಂಬಂಧಪಟ್ಟಂತಹ ಗ್ರಾಂಟುಗಳು ಅವರಿಗೆ ಸರಿಯಾಗಿ ದೊರೆಯುವಂತೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. ನಾನು 1952ನೇ ಇಸವಿಯಲ್ಲಿಯೇ ನಮ್ಮ ಭಾಗದಲ್ಲಿ ಒಂದು ಹೌಸಿಂಗ್ ಸೊಸೈಟಿಯನ್ನು ಸ್ಥಾಪನೆ ಮಾಡಿದ್ದೇನೆ. ಅದಕ್ಕೆ ಸರ್ಕಾರದವರು 8 ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಇಷ್ಟು ಹಣವನ್ನು ಜನತೆಗೆ ಯಾವರೀತಿ ಹಂಚಬೇಕು ಎಂಬುದನ್ನು ಯೋಚನೆ ಮಾಡಬೇಕು. ತಾಲ್ಲೂಕು ಮಟ್ಟದಲ್ಲಿಯೂ ನಾನು ಹೌಸಿಂಗ್ ಸೊಸೈಟಿಯನ್ನು ಮಾಡಿದ್ದೇನೆ. ಆ ಸೊಸೈಟಿಗೆ 4 ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಒಂದು ತಾಲ್ಲೂಕು ಮಟ್ಟದಲ್ಲಿ ಸುಮಾರು 120-130 ಊರುಗಳು ಇವೆ. ಅವರೆಲ್ಲರಿಗೂ ಈ ಹಣವನ್ನು ಪೂರೈಸುವುದಕ್ಕೆ ಹೇಗೆ ಸಾಧ್ಯವಿದೆ ಎಂಬುದನ್ನು ಸರ್ಕಾರದವರು ಹೇಳಬೇಕು. ಅದರ ಸಲುವಾಗಿ ಬಡವರು ಹರಿಜನರ ಸಲುವಾಗಿ ಮನೆ ಕಟ್ಟಿಕೊಳ್ಳಲು ಹಣ ಸಹಾಯವನ್ನು ಮಾಡುವ ದೃಷ್ಟಿಯಿಂದ ಸರ್ಕಾರದವರು ಈ ಹೌಸಿಂಗ್ ಸೊಸೈಟಿಗಳಿಗೆ ಹೆಚ್ಚಿನ ಹಣಸಹಾಯವನ್ನು ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ಸರ್ಕಾರದವರು ಕನ್‌ಸ್ಯೂಮರುಗಳಿಗೆ ಹೋಲ್‌ಸೇಲ್‌ನಲ್ಲಿ ಲಕ್ಷಗಟ್ಟಲೇ, ಕೋಟಿಗಟ್ಟಲೇ ಹಣವನ್ನು ಸಬ್ಸಿಡಿ ರೂಪದಲ್ಲಿ ಕೊಡುತ್ತಿದ್ದಾರೆ. ನಾನು 27 ಸಂಘಗಳನ್ನು ಕಟ್ಟಿದ್ದೇನೆ. ಆ ಸಂಘಗಳ ಪೈಕಿ ಯಾವ ಸಂಘಕ್ಕೆ ಸರ್ಕಾರದವರು 20 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂಬುದನ್ನು ಹೇಳಲಿ ? ನಾನು ಛಾಲೆಂಜ್ ಮಾಡುತ್ತೇನೆ. ಈಗ ಸರ್ಕಾರದವರು ಕೆಲವು ಕಡೆ ಜನತಾ ಬಜಾರ್‌ಗಳನ್ನು ಸ್ಥಾಪನೆ ಮಾಡಿದ್ದಾರೆ. ಅವುಗಳೆಲ್ಲವೂ ಮಾಯಾಬಜಾರ್ ಆಗುತ್ತಿವೆ. ಅವುಗಳಿಗೆ ಸ್ವಲ್ಪ ಮುಗರಾಣಿ ಹಾಕಿ ಬಿಗಿ ಮಾಡಬೇಕು. ಇಲ್ಲದೇ ಇದ್ದರೆ ಅವು ಸರ್ಕಾರವನ್ನು ಅಧೋಗತಿಗೆ ಒಯ್ಯುತ್ತವೆಂದು ನಾನು ಹೇಳಬೇಕಾಗಿದೆ.

ಡೆವಲಪ್‌ಮೆಂಟ್ ವಿಚಾರದಲ್ಲಿ ಒಂದೆರಡು ವಿಚಾರಗಳನ್ನು ನಾನು ಹೇಳಬಯಸುತ್ತೇನೆ. ರೈತರಿಗೆ ತಗಾಯಿಲೋನು ಕೊಡುವುದು, ಗೊಬ್ಬರ; ಬೀಜ ಇತ್ಯಾದಿಗಳನ್ನು ಕೊಡುವ ಒಂದು ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರದವರು ಏತಕ್ಕೆ ಕೊಟ್ಟಿಲ್ಲ? ಗ್ರಾಮಾಭಿವೃದ್ಧಿಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ಮಾಡತಕ್ಕ ಜವಾಬ್ದಾರಿಯನ್ನು ಸ್ಥಳೀಯ ಸಂಸ್ಥೆಗಳಿಗೆ ವಹಿಸಬೇಕು ಗ್ರಾಮಾಂತರ ಪ್ರದೇಶದ ಡೆವಲಪ್‌ಮೆಂಟ್ ವಿಚಾರದಲ್ಲಿ ಸರ್ಕಾರದವರು ಹೆಚ್ಚು ಆಸಕ್ತಿಯನ್ನು ವಹಿಸಿ ಆ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ರೈತರಿಗೆ ವ್ಯವಸಾಯದ ಸಲುವಾಗಿ ಏನೇನು ಸೌಲಭ್ಯಗಳನ್ನು ಒದಗಿಸಿಕೊಡಬೇಕೋ ಅದನ್ನು ಸಕಾಲದಲ್ಲಿ ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಒಂದು ರಸ್ತೆ ಕೆಲಸ ಮಾಡಿಸಬೇಕಾದರೆ ಅದು ತಹಶೀಲ್ದಾರರಿಂದ ಮಂಜೂರಾಗಿ ಬಂದು, ಮತ್ತೆ ಬಿ.ಡಿ.ಓ. ಗೆ ಹೋಗಬೇಕು, ಆ ನಂತರ ಪಿ. ಡಬ್ಲ್ಯು. ಇಲಾಖೆಗೆ ಹೋಗಿ ಅಲ್ಲಿ ಅದಕ್ಕೆ ಪ್ಲಾನು ಎಸ್ಟಿಮೇಟು ಆಗಬೇಕು, ಹೀಗೆಲ್ಲಾ ಅದಕ್ಕೆ ಹಂತಗಳು ಇವೆ. ಈರೀತಿ ಆದರೆ ಡೆವಲಪ್‌ಮೆಂಟ್ ಕೆಲಸಗಳು ಯಾವ ರೀತಿ ಆಗುತ್ತದೆ. ಆದಕಾರಣ ಇನ್ನು ಮುಂದೆ ಸರ್ಕಾರದವರು ಈ ಡೆವಲಪ್‌ಮೆಂಟ್ ಕೆಲಸಗಳನ್ನು ನೇರವಾಗಿ ತಾವೇ ತೆಗೆದುಕೊಂಡು ಮಾಡಿಸುವುದು ಒಳ್ಳೆಯದು. ತಾಲ್ಲೂಕ್ ಬೋರ್ಡಿನವರು ತಮ್ಮ ವಾರ್ಷಿಕ ಆದಾಯದಲ್ಲಿ ಶೇಕಡ 10ರಷ್ಟು ಹರಿಜನರ ಅಭಿವೃದ್ಧಿಗಾಗಿ ಕಾದಿರಿಸಬೇಕೆಂದು ನಿಯಮವಿದೆ. ಆದರೆ 1957ನೇ ಇಸವಿಯಿಂದ ಇದುವರೆಗೆ ಯಾವ ತಾಲ್ಲೂಕ್ ಬೋರ್ಡಿನವರು ಕೂಡ ಈ ನಿಯಮವನ್ನು ಅನುಸರಿಸಿ ಹರಿಜನರಿಗಾಗಿ ಖರ್ಚು ಮಾಡಿಲ್ಲ.

(ಶ್ರೀಮತಿ ಚಂಪಾಬಾಯಿ ಬೋಗಲೆ)

ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳಬೇಕು. ಈ ವಿಚಾರದಲ್ಲಿ ನಾನು ಒಂದು ಪ್ರಶ್ನೆಯನ್ನು ಸಹ ಕಳಿಸಿದ್ದೇನೆ. ಈ ರೀತಿಯಾಗುತ್ತಿರುವ ಅನ್ಯಾಯವನ್ನು ಸರ್ಕಾರದವರು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ತಾಲ್ಲೂಕ್ ಬೋರ್ಡಿನವರು ಈ ನಿಯಮವನ್ನು ಪಾಲಿಸದಿದ್ದರೆ ನಾವು ಅಧೋಗತಿಗೆ ಹೋಗುವುದು ಖಂಡಿತ. ಆದ್ದರಿಂದ ಸರ್ಕಾರದವರು ಇದನ್ನು ಸಣ್ಣ ವಿಷಯ ಎಂದು ತಿಳಿದುಕೊಳ್ಳದೆ ತಾಲ್ಲೂಕ್ ಬೋರ್ಡಿನವರು ತಮ್ಮ ಆದಾಯದಲ್ಲಿ ಶೇಕಡ 10ರಷ್ಟು ಕಡ್ಡಾಯವಾಗಿ ಹರಿಜನರ ಏಳಿಗೆಗಾಗಿ ಖರ್ಚು ಮಾಡಬೇಕೆಂದು ಅವರಿಗೆ ತಿಳಿವಳಿಕೆ ಕೊಡಬೇಕೆಂದು ಈ ಸಮಯದಲ್ಲಿ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಸರ್ಕಾರದವರು ತಾಲ್ಲೂಕ್ ಬೋರ್ಡಿನವರಿಂದ ಹಳ್ಳಿಗಳಿಗೆ ನೀರಿನ ಸೌಕರ್ಯ ಒದಗಿಸುತ್ತಿದ್ದಾರೆ. ಆದರೆ ಈ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ. ನಮ್ಮ ಭಾಗದ ಹಳ್ಳಿಗಳಲ್ಲಿ ನೀರಿನ ಅನುಕೂಲ ಸಾಕಷ್ಟು ಇಲ್ಲದೆ ಜನರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಹೊಳೆಗಳು ಇರುವ ಕಡೆಗಳಲ್ಲಿ ಜನರಿಗೆ ಕಾಲರಾ ಮತ್ತು ಟೈಫಾಯಿಡ ಬಂದು ಸಾಯುತ್ತಿದ್ದಾರೆ. ನನ್ನ ಕ್ಷೇತ್ರದ ಜನರು ಈ ವಿಚಾರದಲ್ಲಿ ನನಗೆ ರಾಜಿನಾಮೆ ಕೊಡಬೇಕೆಂದು ಕಾಗದ ಬರೆದಿದ್ದಾರೆ. ಆ ಕಾಗದವನ್ನು ಮುಖ್ಯ ಮಂತ್ರಿಗಳ ಹತ್ತಿರ ಕೊಟ್ಟಿದ್ದೇನೆ. ಆ ಭಾಗಕ್ಕೆ ಒಬ್ಬ ಡಾಕ್ಟರನ್ನು ಇಟ್ಟು ಜನರ ಆರೋಗ್ಯವನ್ನು ನೋಡಿಕೊಳ್ಳದಿದ್ದಮೇಲೆ ಜನರ ಅಭಿವೃದ್ಧಿ ಯಾವ ರೀತಿಯಾಗಬೇಕೆಂದು ಕೇಳುತ್ತೇನೆ. ಅಲ್ಲಿಯ ದವಾಖಾನೆಗಳಲ್ಲಿ ಡಾಕ್ಟರ್‌ಗಳಾಗಲೀ ನರ್ಸ್‌ಗಳಾಗಲೀ ಇಲ್ಲ. ಸರ್ಕಾರದವರು ಕೂಡಲೇ ಅವರನ್ನು ನೇಮಕ ಮಾಡಬೇಕು. ಇಂತಹ ವಿಷಯಗಳಿಗೆ ಸರ್ಕಾರದವರು ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡಬೇಕು. ಜಿಲ್ಲಾಮಟ್ಟದಲ್ಲಿ ಒಬ್ಬ ಆಫೀಸರನ್ನು ಸರ್ಕಾರದವರು ನೇಮಕ ಮಾಡಿದ್ದಾರೆ ಆ ಒಬ್ಬ ಆಫೀಸರ್ ಎಲ್ಲಾ ಕಡೆಯೂ ಹೋಗಿ ಅಭಿವೃದ್ಧಿ ಕಾರ್ಯಗಳನ್ನು ನೋಡಿಕೊಳ್ಳುವುದಕ್ಕಾಗುವುದಿಲ್ಲ. ಆದಕಾರಣ ತಾಲ್ಲೂಕ್ ಮಟ್ಟದಲ್ಲಿಯಾದರೂ ಒಬ್ಬೊಬ್ಬ ಆಫೀಸರನ್ನು ನೇಮಕ ಮಾಡಬೇಕು. ಈಗ ಸರ್ಕಾರದವರು ಗ್ರಾಮಸೇವಕರನ್ನು ಬಿದರ್ ಜಿಲ್ಲೆಯಿಂದ ಗುಲ್ಬರ್ಗ ಜಿಲ್ಲೆಗೆ ವರ್ಗ ಮಾಡುತ್ತಿದ್ದಾರೆ. ಅವರ ಪಗಾರ ಕಡಿಮೆ ಇರುವುದರಿಂದ ಅವರಿಗೆ ದೂರದ ಊರುಗಳಿಗೆ ಹೋಗಲು ಬಹಳ ಕಷ್ಟವಾಗುತ್ತಿದೆ. ಇದನ್ನು ಸರ್ಕಾರದವರು ವಿಚಾರ ಮಾಡಿ ದೂರದ ಊರುಗಳಿಗೆ ವರ್ಗ ಮಾಡುವುದನ್ನು ತಪ್ಪಿಸಬೇಕು. ಇಲ್ಲದಿದ್ದರೆ ಅಭಿವೃದ್ಧಿಕಾರ್ಯಗಳು ಮುಂದುವರೆಯುವುದು ಕಷ್ಟವಾಗುತ್ತದೆ. ಇವರನ್ನು ತಾಲ್ಲೂಕ್‌ನಿಂದ ತಾಲ್ಲೂಕ್‌ಗೆ ವರ್ಗಮಾಡಬೇಕು.

ಶ್ರೀ ಕೆ. ಎಚ್. ಪಾಟೀಲ್.—ಹರಿಜನರಿಗೆ ತಾಲ್ಲೂಕ್‌ಬೋರ್ಡಿನಿಂದ ಮನೆಗಳನ್ನು ಕಟ್ಟಿಸಿ ಕೊಡುತ್ತಿದ್ದಾರೆಯೇ?

ಶ್ರೀಮತಿ ಚಂಪಾಬಾಯಿ ಭೋಗಲೆ.—ಹೌಸಿಂಗ್ ಸೊಸೈಟಿಯಲ್ಲಿರುವ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳೇ ಹಣವನ್ನು ತಿನ್ನುವುದಕ್ಕೆ ಹತ್ತಿದ್ದಾರೆ. ಅಲ್ಲಿ ಕೆಲಸ ಮಾಡುತ್ತಿರುವವರು ಹರಿಜನರೇ ಆದ್ದರಿಂದ ಅವರಿಗೆ ಸಾಕಷ್ಟು ಬುದ್ಧಿಯಿಲ್ಲವಾದ್ದರಿಂದ ಈ ರೀತಿ ಮಾಡುತ್ತಿದ್ದಾರೆ. ರೂಪಾಯಿಗೆ ನಾಲ್ಕಾಣೆಯಂತೆ ಮನೆಕಟ್ಟಿಕೊಳ್ಳಲು ಸಾಲತೆಗೆದುಕೊಳ್ಳುವವರಿಂದ ವಸೂಲು ಮಾಡುತ್ತಿದ್ದಾರೆ. ಇದು ತಪ್ಪಬೇಕಾದರೆ ಸರ್ಕಾರದವರು ತಾಲ್ಲೂಕ್‌ಬೋರ್ಡಿನವರಿಂದಲೇ ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಏರ್ಪಾಡು ಮಾಡಬೇಕು. ಹರಿಜನರಿಗೆ ಯಾವ ರೀತಿ ಮನೆಗಳನ್ನು ಕಟ್ಟಿಸಿಕೊಳ್ಳಬೇಕೆಂದು ಗೊತ್ತಿಲ್ಲ. ಅವರಿಗೆ ಹಣ ಖರ್ಚು ಮಾಡಿ ಗೊತ್ತಿಲ್ಲ. ಆದಕಾರಣ ತಾಲ್ಲೂಕ್‌ಬೋರ್ಡಿನವರೇ ಕಟ್ಟಿಸಿಕೊಡುವುದು ಒಳ್ಳೆಯದು. ಹರಿಜನರು ತಿಳಿಯದೇ ತಪ್ಪುಮಾಡುತ್ತಿದ್ದಾರೆ ವಿನಃ ತಿಳಿದು ತಪ್ಪುಮಾಡಿ ಹಣವನ್ನು ತಿಂದುಹಾಕುತ್ತಿಲ್ಲ. ಡೆವಲಪ್‌ಮೆಂಟ್ ಆಫೀಸ್‌ನಲ್ಲಿರುವ ಕ್ಲಾರ್ಕ್‌ಗಳನ್ನು ಮೂರು ವರ್ಷಕ್ಕೆ ಒಂದು ಸಾರಿ ಟ್ರಾನ್ಸ್‌ಫರ್ ಮಾಡಬೇಕು. ಅಲ್ಲಿಯೇ ಬಿಟ್ಟರೇ ಅವರು ರೊಕ್ಕ ತಿನ್ನುವುದು ಜಾಸ್ತಿಯಾಗುತ್ತದೆ. ಇದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಬಾರದು. ಗ್ರಾಮಸೇವಕರನ್ನು ವರ್ಗ ಮಾಡುವಂತೆ ಇವರನ್ನು ಸಹ ಮಾಡಬೇಕು. ಈ ಮೂಲಕ ಅಭಿವೃದ್ಧಿ ಕೆಲಸಗಳು ಚೆನ್ನಾಗಿ ನಡೆಯುವಂತೆ ಸರ್ಕಾರದವರು ನೋಡಿಕೊಳ್ಳಬೇಕು. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. B. SAYANAK.—Mr. Speaker Sir, I rise to oppose the demands tabled by the Hon'ble Minister for Co-operation before this august House. In India there was a British Government. The money-lenders exploited the situation to their best advantage. That is why the

Congress Government has started this Co-operative Movement for the benefit of the down-trodden and poor agriculturists and the backward people. So, they have enacted the Co-operative Acts in India. What is the aim of the Co-operative Acts? The aim of the Acts is to uplift the down-trodden.

SRI K. H. PATIL.—It is not the Congress Government alone that has brought this Act. There is contribution from others also.

SRI B. B. SAYANAK.—I know that. But the Congress Government has improved that Acts because they wanted to uplift the poor agriculturists and down-trodden and backward communities. But what is going on in our country ? Sir, if a man wants to be a shareholder of a Society, he will not be allowed. There is a Co-operative Society in Angol village in Belgaum District. The population of that village is more than 10,000. The share-holders of that Society are only 154. There is a condition to become a share-holder of that Society. The condition is that if a person purchases 20 shares, he will be allowed to be a share-holders. I asked the Managing Committee, the Assistant Registrar and the Deputy Registrar, 'why it is so ? They told me, 'why don't you go in appeal'. I can file an appeal. But what about the conditions of the poor agriculturists who do not know the law if we file an appeal before the Assistant Registrar and the Deputy Registrar ? Therefore, I request the Government through you Sir, that each and every agriculturist must compulsorily be made share-holders of the Societies.

In my area, there is one Society in Angol village. The Government is of the opinion that there is no necessity to have one more Society in that village. There is a dire necessity to have one more Society in that village, because the population of that village is more than 10000. I repeatedly requesting the Deputy Registrar and the Assistant Registrar to allow me to start a secood Society. But they are not allowing me to start a second Society. When they are not allowing me to do so. But in Muchandi Village which has 3,000 population 4 miles away from Belgaum, there is one Society which is run by the Opposition. The Congress party has allowed a second Society in that village Why there is a discrimination, I want to know ? The reason is simple one the Congress Party wants to have this society in its hands. This is the position in India in respect of Societies. In our area Co-operative credit Banks are there. They are allowing any person to be a share-holder. But they are following a different principle so far as Directors election is concerned. If a person purchases shares worth of Rs. 1,000, he will be allowed to contest for the election of Directorship. It is against the Constitution. So many persons have filed Writ Petitions and so many people have appealed to the Deputy Registrar and the Registrar. Even the Registrar and the Deputy Registrar feel that any share-holder can become a Director. But the Management is not allowing. Therefore, I request the Government through you Sir, that any share-holder must be allowed to contest the election for Directorship. There is a Taluk

(SRI B. B. SAYANAK)

Co-operative Agricultural Marketing Society in Belgaum. The Government has allowed to purchase paddy through this Society. The Government has given 4 Kgs as shortage while purchasing the paddy. But this Society at the time of purchasing the paddy, is collecting 4 kgs more from the poor agriculturists. At the time of audit of this Society they have shown as 300 bags of rice as loss. It comes to Rs. 30,000 as loss. It is shameful on the part of the Society.

Sir, this society is allowed to bring sugar from sugar factories. They are charging Rs. 2 more for travelling with the consent of the Revenue Department. I have brought this to the notice of the Revenue Department and they have not taken cognisance. How many bags they have brought ? They have brought 56,000 bags, from the factories. How much money they have got ? They got Rs. 1,12,000. All this money they have misappropriated.

Sir, there is a wholesale society in our area. What is the loss of that society ? More than Rs. 80,000. That society is run by one Congress MLC. I do not want to disclose that name. That man is given in charge of JANATHA BAZAAR ; God knows what will be the fate of it ? So, Sir, I want to ask. Is the co-operative Department run for the sake of agriculturists ? and if so they should be honest and they must be above corruption and then and then only, the needy people, the agriculturists, the downtrodden will get some benefit.

Sir, there is the housing co-operative society of a Harijans in Belgaum. The Hon'ble Member Smt. Champa Bai Bhogale has criticised that society. I for one support that society. Our Government are not giving lands for the poor harijans to construct Houses. That is the fate of the Harijans in my area. Therefore Sir, I request the Minister concerned to do the needful in this matter.

Lastly, the taluk board, I am very sorry, Sir. When there was election, what happened in my area ? One thing and that is the Congress Government have changed constituencies, in such a way that Congress people should be elected. That is what they have done in Belgaum, in Khanapur, in Karwar. Yet, we the Maharastrians have got success in these areas in the Taluka Board election.

† ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು).—ಮಾನ್ಯ ಅಧ್ಯಕ್ಷರೇ, ಸಹಕಾರ, ಕಮ್ಯೂನಿಟಿ ಡೆವಲಪ್‌ಮೆಂಟು ಮತ್ತು ಗ್ರಾಮಾಭಿವೃದ್ಧಿ ಇವು ಮೂರೂ ಡಿಮ್ಯಾಂಡುಗಳನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ.

ನಿಜವಾಗಿಯೂ ಇಂದು ಹಳ್ಳಿಗಾಡಿನ ಜನಗಳಿಗೆ ಸಹಾಯ ಸಿಗುವುದು ಎಂದರೆ ಸಹಕಾರ ಮತ್ತು ಡೆವಲಪ್‌ಮೆಂಟು ಇಲಾಖೆಗಳಿಂದಲೇ ಎಂದು ನನಗನಿಸುತ್ತದೆ. ಮೊದಲಿನಿಂದಲೂ ಹಳ್ಳಿಗಳ ಉದ್ಧಾರವಾಗಬೇಕು ಎಂದು ಇದ್ದರೂ ಇನ್ನೂ ಆಗಿಲ್ಲ ಎಂದು ಕೆಲವರು ಇಲ್ಲಿ ಟೀಕೆ ಮಾಡಿದರು. ನಾನು ಆ ಮಟ್ಟಕ್ಕೆ ಹೋಗದೆ ಇಂದು ಸಾಕಷ್ಟು ಸುಧಾರಣೆಗಳು ಆಗಿವೆ ಎಂದು ಹೇಳುತ್ತೇನೆ. ನಮ್ಮ ಪೈಕಿ ಕೆಲವರು ಟೀಕೆ ಮಾಡುತ್ತಾ ವಿಧೇಯಕದಲ್ಲಿ ಇರುವ ಲೋಪದೋಷಗಳನ್ನು ಹೇಳಿದರು. ನಾನು ಇದರ ಬಗ್ಗೆ ಏನೂ ಹೇಳಲು ಹೋಗುವುದಿಲ್ಲ. ಹಳ್ಳಿಗಳ ಉದ್ಧಾರವಾಗಬೇಕಾದರೆ ಇಂದು ತಾಲ್ಲೂಕಾ ಬೋರ್ಡುಗಳಲ್ಲಿ ಇರುವ ಎಕ್ಸಿಕ್ಯೂಟಿವ್ ಆಫೀಸರು, ಎಕ್ಸ್‌ಟೆನ್‌ಷನ್ ಆಫೀಸರು

ಇವರುಗಳಿಂದ, ಇವರೆಲ್ಲರೂ ಸೇರಿಕೊಂಡು ನಿಜವಾಗಿಯೂ ಉತ್ತಮವಾದ ಕೆಲಸಗಳನ್ನು ಮಾಡಲು ತಕ್ಕ ಕಾರ್ಯಕ್ರಮ ಹಾಕಿಕೊಂಡು ಮಾಡಿದರೆ, ಜನರಿಗೆ ಅನುಕೂಲವಾಗುತ್ತದೆ. ಇಲ್ಲಿರುವ ಎಕ್ಸ್‌ಟೆನ್‌ಷನ್ ಆಫೀಸರ್ ಕೇವಲ ಚೀಫ್ ಆಫೀಸರವರ ಹಿಂದುಗಡೆಯೇ ಬಂದು ಹೋಗುತ್ತಿರುತ್ತಾರೆ. ಇದರಿಂದ ಹಳ್ಳಿಗಾಡಿನ ಜನರಿಗೆ ಸರಿಯಾಗಿ ಕೆಲಸ ಮಾಡಲು ಆಗುತ್ತಿಲ್ಲ ಎನ್ನುವ ಒಂದು ಪ್ರವೃತ್ತಿ ಬೆಳೆಯುತ್ತಾ ಬಂದಿದೆ. ವ್ಯವಸಾಯ ಮಾಡುವ ಜನಕ್ಕೆ ಸಹಾಯ ಮಾಡಬೇಕೆಂದು ಇದ್ದರೂ ಇಲ್ಲಿರ ತಕ್ಕ ಪಂಚಾಯತಿ ಸೆಕ್ರೆಟರಿಗಳಿಂದ ಸಾಕಷ್ಟು ಕೆಲಸಗಳು ಆಗುತ್ತಿಲ್ಲ. ಹಳ್ಳಿಗಾಡಿನ ಜನಕ್ಕೆ ಸಹಾಯವಾಗುತ್ತಿಲ್ಲ. ಇದರಿಂದ ಎಲ್ಲ ಅಧಿಕಾರಿಗಳನ್ನು ವರ್ಗ ಮಾಡುವ ರೀತಿಯಲ್ಲಿ ಇವರನ್ನೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ಮೂರು ವರ್ಷಕ್ಕೊಮ್ಮೆ ಬೇರೆ ಕಡೆಗಳಲ್ಲಿ ಮಾಡುವಂತೆ ವರ್ಗ ಮಾಡಿದರೆ ಇದರಿಂದ ಜನಕ್ಕೆ ಸ್ವಲ್ಪವಾದರೂ ಅನುಕೂಲವಾಗುತ್ತದೆ. ಇಲ್ಲಿರುವ ಸೆಕ್ರೆಟರಿಗಳೂ ಹಳ್ಳಿಗಾಡಿನ ಜನಕ್ಕೆ ಸಹಾಯ ಮಾಡಬೇಕೆಂದರೆ ಹಿಂದುಮುಂದು ನೋಡುತ್ತಾರೆ. ನಾನು ಹೇಳುವುದು ಸೆಕ್ರೆಟರಿಗಳಿಗೆ ಇಂದು ಪಗಾರ ಕೊಡುತ್ತಿದ್ದಾರೆ. ಇದನ್ನು ಬೇಡ ಎಂದು ಹೇಳುತ್ತಿಲ್ಲ. ಇಂತಹವರನ್ನು ಒಂದೇ ಸ್ಥಾನದಲ್ಲಿ ಹತ್ತು ವರ್ಷ ಇರುವಂತೆ ಮಾಡಬಾರದು.

ಇನ್ನೊಂದು ಪಂಚಾಯತಿಗಳಿರುವ ಹಳ್ಳಿಗಳಲ್ಲಿ ಅವರು ಕೊಡುವ ಕರಭಾರ ಹಾಗೇ ಕೊಡದೇ ಬಾಕಿ ಉಳಿದಿದೆ. ಇದಕ್ಕೆ ಕಾರಣ ಇಲ್ಲಿರುವ ಚೇರ್ಮನ್ನರು ಹಾಗೂ ಕಮಿಟಿ ಸೆಕ್ರೆಟರಿಗಳೇ ಆಗಿರುತ್ತಾರೆ. ಅದಕ್ಕಾಗಿ ಈಗಿರುವ ಕಾನೂನನ್ನು ತಿದ್ದುಪಡಿ ಮಾಡಿ ತೀವ್ರವಾಗಿ ವಸೂಲಿ ಕ್ರಮ ಮಾಡಬೇಕು.

ಇನ್ನೊಂದು ಮಾತು ಹೇಳಬೇಕೆಂದರೆ ಎಷ್ಟೋ ಪಂಚಾಯತಿಗಳಲ್ಲಿ ಚೇರ್ಮನ್ನರು ಒಬ್ಬರೇ ಇದ್ದು ಇವು ಸರಿಯಾಗಿ ಕೆಲಸ ಮಾಡುತ್ತಿವೆಯೋ ಇಲ್ಲವೋ ಗೊತ್ತಾಗುತ್ತಿಲ್ಲ. ಇದಕ್ಕಾಗಿ ನಾಲ್ಕು ವರ್ಷ ಅಥವಾ ಐದು ವರ್ಷಕ್ಕೊಮ್ಮೆಯಾದರೂ ಆಡಿಟ್ ಮಾಡುವ ಏರ್ಪಾಡು ಮಾಡಬೇಕು. ಇದಕ್ಕೆ ಪ್ರತಿ ವರ್ಷವೂ ಒಂದೊಂದು ಕಡೆ ಇಂತಹ ಪಂಚಾಯತಿಗಳನ್ನು ಆಡಿಟ್ ಮಾಡಬೇಕೆಂದು ಒಂದು ಪ್ರೋಗ್ರಾಂ ಹಾಕಿಕೊಳ್ಳಬೇಕು. ಸ್ವಾತಂತ್ರ್ಯ ಬಂದು ಇಪ್ಪತ್ತು ವರ್ಷಗಳಾದರೂ ಹಳ್ಳಿಗಾಡಿನಲ್ಲಿರುವ ಶಾಲೆಗಳಿಗೆ ಸರಿಯಾದ ಕಟ್ಟಡಗಳನ್ನು ಮಾಡಿಲ್ಲ. ಸರಕಾರದವರು ಸ್ವಲ್ಪ ಹಣ ಪಂಚಾಯತಿಯವರು ಸ್ವಲ್ಪ ಹಣ ಕೊಟ್ಟು ಇದನ್ನು ಪೂರೈಸಬೇಕೆಂದು ಹೇಳುತ್ತೇನೆ.

ಇನ್ನು ಸೊಸೈಟಿಗಳ ಸಂಖ್ಯೆ ನೋಡಿದರೆ ಸುಮಾರು 20,162 ಇವೆ, ನಿಜವಾಗಿಯೂ ಇದು ಯೋಗ್ಯವಾದುದು. ಇದರಲ್ಲಿ 38 ಲಕ್ಷ ಜನರು ಸದಸ್ಯರುಗಳಾಗಿದ್ದಾರೆ. ಎಂದರೆ ರೂರಲ್ ಪಾಪ್ಯುಲೇಷನ್‌ನಲ್ಲಿ ನೂರಕ್ಕೆ 99 ರಷ್ಟು ಜನರನ್ನು ಇದು ಒಳಗೊಂಡಿದೆ. ಇದರಿಂದ ಎಲ್ಲರೂ ಅನುಕೂಲ ಪಡೆಯುತ್ತಿದ್ದಾರೆ ಮತ್ತು ಇದು ಯೋಗ್ಯವಾದುದೂ ಆಗಿದೆ. ಇನ್ನೂ ಇದರ ಮೇಲೆ ಹೆಚ್ಚು ಲಕ್ಷ ಕೊಡಬೇಕೆಂದು ನನಗನಿಸುತ್ತದೆ. ಉತ್ತರ ಕರ್ಣಾಟಕದ ಭಾಗದಲ್ಲಿ ಕೆಲವು ಸೊಸೈಟಿಗಳಲ್ಲಿ ಉತ್ತಮವಾದ ಕೆಲಸಗಳು ನಡೆಯುತ್ತಿವೆ. ಆದರೆ ಇದರಲ್ಲೂ ಕೆಲವು ಕಡೆ ಓವರ್‌ಡ್ಯೂಸ್ ಇವೆ. ಇದನ್ನು ತಪ್ಪಿಸಲು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಲ್ಯಾಂಡು ಮಾರ್ಟಿಗೇಜು ಬ್ಯಾಂಕುಗಳಿಂದ ಬಾವಿಗಳನ್ನು ಮಾಡಿಸಲು ಸುಮಾರು 13 ಕೋಟಿ 754 ಲಕ್ಷದಷ್ಟು ಹಣ ಕೊಡಲಾಗಿದೆ ಮತ್ತು 32,537 ಬಾವಿಗಳನ್ನು ಮಾಡುವ ಸಲುವಾಗಿ ಕೊಟ್ಟಿದ್ದಾರೆ. ಇದರೊಳಗೆ 9,948 ಬಾವಿಗಳಾಗಿವೆ. ಇನ್ನು ಇದರೊಳಗೆ ಕೆಲವು ತೊಂದರೆಗಳಿವೆ. ನೂರಕ್ಕೆ 90ರಷ್ಟು ಸಾಲ ವಸೂಲಾಗಲೇಬೇಕು. ಇಲ್ಲದಿದ್ದರೆ ಇಂತಹ ಬ್ಯಾಂಕುಗಳಿಗೆ ಸಾಲ ಕೊಡುವುದು ತಪ್ಪು. ನಾನು ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ ನೂರಕ್ಕೆ 60 ಭಾಗ ಬಾಕಿಯನ್ನು ವಸೂಲು ಮಾಡಿದ್ದರೆ ಅಂಥ ಬ್ಯಾಂಕುಗಳಿಗೆ ಹಣವನ್ನು ಒದಗಿಸಬೇಕು. ಒಂದನೇ ಕಂತನ್ನು ಕೊಟ್ಟಿರುತ್ತಾರೆ, ಎರಡನೇ ಕಂತು ಕೊಡಲು ಹಣವಿರುವುದಿಲ್ಲ. ಎರಡನೇ ಕಂತು ಕೊಡುವಾಗ ಪ್ರೈಮರಿ ಬ್ಯಾಂಕುಗಳವರು ಬಾಕಿ ವಸೂಲು ಮಾಡಿಲ್ಲ ಎಂದು ರೈತನಿಗೆ ಕೊಡಬೇಕಾಗಿರುವ ಕಂತು ಹಣವನ್ನು ಹಿಡಿಯುತ್ತಾರೆ. ಇಷ್ಟೇ ಅಲ್ಲದೆ ಇನಾಂ ಜಮೀನುಗಳಲ್ಲಿ ಬಾವಿಗಳನ್ನು ತೆಗೆದು ಸಾಕಷ್ಟು ಆಹಾರವನ್ನು ಉತ್ಪಾದನೆ ಮಾಡಲಿಕ್ಕೆ, ಇನಾಂ ಜಮೀನುಗಳು ಇದ್ದವರಿಗೆ ಬಾವಿಗಳಿಗೆ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಸಿಕ್ಕುವಂತೆ ಏರ್ಪಾಡು ಮಾಡಬೇಕು. ಬ್ಯಾಂಕುಗಳು ಮತ್ತು ಸೊಸೈಟಿಗಳಿಂದ ಅಲ್ಪ ಕಾಲಾವಧಿ ಸಾಲ ಏನು ಕೊಟ್ಟಿರುತ್ತಾರೆ ಅಂಥವರಿಗೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕುಗಳಲ್ಲಿ ಬಾವಿಗಾಗಲೀ, ಭೂಮಿಯ ಅಭಿವೃದ್ಧಿಗಾಗಲೀ ಸಾಲ ಕೊಡಬಾರದು ಎಂದು ಹೇಳುತ್ತಾರೆ. ಅಲ್ಪಕಾಲಾವಧಿ ಸಾಲವನ್ನು ಕೊಡುವುದು ಅವಶ್ಯವಿದೆ. ಆ ರೀತಿ ಅಲ್ಪಕಾಲಾವಧಿ ಸಾಲವನ್ನು ಕೊಟ್ಟಿರುವಾಗ ನೂರಕ್ಕೆ 99 ಜನ ಗ್ರಾಮಾಂತರ ಜನರು ಸೊಸೈಟಿಯ ಅಧೀನದಲ್ಲಿರುತ್ತಾರೆ. ಹೀಗಿರುವಾಗ ಬಾವಿ ತೆಗೆಸಲಿಕ್ಕೆ ಎರಡನೇ ಕಡೆಯಿಂದ ಹಣ ತರಬೇಕು ಎನ್ನುವುದು ಸರಿಯಿಲ್ಲ. ಭೂಮಿ ಕಿಮ್ಮತ್ತು, ದನದ ಕಿಮ್ಮತ್ತು, ಧಾನ್ಯದ ಕಿಮ್ಮತ್ತು ಜಾಸ್ತಿಯಾಗಿದೆ. ಅಲ್ಪ

(ಶ್ರೀ ಬಿ. ಎಂ. ಸಾಣಿಕೊಪ್ಪ)

ಕಾಲಾವಧಿ ಸಾಲ ತೆಗೆದುಕೊಂಡಿರುವ ರೈತರಿಗೂ ಭೂ ಅಭಿವೃದ್ಧಿ ಸಾಲ ಕೊಡುವಂತೆ ಮಾಡಬೇಕು ಎಂದು ಹೇಳುತ್ತೇನೆ.

ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಸಾಲ ಕೊಡುವ ಪದ್ಧತಿಯಲ್ಲಿ ಬಹಳ ಕರಾರು ಹಾಕಿದ್ದಾರೆ. ಆ ಕಾಗದ ಪತ್ರಗಳನ್ನು ತಂದುಕೊಡಲಿಕ್ಕೆ ಎರಡು ತಿಂಗಳತನಕ ಆಗುತ್ತದೆ. ಕಾಗದ ಪತ್ರಗಳನ್ನು ತರಲು ಕುಲಕರ್ಣಿಗೆ, ಮತ್ತೊಬ್ಬರಿಗೆ ರೊಕ್ಕ ಕೊಟ್ಟು, ಲಂಚ ಕೊಟ್ಟು ಕೆಲಸ ಮಾಡಿಸಿಕೊಳ್ಳಬೇಕಾಗಿದೆ. ಆದ್ದರಿಂದ ಈಗಿನ ನಿಯಮಗಳನ್ನು ಸಡಿಲ ಮಾಡಿ, ಅವನ ಹೆಸರಿನಲ್ಲಿ ಭೂಮಿ ಇದೆಯೋ ಇಲ್ಲವೋ, ಅವನು ಮಾಲೀಕನಿದ್ದಾನೋ ಇಲ್ಲವೋ, ಇಷ್ಟು ತಿಳಿದುಕೊಂಡು ಅಂಥವನಿಗೆ ತೀವ್ರ ಸಾಲ ಸಿಕ್ಕುವಂತೆ ಮಾಡಬೇಕು. ಒಂದೊಂದು ಕಡೆ ತಲಾಟಿ ಕಾಗದ ಪತ್ರಗಳನ್ನು ಕೊಡಬೇಕಾದರೆ 50 ರೂಪಾಯಿ, ನೂರು ರೂಪಾಯಿ, ತೆಗೆದುಕೊಳ್ಳುವಂಥ ಸಂದರ್ಭವಿದೆ. ಬ್ಯಾಂಕಿನವರು ಹಣ ಕೊಡದೆ ಇದ್ದರೆ ಅವನು ಕೊಟ್ಟಿರುವ ನೂರು ರೂಪಾಯಿ ಹೋದ ಹಾಗೆ ಆಗುತ್ತದೆ. ಇದನ್ನು ತಪ್ಪಿಸಲಿಕ್ಕೆ ಅವಶ್ಯಕವಾಗಿ ಏನು ಮಾಡಬೇಕೋ ಅದನ್ನು ಸರ್ಕಾರದವರು ಮಾಡಬೇಕು.

ಸಕ್ಕರೆ ಕಾರ್ಖಾನೆಗಳು ಚೆನ್ನಾಗಿ ನಡೆದಿವೆ. ಮೈಸೂರು ಪ್ರಾಂತದಲ್ಲಿ ಉತ್ತರ ಕರ್ಣಾಟಕದಲ್ಲಿ ಇದರ ಅಭಿವೃದ್ಧಿ ಸಾಕಷ್ಟಿದೆ ಅನ್ನಿಸುತ್ತದೆ. ಸಂಕೇಶ್ವರದಲ್ಲಿ ಬರುವ ಪರ್ಸೆಂಟೇಜ್ ತೆಗೆದುಕೊಂಡು ನೋಡಿದರೆ 12.40 ರಿಕವರಿ ಬರುತ್ತದೆ. ಒಂದು ವರ್ಷದಲ್ಲಿ 2,37,728 ಟನ್ ಕಬ್ಬು ಕ್ರಷ್ ಮಾಡಿದರೆ 28,246 ಟನ್ ಸಕ್ಕರೆಯಾಗಿದೆ. ಇದು 1967-68ನೇ ಸಾಲಿನಲ್ಲಿ. ಇದನ್ನು ನೋಡಿದರೆ ಬೆಳಗಾಂ ಜಿಲ್ಲೆ, ಧಾರವಾಡ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಬರುವುದು ಅವಶ್ಯವಿದೆ. ಎಲ್ಲೆಲ್ಲಿ ಸಾಧ್ಯವಿದೆ ಅಲ್ಲೆಲ್ಲ ಸಕ್ಕರೆ ಕಾರ್ಖಾನೆಗಳನ್ನು ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಸಹಕಾರಿ ಕಾಟನ್ ಮಿಲ್‌ಗಳನ್ನು ಬೆಳಗಾಂ, ಬಾಗಲಕೋಟೆ, ರಾಯಚೂರು ಮತ್ತು ಬಿಜಾಪುರ, ಈ ನಾಲ್ಕು ಕಡೆ ಮಾಡಬೇಕೆಂದು ಲೈಸೆನ್ಸ್ ಸಿಕ್ಕಿ ಆರೇಳು ವರ್ಷವಾದರೂ ಇನ್ನೂವರೆಗೆ ಯಾವುದೂ ಆಗಿಲ್ಲ. ಷೇರುಗಳನ್ನು ತೆಗೆದುಕೊಂಡಿರುವವರ ಗತಿ ಏನು ಎಂದು ವಿಚಾರ ಮಾಡಬೇಕು. ಅದಕ್ಕೆ ಎಲ್ಲೆಲ್ಲಿ ಲೈಸೆನ್ಸ್ ತೆಗೆದುಕೊಂಡಿದ್ದಾರೆ ಅಲ್ಲಿ ತೀವ್ರ ಗತಿಯಲ್ಲಿ ಕಾರ್ಖಾನೆಗಳು ಜನತೆಯ ದೃಷ್ಟಿಯಿಂದ ಆಗುವಂತೆ ವಿಚಾರ ಮಾಡಬೇಕು ಎಂದು ಹೇಳುತ್ತೇನೆ.

ನಾನು ಹೇಳಿರುವ ಕೆಲವು ವಿಷಯಗಳನ್ನು ಸರ್ಕಾರದವರು ಮತ್ತು ಇಲಾಖೆಯವರು ವಿಚಾರ ಮಾಡಿ ಸಾಕಷ್ಟು ಚುರುಕಾಗಿ ಜನತೆಗೆ ಅನುಕೂಲವಾಗುವಂತೆ ಕೆಲಸ ಮಾಡಬೇಕೆಂದು ಹೇಳಿ ನನಗೆ ಎರಡು ಮಾತನಾಡಲು ಅವಕಾಶ ಕೊಟ್ಟಿರುವ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಸ್ವಾಮಿ, ಅಪ್ರಾಮಾಣಿಕ ಹೊಸ್ತಿಲಲ್ಲಿ ಭ್ರಷ್ಟಾಚಾರದ ವಾತಾವರಣದಲ್ಲಿ ನಮ್ಮ ದೇಶದ ಸಹಕಾರ ಚಳುವಳಿ ಮುಂದುವರಿಯುತ್ತಿದೆ ಎಂದರೆ ಖಂಡಿತವಾಗಿ ತಪ್ಪಾಗಲಾರದು. ಇದುನ್ನ ನಾನು ಮಾತ್ರ ಹೇಳುವುದಿಲ್ಲ. ಸಹಕಾರ ಸಮ್ಮೇಳನದಲ್ಲಿ ನಮ್ಮ ಮುಖ್ಯ ಮಂತ್ರಿಗಳು ಕೂಡ ಮೂರು ಸಾವಿರ ಸರ್ವಿಸ್ ಕೋಆಪರೇಟೀವ್ ಸೊಸೈಟಿಗಳು ಈ ಹೊತ್ತು ಸ್ಥಗಿತವಾಗಿವೆ, ಅವುಗಳನ್ನು ಪುನಶ್ಚೇತನಗೊಳಿಸಬೇಕು ಎಂದು ಹೇಳಿದ್ದಾರೆ. ನಮ್ಮ ಅರ್ಥ ಮಂತ್ರಿಗಳು ಕೂಡ ಭೂ-ಅಭಿವೃದ್ಧಿ ಬ್ಯಾಂಕುಗಳ ಕಾರ್ಯದರ್ಶಿಗಳ ಹಾಗೂ ಅಧ್ಯಕ್ಷರ ಸಮ್ಮೇಳನದಲ್ಲಿ ಮಾಡಿದ ಭಾಷಣದಲ್ಲಿ ಸಹಕಾರ ರಂಗದ ವಿಚಾರದಲ್ಲಿ ಇಂದು ಸರ್ಕಾರ ತೀವ್ರ ಯೋಚನೆ ಮಾಡಬೇಕಾಗಿದೆ ಎಂದು ಹೇಳಿದ್ದಾರೆ. ಹೊಸ ಬಂಡವಾಳವನ್ನು ಹೂಡುವುದಕ್ಕೆ ಮೊದಲು ಮತ್ತು ಈ ಕ್ಷೇತ್ರವನ್ನು ವಿಸ್ತರಿಸುವುದಕ್ಕೆ ಮೊದಲು ಎಷ್ಟರಮಟ್ಟಿಗೆ ನಾವು ಪ್ರಗತಿಯನ್ನು ಸಾಧನೆ ಮಾಡಿದ್ದೇವೆ ಎಂದು ರೀವ್ಯಾಲ್ಯುಯೇಷನ್ ಅಥವಾ ಪುನರ್‌ಮೌಲ್ಯವನ್ನು ಯಾವುದಾದರೂ ಜಿಲ್ಲೆಯಲ್ಲಿ ತೆಗೆದುಕೊಂಡು ಅದನ್ನು ಪರಿಶೀಲನೆಮಾಡಿದರೆ ಉತ್ತಮವೆಂದನ್ನಿಸುತ್ತದೆ. ಈವೊತ್ತಿನ ದಿವಸ ಒಂದು ಜಿಲ್ಲೆಯನ್ನು ತೆಗೆದುಕೊಳ್ಳಿ. ಅಲ್ಲಿ ಎಷ್ಟು ಸಹಕಾರ ಸಂಘಗಳಿವೆ, ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ಲೆಕ್ಕ ಹಾಕಿದರೆ ಗೊತ್ತಾಗುತ್ತದೆ. ತುಮಕೂರು ಜಿಲ್ಲೆಯಲ್ಲಿ ಡೆಪ್ಯುಟಿ ರಿಜಿಸ್ಟ್ರಾರ್ ಅವರು ಒಮ್ಮೆ ಭಾಷಣ ಮಾಡುತ್ತ ಜಿಲ್ಲೆಯಲ್ಲಿರುವ ಸಹಕಾರ ಸಂಘಗಳಲ್ಲಿ 13 ಮಾತ್ರ ಚೆನ್ನಾಗಿ ಕೆಲಸ ಮಾಡುತ್ತಿವೆ, 326 ಸಂಘಗಳು ಬಾಲ್ಯಾವಸ್ಥೆಯಲ್ಲಿವೆ, 368 ಸತ್ತುಹೋಗಿವೆ ಎಂದು ತಿಳಿಸಿದ್ದಾರೆ. ಹಾಗೆಯೇ ಖಾದಿ ಬೋರ್ಡ್ ಸೊಸೈಟಿಗಳನ್ನು ತೆಗೆದುಕೊಳ್ಳೋಣ. ಖಾದಿ ಬೋರ್ಡ್ ಸೊಸೈಟಿಗಳು 264 ಇವೆ, ಅವುಗಳಲ್ಲಿ 160 ಕೆಲಸ ಮಾಡುತ್ತಿಲ್ಲ ಎಂದು ಖಾದಿ ಬೋರ್ಡ್ ರಿಪೋರ್ಟಿನಲ್ಲಿ ಬರೆದಿದ್ದಾರೆ. ಹಾಗೆಯೇ ಲ್ಯಾಂಡ್

ಮಾರ್ಟ್‌ಗೇಜ್ ಬ್ಯಾಂಕ್ ತೆಗೆದುಕೊಂಡರೆ 172 ಸಂಘಗಳಲ್ಲಿ 110 ಸಂಘಗಳು ಕೆಲಸ ಮಾಡುವ ಸ್ಥಿತಿಯಲ್ಲಿಲ್ಲ. ಹೀಗೆ ನಾವು ಪ್ರಗತಿಯನ್ನು ಸಹಕಾರ ಕ್ಷೇತ್ರದಲ್ಲಿ ಸಾಧಿಸಿದ್ದೇವೆ ಎಂದರೆ ಯಾವ ಉದ್ದೇಶಕ್ಕಾಗಿ, ಯಾವ ಗುರಿಯನ್ನಿಟ್ಟುಕೊಂಡು ಸಹಕಾರ ಸಂಘಗಳನ್ನು ಸ್ಥಾಪನೆಮಾಡ ಲಾಯಿತೋ ಅದೆಲ್ಲ ನಾಶವಾಗಿ ವಿನಾಶದ ಹಾದಿಯಲ್ಲಿ ಸಹಕಾರ ಯಂತ್ರ ನಡೆಯುತ್ತಿದೆ ಎಂದರೆ ತಪ್ಪಾಗಲಾರದು. ಇದಕ್ಕೆ ಮುಖ್ಯಕಾರಣವೇನು ಎನ್ನುವುದನ್ನು ಕೂಡ ಯೋಚನೆ ಮಾಡಬೇಕಾ ಗಿದೆ. ಇದಕ್ಕೆ ಕಾರಣ ವಿಫಲ ಆಡಳಿತ ಎಂದು ಒತ್ತಿ ಒತ್ತಿ ಹೇಳಬೇಕಾಗಿದೆ.

ಸಹಕಾರ ರಂಗದಲ್ಲಿ ಮೂರು ನಾಲ್ಕು ಸಂಘಗಳಲ್ಲಿ ಕೆಲಸ ಮಾಡಿ ಅವುಗಳ ನಾಶಕ್ಕೆ ಕಾರಣ ರಾಗಿದ್ದು ಬೇರೊಂದು ಸಂಘವನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುವವರಿಗೆ ಇಲಾಖೆ ಯಿಂದ ಅನುಕೂಲಗಳು ದೊರೆಯುತ್ತವೆ. ಅಥವಾ ಅಂಥವರಿಗೆ ಬೇರೆ ಸಂಸ್ಥೆಗಳಲ್ಲಿ ಸ್ಥಾನಸಿಕ್ಕು ತ್ತದೆ. ತುಮಕೂರು ಜಿಲ್ಲೆಯಲ್ಲಿ ಒಬ್ಬ ಮನುಷ್ಯನ ಜೀವನ ಚರಿತ್ರೆಯನ್ನು ತೆಗೆದುಕೊಂಡರೆ ನಾಲ್ಕಾರು ಸೊಸೈಟಿಗಳನ್ನು ಹಾಳುಮಾಡಿದ್ದಾನೆ. ಎರಡು ಮೂರು ತಾಲ್ಲೂಕು ಮಟ್ಟದ ಸೊಸೈಟಿಗಳನ್ನು ಹಾಳು ಮಾಡಿದ್ದಾನೆ. ಅಂಥವರಿಗೆ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಬ್ಯಾಂಕಿನಲ್ಲಿ, 9 ಸಾವಿರ ರೂಪಾಯಿ ಸಾಲವನ್ನು ಪಡೆದಿದ್ದು ಆ ಸಾಲ ನುಸ್ತಿಯಲ್ಲಿದ್ದರೂ ಕೂಡ, ಅವರನ್ನು ಆ ಬ್ಯಾಂಕಿನಲ್ಲಿ ನಾಮಿನೇಟ್ ಮಾಡಿದ್ದಾರೆ. ಸರ್ಕಾರದ ದೃಷ್ಟಿಕೋನ ಯಾವ ರೀತಿಯಲ್ಲಿದೆ ಎಂದು ಹೇಳುತ್ತಿದ್ದೇನೆ. 20 ಸಾವಿರ ಸಹಕಾರ ಸಂಘಗಳಲ್ಲಿ 36 ಕೋಟಿ ರೂಪಾಯಿಗಳ ಷೇರು ಬಂಡ ವಾಳವಿದ್ದು 121 ಕೋಟಿ ರೂಪಾಯಿ ವ್ಯವಹಾರ ನಡೆದಿದೆ ಎಂದು ಅಂಕಿ ಸಂಖ್ಯೆಗಳ ಒಂದು ದೊಡ್ಡ ಪಟ್ಟಿಯನ್ನೇ ನಮ್ಮ ಮುಂದೆ ಇಟ್ಟರು. ಈ ಸಂಘಗಳಲ್ಲಿ ಬದುಕಿರುವುದೆಷ್ಟು, ಸತ್ತಿರು ವುದು ಎಷ್ಟು, ಹಣ ದುರುಪಯೋಗವಾಗಿರುವ ಸಂಘಗಳೆಷ್ಟು ಭ್ರಷ್ಟಾಚಾರ ಇರುವ ಸಂಘಗಳೆಷ್ಟು, ಭ್ರಷ್ಟಾಚಾರ ಇಲ್ಲದೆ ಇರುವ ಸಂಘಗಳೆಷ್ಟು, ಎನ್ನುವ ಅಂಕಿ ಅಂಶಗಳನ್ನೆಲ್ಲ ಹೇಳಿದ ಪಕ್ಷದಲ್ಲಿ ಅವರು ಕೊಟ್ಟಿರುವ ಅಂಕಿ ಅಂಶಗಳ ಸತ್ಯಾಸತ್ಯತೆಯನ್ನು ತಿಳಿಯಲು ಅನುಕೂಲವಾಗುತ್ತದೆ. ಈ ದೇಶದಲ್ಲಿ ಸಹಕಾರ ಹೇಗೆ ಬೆಳೆಯುತ್ತಿದೆ ಎಂದರೆ ಸಹಕಾರ ಇಲಾಖೆಯನ್ನು ಎಷ್ಟು ಬೇಗ ಮುಚ್ಚಿದರೆ ಅಷ್ಟು ಬೇಗ ದೇಶಕ್ಕೆ ಕ್ಷೇಮವಾಗುತ್ತದೆ. ಅಷ್ಟು ಭ್ರಷ್ಟಾಚಾರ ಇದರಲ್ಲಿದೆ.

ನಾಲ್ಕಾರು ವರ್ಷಗಳಿಂದ ಕೆಲವು ಕಡೆ ಆಡಿಟ್ ಆಗಿಲ್ಲ. ಪ್ರತಿವರ್ಷವೂ ಆಡಿಟ್ ಆಗದಿದ್ದರೆ ಲೋಪವೇನಿದೆ ಎನ್ನುವುದನ್ನು ತಿಳಿದುಕೊಂಡು ತಿದ್ದಿಕೊಳ್ಳುವುದೂ ಕಷ್ಟ, ಬರುವ ಹಣವನ್ನು ವಸೂಲುಮಾಡುವುದೂ ಕಷ್ಟ. ಇದೆಲ್ಲ ಏತಕ್ಕೋಸ್ಕರ ಆಗುತ್ತಿದೆ ಎಂದರೆ ಸಡಿಲವಾದ ಆಡಳಿತದಿಂದ. ಸಹಕಾರ ಇಲಾಖೆಯ ಜವಾಬ್ದಾರಿ ಹೊತ್ತಿರುವ ಮಂತ್ರಿಗಳು ಇದರ ಪ್ರಗತಿಯ ಚಿತ್ರವನ್ನು ನೋಡಿಕೊಂಡ ಪಕ್ಷದಲ್ಲಿ ತಲೆ ತಗ್ಗಿಸುವ ಪ್ರಸಂಗವಾಗುತ್ತದೆ ಎಂದು ನಾನಾದರೂ ಹೇಳುತ್ತೇನೆ. ನಾನು ಕೆಲವು ಸಹಕಾರ ಸಂಘಗಳ ಸ್ಥಾಪನೆಯಲ್ಲಿ ಆಸಕ್ತಿ ವಹಿಸಿ ಹತ್ತಾರು ಸಾವಿರ ರೂಪಾಯಿ ವಸೂಲುಮಾಡಿ ಷೇರು ಬಂಡವಾಳ ವಸೂಲುಮಾಡಿ ಸಂಘಗಳನ್ನು ರಿಜಿಸ್ಟರು ಮಾಡಿಸಿದೆ. ಆದರೆ ಇಂದು ಆ ಸೊಸೈಟಿಗಳು ಹಾಳಾಗಿವೆ. ಆದುದರಿಂದ ಷೇರು ಹಾಕಿರುವವರು ಅದನ್ನು ವಾಪಸು ಕೊಡಿಸಬೇಕೆಂದು ಬಂದು ನನಗೆ ಹೇಳುತ್ತಿದ್ದಾರೆ, ಇದು ನಿಜವಾಗಿಯೂ ಷೇರುದಾರರು ಹೇಳಿ ರುವ ಮಾತು. ಎರಡು ವರ್ಷಗಳ ಕೆಳಗೆ ಕನ್‌ಸ್ಯೂಮರ್ ಸೊಸೈಟಿಗೆ ಡೆಪ್ಯುಟಿ ರಿಜಿಸ್ಟ್ರಾರರು ಬಂದಾಗ 4,000 ರೂಪಾಯಿಗಳನ್ನು ವಸೂಲುಮಾಡಿ ಕೊಡಿಸಿದೆ, 8,000 ರೂಪಾಯಿಗಳ ಸಾಲ ವನ್ನು ಡಿಸ್ಟ್ರಿಕ್ ಬ್ಯಾಂಕಿನಿಂದ ತೆಗೆದುಕೊಂಡರು. ಇಂದು ಆಡಿಟ್ ವರದಿ ನೋಡಿ, ಜಾಸ್ತಿ ಹಣ ದುರುಪಯೋಗವಾಗಿದೆ, 15 ಸಾವಿರ ಚಿಲ್ಲರೆ ಮಿಸ್ ಅಪ್ರೋಪ್ರಿಯೇಷನ್ ಆಗಿದೆ, 533 ರೂಪಾಯಿ ಅದಕ್ಕೆ ಬಡ್ಡಿ, 3980 ರೂಪಾಯಿ ದಿನಸಿ ಷಾರ್ಟೇಜ್ ಬಂದಿದೆ, 800 ರೂಪಾಯಿ ಅನ್‌ಅಕೌಂಟೆಡ್ ಇದೆ, ಆ 4 ಸಾವಿರ ಚಿಲ್ಲರೆ ಬಂಡವಾಳವಿರುವ ಸೊಸೈಟಿಯಲ್ಲಿ ಇಷ್ಟು ಹಣದ ದುರುಪಯೋಗ ವಾಗಿದೆ, ಮೂರು ಕಾಸೂ ಇಲ್ಲ. ಷೇರು ಹಾಕಿರುವವರು ಒದ್ದಾಡುತ್ತಿದ್ದಾರೆ. ಹೀಗಿದ್ದರೆ ಬೆಳವಣಿಗೆ ಯಾವರೀತಿ ಆಗುತ್ತದೆ ಎಂಬುದನ್ನು ನೋಡಬೇಕು.

ಇನ್ನೊಂದು ಸಂಘ ತಾಲ್ಲೂಕು ಮಟ್ಟದಲ್ಲಿದೆ, ಅದರಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡಿನ ಪ್ರಕಾರ ಮ್ಯಾನೇಜರ್ ಮತ್ತು ಆಡಳಿತದಮೇಲೆ ಕ್ರಮ ತೆಗೆದುಕೊಳ್ಳುವ ಪರಿಸ್ಥಿತಿ ಇದೆ. ಅಲ್ಲಾಗಿರುವ ಭ್ರಷ್ಟಾಚಾರವನ್ನು ರುಜುವಾತು ಮಾಡಿದರೂ ಕೂಡ ಸರಕಾರ ಅಲ್ಲಿಯ ಮ್ಯಾನೇಜರ್ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಮುಖ್ಯ ಮಂತ್ರಿಗಳಿಗೆ ಕಾಗದ ಬರೆದೆ, ಅವರು ಜವಾಬು ಕೊಟ್ಟರು, ಕ್ರಮ ತೆಗೆದುಕೊಳ್ಳುತ್ತೇವೆಂದು ತಿಳಿಸಿದರು. ಮ್ಯಾನೇಜರನ್ನು ವರ್ಗ ಮಾಡಿದರು. 3 ತಿಂಗಳಾಯಿತು, ಬೇರೆ ಮ್ಯಾನೇಜರ್ ಬಂದರೂ ಛಾರ್ಜ್ ಕೊಟ್ಟಿಲ್ಲ. ಎಂ. ಎಲ್. ಎ. ಮಾತಿನಿಂದ ಏನಾಯಿತು ಎಂದು ಕೆಟ್ಟಮಾತು ಹೇಳುತ್ತಿದ್ದಾರೆ. ಇದಕ್ಕೆ ನಾನು ರಾಜೀನಾಮೆ ಕೊಡಬೇಕೇ ಅಥವಾ ಸರಕಾರವನ್ನು ತೆಗಳಬೇಕೇ? ತಮ್ಮ ಪ್ರೇರೇಪಣೆಯ ಮೇಲೆ ವರ್ಗ ಮಾಡಿರುವಾಗ ಛಾರ್ಜ್ ಕೊಡದೇ ಇದ್ದರೆ ಸಹಕಾರ ಮಂತ್ರಿಗಳು ಇಂಥವರಿದ್ದರೆ ಗೌರವ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಬರುವುದೇ! ಇಂಥ ಮಂತ್ರಿಗಳು ರಾಜೀನಾಮೆ ಕೊಡುವವರೆಗೆ ಈ ಇಲಾಖೆ ಖಂಡಿತ ಮುಂದುವರೆಯುವುದಿಲ್ಲ. ನಾನು ಹತ್ತಾರು ಸಂಘಗಳಲ್ಲಿ ಅಧ್ಯಕ್ಷನಾಗಿ, ಡೈರೆಕ್ಟರಾಗಿ ಕೆಲಸಮಾಡಿದ್ದೇನೆ. ಅವನು ಮೋಸಮಾಡಿರುವುದು ಹೇಗಿದೆಯೆಂಬುದನ್ನು ಹೇಳುತ್ತೇನೆ. ಆಡಿಟ್ ವರದಿ ಇಂಗ್ಲೀಷಿನಲ್ಲಿರುವುದನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಪ್ರಿಂಟ್ ಮಾಡಿಸಿ ಹಂಚಿದ್ದಾರೆ. ತಮ್ಮ ಮೇಲಿರುವ ಆಪಾದನೆಗಳನ್ನು ಬಿಟ್ಟು ತುಮಕೂರು—ಚಿಕ್ಕನಾಯಕನಹಳ್ಳಿಗೆ ಸಂಬಂಧಪಟ್ಟಂತೆ 9 ರೂಪಾಯಿಯನ್ನು ಒಂಪಕ್ಕೆ ಬಾಡಿಗೆ ವೋಚರ್ ಇರುವುದು 11 ರೂಪಾಯಿ ಎಂದೂ ತೋರಿಸಿದ್ದಾರೆ, ಹೀಗೆ ಇಂಗ್ಲೀಷಿನಲ್ಲಿರುವುದೇ ಒಂದು ಕನ್ನಡದಲ್ಲಿ ಇರುವುದೇ ಒಂದು, ಈ ರೀತಿ ಮಾಡಿ ಹಂಚಿದ್ದಾರೆ. ಇಂಥ ಮೋಸ ಮಾಡಿರುವ ಒಬ್ಬ ಮನುಷ್ಯನನ್ನು ಮುಂದುವರೆಸುತ್ತಿದ್ದಾರೆ. ಇದರಿಂದ ಆಡಳಿತ ಎಷ್ಟು ಸಡಿಲವಾಗಿದೆ ಎಂಬುದು ವ್ಯಕ್ತವಾಗುವುದು. ಇದರಿಂದ ಖಂಡಿತ ಸಹಕಾರ ಇಲಾಖೆಯ ಉದ್ದೇಶ ಖಂಡಿತ ಸಾಧನೆಯಾಗುವುದಿಲ್ಲ.

ಅನೇಕ ಮಿತ್ರರು ಇಂದು ಸಹಕಾರ ಇಲಾಖೆಯನ್ನು ರದ್ದುಮಾಡಬೇಕು ಎಂದು ಹೇಳುತ್ತಿದ್ದಾರೆ, ಅಡ್ಮಿನಿಸ್ಟ್ರೇಟೀವ್ ರಿಫಾರಂಸ್ ಕಮಿಟಿ ಕೂಡ ಹೇಳಿದೆ. ಮೈಸೂರಿನಲ್ಲಿ ಹಿಂದೆ ಕಡಮೆ ಸಹಕಾರ ಸಂಘಗಳಿದ್ದಾಗ ಕಡಿಮೆ ಬಂಡವಾಳವಿದ್ದರೂ ಒಳ್ಳೆಯ ಕ್ವಾಲಿಟಿ ಇತ್ತು, ಪ್ರಾಮಾಣಿಕತನವಿತ್ತು. ಬೆಂಗಳೂರಿನಲ್ಲಿ 300 ರೂಪಾಯಿ ದುರ್ವ್ಯಯಕ್ಕೆ ಸಂಬಂಧಪಟ್ಟ ಒಂದು ಕೇಸಿದ್ದಾಗ ಹಿಂದೆ ಕೋರ್ಟಿನ ಬಳಿ ಒಂದು ಸಾವಿರ ಜನ ಸೇರಿದ್ದರು, ಹಣ ತಿಂದುಹಾಕುವುದಕ್ಕೆ ಹಿಂದೆ ಭಯವಿತ್ತು, ಸರಕಾರದ ಅಂಜಿಕೆಯಿತ್ತು. ಆದರೆ ಇಂದು ಒಂದೆರಡು ಲಕ್ಷ ತಿಂದುಹಾಕಿರುವ ನಿದರ್ಶನಗಳಿವೆ, ಹ್ಯಾಂಡ್‌ಲೂಂ ಸೊಸೈಟಿಯಲ್ಲಿ ನಾಲ್ಕೂವರೆ ಲಕ್ಷ ಷಾರ್ಟೇಜ್ ಇದೆ. ದೊಡ್ಡ ಸಿಲ್ಕ್ ಸೊಸೈಟಿಯಲ್ಲಿ ಲೆಕ್ಕಕ್ಕೆ ಎರಡು ಸಾವಿರ ಸೇರಿದಂತೆ ಮಾಡಿದ್ದಾರೆ, ಕ್ರಮ ತೆಗೆದುಕೊಂಡಿಲ್ಲ. ಮುಖ್ಯಮಂತ್ರಿಗಳು ದೀರ್ಘವಾಗಿ ಯೋಚನೆ ಮಾಡಬೇಕು. ಇಂದು 21 ಕೋಟಿ ಬಂಡವಾಳ ಹಾಕಿದ್ದೇವೆ, ನೂರಾರು ಸೊಸೈಟಿಗಳಲ್ಲಿ ಲಕ್ಷಾಂತರ ರೂಪಾಯಿಗಳಿಗೆ ಗ್ಯಾರಂಟಿ ನಿಂತಿದ್ದೇವೆ, ಅಪೆಕ್ಸ್ ಬ್ಯಾಂಕ್, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗೆ ಗ್ಯಾರಂಟಿ ನಿಂತಿದ್ದೇವೆ ಎಂದು ಸರಕಾರ ಹೇಳುತ್ತದೆ. ಹೀಗಿರುವಾಗ ಬೇಕಾದಷ್ಟು ಹಣ ದುರುಪಯೋಗವಾಗುತ್ತಿರುವಾಗ ಸರಕಾರ ದೀರ್ಘವಾಗಿ ಯೋಚನೆ ಮಾಡಬೇಕು. ಕೆಲವು ಸೊಸೈಟಿಗಳ ಪುನರ್ಮೌಲ್ಯ ಮಾಡಬೇಕು, ಎಷ್ಟು ಸಂಘಗಳು ಚೆನ್ನಾಗಿವೆ, ಎಷ್ಟು ಹಾಳಾಗಿವೆ ಎಂದು ಲೆಕ್ಕ ಹಾಕಬೇಕು. 20 ಸಾವಿರ ಸಹಕಾರ ಸಂಘಗಳು ಸ್ಥಾಪಿಸಲ್ಪಟ್ಟಿವೆ, 31 ಕೋಟಿ ರೂಪಾಯಿಗಳ ಷೇರು ಬಂಡವಾಳವಿದೆ, 121 ಕೋಟಿ ರೂಪಾಯಿಗಳ ವ್ಯವಹಾರವಿದೆ. ಆದರೆ ಇಷ್ಟು ಸೊಸೈಟಿಗಳ ಚಿತ್ರ ನೋಡಿದರೆ ಕುರೋ ಕುರೋ ಎಂದು ನಾಯಿಯನ್ನು ಕರೆಯುವಂತಿದೆ. ನಿಮ್ಮ ಕೈಲಿ ಇವುಗಳನ್ನು ಸರಿಯಾಗಿ ನಡೆಸುವುದಕ್ಕಾಗುವುದಿಲ್ಲ. ದಿಟ್ಟತನದಿಂದ ನ್ಯಾಯವಾಗಿ ಪ್ರಾಮಾಣಿಕತೆಯಿಂದ ಈ ಸಂಘಗಳನ್ನು ನಡೆಸುವ ಶಕ್ತಿ ನಿಮಗಿಲ್ಲ, ರುಜುವಾತು ಮಾಡುತ್ತೇನೆಂದು ಹೇಳಿದಾಗ ಕಾಗದ ಬರೆದರೆ ಜವಾಬು ಕೊಡಬೇಕಾಗಿತ್ತು. ಜಾಯಿಂಟ್ ರಿಜಿಸ್ಟ್ರಾರರು ತಾವು ನಿಸ್ಸಹಾಯಕರು ಎಂದು ಹೇಳಿದರು, ನಿಜ. ನೀವು ಹೇಳಿದಹಾಗೆ ಕೇಳಬೇಕು, ಎಲ್ಲಾ ನಿಮ್ಮ ಬಾಲಬಡುಕರು, ರಿಜಿಸ್ಟ್ರಾರರ ಆಡಳಿತದಲ್ಲಿ ಸರಕಾರ ತಲೆ ತಗ್ಗಿಸಬೇಕಾಗಿದೆ. ಬ್ಯಾಲೆನ್ಸ್ ಷೀಟ್ ತೋರಿಸಿ ಇರುವ ಲೋಪದೋಷಗಳನ್ನು ತಿಳಿಸಿದಾಗ ತಕ್ಷಣ ಸ್ಟೆನೋಗ್ರಾಫರನ್ನು ಕರೆಸಿ ಡಿಕ್ಟೇಟ್ ಮಾಡಿದರು, ನಂತರ ಏನು ಮಾಡಿದರೋ ಏನೋ. ಇಂದು ಜರ್ಪಾ ದೇಶದಲ್ಲಿ ಸಹಕಾರ ಸಂಘಗಳಲ್ಲಿ ಷೇರ್‌ಹೋಲ್ಡರಾಗಬೇಕಾದರೆ ಅಪ್ಲಿಕೇಷನ್ ಫಾರಂನಲ್ಲಿ ತಾನು ಯಾವ ಸಂಘದಲ್ಲಿ ಮೆಂಬರಾಗಿದ್ದ, ಬಾಕಿ ಕೊಡಬೇಕಾದ್ದಿದೆಯೋ ಮುಂತಾದ ವಿವರಗಳನ್ನೆಲ್ಲಾ ತಿಳಿಸಬೇಕು. ಆದರೆ ಇಲ್ಲಿ ಹೇಗಿದೆ? ಸೊಸೈಟಿಗಳು ಜನರಿಗೆ ಮಾಡಿರುವ ಉಪಕಾರವಾದರೂ ಏನು? ಇಂದು ಸಾವಿರಾರು ಸಂಘಗಳಲ್ಲಿ ಹಣ ದುರ್ವ್ಯಯವಾಗಿದೆ, ದೇಶದ ಹಣ ಹಾಳಾಗುತ್ತಿದೆ, ಸರಕಾರದ ಯಂತ್ರ ಯಾವರೀತಿ ಉರುಳುತ್ತಿದೆಯೆಂಬುದನ್ನು ಯೋಚನೆಮಾಡಬೇಕು. ಇನ್ನುಮುಂದಾದರೂ ಹೊಸದಾಗಿ ಕೋಆಪರೇಟಿವ್ ಇಲಾಖೆಗೆ ಬಂಡವಾಳ ಹಾಕುವಾಗ ಒಂದು ಇವ್ಯಾಲ್ಯುಯೇಷನ್ ವರದಿ ತರಿಸಿ ಮುಂದೆ ಹೆಜ್ಜೆ ಇಡಬೇಕು. ಈ ಖಾತೆಯ ಮಂತ್ರಿಗಳು ಪ್ರಾಮಾಣಿಕವಾಗಿ ನಡೆಯಬೇಕು, ಕಾಂಗ್ರೆಸ್ ಅಥವಾ ಇತರರು, ಅಧಿಕಾರಿ ಅಥವಾ ಇತರರು ಯಾರೇ ಆಗಲಿ ತಪ್ಪು ಮಾಡಿದಾಗ ನಿರ್ದಾಕ್ಷಿಣ್ಯವಾಗಿ, ನಿಷ್ಪಕ್ಷಪಾತವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಅವರಿಗೆ ಮನಸ್ಸಿಲ್ಲದಿದ್ದರೆ ಅವರು ಈ ಇಲಾಖೆಯಲ್ಲಿರುವುದಕ್ಕೆ ಲಾಯಕ್ಕಿಲ್ಲ. ನಿಜವಾಗಿಯೂ ಹಳೆಯ ಮೈಸೂರಿದ್ದಾಗ ಈ ಇಲಾಖೆಯ ಆಡಳಿತ ಚೆನ್ನಾಗಿತ್ತು. ಇಂದು ಆಡಳಿತ ಹದಗೆಟ್ಟಿದೆ, ಕೋತಿ, ಕರಡಿಗಳನ್ನು ಇಲಾಖೆಯಲ್ಲಿ ಕೂಡಿಸಿದ್ದಾರೆ ಎಂದು ವ್ಯಥೆಯಿಂದ ಹೇಳಬೇಕಾಗಿದೆ. ಹೀಗಾಗುವುದಕ್ಕೆ ಅವಕಾಶ ಕೊಡಬಾರದು ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಇನ್ನೂ 5 ಜನ ಸದಸ್ಯರು ಮಾತನಾಡುವವರಿದ್ದಾರೆ, ಒಬ್ಬೊಬ್ಬರಿಗೆ 5 ನಿಮಿಷ ಕೊಟ್ಟರೂ ಅರ್ಧ ಘಂಟೆ ಬೇಕಾಗುತ್ತದೆ.

Is it the pleasure of the House to extend the time to 8-30 P.M.?

HON. MEMBERS.—Yes.

Mr. DEPUTY SPEAKER.—The time is extended up to 8-30 P.M.

7-00 P.M.

† ಶ್ರೀ ಎಂ. ದೊಡ್ಡಣ್ಣಗೌಡ (ಸಿರಗುಪ್ಪ).—ಮಾನ್ಯ ಸಭಾಪತಿಗಳೇ, ಇಂದು ನಮ್ಮ ಮುಂದೆ ಇರುವ ಡಿಮ್ಯಾಂಡುಗಳನ್ನು ಸ್ವಾಗತಿಸುತ್ತಾ ಕೆಲವು ಅಂಶಗಳನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಇಂದು ಈ ಡಿಮ್ಯಾಂಡುಗಳ ಬಗ್ಗೆ ಟೀಕೆ ಬಂದದ್ದನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಪ್ರತಿಯೊಬ್ಬ ಸದಸ್ಯರು ತಮ್ಮ ತಮ್ಮಲ್ಲಿಯ ಕ್ಷೇತ್ರದ ಒಂದೆರಡು ಸೊಸೈಟಿಗಳ ಅವಾಂತರ ಮತ್ತು ಕದೀಮರ ವಿಷಯವನ್ನು ಮಾತನಾಡಿರುತ್ತಾರೆ. ಈ ಶಾಖೆಯಲ್ಲಿ ಅನೇಕ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಾ ಇವೆ. ಇವತ್ತು ನಮ್ಮ ದೇಶದ ಬೆನ್ನೆಲುಬು ಎಂದು ಹೇಳುತ್ತಿರುವ ಒಕ್ಕಲಿಗರು ಸುಧಾರಿಸಿಕೊಳ್ಳಬೇಕಾದರೆ ಈ ಸೊಸೈಟಿಗಳ ಮುಖಾಂತರ ಅವರಿಗೆ ಅರ್ಥಿಕ ನೇರವು ನೀಡಿ ಸುಧಾರಿಸಬಹುದು ಎಂಬ ಬಯಕೆಯಿಂದ ಈ ಹೊಣೆಯನ್ನು ಹೊತ್ತಿರುತ್ತೇವೆ, ಅನೇಕ ಸೊಸೈಟಿಗಳು ಹಣದ ಅಪವ್ಯಯ ಮಾಡುತ್ತಿರಬಹುದು, ಆದರೆ ಈ ಸೊಸೈಟಿಗಳ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಸರ್ಕಾರದ ಜವಾಬ್ದಾರಿ ಇದೆ. ಆ ಬಗ್ಗೆ ಎಫಿಷೆನ್ಸಿ ಆಡಿಟ್ ಅಥವಾ ಎಫಿಷೆನ್ಸಿ ಶಾಖೆಯನ್ನು ನೇಮಿಸಿ ಯಾವ ಸೊಸೈಟಿಗಳಲ್ಲಿ ಕದೀಮರು ಅವಾಂತರ ಮಾಡುತ್ತಾ ಇರುತ್ತಾರೆ ಆ ಬಗ್ಗೆ ಸಕ್ರಮವಾದ ಕಾರ್ಯಕ್ರಮ ತೆಗೆದುಕೊಳ್ಳತಕ್ಕ ಕರ್ತವ್ಯ ಸರ್ಕಾರದ ಮೇಲಿದೆ. ಈಗ ಸಹಕಾರಿ ಸೊಸೈಟಿಗಳ ಮೂಲಕ ರೈತರು ಆಹಾರ ಬೆಳೆಯಲು ಮತ್ತು ಅವರವರ ಜಮೀನುಗಳನ್ನು ಅಭಿವೃದ್ಧಿ ಮಾಡಿಕೊಳ್ಳಲು ಅನೇಕ ರೀತಿಯಾದ ಸಹಕಾರ ಕೊಡುತ್ತಾ ಇದ್ದೇವೆ. ನಮ್ಮ ರಾಜ್ಯದಲ್ಲಿ ಫಾರ್ಮಿಂಗ್ ಸೊಸೈಟಿಗಳು 556 ಕೆಲಸ ಮಾಡುತ್ತಾ ಇವೆ. ಲಿಫ್ಟ್ ಇರಿಗೇಷನ್ ಸೊಸೈಟಿಗಳು 43 ಕೆಲಸ ಮಾಡುತ್ತಾ ಇವೆ, ಇನ್ನೂ ಅನೇಕ ಸೊಸೈಟಿಗಳು ಪ್ರಾರಂಭವಾಗಿ ನಮ್ಮ ರಾಜ್ಯದ ಆಹಾರ ಪರಿಸ್ಥಿತಿಯನ್ನು ಉತ್ತಮಗೊಳಿಸುವ ಅವಶ್ಯಕತೆ ಇದೆ. ರೈತನಿಗೆ ಬೇಕಾಗುವ ಫರ್ಟಿಲೈಸರ್ಸ್, ಸೀಮೆ ಗೊಬ್ಬರ ಹಿಂದಿನ ವರ್ಷ ಸಕ್ರಮವಾಗಿ ಸಪ್ಲೈ ಆಗುತ್ತಾ ಇದ್ದು ಈ ವರ್ಷ ಕೇಂದ್ರ ಸರ್ಕಾರದವರು ಹೊರಿಸಿರುವ ಹೆಚ್ಚಿನ ಹಣವನ್ನು ನಮ್ಮ ಸರ್ಕಾರದವರು ಆದಷ್ಟು ತೆಗೆಯುವಂತೆ ಏರ್ಪಾಡು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಬಳ್ಳಾರಿ ಜಿಲ್ಲೆ ತುಂಗಭದ್ರಾ ನೀರಾವರಿ ಪ್ರದೇಶದಲ್ಲಿ ಇದೆ, 1968ರಿಂದ ಅಗ್ರಿಕಲ್ಚರ್ ರೀಫೈನಾನ್ಸ್ ಕಾರ್ಪೊರೇಷನ್‌ನವರು ಲ್ಯಾಂಡ್ ಡೆವಲಪ್ ಮಾಡಲು ಸಹಾಯ ಮಾಡಲಿಕ್ಕೆ ಮುಂದೆ ಬಂದಿದ್ದಾರೆ ಒಂದು ವರ್ಷವಾದರೂ ಕೂಡ ಯಾವ ಅಪ್ಲಿಕೇಷನ್‌ಗೂ ಸಹಾಯವನ್ನು ಪಡೆಯಲು ಅವಕಾಶವಿಲ್ಲದಂತಾಗಿದೆ. ಈ ವಿಷಯ ಮಾನ್ಯ ಮುಖ್ಯಮಂತ್ರಿಗಳ ಗಮನದಲ್ಲೂ ಇದೆ. ಅಲ್ಲಿ ಡೆವಲಪ್ ಆಗದಂತಹ ಭೂಮಿಗಳ ಮೇಲೆ ಅನರ್ಕಾಯಕ ರೈತರ ಮೇಲೆ ವಾಟರ್ ರೇಟ್ ಹಾಕಿರುವುದು ಮತ್ತು ಪೆನಾಲ್ಟಿ ಹಾಕಿರುವುದರಿಂದ ಎ.ಆರ್.ಸಿ. ಸ್ಕೀಂ ಪ್ರಕಾರ ಯಾವ ಆರ್ಥಿಕ ನೇರವು ಬಯಸಿದ್ದರೋ ಅದು ಸಿಕ್ಕದಂತಾಗಿದೆ. ಬಳ್ಳಾರಿ, ಸಿರಗುಪ್ಪಾ, ಹೊಸಪೇಟೆ ತಾಲ್ಲೂಕುಗಳಲ್ಲಿ 75 ಸಾವಿರ ಎಕರೆ ಭೂಮಿ ಡೆವಲಪ್ ಆಗುವುದು ಇದೆ. ಈ ಬಗ್ಗೆ ಮುಖ್ಯಮಂತ್ರಿಗಳು ತೀವ್ರವಾದ ಗಮನವನ್ನು ಕೈಕೊಳ್ಳದಿದ್ದರೆ ದೇಶದ ಆಹಾರ ಪರಿಸ್ಥಿತಿ ಕೆಟ್ಟುಹೋಗುತ್ತದೆ. ರೈತನ ಉಳಿವು ಕೂಡ ಇಲ್ಲದಂತಾಗುತ್ತದೆ.

ನಮ್ಮ ಫೈನಾನ್ಸ್ ಮಿನಿಸ್ಟರು ಈ ಸೊಸೈಟಿಗಳಿಗೆ ಒಂದು ಹೆಚ್ಚಿನ ಎಚ್ಚರಿಕೆ ಕೊಟ್ಟಿರುವುದನ್ನು ನಾನು ಸ್ವಾಗತಿಸುತ್ತೇನೆ. ಯಾವ ಸೊಸೈಟಿ ಆಗಲಿ ಸ್ಟೇಟ್ ಆಡಿಟ್‌ಗೆ ಒಳಗಾಗಬೇಕೆಂದು ಅವರು ಸೂಚಿಸಿರುತ್ತಾರೆ. ಕೋ ಅಪರೇಟೀವ್ ಶಾಖೆ ರೈತನ ಎಳಿಗೆಗಾಗಿ ರೈತನ ಉದ್ಧಾರಕ್ಕಾಗಿ ಕೆಲವೊಂದು ಕ್ರಮವನ್ನು ನಡಿಲ ಮಾಡಿರುವುದು ನಿಜ. ಅನೇಕ ಸದಸ್ಯರ ವಾದ ರೈತರ ಎಳಿಗೆಗಾಗಿ ಕೆಲವು ದೋಷಗಳು ಇಧ್ಧರೂ ಕೂಡ ಅದನ್ನು ಪರಿಗಣಿಸದೇ ಇರುವುದು ನಿಜ. ಕೋ ಅಪರೇಟೀವ್ ಶಾಖೆಯಲ್ಲಿ ತನ್ನದೆ ಆದ ಒಂದು ಆಡಿಟ್ ಶಾಖೆ ಇದೆ, ಅದನ್ನು ಉಳಿಸಿಕೊಂಡು ದಕ್ಷತೆಯಿಂದ ಕೆಲಸ ಕಾರ್ಯಗಳು ನಡೆಯುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಂಚಾಯಿತಿಗಳ ಬಗ್ಗೆ ಹೇಳಬೇಕಾದರೆ 8 ವರ್ಷಗಳ ಹಿಂದೆ ಈ ಒಂದು ವ್ಯವಸ್ಥೆ ಶುರುವಾಗಿ ಈಗ ಎರಡನೆ ಸಲ ಚುನಾವಣೆಗಳು ನಡೆದು ಅವು ಅಧಿಕಾರಕ್ಕೆ ಬಂದಿವೆ. ಹಳ್ಳಿಗಳ ಅಭಿವೃದ್ಧಿ ಯಾವ ರೀತಿಯಿಂದಲೂ ನಡೆದಿಲ್ಲ ಅದಕ್ಕೆ ಸರ್ಕಾರದ ಸಕ್ರಮವಾದ ಸೂಪರ್‌ವಿಜನ್

(ಶ್ರೀ ಎಂ. ದೊಡ್ಡಣ್ಣಗೌಡ)

ಇಲ್ಲದೇ ಇರುವುದೇ ಕಾರಣವಾಗಿದೆ. ನಮ್ಮ ದೇಶದ ಅಭಿವೃದ್ಧಿಯಾಗಬೇಕಾದರೆ ಗ್ರಾಮಗಳ ಅಭಿವೃದ್ಧಿ ಮತ್ತು ರೈತನ ಅಭಿವೃದ್ಧಿಯು ಮೇಲೆ ಉಳಿದಿದೆ. ಈ ರೀತಿಯಾಗಿ ರೈತರನ್ನು ಅನಾದರಣೆ ಮಾಡಿದ್ದೇ ಆದರೆ ರೈತ ಕ್ಷೋಭೆಗೊಂಡರೆ ಯಾವ ಸರ್ಕಾರವೂ ಉಳಿಯುವಂತೆಯೇ ಇಲ್ಲ. ಆದ್ದರಿಂದ ಈ ಪಂಚಾಯ್ತಿಗಳ ಒಂದು ಸೂಪರ್‌ವಿಜನನ್ನು ಚೆನ್ನಾಗಿ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಡೆವಲಪ್‌ಮೆಂಟ್ ಬಗ್ಗೆ ಹೇಳಬೇಕಾದರೆ, ತಾಲ್ಲೂಕು ಬೋರ್ಡುಗಳು ಚೆನ್ನಾಗಿ ಕೆಲಸ ಮಾಡುತ್ತಾ ಇವೆ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಅಂತ ಹೇಳಿ ಒಂದು ಅಧಿಕಾರಯುತವಾದ ಒಂದು ಬಾಡಿ ಇವೆ, ಅದು ಪ್ರಜಾಪ್ರಭುತ್ವಕ್ಕೆ ಅನುಗುಣವಾದ ಬಾಡಿ ಅಲ್ಲ, ಆದಷ್ಟು ಬೇಗ ಅಲ್ಲಿ ಒಂದು ನಾನ್ ಅಫಿಷಿಯಲ್ ಬಾಡಿ ನೇಮಕ ಮಾಡಿ ತಾಲ್ಲೂಕು ಮತ್ತು ಪಂಚಾಯ್ತಿಯವರು ಸಕ್ರಮವಾಗಿ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುವಂತೆ ಒಂದು ಏರ್ಪಾಡನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಅಧ್ಯಕ್ಷರು ಒಂದೆರಡು ಮಾತುಗಳನ್ನಾಡಲು ಅನುವು ಮಾಡಿಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ನನಗೆ ಸಿಕ್ಕಿರುವ ಕಾಲಾವಕಾಶ ಬಹಳ ಕಡಿಮೆ. ಇದರಲ್ಲಿ ಬಹಳ ಮುಖ್ಯವಾದ ಸಂಗತಿಗಳನ್ನು ಹೇಳಬೇಕೆಂದು ಇದ್ದೇನೆ. ಈ ಸಹಕಾರ ತತ್ವದ ಬಗ್ಗೆ ಹೇಳಬೇಕಾದರೆ ನಮ್ಮ ಸರ್ಕಾರದವರು ವಿರೋಧ ಪಕ್ಷಗಳವರು ಇರತಕ್ಕ ಕಡೆ ಎಷ್ಟೇ ಚೆನ್ನಾಗಿ ದ್ದರೂ ಅವರನ್ನು ದಮನ ಮಾಡಬೇಕು. ಸ್ವಜನರು, ತಮ್ಮ ಪಕ್ಷದವರು ಇದ್ದಕಡೆ ಎಷ್ಟೇ ಕೆಟ್ಟ ರೀತಿಯಲ್ಲಿ ವ್ಯವಹಾರ ನಡೆಸಿದರೂ ಕೂಡ, ಸಹಕಾರ ಸಂಘದ ದುಡ್ಡನ್ನು ಯಾರೇ ನುಂಗಿ ನೀರು ಕುಡಿದರೂ ಅವರನ್ನು ರಕ್ಷಣೆ ಮಾಡಬೇಕು, ಅವರನ್ನು ಮೇಲಕ್ಕೆ ತರಬೇಕು ಎಂಬ ತತ್ವವನ್ನು ಹಾಕಿಕೊಂಡ ಹಾಗೆ ಕಾಣುತ್ತದೆ. ಉದಾಹರಣೆಗೆ ಹೇಳುವುದಾದರೆ ಗದುಗಿನಲ್ಲಿ ತಾಲ್ಲೂಕು ಅಗ್ರಿಕಲ್ಚರಲ್ ಪ್ರಾಡ್ಯೂಸ್ ಮಾರ್ಕೆಟಿಂಗ್ ಸೊಸೈಟಿ ಇದೆ. ವಿರೋಧ ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ಪಾಟೀಲ್‌ರವರು ಅಧ್ಯಕ್ಷರಾಗಿದ್ದಾರೆ ಅಂತ ಹೇಳಿ ಅಲ್ಲಿ ಇನ್ನೊಂದು ಸಂಘ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. ಇದರ ಔಚಿತ್ಯ ಏನು ? ತಮಗೆ ಬೇಕಾದವರನ್ನು ಬೆಳೆಸುವುದಕ್ಕೆ, ತಮಗೆ ಬೇಕಾದವರನ್ನು ಪಾಲನೆ ಮಾಡುವುದಕ್ಕೆ ಈ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳುತ್ತಾ ಇದ್ದೀರಿ ಎಂದು ಅರ್ಥವಾಗುತ್ತದೆ. ನೀವು ಪ್ರತಿಯೊಂದು ಸಂಘವನ್ನೂ ತೆಗೆದುಕೊಳ್ಳಿ, ಯಾವ ಸಂಘವೇ ಆಗಲಿ ಸರ್ಕಾರದ ಆಳುವ ಪಕ್ಷದವರ ಬೇಳೆಬೇಯಿಸಲಿಕ್ಕೆ ಏನು ಬೇಕೊ ಅದನ್ನೆಲ್ಲಾ ಮಾಡಿಕೊಂಡಿದ್ದಾರೆ. ಸರ್ಕಾರಕ್ಕೆ ಆಗದವರು, ವಿರೋಧ ಪಕ್ಷದವರು ಎಲ್ಲಿದ್ದಾರೆ ಅವರನ್ನು ದಮನ ಮಾಡಲಿಕ್ಕೆ ತಾವು ಏನು ಬೇಕೊ ಅದನ್ನೆಲ್ಲಾ ಮಾಡುತ್ತೀರಿ ಅಂತ ಅನ್ನುವುದಕ್ಕೆ ನಿಮಗೆ ಬೇಕಾದರೆ ನಾನು ಖಚಿತವಾದ ದೃಷ್ಟಾಂತಗಳನ್ನು ಕೊಡುತ್ತೇನೆ.

Sri K. H. PATIL.—Is it not a fact that your officer has given specific instructions in an order to organise a society in writing?

Sri P. M. NADGOUDA.—I flatly deny it, Sir.

ಶ್ರೀ. ಎಚ್ ಎನ್ ನಂಜೇಗೌಡ.—ಸ್ವಾಮಿ ಈಗ ನೋಡಿ, ನಿಮಗೆ ಬೇಕಾದವರನ್ನು ಯಾವ ರೀತಿ ಬೆಳಸುತ್ತೀರಿ, ಅವರು ಏನು ಕೆಟ್ಟ ಕೆಲಸ ಮಾಡುತ್ತಾರೆ ಎನ್ನುವುದಕ್ಕೆ ಒಂದು ಉದಾಹರಣೆ ರೆಕಾರ್ಡ ಮುಖಾಂತರ ಹೇಳಲಿಕ್ಕೆ ಇಷ್ಟಪಡುತ್ತೇನೆ, ಖಾದಿಬೋರ್ಡ್ ತೆಗೆದುಕೊಳ್ಳಿ ಇದು ಆಗಿರುವುದು 1964ನೇ ಇಸವಿಯಲ್ಲಿ, 1969ನೇ ಇಸವಿಯಲ್ಲಿ ನಾವು ಇವತ್ತು ಇದ್ದೇವೆ. 10ನೇ ಜೂನ್ 1964ರಲ್ಲಿ ಒಂದು ರೆಸಲ್ಯೂಷನ್‌ನ್ನು ಖಾದಿ ಬೋರ್ಡಿನವರು ಮಾಡಿದರು ಅದನ್ನು ತಮ್ಮ ಗಮನಕ್ಕೆ ತರುತ್ತೇನೆ :

> "The resignation tendered by V.S.Hire Gouder cannot be accepted. It is understood that he is not attending to his work in the office after he submitted his resignation, The Board resolves to place him under suspension with immediate effect."

ತಾವು ದಯವಿಟ್ಟು ಮೇಜರ್ ಹೆಡ್ 34ರಲ್ಲಿ ನೋಡಿ ಅಲ್ಲಿ 38,824 ರೂಪಾಯಿಗಳನ್ನು ತೋರಿಸಿದ್ದಾರೆ ನಿಮ್ಮ ಇಲಾಖೆಯಲ್ಲಿರತಕ್ಕ 24 ಜನ ಆಡಿಟರನ್ನು ಬಿಟ್ಟು ಅಲ್ಲಿ ಲೆಕ್ಕಗಳನ್ನು ಆಡಿಟ್ ಮಾಡಿಸುತ್ತಿದ್ದೀರಿ. ಆದರೇನು ಪ್ರಯೋಜನ? ಈ ರೆಸಲ್ಯೂಷನ್ನಿನಲ್ಲಿ ಮುಂದಕ್ಕೆ ಏನು ಹೇಳಿದ್ದಾರೆಂಬುದನ್ನು ಓದಿಬಿಡುತ್ತೇನೆ :

> "Further resolved that with a view to launch prosecution and other action against V. S. Hiregouder and to recover the amounts which are due from him......"

ಹಾಗೆ ವಸೂಲ್ಮಾಡಬೇಕಾದ ಮೊಬಲಗು ಎಷ್ಟಿದೆ ಎಂದರೆ 7,505 ರೂಪಾಯಿಗಳು ಇನ್ ಕ್ಯಾಷ್ ಮತ್ತು 29192.10 ಪೈಸೆ ಇನ್ ಕೈಂಡ್ ಅಷ್ಟು ಹಣ ಆ ವ್ಯಕ್ತಿಯಿಂದ ಬರಬೇಕಾಗಿದೆ. ಸರ್ಕಾರದವರು ಇಲ್ಲಿಯವರೆಗೂ ಅದರ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ? ಅವರು ಕಾಂಗ್ರೆಸ್ಸಿಗೆ ಸೇರಿದ ವ್ಯಕ್ತಿಗಳೆಂದು ಅವರ ಬಗ್ಗೆ ಸೂಕ್ತ ನಡವಳಿಕೆ ನಡೆಸುವುದರ ಬದಲು ಅವರನ್ನು ಮೈಸೂರು ಲೆಜಿಸ್ಲೇಟೀವ್ ಕೌನ್ಸಿಲ್ಲಿಗೆ ಒಬ್ಬ ಸದಸ್ಯನನ್ನಾಗಿ ನೇಮಕ ಮಾಡಿದ್ದಾರೆ. ಹೋಗಲಿ ಅದನ್ನಾದರೂ ಒಂದು ನ್ಯಾಯವಾದ ರೀತಿಯಲ್ಲಿ ಮಾಡಿದ್ದಾರೆಯೇ ಎಂದರೆ ಅದೂ ಇಲ್ಲ. ಇಂಥಾ ಒಂದು ದೌಲತ್ತೇ ಮುಂದುವರಿದರೆ ದೇಶ ಖಂಡಿತವಾಗಿಯೂ ಉಳಿಯುವುದಿಲ್ಲ.

ಇನ್ನು ನಾನು ಸರ್ಕಾರದವರ ಗಮನಕ್ಕೆ ಒಂದು ಹ್ಯಾಂಡ್ ಪೌಂಡಿಂಗ್ ಪ್ಯಾಡಿ ಸೊಸೈಟಿಯ ವಿಚಾರವನ್ನು ತರಬಯಸುತ್ತೇನೆ. ಅಲ್ಲಿ ಭತ್ತಕೊಳ್ಳತಕ್ಕ ಅಧಿಕಾರಿಗಳೆಷ್ಟು ಜನ? ಅವರು ಎಷ್ಟು ಜನರಿಗೆ ಆರ್ಡರನ್ನು ಮಾಡುತ್ತಾರೆ? ಎಷ್ಟು ಭತ್ತಕೊಳ್ಳಬೇಕು ಅನ್ನುವ ವಿವರಗಳು ಅಲ್ಲಿ ಒಂದೂ ಸಿಕ್ಕುವುದಿಲ್ಲ. ಅಲ್ಲಿ 15 ಜನರಿಗೆ ಭತ್ತಕೊಳ್ಳುವುದಕ್ಕೆ ಆರ್ಡರ್ ಮಾಡಿದ್ದಾರೆ.

> "The above officers will function as Paddy Purchase Officers in respect of paddy purchases to be made in respect of areas shown against their names......"

ಭತ್ತವನ್ನು ಕೊಳ್ಳತಕ್ಕವರು ಇರುವುದೆಲ್ಲೋ ಭತ್ತವನ್ನು ಕೊಳ್ಳುವುದೆಲ್ಲೋ? ಭತ್ತ ಕೊಳ್ಳುವುದಕ್ಕಾಗಿ ಹಾಸನ ಜಿಲ್ಲೆಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಹಾಸನದಲ್ಲಿರತಕ್ಕ ಭತ್ತ ಕೊಳ್ಳುವ ಏಜಂಟರು ಎಲ್ಲಿ ಭತ್ತ ಖರೀದಿ ಮಾಡುವುದು ಅಂದರೆ ಗಂಗಾವತಿಯಲ್ಲಿ. ಮುಖ್ಯಮಂತ್ರಿಗಳ ಭಾವನರೊಬ್ಬರು ಅಧಿಕಾರಿಗಳಾಗಿದ್ದಾರೆಂದರೆ ಹೀಗೆಲ್ಲಾ ಅಜ್ಞೆಗಳನ್ನು ಮಾಡುವುದೇ? ಇದಕ್ಕಿಂತ ನಾಚಿಕೆಗೇಡಿನ ಬದುಕು ಬೇರೊಂದಿಲ್ಲ. ರೂಲ್ ಆಫ್ ಲಾ ಎಲ್ಲರಿಗೂ ಒಂದೇ ಇರಬೇಕು. ಅವರು ಹಾಸನದ ಡಿಸ್ಟ್ರಿಕ್ಟ್ ಆಫೀಸಿನಲ್ಲಿದ್ದಾರೆ. ಅವರು ಅಲ್ಲಿ ಇರತಕ್ಕ ಜನರಿಗೆ ಎಲ್ಲಿ ಭತ್ತ ಖರೀದಿಮಾಡುವುದಕ್ಕೆ ಅವಕಾಶಮಾಡಿಕೊಟ್ಟಿದ್ದಾರೆಂದರೆ ಗಂಗಾವತೀಲಿ. ಅವರು ಬಿದರ್‌ನಲ್ಲೂ ಕೊಳ್ಳಬಹುದು. ಅಲ್ಲಿಂದ ಆ ಬತ್ತ ಹಾಸನಕ್ಕೆ ಬರಬೇಕು. ಅಂದಾಗ ಆ ಖರ್ಚುವೆಚ್ಚಗಳು ಎಷ್ಟಾಗಬಹುದು? ಅಲ್ಲಿ ಒಬ್ಬೊಬ್ಬರು ಒಂದು ಲಕ್ಷ, 24 ಲಕ್ಷ ಮತ್ತು 65 ಲಕ್ಷ ಮೊಬಲಗಿನ ಬತ್ತವನ್ನು ಕೊಂಡಿದ್ದಾರೆ. ಅಲ್ಲಿಂದಲೇ ಬತ್ತ ಆ ಮಂಡ್ಯಾಕ್ಕೂ ಬರಬೇಕು. ಅದಲ್ಲವೇ ಆಶ್ಚರ್ಯ? ಇದಕ್ಕೆಲ್ಲಾ ಮೂಲ ಕಾರಣ ಏನೆಂದರೆ ಈ ವ್ಯವಹಾರಗಳೆಲ್ಲಾ ಕಳ್ಳರಶೀದಿಗಳ ಮೇಲೆ, ಫೋರ್ಜರಿ ರಶೀದಿಗಳ ಮೇಲೆ ನಡೆಯುತ್ತಿದೆ. ಅದರ ಬಗ್ಗೆ ನನ್ನಲ್ಲಿ ಸಾಕಷ್ಟು ದಾಖಲೆಗಳಿರುತ್ತವೆ. ಆ ಬತ್ತವನ್ನು ಲಾರಿಯಲ್ಲಿ ಸಾಗಿಸುವುದಕ್ಕೆ ನೀಲಕಂಠೇಶ್ವರ ಕಮೀಷನ್ ಏಜಂಟ್ಸಿಗೆ ಕಂಟ್ರಾಕ್ಟ್ ಕೊಟ್ಟಿದ್ದಾರೆ. ಇದಕ್ಕೆ ಒಂದು ಉದಾಹರಣೆಯಾಗಿ ಹೇಳಬಹುದಾದರೆ—ಒಂದು ಹ್ಯಾಂಡ್ ಪೌಂಡಿಂಗ್ ಸೊಸೈಟಿಯವರು ಅಂದರೆ ಅದರ ಸಕ್ರೆಟರಿಗಳು ಒಂದು ಚೆಕ್ಕನ್ನು ತಾ: 16—5—1968ರಲ್ಲಿ ಪ್ರಸೆಂಟ್ ಮಾಡಿದ್ದಾರೆ. ಆ ಚೆಕ್ಕನ್ನು ಪ್ರಸೆಂಟ್‌ಮಾಡಿದ ದಿನವೇ ಮೈಸೂರಿನಲ್ಲಿ 16 ಸಾವಿರ ರೂಪಾಯಿಗಳ ಬತ್ತವನ್ನು ರಿಲೀಜ್‌ಮಾಡಲಾಗಿದೆ. ಅದೆ ತಾ: 16-5-1968ರಲ್ಲಿ ಅದನ್ನು ಕುಟ್ಟಿ ಅಕ್ಕಿಯನ್ನು ತಯಾರಿಸಲಾಗಿದೆ, ಅದೇ ತಾ: 16-5-1968ರಲ್ಲಿ ಆ ಅಕ್ಕಿಯನ್ನು ಮಲ್ಲೇಶ್ವರದಲ್ಲಿ ಒಂದು ಕನ್‌ಜೂಮರ್ಸ್ ಕೋಆಪರೇಟೀವ್ ಸೊಸೈಟಿಯಲ್ಲಿ ಮಾರಾಟ ಮಾಡಲಾಗಿದೆ. ಇದನ್ನು ಒಂದು ಸಿಸ್ಟಮ್ಯಾಟಿಕ್ ದರೋಡೆ ಎನ್ನದೆ ಏನೆಂದು ಕರೆಯಬೇಕು? ಈಗಿರತಕ್ಕ ಮಂತ್ರಿಗಳು ಈ ಸೊಸೈಟಿಗಳಿಗೆ 20 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಅಲ್ಲೆಲ್ಲಾ ಹೀಗೇ ವ್ಯವಹಾರ ನಡೆದಿರುವುದು. ಹಾಲಿ ನಮ್ಮಲ್ಲಿರತಕ್ಕ ಸಹಕಾರ ಸಂಘಗಳಲ್ಲಿ ಸುಮಾರು 3,000 ಸಹಕಾರ ಸಂಸ್ಥೆಗಳು ಡೀಫಂಕ್ಟ್ ಆಗಿವೆ. ಆದರೂ ಆ ಸಂಸ್ಥೆಗಳನ್ನು ಏಕೆ ಮುಚ್ಚಲಿಲ್ಲ? ಅದಕ್ಕೆ ಕಾರಣ ಅಂಥಾ ಡೀಫಂಕ್ಟ್ ಸೊಸೈಟಿಗಳಿಂದ ಓಟನ್ನು ಪಡೆದು ಈ ಪಕ್ಷದ ಜನರು ಆ ಜಿಲ್ಲಾ ಸಹಕಾರ ಬ್ಯಾಂಕುಗಳಲ್ಲಿ ಮತ್ತು ಜಿಲ್ಲಾ ಸಹಕಾರ

(ಶ್ರೀ ಎಚ್. ಎನ್. ನಂಜೇಗೌಡ)

ಅಭಿವೃದ್ಧಿ ಬ್ಯಾಂಕುಗಳಲ್ಲಿ ನಡೆಯುತಕ್ಕ ಚುನಾವಣೆಯಲ್ಲಿ ಅಧ್ಯಕ್ಷರಾಗುವುದಕ್ಕೆ ಅವಕಾಶ ಕಲ್ಪಿಸಿಕೊಳ್ಳಲು ಅವುಗಳನ್ನು ಹಾಗೇ ಉಳಿಸಿಕೊಂಡು ಬಂದಿದ್ದಾರೆ. ಮದ್ರಾಸಿನಲ್ಲಿ ಸರ್ಕಾರ ಅಲ್ಲಿಯ ರಿಜಿಷ್ಟ್ರಾರರಿಗೆ ಅಮಾಲ್ಗಮೇಟ್ ಮಾಡುವುದಕ್ಕೆ ಹಾಗೂ ಸೊಸೈಟಿಗಳನ್ನು ಲಿಕ್ವಿಡೇಟ್ ಮಾಡುವುದಕ್ಕೆ ಅಧಿಕಾರವನ್ನು ಕೊಟ್ಟಿದೆ. ಅದೇ ರೀತಿ ಇಲ್ಲಿಯೂ ಏಕೆ ಅವರಿಗೆ ಆ ಅಧಿಕಾರವನ್ನು ಕೊಡಬಾರದು? ಇನ್ನು ನಮ್ಮಲ್ಲಿರತಕ್ಕ ಅನೇಕ ದೊಡ್ಡ ದೊಡ್ಡ ಅಗ್ರಿಕಲ್ಚರಲ್ ಕ್ರೆಡಿಟ್ ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಕ್ರಮವಾಗಿ ಆಡಿಟ್ಟನ್ನು ನಡೆಸುತ್ತಿಲ್ಲ. ನಮ್ಮ ಮಾನ್ಯ ಸಚಿವರು ಹಿಂದೆ ಇದೇ ಡಿಮ್ಯಾಂಡಿನ ಬಗ್ಗೆ ಉತ್ತರಕೊಡತಕ್ಕ ಕಾಲದಲ್ಲಿ ನಮ್ಮ ರಾಜ್ಯದಲ್ಲಿರತಕ್ಕ ಸಹಕಾರ ಸಂಸ್ಥೆಗಳು ಬಹಳ ಕುಣಿದಾಡುತ್ತಾ ಕೆಲಸಮಾಡುತ್ತಿವೆ ಎಂದು ಹೇಳಿದರು. ಈ ದಿವಸ ಅನೇಕ ಸೊಸೈಟಿಗಳಲ್ಲಿ ಇಂಟರ್ನಲ್ ಆಡಿಟರುಗಳೇ ಇಲ್ಲ. ಸರ್ಕಾರದವರು ಆ ರೂಲ್ ನಂ. 44।ರ ಪ್ರಕಾರ ಇಂಟರನಲ್ ಆಡಿಟರನ್ನು ಇಟ್ಟುಕೊಳ್ಳುವಂತೆ ಏಕೆ ಒತ್ತಾಯಮಾಡಬಾರದು ? ಈ ವಿಚಾರದಲ್ಲಿ ಸರ್ಕಾರ ಕೂಡಲೆ ಸೂಕ್ತ ಕ್ರಮ ಕೈಗೊಳ್ಳಬೇಕು.

ಸರ್ಕಾರದವರು ಇನ್ನು ಗೋಡೌನುಗಳನ್ನು ಕಟ್ಟತಕ್ಕ ಬಗ್ಗೆ ಒದಗಿಸಲಾಗುತ್ತಿರುವ ಹಣ ಏನೇನೂ ಸಾಲದು. ಆದ್ದರಿಂದ ಅದನ್ನು 25 ಪರ್ಸೆಂಟಿನಿಂದ 40 ಪರ್ಸೆಂಟಿಗಾದರೂ ಏರಿಸಬೇಕು ಎಂದು ಹೇಳುತ್ತೇನೆ. ಇಲ್ಲವಾದರೆ ಆ ಗೋಡೌನುಗಳನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸರ್ಕಾರದವರು ಇದನ್ನು ಪುನರ್ವಿಮರ್ಶೆಮಾಡಿ ಅದನ್ನು 40 ಪರ್ಸೆಂಟಿಗಾದರೂ ಏರಿಸಬೇಕೆಂದು ಹೇಳುತ್ತೇನೆ. ಏಕೆಂದರೆ ಅಕ್ಕಪಕ್ಕದ ರಾಜ್ಯಗಳಲ್ಲೆಲ್ಲಾ ಹಾಗ ಇದನ್ನು ಹೆಚ್ಚುಮಾಡಿದ್ದಾರೆ.

ಇನ್ನು ನಮ್ಮ ಲೋಕಲ್ ಬಾಡೀಸ್ ಆಕ್ಟಿನಲ್ಲಿ ಕೆಲವು ಅಂಬಿಗ್ಯುಟೀಸ್ ಮತ್ತು ಲೆಕೂನಾಗಳಿವೆ. ಅವುಗಳನ್ನು ಕೂಡಲೆ ಸರಿಪಡಿಸಬೇಕು. ಕೆಲವು ಸ್ಥಳೀಯ ಸಂಸ್ಥೆಯಲ್ಲಿ ಎರಡು ಪಾರ್ಟಿಗಳಿದ್ದ ಕಡೆ ಸ್ವಲ್ಪ ಮೆಜಾರ್ಟಿ ಪಕ್ಷದವರು ಹೇಗೋ ಮಾಡಿ ಏನೋ ಮಾಡಿ ಅಧ್ಯಕ್ಷರಾಗಿಬಿಡುತ್ತಾರೆ. ಅಂಥ ಸಂದರ್ಭಗಳಲ್ಲಿ ಮೀಟಿಂಗನ್ನು ಕರೆದಾಗ ಅಲ್ಲಿ ಕೋರಂ ಆಗಬೇಕಾದರೆ 15 ಜನ ಸದಸ್ಯರಿರತಕ್ಕ ಸಭೆಯಲ್ಲಿ ಅದರ ಅರ್ಧ ಅಂದರೆ 8 ಜನರು ಇರಬೇಕು. ಆ ಸಂಸ್ಥೆಯಲ್ಲಿರುವ ಛೇರ್ಮನ್ನನ್ನು ತೆಗೆಯಬೇಕಾದರೆ ಒಟ್ಟು ಸದಸ್ಯರ ಮೂರನೆ ಎರಡುಭಾಗದ ಓಟುಗಳು ಬರಬೇಕು. ಅಂದರೆ ಅದಕ್ಕೆ 11 ಜನರಾದರೂ ಇರಬೇಕು. ಆದರೆ ಅಂಥ ಸಂದರ್ಭದಲ್ಲಿ ಅಲ್ಲಿ ಇರುವುದೇ ಎರಡು ಪಾರ್ಟಿ. ಒಂದು ಪಾರ್ಟಿಯಲ್ಲಿ 7 ಜನರು, ಇನ್ನೊಂದು ಪಾರ್ಟಿಯಲ್ಲಿ 8 ಜನರು. ಅಧ್ಯಕ್ಷರ ಚುನಾವಣೆಯಾದ ನಂತರ ಅಲ್ಲಿ ಯಾರಾದರೂ ಪಕ್ಷಾಂತರವಾದರೆ ಕೋರಂ ಸೇರುವುದಕ್ಕೂ ಆಗುವುದಿಲ್ಲ ಅಧ್ಯಕ್ಷರನ್ನು ತೆಗೆಯುವುದಕ್ಕೂ ಆಗುವುದಿಲ್ಲ, ಅಲ್ಲಿ ಮೀಟಿಂಗುಗಳನ್ನು ನಡೆಸುವುದಕ್ಕೂ ಸಾಧ್ಯಇಲ್ಲ. ಇಂಥ ಪ್ರಸಂಗಗಳಾಗಲೇ ಎಷ್ಟೋ ಆಗಿವೆ. ನಮ್ಮ ತಾಲ್ಲೂಕಿನಲ್ಲಿ ಇಂಥಾ ಸೊಸೈಟಿಗಳು 5 ಇವೆ. ಅಲ್ಲಿ ಎರಡು ಪಕ್ಷಗಳಿವೆ. ಒಂದರಲ್ಲಿ 7 ಜನ ಸದಸ್ಯರು, ಇನ್ನೊಂದರಲ್ಲಿ 5 ಜನ ಸದಸ್ಯರು. ಅಲ್ಲಿ ಕೋರಂ ಸೇರುವಂತಿಲ್ಲ—ಮೀಟಿಂಗ್ ನಡೆಯುವಂತಿಲ್ಲ. ಇಂಥ ಅಂಬೆಗ್ಯುಟಿಯನ್ನು ಸರ್ಕಾರ ಕೂಡಲೆ ಸರಿಪಡಿಸಬೇಕು. ಇಲ್ಲವಾದರೆ ಸರ್ಕಾರದವರೇ ಗ್ರಾಮಾಂತರ ಪ್ರದೇಶದಲ್ಲಿ ಜನರು ವಿನಾಕಾರಣ ಜಗಳಕ್ಕೆ ಬಿದ್ದು ಕೊಲೆಗಳಾಗತಕ್ಕ ಪ್ರಸಂಗಗಳು ಉಂಟಾಗಬಹುದು. ಆದ್ದರಿಂದ ಅಷ್ಟಕ್ಕೆ ಅವಕಾಶಕೊಡಬಾರದೆಂದು ಎಚ್ಚರಿಕೆ ನೀಡುತ್ತಿದ್ದೇನೆ. ನೀವು ಹಿಂದೆ ಈ ಸಭೆಗೇನು ಮಾತುಕೊಟ್ಟಿದ್ದೀರೋ ಅದನ್ನು ಉಳಿಸಿಕೊಳ್ಳಬೇಕು. ಹಿಂದೆ ಮಾನ್ಯ ಮಂತ್ರಿಗಳು ಯಾವುದಾದರೊಂದು ಸೊಸೈಟಿಯಲ್ಲಿ ಹಣ ದುರುಪಯೋಗವಾಗಿದೆ ಎಂದರೆ—ಕೆಲಸ ದಕ್ಷತೆಯಿಂದ ನಡೆಯುತ್ತಿಲ್ಲ ಎಂದರೆ ಅಂಥವುಗಳ ಬಗ್ಗೆ ಕೂಡಲೆ ಸೂಕ್ತ ಕಾರ್ಯಕ್ರಮಕೈಗೊಳ್ಳುತ್ತೇವೆಂಬ ಮಾತನ್ನು ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ—ಎಂಬುದಾಗಿ ಹೇಳಿದ್ದ ಮಾತನ್ನು ಈ ದಿವಸ ಏಕೆ ಉಳಿಸಿಕೊಳ್ಳುತ್ತಿಲ್ಲ? ಅಂದರೆ ಆ ದಿವಸ ಮಂತ್ರಿಗಳು ಹೇಳಿದ್ದು ಕಾಂಗ್ರೆಸ್ ಪಕ್ಷಕ್ಕೆ ಯಾರು ವಿರೋಧಿಗಳಾಗಿ ಅಧಿಕಾರಸ್ಥಾನದಲ್ಲಿದ್ದಾರೋ ಅಂಥವರ ಬಗ್ಗೆ ಕಾನೂನು ಪ್ರಕಾರ ಕ್ರಮಕೈಗೊಳ್ಳುತ್ತೇವೆಂದು ಹೇಳಿದರೇನೋ ? ಕಾನೂನು ಪ್ರಕಾರ ಅವರ ಪಕ್ಷದವರು ಏನಾದರು ಅಕ್ರಮಗಳನ್ನು ನಡೆಸಿದ್ದರೆ ಅವನ್ನು ಕೈಬಿಡುವುದು ಎಂಬ ವಿಷಯ ನಮಗೆ ಅರ್ಥವಾಗುತ್ತಿಲ್ಲ. ಅದನ್ನಾದರೂ ಸರ್ಕಾರದವರು ಬಾಯಿಬಿಟ್ಟು ಹೇಳಿಬಿಡಲಿ. ನಮ್ಮ ಪಕ್ಷದವರ ವಿಚಾರದಲ್ಲಿ ನಾವು ಕಾನೂನುಗಳನ್ನು ರಬ್ಬರಿನಂತೆ ಎಳೆದು ಅವುಗಳಿಗೆ ವ್ಯಾಖ್ಯಾನಮಾಡಿ ನಮ್ಮ ಪಕ್ಷದವರಿಗೆ ರಕ್ಷಣೆ ಕೊಡುವುದೇ ನಮ್ಮ ಸರ್ಕಾರದ ನೀತಿ ಅನ್ನುವುದನ್ನಾದರೂ ಹೇಳಲಿ. ಆದರೆ ಈ ದಿವಸ ನಾನು ಎಷ್ಟೋ ಸಾಹಿತ್ಯಗಳನ್ನು ಒದಗಿಸಿಕೊಂಡು ಬಂದಿದ್ದೆ. ಆದರೆ ನನಗೆ ಕಾಲಾವಕಾಶವಿಲ್ಲ. ಇದ್ದ ಸಮಯದಲ್ಲಿ ಕೆಲವು ಮುಖ್ಯ ವಿಚಾರಗಳನ್ನು ತಿಳಿಸಲು ನಾನು ಪ್ರಯತ್ನಮಾಡಿದ್ದೇನೆ. ಇಷ್ಟನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸೋಲೂರು ಸಿದ್ದಪ್ಪ (ಕುದೂರು).—ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಗ್ರಾಮ ಪಂಚಾಯತಿ, ಸಹಕಾರ ಮತ್ತು ರಾಷ್ಟ್ರೀಯ ವಿಸ್ತರಣ ಯೋಜನೆಯ ವಿಚಾರವಾಗಿ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಪೂರ್ಣವಾಗಿ ಸಮರ್ಥನೆಮಾಡುತ್ತಾ, ಕೆಲವು ವಿಷಯಗಳನ್ನು ಈ ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನಮಾಡುತ್ತೇನೆ.

ಮೊಟ್ಟ ಮೊದಲನೆಯದಾಗಿ, ಗ್ರಾಮಪಂಚಾಯತಿಗಳನ್ನು ದೇಶಾದ್ಯಂತ ವ್ಯವಸ್ಥೆಮಾಡಬೇಕೆಂದು ಹೇಳಿ ಗ್ರಾಮಪಂಚಾಯತಿಗಳ ಕರ್ತವ್ಯದಲ್ಲಿ ತೀರಾ ಅನ್ಯಾಯಗಳಾಗಿ ಗ್ರಾಮ ಪಂಚಾಯತಿಗಳು ವರ್ಷಾನುಗಟ್ಟಲೆ ಪಂಚಾಯತಿ ಮೀಟಿಂಗ್‌ಗಳನ್ನೇ ನಡೆಸಲಿಲ್ಲ. ಮಹಾತ್ಮ ಗಾಂಧಿಯವರ ಶತಾಬ್ಧ ವರ್ಷದಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ಕೆಲವು ಬಾವಿಗಳನ್ನು ತೆಗೆಸುವ ನಿರ್ಧಾರವೇನೋ ಆಗಿದೆ. ಆದರೆ ಇದುವರೆಗೂ ಅದು ಕಾರ್ಯಗತವಾಗುವ ಸಂಭವವೇ ಬಂದಿಲ್ಲ. ಆಗಲೇ ಕೆಲವು ತಿಂಗಳುಗಳು ಕಳೆಯಿತು. ಇನ್ನು ಕೆಲವೇ ತಿಂಗಳುಗಳಿವೆ. ಸರ್ಕಾರ ಈಗಾಗಲೇ ಹೇಳಿರತಕ್ಕ ಕಾರ್ಯಗಳನ್ನು ಕಾರ್ಯಗತ ಮಾಡದಿದ್ದರೆ ಜನಗಳಲ್ಲಿ ನಂಬಿಕೆ ಕಡಿಮೆಯಾಗುವ ಸಂದರ್ಭ ಉಂಟಾಗುತ್ತದೆಂದು ನಾನು ಹೇಳಲಿಚ್ಛಿಸುತ್ತೇನೆ.

ಇನ್ನು ಸಹಕಾರ ತತ್ವದ ಬಗ್ಗೆ ನನ್ನ ಅನೇಕ ಸ್ನೇಹಿತರು ಅದರಲ್ಲಿರತಕ್ಕ ಲೋಪದೋಷಗಳನ್ನು ಎತ್ತಿಹಿಡಿದು ಈ ಸಭೆಗೆ ತಿಳಿಸಿದ್ದಾರೆ. ನಾವು ಈಗ ಹೇಳತಕ್ಕ ಕಾರ್ಯಗಳನ್ನು ಮುಂದೆ ಬರತಕ್ಕ ಬಡ್ಜೆಟ್ ಮೀಟಿಂಗಿನೊಳಗೆ ಮಾಡಲು ಮತ್ತು ಆ ದೋಷಗಳನ್ನು ನಿವಾರಣೆಮಾಡುವುದಕ್ಕೆ ಸಂಬಂಧಪಟ್ಟ ಇಲಾಖೆಯವರು ಕೂಡಲೇ ಕಾರ್ಯತತ್ಪರರಾಗಬೇಕು. ಇಲ್ಲದೇ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಈ ವಿಚಾರವನ್ನು ನಾನು ಪ್ರತಿಯೊಂದು ಬಡ್ಜೆಟ್ ಅಧಿವೇಶನದಲ್ಲಿಯೂ ಹೇಳಿದ್ದರೂ ಅದು ಇನ್ನೂ ಕಾರ್ಯಗತವಾಗದಿದ್ದರೆ, ಇಷ್ಟು ಹಣವನ್ನು ವೆಚ್ಚಮಾಡಿ ನಡೆಸುವಂಥ ಈ ಸಭೆಯ ಕಾರ್ಯಕಲಾಪಗಳು ಏನೂ ಪ್ರಯೋಜನವಿಲ್ಲದಂತಾಗುತ್ತದೆ. ಅದರಲ್ಲಿ ಇರತಕ್ಕ ಅನೇಕ ಲೋಪದೋಷಗಳನ್ನು ನನ್ನ ಸ್ನೇಹಿತರಲ್ಲಿ ಕೆಲವರು ಹೇಳಿದ್ದಾರೆ. ಆದರೆ ಅದರ ಲಾಭ, ದೇಶಕ್ಕೆ ಅದರಿಂದಾಗತಕ್ಕ ಫಲ, ಮತ್ತು ಸಹಕಾರಸಂಸ್ಥೆಗಳು ಈ ದೇಶದಲ್ಲಿ ಯಾವರೀತಿಯಲ್ಲಿ ಕೆಲಸ ಮಾಡುತ್ತಿವೆ ಎನ್ನುವುದನ್ನು ಮಾತ್ರ ಯಾವ ನಮ್ಮ ಸ್ನೇಹಿತರೂ ಹೇಳುವುದಕ್ಕೆ ಮನಸ್ಸುಮಾಡಿಲ್ಲ. 1904ರಲ್ಲಿ ಸಹಕಾರ ಸಂಸ್ಥೆಗಳು ಹಿಂದಿನ ಮಹಾರಾಜರುಗಳ ಕಾಲದಲ್ಲಿ ಹೇಗಿತ್ತು ಎಂಬುದನ್ನು ನೋಡಬೇಕು. ಮಾನ್ಯ ಶ್ರೀ ಕೆ ಎಚ್. ರಾಮಯ್ಯನವರೇ ಮೊದಲು ರಿಜಿಸ್ಟ್ರಾರ್ ಅವರು ಆಗಿದ್ದರು. 65 ವರ್ಷಗಳಾದುವು. ಈಗ ದೇಶದಲ್ಲಿ 20 ಸಾವಿರ ಸಹಕಾರ ಸಂಸ್ಥೆಗಳಾಗಿವೆ. ತನ್ಮೂಲಕ ಆಹಾರೋತ್ಪತ್ತಿ ಜಾಸ್ತಿಯಾಗಿದೆ. ಈಗ ಎರಡು ವರ್ಷಗಳ ಮುಂಚೆ ಬಾವಿಗಳನ್ನು ತೋಡುವುದಕ್ಕೋಸ್ಕರವಾಗಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ 174 ತಾಲ್ಲೂಕುಗಳಿಗೆ ಹಣವನ್ನು ಕೊಟ್ಟರು. ಈ ಮೂಲಕವಾಗಿ ಧಾನ್ಯ ಹೆಚ್ಚು ಬೆಳೆದು 2 ವರ್ಷಗಳಿಂದ ರೈತರು ದೇಶದ ಕಷ್ಟವನ್ನು ಕಡಿಮೆಮಾಡಿಕೊಟ್ಟಿದ್ದಾರೆ. ಅದು ಸರ್ಕಾರಕ್ಕೂ ಗೊತ್ತು. ಮಹಾಜನಗಳಿಗೂ ಗೊತ್ತು. ಆಗಿರತಕ್ಕ ಪ್ರಯೋಜನಗಳನ್ನು ಸರ್ಕಾರಕ್ಕೆ ತಿಳಿಸುವುದು ನಮ್ಮ ಧರ್ಮ. ಸರ್ಕಾರದವರು ಬಹಳ ಪ್ರಯತ್ನಮಾಡಿ ಈ ಸೊಸೈಟಿಗಳನ್ನು ಉತ್ತಮಗೊಳಿಸಿದ್ದಾರೆ. ತಂದೆಗೆ 5 ಜನ ಮಕ್ಕಳು ಹುಟ್ಟಿದಾಗ ಒಬ್ಬೊಬ್ಬರೂ ಅಂಜಿಕೊಂಡು, ಭಯಭಕ್ತಿಯಿಂದ ಇದ್ದುಕೊಂಡು ಒಂದು ದೊಡ್ಡ ಸಂಸಾರವನ್ನಾಗಿ ಮಾಡಿಕೊಂಡುಹೋಗುವುದು ಧರ್ಮ. ಆದರೆ ಇಲ್ಲಿ 20 ಸಾವಿರ ಸಹಕಾರ ಸಂಘಗಳನ್ನು ಮಂತ್ರಿಗಳು ನೋಡಿದಮೇಲೆ ಏಕೋ ಕಾಲ ಬಹಳ ಕಷ್ಟವಾಗುತ್ತದೆ ಯೆಂಬುದಾಗಿ ಹೇಳಬಹುದು. ಸಹಕಾರ ಇಲಾಖೆಯಲ್ಲಿ ಉತ್ತಮವಾದಂಥ ಹಾಗೂ ದಕ್ಷರಾದ ಆಡಳಿತಗಾರರು ಇದ್ದಾರೆ. ಆದರೆ ಎಲ್ಲರೂ ನೀತಿ ಅಥವಾ ಅನೀತಿಯಿಂದ ಇದ್ದಾರೆಂದು ಹೇಳುವುದಕ್ಕೆ ಹೋಗುವುದಿಲ್ಲ. ನಾನು 1943 ರಿಂದ 1969ರವರೆಗೆ ಅಂದರೆ ಸುಮಾರು 26 ವರ್ಷಗಳಿಂದಲೂ ಮಾಗಡಿ ತಾಲ್ಲೂಕಿನ ಹಾಗೂ ಪ್ರೈಮರಿ ತಾಲ್ಲೂಕು ಬ್ಯಾಂಕಿಗೆ ಅಧ್ಯಕ್ಷನಾಗಿದ್ದು ಅಲ್ಲಿಂದ 40 ಲಕ್ಷ ರೂಪಾಯಿಗಳನ್ನು ಬಾವಿ ತೋಡಿಸಲಿಕ್ಕೆ ಕೊಡಿಸಿದ್ದೇನೆ. ಆದರೆ ಅದನ್ನು ತೆಗೆದುಕೊಂಡ ಹೋದ ರೈತರು ವಾಪಸ್ಸು ಕೊಟ್ಟಿದ್ದಾರೆ. ಈಗ ಮೂರು ವರ್ಷಗಳಿಂದ ಮಳೆಬೆಳೆ ಕಡಿಮೆಯಾಗಿ ಸ್ವಲ್ಪ ಕಷ್ಟಕ್ಕೆ ಸಿಕ್ಕಿದ್ದಾರೆ. ಕೆಲವು ಪ್ರದೇಶಗಳಲ್ಲಿ ಮಳೆ ಸರಿಯಾಗಿ ಆಗದೇ ಇರುವ ದೆಸೆಯಿಂದ, ಸರ್ಕಾರದವರು ಸಹಕಾರ ಸಂಘಗಳ ಮೂಲಕ ರೈತರಿಗೆ ಹಣವನ್ನು ಕೊಡುತ್ತಿದ್ದಾರೆ. ತೆಂಗು, ಅಡಿಕೆ ಬೆಳೆ ಅಭಿವೃದ್ಧಿಮಾಡುವುದಕ್ಕೆ ಹಾಗೂ ಭೂಮಿಯನ್ನು ಸಮಮಾಡುವ ಕಾರ್ಯಕ್ರಮಕ್ಕೆ ಹೆಚ್ಚಿಗೆ ಹಣವನ್ನು ಸರ್ಕಾರದವರು ಕೊಟ್ಟಿದ್ದಾರೆ. ಈ ಮೈಸೂರು ಸಂಸ್ಥಾನದಲ್ಲಿ ಸಹಕಾರ ಸಂಘಗಳ ಮೂಲಕ ಆಗಿರತಕ್ಕ ಒಂದು ದೊಡ್ಡ ಪ್ರಯೋಜನವನ್ನು ಈ ಸಭೆಯಲ್ಲಿ ನನ್ನ ಮಾನ್ಯ ಸ್ನೇಹಿತರು ಹೇಳದೇ ಹೋದರಲ್ಲಾ ಎಂದು ನನಗೆ ವ್ಯಸನವಾಗುತ್ತದೆ. ದೋಷಗಳನ್ನು ನಿವಾರಣೆಮಾಡುವುದು ಸ್ವಭಾವ. ಈಗ ಗ್ರಾಮಪಂಚಾಯತಿಗಳನ್ನು ಬದಲಾಯಿಸಿ ಫೆಡರೇಷನ್ ಮಾಡಬೇಕೆಂದು ಹೇಳಿದ್ದಾರೆ. ಯಾವ ಗ್ರೂಪ್‌ನಲ್ಲಿ ಯಾವ ಹಳ್ಳಿ

(ಶ್ರೀ ಸೋಲೂರು ಸಿದ್ದಪ್ಪ)

ಯಲ್ಲಿಯೂ ಉದ್ಧಾರವಾಗಿಲ್ಲ. ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಹೆಚ್ಚು ಕಡಿಮೆ ಸರಿಯಾಗಿ ಮಾಡಲಿಲ್ಲ. ಯಾವ ಜಮೀನನ್ನು ಗೋಮಾಳಕ್ಕಾಗಿ ಗ್ರಾಮಪಂಚಾಯಿತಿಗೆ ಒದಗಿಸಿದ್ದರೋ ಅದರ ಲಾಭ ಆಗಲಿಲ್ಲ. ಸುಮ್ಮನೆ ಕಾನೂನುಗಳನ್ನು ಮಾಡುವುದು, ಸಂಸ್ಥೆಗಳನ್ನು ವ್ಯವಸ್ಥೆ ಮಾಡುವುದು, ಅಧಿಕಾರಿಗಳನ್ನು ನೇಮಿಸುವುದು—ಈ ಕಾರ್ಯದಲ್ಲಿ ನಾವು ನಿಪುಣರು ಆಗಿದ್ದೇವೆಯೇ ಹೊರತು ಈ ಸಂಸ್ಥೆಗಳು ತನ್ನ ಕರ್ತವ್ಯವನ್ನು ಎಷ್ಟರಮಟ್ಟಿಗೆ ಸಾಧಿಸಿವೆ. ಜನಗಳಿಗೆ ಎಷ್ಟು ಲಭ್ಯವಾಗಿದೆ ಎನ್ನುವಕಡೆ ಗಮನ ಹರಿಸುತ್ತಿಲ್ಲ. ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಮತ್ತು ಮಂತ್ರಿಗಳು ಇದನ್ನು ವಿಚಾರಮಾಡಬೇಕು. ಗ್ರಾಮಪಂಚಾಯತಿಗಳಿಗೆ ಸೆಕ್ರೆಟರಿಗಳನ್ನು ನೇಮಿಸುವ ಸಂಭವವೇ ಇಲ್ಲ. ಈಗ 6 ಪಂಚಾಯತಿಗಳು ಮಾಗಡಿ ತಾಲ್ಲೂಕಿನಲ್ಲಿವೆ. ಆದರ ಸೆಕ್ರೆಟರಿಗಳಿಗೆ ಟ್ರೈನಿಂಗ್ ಆಯಿತೇ ಹೊರತು ಅಲ್ಲಿಗೆ ನೇಮಕವಾಗಿಲ್ಲ. ಅಲ್ಲಿನ ಕಾರ್ಯ ಮಾಡುವುದು ಹೀಗಿದೆ. ಈ ಗ್ರಾಮಪಂಚಾಯತಿ ಹಣವನ್ನು ವಸೂಲುಮಾಡುವವರು ಯಾರು ? ಇದೆಲ್ಲ ಸರಿಪಡಿಸಬೇಕು. ಮನೆ ಕಟ್ಟಿದಮೇಲೆ ಬಾಗಿಲು ಇರಬೇಕು. ಆ ಬಾಗಿಲಗೆ ಬೀಗ ಇರಬೇಕು. ಅದೇ ಇಲ್ಲದಿದ್ದರೆ ಇನ್ನು ಮನೆ ಎಲ್ಲಿರುತ್ತದೆ ? ಅದೆಲ್ಲ ಉಳಿಯುತ್ತದೆ? ಈ ರೀತಿ ಆಗಬಾರದು. ಸರ್ಕಾರದವರು ಸಹಕಾರ ಸಂಘಗಳ ಮೂಲಕ ಅಭಾವ ಇರುವ ಪ್ರದೇಶಗಳಲ್ಲಿ ಈ ದಿವಸ ಆಹಾರ ಹಂಚುವಿಕೆಗೆ ಏರ್ಪಾಡುಮಾಡಿದ್ದಾರೆ. ಧಾರಣೆವಾಸಿಗಳು ಕಡಿಮೆ ಆಗಿರುವುದರಿಂದ ಜನಗಳು ತೃಪ್ತಿಗೊಂಡಿದ್ದಾರೆ. ಈ ಒಂದು ಕಾರಣದಿಂದ ಸಹಕಾರ ಸಂಘಗಳಲ್ಲಿ ದೋಷವಿಲ್ಲವೆಂದು ನಾನು ಹೇಳುವುದಿಲ್ಲ, ದೋಷಗಳೂ ಇವೆ. ದೊಡ್ಡ ದೊಡ್ಡ ಸಂಘಗಳಲ್ಲಿ ಅಕ್ರಮ, ಅನ್ಯಾಯ ಕೆಲಸಗಳು ಬೇಕಾದಷ್ಟು ನಡೆಯುತ್ತಿವೆ. ಸೊಸೈಟಿಗಳಲ್ಲಿ ಜನರಲ್‌ಬಾಡಿ ಮೀಟಿಂಗ್ ವರ್ಷಕ್ಕೊಂದುಸಾರಿ ಆಗಬೇಕು. ಸಹಕಾರ ತತ್ವ ಕಾರ್ಯರೂಪಕ್ಕೆ ಬರಬೇಕು. ಈ ಬುನಾದಿ ಸರಿಹೋಗುವವರೆಗೆ ಸಹಕಾರ ಸಂಘಗಳ ಕಾರ್ಯವ್ಯಾಪ್ತಿ ದೋಷ ನಿವಾರಣೆಯಾಗುವ ಸಂದರ್ಭವಿಲ್ಲ. ಆದ್ದರಿಂದ ಸರ್ಕಾರದವರು ಈ ಸಹಕಾರ ತತ್ವದ ಮಾರ್ಗವನ್ನು ವಿಸ್ತರಣೆ ಮಾಡುವ ಜೊತೆಗೆ ಅದರಲ್ಲಿನ ಲೋಪದೋಷಗಳನ್ನು ಸರಿಮಾಡಿ ಈ ಸಭೆಯಲ್ಲಿ ಏನು ದೋಷಗಳನ್ನು ಮಹಾಜನರು ಎತ್ತಿತೋರಿಸಿದ್ದಾರೋ ಅವುಗಳ ನಿವಾರಣೆಗೆ ಇಲಾಖೆಯ ಅಧಿಕಾರಿಗಳು ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಜವಾಬ್ದಾರಿ ವಹಿಸಿ ಅದಕ್ಕೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಇನ್ನು ರೆಗ್ಯುಲೇಟೆಡ್ ಮಾರ್ಕೆಟ್ಟನ್ನು ದೇಶಾದ್ಯಂತ ಮಾಡಿದ್ದಾರೆ. ಬೆಂಗಳೂರು ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ನಾನು ಒಬ್ಬ ಡೈರೆಕ್ಟರ್. ಅಲ್ಲಿ 6 ಲಕ್ಷ ರೂಪಾಯಿಗಳ ವರಮಾನ ಬರುತ್ತದೆ. ಆ ಕಮಿಟಿಯಲ್ಲಿ ರೈತ ಇರುವುದಿಲ್ಲ. ವರ್ತಕರಿಗೇ ಅಲ್ಲಿನ ಸ್ಥಾನಗಳು ಹೋಗುತ್ತವೆ. ರೆಗ್ಯುಲೇಟೆಡ್ ಮಾರ್ಕೆಟ್ ನಿರ್ಮಾಣದಿಂದ ಸೊಸೈಟಿಗಳಿಗೆ ಮತ್ತು ಸರ್ಕಾರಕ್ಕೆ ಎಷ್ಟು ಲಾಭವಾಗಿವೆ ಎನ್ನುವ ಮಾತನ್ನು ಮಾನ್ಯ ಸ್ನೇಹಿತರೂ ಒಬ್ಬರೂ ಹೇಳಲಿಲ್ಲ. ಅನೇಕರು ವಿರೋಧವಾಗಿಯೇ ಮಾತನಾಡುತ್ತಿದ್ದಾರೆ. ಮಾನ್ಯ ಶ್ರೀ ರಾಜಯ್ಯಶೆಟ್ಟಿ ಅವರಿಗೆ ಅದರ ಅನುಭವ ಇದೆ. ವರ್ತಕರು ಬೇರೆ ಸಂಸ್ಥೆಗಳಲ್ಲಿಯೂ ಇದ್ದಾರೆ. ಒಳ್ಳೆಯದನ್ನು ಒಳ್ಳೆಯವರು ಎಂದು ಹೇಳುವುದಕ್ಕೆ ಏನೂ ಕಷ್ಟವಿಲ್ಲ.

7-30 P.M.

ಕೆಟ್ಟದ್ದು ಕೆಟ್ಟದ್ದೆಂದು ಹೇಳತಕ್ಕದ್ದು ಮಾನವನಿಗೆ ಸೇರಿದ ಹಕ್ಕು. ಇವತ್ತು ಕೊಂಡಜ್ಜಿ ಬಸಪ್ಪನವರ ರಿಪೋರ್ಟು ಏನಿದೆ, ಅದನ್ನು ಬಹು ಕಷ್ಟಪಟ್ಟು ತಯಾರು ಮಾಡಿದ್ದು ಏಕೆ ? ಅದರ ವ್ಯಾಪ್ತಿಯನ್ನು ಮುಂದಿನ ವರ್ಷದಲ್ಲಿ ಆದರೂ ಮಾಡುವುದಾದರೆ ಮಾಡುತ್ತೇವೆಂದು ಹೇಳಿ, ಇಲ್ಲದಿದ್ದರೆ, ಇಲ್ಲವೆಂದು ಹೇಳಿ. ಮೂಗವಾಗಿ ಇರತಕ್ಕದ್ದು ಸರಿಯಲ್ಲ. ಇವತ್ತು ಈ ಸಂಸ್ಥೆಗಳ ಮೂಲಕ ಜನರಿಗೆ ಅನುಕೂಲಗಳನ್ನು ಮಾಡಬೇಕು. ಬಾವಿ ಮತ್ತು ಇತರ ಅಭಿವೃದ್ಧಿಕಾರ್ಯಗಳಿಗೆ ಕೊಟ್ಟಿರತಕ್ಕ ಹಣ ಸಾಲದು. ಮಹಾತ್ಮಾ ಗಾಂಧೀಜಿಯವರ ಹೆಸರಿನಲ್ಲಿ ದೇಶಾದ್ಯಂತ ಕಲ್ಯಾಣವಾಗಬೇಕಾದರೆ, ಅದಕ್ಕೆ ತಕ್ಕಷ್ಟು ಹಣ ಬೇಕು. ಅದನ್ನು ಸರ್ಕಾರದವರು ಒದಗಿಸಬೇಕು. ತನ್ಮೂಲಕ ಕುಡಿಯುವ ನೀರಿನ ಬಾವಿಯನ್ನು ಪ್ರತಿಯೊಂದು ಗ್ರಾಮದಲ್ಲೂ ಮಾಡಿ, ದೇಶದ ಎಲ್ಲಾ ಜನರಿಗೆ ಅದರ ನೆರವನ್ನು ನೀಡಿ ಮುಂದುವರೆಯಬೇಕು ಇದನ್ನು ಎಲ್ಲಿಯವರೆಗೆ ಈಡೇರಿಸದೆ, ನಿಧಾನ ಮಾಡುವುದಾದರೆ, ಸರ್ಕಾರಕ್ಕೆ ಸಂತೋಷವಾಗುವುದಿಲ್ಲ, ನಮಗೂ ಜನರಿಗೂ ಸಂತೋಷವಾಗುವುದಿಲ್ಲ. ನಾವು ಇವತ್ತು ಲಕ್ಷಾಂತರ ಜನರಿಗೆ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಭರವಸೆಯನ್ನು ಕೊಟ್ಟು ಬಂದಿರುತ್ತೇವೆ. ಅದರ ಪೈಕಿ ಕೆಲವನ್ನಾದರೂ ಕಾರ್ಯಗತಮಾಡಬೇಕು. ಅದರಿಂದ

ದೇಶಕ್ಕೂ ಸಂತೋಷ ಮತ್ತು ಆಹಾರಧಾನ್ಯಗಳನ್ನು ಉತ್ಪತ್ತಿಮಾಡಿ, ಈ ಸಹಕಾರಿ ಸಂಘಗಳನ್ನು ಜೀರ್ಣೋದ್ಧಾರ ಮಾಡಿ, ಜನರಿಗೆ ಅನುಕೂಲವಾಡಿಕೊಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಟಿ. ಪಿ. ಬೋರಯ್ಯ (ಬನ್ನೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಸಹಕಾರಿ ತತ್ವ ಬಹಳ ಒಳ್ಳೆಯದು ಎಂಬುದನ್ನು ಎಲ್ಲರೂ ಅರಿತಿದ್ದಾರೆ. ಸಹಕಾರಿ ತತ್ವದಿಂದಲೇ, ಜನರ ಉದ್ಧಾರವಾಗುತ್ತದೆ ಎಂಬ ಪ್ರಚಾರ ಕೂಡ ಬಹಳ ದಿವಸದಿಂದ ನಡೆಯುತ್ತಿದೆ. ಸಹಕಾರಿ ಇಲಾಖೆ ಬಹಳ ಹಳೆಯ ಇಲಾಖೆ. ಸುಮಾರು 60—70 ವರ್ಷಗಳಿಂದ ಇದು ಕೆಲಸ ಮಾಡುತ್ತಾ ಬಂದಿದೆ. ಅನೇಕ ಮಾನ್ಯ ಸದಸ್ಯರುಗಳು ಇದರ ಬಗ್ಗೆ ವಿರೋಧವಾದ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಆದರೆ ಅಲ್ಲಿ ಜನರಿಗೆ ಅನ್ಯಾಯ ಮಾಡುವುದಕ್ಕೂ ಅವಕಾಶ ಇದೆ, ಜನರಿಗೆ ಅನುಕೂಲ ಮಾಡುವುದಕ್ಕೂ ಅವಕಾಶ ಇದೆ. ಅದು ಇಲ್ಲಿ ಕೆಲಸಮಾಡತಕ್ಕಂತಹ ಜನರಮೇಲೆ ಹೊಂದಿಕೊಂಡಿದೆ. ಶ್ರೀಮತಿ ನಾಗರತ್ನಮ್ಮನವರು ಕೆಲವು ವಿಚಾರಗಳನ್ನು ತಿಳಿಸಿದರು. ಅಲ್ಲಿ ಒಂದು ಮಾರಾಟ ಮಾಡುವಾಗ ಅನ್ಯಾಯ ಮಾಡತಕ್ಕ ಅವಕಾಶ ಇದೆ. ಹಾಗೆ ಒಳ್ಳೇದು ಮಾಡತಕ್ಕ ಅವಕಾಶವೂ ಇದೆ. ತಾವು ಓಪನ್ ಮಾರ್ಕೆಟ್ಟಿನಲ್ಲಿ ಭತ್ತ ಕೊಳ್ಳಿ ಎಂದು ಆದೇಶ ಕೊಟ್ಟಿದ್ದೀರಿ. ಆದರೆ ಕೊಳ್ಳತಕ್ಕ ಕಾಲದಲ್ಲಿ ಕೆಲವು ನಿಯಮಗಳನ್ನು ಮಾರ್ಕೆಟಿಂಗ್ ಸೊಸೈಟಿಗಳಿಗೆ ಹಾಕಿದ್ದೀರಿ. ಆ ನಿಯಮದ ಪ್ರಕಾರ ಕೊಂಡು ಲಾಭವೂ ಮಾಡಬಹುದು, ನಷ್ಟವೂ ತೋರಿಸಿ, ಸೊಸೈಟಿಯನ್ನು ಮುಚ್ಚಲೂ ಬಹುದು. ಹೀಗೆ ಅಲ್ಲಿ ಎರಡಕ್ಕೂ ಅವಕಾಶ ಇದೆ. ಆದ್ದರಿಂದ ಅಲ್ಲಿ ಯೋಗ್ಯವಾದ ಜನರು ಇರಬೇಕು. ನೀವು ಏನು ಮಾಡುತ್ತೀರೆಂದರೆ, ಕಾಂಗ್ರೆಸ್ಸಿಗರಾಗಲಿ, ಕಾಂಗ್ರೆಸ್ಸೇತರರಾಗಿರಲಿ, ಅಂಥವರು ಇದ್ದರೆ ಅವರಿಗೆ ಕೊಡುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಯಾವುದೇ ಪ್ರಭಾವಕ್ಕೆ ಒಳಗಾಗಿ, ಒಳ್ಳೆಯವರಿಗೆ ಅವಕಾಶ ಕೊಡುವುದಿಲ್ಲ. ಆರೀತಿ ಮಾಡುತ್ತಿರುವುದು ಸರಿಯಲ್ಲ. ಕೋಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಗಳಿಗೆ ಮತ್ತು ಪ್ರೊಸೆಸಿಂಗ್ ಸೊಸೈಟಿಗಳಿಗೆ ಉತ್ತೇಜನ ಕೊಡತಕ್ಕ ಕಾಲದಲ್ಲಿ, ಕಚ್ಚಾ ಪದಾರ್ಥಗಳು ಎಲ್ಲೆಲ್ಲಿ ಸಿಗುತ್ತವೆ, ಅದಕ್ಕೆ ತಕ್ಕಂತೆ ಪ್ರೊಸೆಸಿಂಗ್ ಯೂನಿಟ್ ಮಾಡಬೇಕೇ ಹೊರತು, ಬೇರೆ ಸಿಗದ ಕಡೆ ಮಾಡಬಾರದು. ಅಕ್ಕಿ ಗಿರಣಿಗಳನ್ನು ಈಗ ಎಲ್ಲಾ ಕಡೆ ಸ್ಥಾಪನೆ ಮಾಡಬೇಕೆಂದು ಹೊರಟಿದ್ದೀರಿ. ಕೆಲವು ಕಡೆ ಭತ್ತವೇ ಸಿಗುವುದಿಲ್ಲ. ಅಂಥ ಕಡೆ ಅದನ್ನು ಸ್ಥಾಪನೆ ಮಾಡಿದರೆ ಕೋಆಪರೇಟಿವ್ ಸೊಸೈಟಿಗೆ ನಷ್ಟವಾಗುತ್ತದೆ, ಮತ್ತು ಅದರ ಹಣಕಾಸಿನ ಪರಿಸ್ಥಿತಿಗೆ ಧಕ್ಕೆ ಬರುತ್ತದೆ. ನಮ್ಮ ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳಲ್ಲಿ ಬತ್ತವೇ ಸಿಗುವುದಿಲ್ಲ. ಅಲ್ಲಿ ಅಕ್ಕಿ ಗಿರಣಿಗಳನ್ನು ಸ್ಥಾಪನೆ ಮಾಡಿದ್ದಾರೆ. ಇದರ ಭವಿಷ್ಯ ಏನೆಂಬುದನ್ನು ತಾವು ಯೋಚನೆ ಮಾಡಬೇಕು. ಈಗ ಕಳೆದ 20 ವರ್ಷಗಳಿಂದಲೂ ಸರ್ಕಾರದವರು ಸ್ವಲ್ಪ ರಕ್ಷಣೆ ಕೊಡುತ್ತಿರುವುದರಿಂದ ಅವೆಲ್ಲಾ ಬದುಕಿಕೊಂಡು ಬಂದಿವೆ. ತನ್ನ ಕಾಲಮೇಲೆ ನಿಲ್ಲುವ ಶಕ್ತಿ ಇದೆಯೋ ಎಂದು ನೋಡಿದರೆ ಆ ಶಕ್ತಿ ಅದಕ್ಕೆ ಇಲ್ಲ. ಅದು ಬದುಕುವಂತೆ ಈಗಿನಿಂದಲೂ ನೋಡಿದರೆ ಮಾತ್ರ ಈ ಸಂಸ್ಥೆಗಳು ಉಳಿಯುತ್ತವೆ. ಈಗ ಅದರ ಶೇರ್ ಬಂಡವಾಳ ಬಹಳ ಕಡಿಮೆ. ಸರ್ಕಾರದ ಬಂಡವಾಳ ಜಾಸ್ತಿ. ಸರ್ಕಾರದ ಬಂಡವಾಳ ವಾಪಸು ತೆಗೆದುಕೊಂಡು ಅದನ್ನು ಮುಚ್ಚಬೇಕಾದ ಪರಿಸ್ಥಿತಿ ಬರುತ್ತದೆ. ಆದ್ದರಿಂದ ತಾವು ಯಾವ ಉದ್ದೇಶದಿಂದ ಅದನ್ನು ಬೆಳೆಸಿದ್ದೀರೋ, ಅದಕ್ಕೆ ಹೆಚ್ಚಿನ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಪ್ರೈಮರಿ ಲ್ಯಾಂಡ್ ಮಾರ್ಗೇಜ್ ಬ್ಯಾಂಕ್ ಕೆಲಸ ಮಾಡುತ್ತಾ ಇದೆ. ಅದು ಸರ್ಕಾರಕ್ಕೂ ಗೊತ್ತಿದೆ; ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೂ ಚೆನ್ನಾಗಿ ಗೊತ್ತಿದೆ. ಸಾಲ ಕೊಡತಕ್ಕದ್ದರಲ್ಲಿ ಎಲ್ಲಾ ಸ್ಯಾಂಕ್ಷನ್ ಮಾಡಿದ್ದಾರೆ. ಹಣ ಹಂಚಿಕೆಯಲ್ಲಿ 50 ಸಾವಿರ ರೂಪಾಯ ಚೆಕ್ ಕೊಟ್ಟಿದ್ದಾರೆ. ಆ ಚೆಕ್ಕನ್ನು ಬ್ಯಾಂಕಿಗೆ ಕೊಟ್ಟರೆ, ಅಲ್ಲಿ ಹಣವಿಲ್ಲ. ಅದರ ನಿಜಾಂಶ ನನಗೆ ಗೊತ್ತಿಲ್ಲ. ಆದ್ದರಿಂದ ಅದನ್ನು ಸರ್ಕಾರದವರು ಪರಿಶೀಲಿಸಿ, ಅದು ಏನು ಎಂಬುದನ್ನು ನೋಡಿ, ಯಾರು ಅನ್ಯಾಯ ಮಾಡಿದ್ದಾರೆ, ಅವರಮೇಲೆ ಕ್ರಮ ತೆಗೆದುಕೊಳ್ಳಬೇಕು. ಸ್ಯಾಂಕ್ಷನ್ ಮಾಡಿದಂದಿನಿಂದ ಆ ಹಣಕ್ಕೆ ರೈತ ಬಡ್ಡಿ ಕೊಡಬೇಕಾಗುತ್ತದೆ. ಅದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳುತ್ತೇನೆ. ಇನ್ನು ಸರ್ಕಲ್ ಮಲ್ಟಿಪರ್ಪಸ್ ಕೋಆಪರೇಟಿವ್ ಸೊಸೈಟಿ ಎಂದು ಸೋಮನಾಥಪುರದಲ್ಲಿ ಇತ್ತು. ಅದು ಶುರು ಮಾಡಿದಂತಹ ಕಾಲದಲ್ಲಿ ನಾನು ಅಡ್ವೈಸರಿ ಕಮಿಟಿಯ ಛೇರ್‌ಮೇನ್ ಆಗಿದ್ದೆ. ಈ ಯೋಜನೆ 49ನೇ ಇಸವಿಯಲ್ಲಿ ಬಂತು. ಆಗ ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರ ಮಾಡಿ, ಹಣ ಕೂಡಿಸಿ, ಕೆಲವು ಕಾಲ ಚೆನ್ನಾಗಿ ನಡೆಯಿತು. ಅದರ ಮ್ಯಾನೇಜ್‌ಮೆಂಟ್ ಬದಲಾವಣೆಯಾದಮೇಲೆ ಸಂಘಕ್ಕೆ ಕಷ್ಟ ಬಂತು. ಸಂಘದಲ್ಲಿದ್ದಂತಹ ಕಾರ್ಯದರ್ಶಿ 10 ಸಾವಿರ ದುರುಪಯೋಗ ಮಾಡಿದರು. ಈ ವಿಚಾರವನ್ನು ಆಡಿಟ್ ರಿಪೋರ್ಟಿನಲ್ಲಿ ನಮೂದು ಮಾಡಿದ್ದಾರೆ.

(ಶ್ರೀ ಟಿ. ಪಿ. ಬೋರಯ್ಯ)

ಅದಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಂಡಿಲ್ಲ. ಈಗ 10 ವರ್ಷವಾಗಿದೆ. ಇದನ್ನು ಷೇರ್ ಹೋಲ್ಡರ್ಸ್ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಕೂಡಲೇ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಸರ್ವಿಸ್ ಕೋ ಆಪರೇಟಿವ್ ಸೊಸೈಟಿ ಎಂದು, ಹತ್ತಳ್ಳಿಯಲ್ಲಿ ಇದೆ. ಅಲ್ಲಿ ಕಟ್ಟಡಕ್ಕೆ ಜಾಗ ಗೊತ್ತು ಮಾಡಿದ್ದಾರೆ, ಗೋಡೌನ್‌ಸ್ಯಾಂಕ್ಷನ್ ಮಾಡಿದ್ದಾರೆ, ಫೌಂಡೇಶನ್ ಎಲ್ಲಾ ಆಗಿದೆ. ಅಲ್ಲಿ ಅದರ ಕೆಲಸವನ್ನು ಮುಗಿಸಲಿಲ್ಲ. ಕಾರಣ ಅಲ್ಲಿನ ಪಂಚಾಯಿತಿಯವರಿಗೂ, ಸಹಕಾರಿ ಸಂಘದ ಮ್ಯಾನೇಜ್‌ಮೆಂಟಿನವರಿಗೂ ಸ್ವಲ್ಪ ಜಿದ್ದು ಇರುವುದರಿಂದ, ಇದಕ್ಕೆ ಇಲಾಖೆಯವರು ರಕ್ಷಣೆ ಕೊಟ್ಟು ಅದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನನಗೆ ತಿಳಿದಮಟ್ಟಿಗೆ ಕೇಂದ್ರ ಸರ್ಕಾರದ ಸಹಕಾರ ಸಚಿವರು, ರಾಜ್ಯಮಟ್ಟದ ಸಹಕಾರ ಸಚಿವರು ಮತ್ತು ನಮ್ಮ ಮಾನ್ಯ ಉಪಸಚಿವರೂ ಅದಕ್ಕೆ ಏನೋ ಬೆಂಬಲ ಕೊಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಆ ರೀತಿ ಅದು ಆಗಬಾರದು. ಬೇಗ ನಮ್ಮ ಕೆಲಸ ಆಗುವಂತೆ ಏರ್ಪಾಡು ಮಾಡಬೇಕೆಂದು ನಾನು ಹೇಳುತ್ತೇನೆ.

ಸಹಕಾರಿ ಸಕ್ಕರೆ ಕಾರ್ಖಾನೆಯ ಬಗ್ಗೆ ಒಂದು ನಾನು ವಿಚಾರವನ್ನು ಹೇಳುತ್ತೇನೆ. ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ವಿಚಾರದಲ್ಲಿ ಅದನ್ನು ಖಾಸಗಿಯವರು ಸ್ಥಾಪನೆ ಮಾಡುವ ಬಗ್ಗೆ ಕೇಂದ್ರ ಸರ್ಕಾರದಿಂದ ಅದಕ್ಕೆ ರಿಸ್ಟ್ರಿಕ್ಷನ್ ಬಂದಿದೆ ಎಂದು ಮೊನ್ನೆ ಮಾನ್ಯ ಮಂತ್ರಿಗಳು ಹೇಳಿದರು. ಈಗ ಹೆಚ್ಚು ಕಬ್ಬು ಬೆಳೆಯುವ ಪ್ರದೇಶದಲ್ಲಿ ನಮ್ಮ ಪ್ರಗತಿಯನ್ನು ಸಾಧನೆ ಮಾಡುವ ದೃಷ್ಟಿಯಿಂದ ಯಾರಾದರೂ ಖಾಸಗಿಯವರು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುತ್ತೇವೆಂದು ಮುಂದೆ ಬಂದರೆ ಅವರಿಗೆ ಸರ್ಕಾರದವರು ಉತ್ತೇಜನವನ್ನು ಕೊಟ್ಟು ಅಲ್ಲಿರತಕ್ಕ ರೈತರಿಗೆ ಸಹಾಯವಾಗುವ ರೀತಿಯಲ್ಲಿ ಏರ್ಪಾಡು ಮಾಡಿಕೊಡಬೇಕು ಮತ್ತು ಅವರಿಗೆ ಬೇಕಾದ ಅನುಕೂಲತೆಯನ್ನು ಮಾಡಿಕೊಡಬೇಕು. ಮೈಸೂರು ಜಿಲ್ಲೆಯಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ಲೈಸನ್ಸ್ ಬರುತ್ತದೆ ಎಂದು ಗೊತ್ತಾಗಿದೆ. ಅದು ಯಾವ ಸ್ಥಳದಲ್ಲಿ ಆಗುತ್ತದೆಯೋ ಗೊತ್ತಿಲ್ಲ. ಮತ್ತು ಅದು ಎಷ್ಟರಮಟ್ಟಿಗೆ ಫಲಕಾರಿಯಾಗುತ್ತದೆಯೋ ಗೊತ್ತಿಲ್ಲ. ನನ್ನ ಕ್ಷೇತ್ರದಲ್ಲಿ 10 ಸಾವಿರ ಎಕರೆ ಕಬ್ಬು ಬೆಳೆಯುವ ಪ್ರದೇಶ ಇದೆ. ಒಂದು ಸಕ್ಕರೆ ಕಾರ್ಖಾನೆಗೆ ಬೇಕಾಗುವಷ್ಟು ಕಬ್ಬು ಅಲ್ಲಿ ಸಿಕ್ಕುವ ಅವಕಾಶ ಇದೆ. ಅಲ್ಲಿಯಾದರೂ ಜಾಯಿಂಟ್ ಸ್ಟಾಕ್ ಕಂಪೆನಿಯವರು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುತ್ತೇವೆ ಎಂದು ಮುಂದೆ ಬಂದರೆ ಸರ್ಕಾರದವರು ಅವರಿಗೆ ಉತ್ತೇಜನ ಕೊಟ್ಟು ಅನುಕೂಲತೆಗಳನ್ನು ಒದಗಿಸಿಕೊಡಬೇಕು. ಆ ರೀತಿ ಮಾಡುವುದಾದರೆ ಆ ಪ್ರದೇಶದ ರೈತರಿಗೆ ಉತ್ತೇಜನವನ್ನು ಕೊಟ್ಟಂತೆ ಆಗುತ್ತದೆ. ಅಲ್ಲಿ ಜನಸಂಖ್ಯೆ ಜಾಸ್ತಿ ಇದೆ. ಒಂದು ಚದರಮೈಲಿಗೆ 1,800 ರಿಂದ 2,000 ಜನಗಳು ವಾಸ ಮಾಡುತ್ತಿದ್ದಾರೆ. ಅವರು ಹಣದ ಬೆಳೆಯನ್ನು ಬೆಳೆಯದಿದ್ದರೆ ಅವರು ಅಲ್ಲಿ ಜೀವನ ಮಾಡುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಅಲ್ಲಿನ ರೈತರು ಕಬ್ಬು ಬೆಳೆ, ಹಿಪ್ಪನೇರಳೇ ಬೆಳೆ ಮುಂತಾದ ಕಮರ್ಷಿಯಲ್ ಕ್ರಾಪ್ಸ್ ಬೆಳೆಯುವುದಕ್ಕೆ ಸರ್ಕಾರದವರು ಅನುಕೂಲಮಾಡಿಕೊಡುವುದಕ್ಕೆ ಹೆಚ್ಚು ಗಮನಕೊಟ್ಟು ಯಾರಾದರೂ ಸಾಹುಕಾರರು ಖಾಸಗೀ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ಮುಂದೆ ಬಂದರೆ ಅವರಿಗೆ ಅವಕಾಶಮಾಡಿಕೊಟ್ಟು ಅವರಿಗೆ ಬೇಕಾದ ಅನುಕೂಲತೆಗಳನ್ನು ಮಾಡಿಕೊಡಬೇಕೆಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಸಹಕಾರ ಮಂತ್ರಿಗಳ ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ನಾನು ಒಂದೆರಡು ಮಾತುಗಳನ್ನು ಆಡಬೇಕೆಂದು ಅನಿಸುತ್ತದೆ. ಕೆಲವು ಮಾನ್ಯ ಸದಸ್ಯರು ಸಹಕಾರ ತತ್ವವನ್ನೇ ಬದಲಾಯಿಸಬೇಕೆಂದು ಹೇಳುತ್ತಿದ್ದರು. ಅದನ್ನು ಕೇಳಿ ನನ್ನ ಮನಸ್ಸಿಗೆ ಬಹಳ ನೋವು ಆಯಿತು. ಸಹಕಾರ ತತ್ವದಿಂದ ಇಡೀ ಇಂಡಿಯಾ ದೇಶದಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಅನುಕೂಲವಾಗಿದೆ. ಪ್ರತಿಯೊಬ್ಬರೂ ಅದನ್ನು ಬೆಂಬಲಿಸುತ್ತಾರೆ. ಕೆಲವು ಮಾನ್ಯ ಸದಸ್ಯರು ಸಹಕಾರ ತತ್ವವನ್ನು ಇಷ್ಟೊಂದು ಹೀನವಾಗಿ ಮಾತನಾಡಿದ್ದನ್ನು ನೋಡಿದರೆ ನಾವು ನಮ್ಮ ರಾಜ್ಯವನ್ನು ಉಳಿಸಿ ಕೊಳ್ಳುವಷ್ಟು ಶಕ್ತರಾಗಿ ಆಗುತ್ತೇವೆಯೋ ಇಲ್ಲವೋ ಎನ್ನುವ ಭಯ ತೋರುತ್ತದೆ. ಈ ಸಹಕಾರಿ ಬ್ಯಾಂಕುಗಳನ್ನು ನಮ್ಮ ಕಡೆ ಕೆಲವು ಹಳ್ಳಿಗಳಲ್ಲಿ ಹೇಳುತ್ತಾರೆ, ಇವು ಕಾಮಧೇನುಗಳು, ಇದು ಕಾಮಧೇನು ಸರ್ಕಾರ. ಯಾರು ಎಷ್ಟು ದುಡ್ಡು ಕೇಳಿದರೂ ಕೊಡುತ್ತಾರೆ. ಅವುಗಳಿಂದ ನಾವು

ಜೀವನವನ್ನು ನಡೆಸುತ್ತೇವೆ ಎಂದು ಹೇಳುತ್ತಿದ್ದಾರೆ. ಇಂಥಾ ಸರ್ಕಾರವನ್ನು ನಾವು ಎಲ್ಲೂ ನೋಡಲಿಲ್ಲ ಎಂದು ಹೇಳುತ್ತಿದ್ದಾರೆ. ಇವೊತ್ತಿನ ದಿವಸ ಇಂಥಾ ಸಹಕಾರಿ ಬ್ಯಾಂಕುಗಳಿಂದ ಜನತೆಗೆ ಸಹಾಯವಾಗಿಲ್ಲ ಎಂದರೆ ಏನು ಅರ್ಥ? ನಮ್ಮ ಡಿಸ್ಟ್ರಿಕ್ಟಿನಲ್ಲಿ ಸುಮಾರು ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರ ಜನತೆಗೆ ಸಹಾಯ ಮಾಡಿದೆ. ಆದರೆ ರೈತರು ಅವರ ಕರ್ತವ್ಯ ಒಂದನ್ನೂ ಮಾಡಿಲ್ಲ. ಕೆಲವರು ಬಾವಿಯನ್ನು ಅಗೆಯುವುದಕ್ಕೆ, ಬಾವಿಯನ್ನು ತೋಡುವುದಕ್ಕೆ ಎಂದು ಸರ್ಕಾರದಿಂದ ಸಾಲವನ್ನು ತೆಗೆದುಕೊಂಡು ಆ ಹಣವನ್ನು ಮದುವೆ ಮುಂಜಿ ಮಾಡುವುದಕ್ಕೆ ಉಪಯೋಗಿಸಿಕೊಂಡಿದ್ದಾರೆ. ಅದು ಸರಿಯಲ್ಲ ಎಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಈಗ ಕುಣಿಗಲ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ 2 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಮಿಸ್ ಅಪ್ರೋಪ್ರಿಯೇಷನ್ ಮಾಡಿರುವ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳದೆ ನಮ್ಮ ಅಧಿಕಾರಿಗಳನ್ನು ನಂಬಿಕೊಂಡಿರುವುದು ಸರಿಯಲ್ಲ. ಇದನ್ನು ನಮ್ಮಿಂದ ಸಹಿಸುವುದಕ್ಕೆ ಸಾಧ್ಯವಿಲ್ಲ. ತಪ್ಪು ಮಾಡಿರತಕ್ಕವರು ಆಡಳಿತ ಪಕ್ಷದವರಾಗಲೀ, ಅಥವಾ ಎದುರುಪಕ್ಷದವರಾಗಲೀ ಯಾರೇ ಆಗಲಿ ಅವರಿಗೆ ಶಿಕ್ಷೆಯನ್ನು ವಿಧಿಸಲೇಬೇಕು. ಅಂಥಾ ಪ್ರಸಂಗಗಳಲ್ಲಿ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದನ್ನು ತಪ್ಪಿಸಬೇಕು, ಅಧಿಕಾರಿಗಳು ಮುಖ್ಯವಾಗಿ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇದರಲ್ಲಿ ಎಷ್ಟೋ ಜನಗಳು ಕೆಲವರಿಂದ ಕರಪ್ಷನ್ ಮಾಡಿಸಿ, ಅವರನ್ನು ಉಳಿಸಿ ಎಂದು ಹೇಳತಕ್ಕಂಥ ಜನ ನಮ್ಮಲ್ಲಿ ಎಷ್ಟೋ ಇದ್ದಾರೆ. ಅಂಥವರನ್ನು ಕೈ ಬಿಡಬಾರದು. ಇವೊತ್ತು ಇಲ್ಲಿ ಟೀಕೆ ಮಾಡಿ ನಾಳೆ ದಿವಸ ಮಂತ್ರಿಗಳ ಮನೆಗೋ ಅಥವಾ ಅವರ ಆಫೀಸಿಗೋ ಹೋಗಿ ಅವನು ಏನೋ ತಪ್ಪು ಮಾಡಿದ್ದಾನೆ, ಅವನಿಗೆ ಜೀವ ದಾನ ಮಾಡಬೇಕು ಎಂದು ಹೇಳುವವರು ಇದ್ದಾರೆ. ಇಂಥಾದ್ದರಲ್ಲಿ ಸರ್ಕಾರವನ್ನು ಟೀಕೆ ಮಾಡಿದರೆ ಏನಾಗುತ್ತದೆ? ಇದು ಹೋಗಬೇಕು.

ಇನ್ನೊಂದು ವಿಷಯ. ನಮ್ಮ ಮೈಸೂರು ರಾಜ್ಯದಲ್ಲಿ 22 ಸಾವಿರ ಸೊಸೈಟಿಗಳು ಇವೆ. ಇಷ್ಟೊಂದು ಸೊಸೈಟಿಗಳು ನಮ್ಮ ರಾಜ್ಯದಲ್ಲಿ ಕೆಲಸ ಮಾಡುತ್ತಿರುವಾಗ ಎಲ್ಲೋ ಅಲ್ಲೊಂದು ಸೊಸೈಟಿ, ಇಲ್ಲೊಂದು ಸೊಸೈಟಿಯಲ್ಲಿ ಕೆಲವು ಲೋಪದೋಷಗಳು ನಡೆದಿರಬಹುದು. ಆದರೆ ಅವನ್ನೇ ನಾವು ಲೆಕ್ಕಕ್ಕೆ ತೆಗೆದುಕೊಂಡು ದೊಡ್ಡದು ಮಾಡುವುದಕ್ಕಾಗುವುದಿಲ್ಲ. ಟೀಕೆ ಮಾಡುವವರು ನಾವೇ, ನಾಳೆ ದಿವಸ ಸಹಕಾರ ಮಂತ್ರಿಗಳ ಹತ್ತಿರ ಹೋಗಿ ಸಹಾಯಮಾಡಬೇಕು ಎಂದು ಕೇಳುವವರು ನಾವೇ. ಸ್ವಾಮಿ, ನಾನು ಒಂದು ಸೊಸೈಟಿಯ ಪ್ರೆಸಿಡೆಂಟಾಗಿದ್ದೆ. ಏನೋ ಆಕಸ್ಮಿಕವಾಗಿ 30 ಸಾವಿರ ರೂಪಾಯಿಗಳು ಕಡಿಮೆ ಬಿದ್ದಿದೆ. ಅದನ್ನು ಸರ್ಕಾರಕ್ಕೆ ಕಟ್ಟುವುದಕ್ಕೆ ನನಗೆ ಸ್ವಲ್ಪ ಟೈಮ್ ಕೊಡಿ ಎಂದು ಕೇಳುವವರೂ ನಾವೇ. ಈ ತರಹ ಮಾಡಿದರೆ ಸಹಕಾರಕ್ಕೆ ಎಲ್ಲಿ ಪ್ರೋತ್ಸಾಹ ಬರುತ್ತದೆ? ಇನ್ನೊಂದು ನಮ್ಮ ಕರ್ತವ್ಯ ಇದೆ. ಯಾವ ಮನುಷ್ಯನೇ ಆಗಲೀ ಜನತೆಯ ಪ್ರತಿನಿಧಿಗಳಾಗಲೀ, ರೈತರಾಗಲೀ ಅವರವರ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿ ಕೊಂಡು ಒಂದು ನೀತಿ ಮಾರ್ಗದಲ್ಲಿ ನಡೆದರೆ ಯಾವುದೂ ಏನೂ ತೊಂದರೆ ಇಲ್ಲ.

ವಿರೋಧಪಕ್ಷದವರು ಕಾಂಗ್ರೆಸ್‌ಪಕ್ಷದವರನ್ನು ಬೀದಿಗೆ ಎಳೆಯುವುದಕ್ಕೆ ಹೊರಟಿದ್ದಾರೆ. ಆದರೆ ನಾವು ಆ ರೀತಿ ಮಾಡುವುದಕ್ಕೆ ಹೋಗುವುದಿಲ್ಲ. ವಿರೋಧಪಕ್ಷದವರು ಇಲ್ಲಿ ಮಂತ್ರಿಗಳನ್ನು ಟೀಕೆ ಮಾಡುತ್ತಾರೆ, ಮತ್ತೆ ಅವರ ಮನೆಗೆ ಹೋಗಿ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ. ಇವರಿಗೆ ಕಾಂಗ್ರೆಸ್ ಪಕ್ಷದವರನ್ನು ಟೀಕೆ ಮಾಡುವುದೇ ಒಂದು ಕೆಲಸವಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಪಾಯಿಂಟ್ ಆಫ್ ಆರ್ಡರ್ ಸರ್, ಮಾನ್ಯ ಪುಟ್ಟಸ್ವಾಮಿಯವರು ಮಾತನಾಡುತ್ತಾ ವಿರೋಧಪಕ್ಷದವರು ಕಾಂಗ್ರೆಸ್‌ಪಕ್ಷದವರನ್ನು ಬೀದಿಗೆ ಎಳೆಯುವ ಜನ ಎಂದು ಹೇಳಿದರು. ನಾವು ಕಾಂಗ್ರೆಸ್ ಪಕ್ಷದವರನ್ನು ಬೀದಿಗೆ ಎಳೆಯುವುದಕ್ಕೆ ಇಲ್ಲಿಗೆ ಬಂದಿಲ್ಲ. ಆದಕಾರಣ ತಾವು ಈ ಬಗ್ಗೆ ರೂಲಿಂಗ್ ಕೊಡಬೇಕು.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಹೇಳಿದ್ದು ಕ್ರಿಯಾಲೋಪವಾಗುವುದಿಲ್ಲ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಅವರಿಗೆ ಪಾಯಿಂಟೂ ಗೊತ್ತಿಲ್ಲ, ಆರ್ಡರೂ ಗೊತ್ತಿಲ್ಲ. ಜನರಿಗೆ ಸುಳ್ಳು ಭರವಸೆ ಕೊಟ್ಟು ಗೆದ್ದು ಇಲ್ಲಿಗೆ ಬಂದು ಕಾಂಗ್ರೆಸ್‌ಪ ದವರನ್ನು ಟೀಕೆ ಮಾಡುತ್ತಿದ್ದಾರೆ. ಮಂತ್ರಿಗಳ ಮನೆಯ ಹತ್ತಿರ ಹೋಗಿ ಭಿಕ್ಷೆ ಬೇಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಅವರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. * * * *

ಉಪಾಧ್ಯಕ್ಷರು.—ರೆಕಾರ್ಡ್ ಮಾಡಬೇಡಿ.

---

* * * * **Matter not recorded as ordered by the Chair.**

ಶ್ರೀ ಕೆ. ಎಚ್. ಪಾಟೀಲ್.—ಇಲ್ಲಿ ಸಭಾನಾಯಕರೂ ಕೂಡ ಇದ್ದಾರೆ. ಸಭಾನಾಯಕರು ಈ ರೀತಿ ಮಾತನಾಡುವುದಕ್ಕೆ ಅವಕಾಶ ಕೊಡಬಾರದು. ಒಬ್ಬರು ಸದಸ್ಯರು ಇನ್ನೊಬ್ಬ ಸದಸ್ಯರ ಬಗ್ಗೆ ಬೇಕಾದರೆ ಮಾತನಾಡಬಹುದೇ ಹೊರತು ಎಲ್ಲಾ ಸದಸ್ಯರ ಬಗ್ಗೆಯೂ ಕೂಡ ಅವರುಗಳ ಘನತೆಗೆ ಧಕ್ಕೆ ತಟ್ಟುವಂತೆ ಅವರು ಮಾತನಾಡುವುದು ವಿಹಿತವೆ ?

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ-ಗ್ರಾಮಾಂತರ).—ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಿಯವರು ಹೇಳಿದ್ದೇನೆಂದರೆ, ವಿರೋಧಪಕ್ಷದವರು ವಕೀಲರು ಇದ್ದಂತೆ, ಇಲ್ಲಿ ಮಂತ್ರಿಗಳ ಬಗ್ಗೆ ಟೀಕೆ ಮಾಡಿ ನಂತರ ಅವರ ಮನೆಗೆ ಹೋಗಿ ಪ್ರೇಮ ಮಾಡಿಕೊಳ್ಳುವ ಚಟ ವಿರೋಧಪಕ್ಷದವರಲ್ಲಿ ಇದೆ ಎಂಬುದಾಗಿ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಉಪಾಧ್ಯಕ್ಷರಲ್ಲಿ ಒಂದು ವಿನಂತಿ. ಶ್ರೀಮಾನ್ ಪುಟ್ಟಸ್ವಾಮಿಯವರು ಬಹಳ ಉತ್ಸಾಹ ತೋರಿಸುತ್ತಿದ್ದಾರೆ. ಏಕೆ ಎಂಬುದು ಗೊತ್ತಿಲ್ಲ. ಮುಖ್ಯ ಮಂತ್ರಿಗಳು ಆ ರೀತಿ ಮಾತನಾಡಿ ಎಂದು ಹೇಳಿದ್ದಾರೋ ಏನೋ ಗೊತ್ತಿಲ್ಲ.

ಶ್ರೀ ಕೆ. ಎಂ ಪುಟ್ಟಸ್ವಾಮಿ.—ನನಗೆ 30 ವರ್ಷಗಳ ರಾಜಕೀಯದ ಅನುಭವವಿದೆ. ನನಗೆ ಮಾತನಾಡುವುದನ್ನು ಯಾರೂ ಹೇಳಿಕೊಡಬೇಕಾಗಿಲ್ಲ.

ಶ್ರೀ ಎಸ್. ಗೋಪಾಲಗೌಡ.— ಅವೇ ಅಲೂಗಡ್ಡೆ ಬೆಳೆದ ಅನುಭವ ತಮಗೆ ಇರಬಹುದು. ಹೊಸದರಲ್ಲಿ ಅಗಸ ಗೋಣೀಚೀಲವನ್ನು ಎತ್ತಿ ಒಗೆದನಂತೆ. ಈ ಪ್ರಶ್ನೆ ಏನಾಗಿದೆ ಎಂದರೆ ಕಾಂಗ್ರೆಸ್‌ಪಕ್ಷ ಆಳುವ ಪಕ್ಷವಾಗಿರುವುದರಿಂದ ವಿರೋಧಪಕ್ಷದ ನಾವುಗಳು ಮಂತ್ರಿಗಳನ್ನು ಟೀಕೆ ಮಾಡಬೇಕಾಗುತ್ತದೆ. ಅದಕ್ಕೇ ನಾವು ಇಲ್ಲಿಗೆ ಬಂದಿರುವುದು. ಇಲ್ಲಿ ಆಳುವ ಪಕ್ಷದವರು ದೊಡ್ಡವರು, ವಿರೋಧಪಕ್ಷದವರು ಸಣ್ಣವರು ಎಂಬ ತತ್ವ ಅನ್ವಯಿಸುವುದಿಲ್ಲ. ನಾವೂ ಜನತೆಯಿಂದ ಆರಿಸಿ ಬಂದಿದ್ದೇವೆ. ನೀವು ಜನತೆಯಿಂದ ಆರಿಸಿ ಬಂದಿದ್ದೀರಿ. ನಮ್ಮ ಸಂಖ್ಯೆ ಕಡಿಮೆ ಇರುವುದರಿಂದ ವಿರೋಧಪಕ್ಷದಲ್ಲಿದ್ದೇವೆ. ನಿಮ್ಮ ಸಂಖ್ಯೆ ಜಾಸ್ತಿ ಇರುವುದರಿಂದ ಆಳುವ ಪಕ್ಷದಲ್ಲಿ ಇದ್ದೀರಿ. ಈ ತತ್ವ ಬೇರೆ ರಾಜ್ಯಗಳಲ್ಲಿ ಈಗ ತಿರುವುಮುರುವಾಗುತ್ತಿದೆ. ಈ ರಾಜ್ಯದಲ್ಲಿಯೂ ಸಹ ಮುಂದೆ ಆ ರೀತಿ ಆಗಬಹುದು. ಆದ್ದರಿಂದ ಮಾನ್ಯ ಪುಟ್ಟಸ್ವಾಮಿಯವರಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಅವರು ಕೋಆಪರೇಟಿವ್ ಡಿಮ್ಯಾಂಡ್ ಮೇಲೆ ಮಾತನಾಡುವುದಕ್ಕೆ ಎದ್ದುನಿಂತು ನಂತರ ಶ್ರೀ ವಾಟಾಳ್ ನಾಗರಾಜ್ ಅವರ ಬಗ್ಗೆ ಏನೋ ಒಂದು ದಾಟಿಯಲ್ಲಿ ಟೀಕೆ ಮಾಡುತ್ತಾ ಕಾಂಗ್ರೆಸ್‌ನವರೇ ಎಲ್ಲರಿಗೂ ಸಹಾಯ ಮಾಡುತ್ತಿದ್ದಾರೆಂದು ಹೇಳುವುದು ಸರಿಯಲ್ಲ. ಮಂತ್ರಿಗಳ ಮನೆಗೆ ವಿರೋಧಪಕ್ಷದ ಸದಸ್ಯರುಗಳು ಹೋಗುತ್ತಾರೆಂದು ಶ್ರೀಮಾನ್ ಅಗ್ನಿಹೋತ್ರಿ ಅವರು ಹೇಳಿದರು. ಮಂತ್ರಿಗಳು ಕೇವಲ ಕಾಂಗ್ರೆಸ್ ಪಕ್ಷದವರಿಗೆ ಮಾತ್ರ ಮೀಸಲೋ ಅಥವಾ ರಾಜ್ಯದ ಎಲ್ಲಾ ಪ್ರಜೆಗಳಿಗೂ ಅವರು ಮಂತ್ರಿಗಳೋ ಎಂದು ಕೇಳುತ್ತೇನೆ. ನಾವು ಮತ್ತು ನೀವು ಸಾರ್ವಜನಿಕರ ಹಣವನ್ನು ತೆಗೆದುಕೊಂಡು ಅವರ ಸೇವೆಯನ್ನು ಮಾಡುವುದಕ್ಕಾಗಿ ಇಲ್ಲಿಗೆ ಬಂದಿದ್ದೇವೆ. ಆದಕಾರಣ ಈ ರೀತಿ ಪಕ್ಷಗಳನ್ನು ದೂರುವುದಾಗಲೀ, ವ್ಯಕ್ತಿಗಳನ್ನು ದೂರುವುದಾಗಲೀ ಮತ್ತು ಮಂತ್ರಿಗಳ ಮನೆಗೆ ವಿರೋಧಪಕ್ಷದವರು ಬರುತ್ತಾರೆ ಎಂದು ಟೀಕೆ ಮಾಡುವುದಾಗಲೀ ಸರಿಯಲ್ಲ. ಇಲ್ಲಿ ಮಂತ್ರಿಗಳನ್ನು ಟೀಕೆ ಮಾಡುವವರು ನಂತರ ಅವರ ಮನೆಗೆ ಹೋಗಬಾರದು ಎಂಬ ನಿಯಮ ವಿದೆಯೇನು ? ಯಾವ ಸದಸ್ಯರುಗಳೇ ಆಗಲಿ ಆ ರೀತಿ ತಪ್ಪು ಅಭಿಪ್ರಾಯಗಳನ್ನು ಕಲ್ಪಿಸಬಾರದು. ಟೀಕೆ ಮಾಡುವವರು ಸಂಯಮದಿಂದ ಟೀಕೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಶ್ರೀಮಾನ್ ಪುಟ್ಟಸ್ವಾಮಿಯವರು ತಮ್ಮ ಕೈಕಾಲುಗಳ ಆರ್ಭಟವನ್ನು ಸ್ವಲ್ಪ ತಡೆಹಿಡಿಯಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ನಮ್ಮ ಶ್ರೀ ಗೋಪಾಲಗೌಡರು ಹೇಳಿದಂತೆ ಮಂತ್ರಿಗಳು ಎರಡು ಕಡೆಯವರಿಗೂ ಮಂತ್ರಿಗಳೇ ಆಗಿದ್ದಾರೆ. ಆದರೆ ಮಂತ್ರಿಗಳ ಬಗ್ಗೆ ಟೀಕೆ ಮಾಡುವಾಗ ರಚನಾತ್ಮಕವಾಗಿರಬೇಕು. ಜೋರಿನಿಂದ ಟೀಕೆ ಮಾಡಿದರೆ ಅದನ್ನು ನಾವು ಸಹಿಸುವುದಿಲ್ಲ. ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಲ್. ಗೌಡ.—ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಈ ಸಭೆಯಲ್ಲಿ ಸಹಕಾರ ಇಲಾಖೆಯ ಬೇಡಿಕೆಯ ಮೇಲೆ ಎತ್ತಿರತಕ್ಕಂಥ ಕೆಲವು ಪ್ರಶ್ನೆಗಳ ಬಗ್ಗೆ ಉತ್ತರ ಕೊಡಬಯಸುತ್ತೇನೆ. ಈ ಡಿಮ್ಯಾಂಡ್ ಮೇಲೆ ಸುಮಾರು 18 ಜನ ಸದಸ್ಯರುಗಳು ಇದುವರೆಗೆ ಮಾತನಾಡಿದ್ದಾರೆ. ಬಹುಶಃ ಪ್ರತಿಯೊಬ್ಬರಿಗೂ ಅವರುಗಳು ಕೇಳಿರತಕ್ಕಂಥ ಪ್ರಶ್ನೆಗಳಿಗೆಲ್ಲಾ ಉತ್ತರ ಕೊಡುವುದು ಕಷ್ಟವಾಗಬಹುದು. ಎಲ್ಲರೂ ಸೂಕ್ತವಾದಂಥ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅನೇಕ

ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳಿರುವುದಕ್ಕೆಲ್ಲಾ ನಾವು ತೀವ್ರವಾದ ಗಮನವನ್ನು ಕೊಟ್ಟು ಆ ಬಗ್ಗೆ ಕ್ರಮ ಕೈಗೊಳ್ಳುತ್ತೇವೆಂದು ತಮ್ಮ ಮೂಲಕ ಅವರುಗಳಿಗೆ ತಿಳಿಸಬಯಸುತ್ತೇನೆ. ಶ್ರೀ ಕೆ. ಎಚ್ ಪಾಟೀಲರು ಚರ್ಚೆಯನ್ನು ಈ ಡಿಮ್ಯಾಂಡ್ ಮೇಲೆ ಪ್ರಾರಂಭ ಮಾಡಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಅವರು ಸಹಕಾರ ಚಳುವಳಿಯಲ್ಲಿ ಅನೇಕ ದಿವಸಗಳಿಂದ ಕೆಲಸ ಮಾಡುತ್ತಿದ್ದಾರೆ; ಮತ್ತು ಹಿರಿಯರಾಗಿದ್ದಾರೆ. ಸಹಕಾರ ಚಳುವಳಿಯಲ್ಲಿ ನಮ್ಮ ರಾಜ್ಯ ಬಹಳ ಹಿಂದುಳಿದಿದೆ ಎಂದು ಅವರು ಹೇಳಿದರು. ಮತ್ತು ಮಹಾರಾಷ್ಟ್ರ ಮುಂದಿದೆ ಎಂದೂ ಸಹ ಹೇಳಿದರು. ಮಹಾರಾಷ್ಟ್ರ ಸಹಕಾರ ಚಳುವಳಿಯಲ್ಲಿ ಮುಂದುವರೆದಿದೆ. ಅದನ್ನು ಇಲ್ಲ ಎಂದು ನಾನು ಹೇಳುವುದಿಲ್ಲ. ಇಡೀ ದೇಶವನ್ನೇ ತೆಗೆದುಕೊಂಡರೆ ನಮ್ಮ ರಾಜ್ಯ ಸಹಕಾರ ಚಳುವಳಿಯಲ್ಲಿ ನಾಲ್ಕನೆಯ ಹೆಮ್ಮೆಯ ಸ್ಥಾನವನ್ನು ಪಡೆದಿದೆಯೆಂದು ತಮ್ಮ ಮೂಲಕ ಅವರಿಗೆ ತಿಳಿಸಬಯಸುತ್ತೇನೆ. ರಿಜರ್ವ್ ಬ್ಯಾಂಕಿನಿಂದ ಅಲ್ಪಾವಧಿ ಸಾಲವನ್ನು ಶೇಕಡ 3 ರೂಪಾಯಿಗಳ ಬಡ್ಡಿಯಂತೆಯೂ, ಮಧ್ಯಮಾವಧಿ ಸಾಲವನ್ನು ಶೇಕಡ ಮೂರೂವರೆ ರೂಪಾಯಿಗಳ ಬಡ್ಡಿಯಂತೆಯೂ ಸರ್ಕಾರದವರು ತೆಗೆದುಕೊಂಡು ಅದನ್ನು ರೈತರಿಗೆ ಸಾಲವಾಗಿ ಕೊಟ್ಟು ಶೇಕಡ ಎಂಟೂವರೆಯಿಂದ ಒಂಭತ್ತೂವರೆಯವರೆಗೆ ಬಡ್ಡಿಯನ್ನು ವಸೂಲು ಮಾಡುತ್ತಿರುವುದರಿಂದ ರೈತರಿಗೆ ತೊಂದರೆಯಾಗುತ್ತಿದೆಯೆಂದು ಶ್ರೀ ಪಾಟೀಲರು ಹೇಳಿದರು. ನಾವು ರೈತರಿಗೆ ಕೊಡುವ ಹಣವೆಲ್ಲಾ ರಿಜರ್ವ್ ಬ್ಯಾಂಕ್‌ನಿಂದಲೇ ಬರುವುದಿಲ್ಲ. ನಾವು ರೈತರಿಗೆ ಕೊಡುವ ಹಣದಲ್ಲಿ ಅರ್ಧಕ್ಕಿಂತ ಕಡಿಮೆ ರಿಜರ್ವ್ ಬ್ಯಾಂಕ್‌ನಿಂದ ಬರುತ್ತದೆಂದು ಅವರಿಗೆ ತಿಳಿಸಬಯಸುತ್ತೇನೆ. ಉಳಿದ ಹಣವನ್ನು ಖಾಸಗೀ ವಲಯದಿಂದ ಡೆಪಾಜಿಟ್ ತೆಗೆದುಕೊಂಡು ಅವರಿಗೆ ಶೇಕಡ 6 ರಿಂದ 7 ರವರೆಗೆ ಬಡ್ಡಿ ಕೊಟ್ಟು ರೈತರಿಂದ ಶೇಕಡ 8 ರಿಂದ 9 ರವರೆಗೆ ಬಡ್ಡಿಯನ್ನು ತೆಗೆದುಕೊಳ್ಳುತ್ತಿದ್ದೇವೆ. ಇದು ಕಡಿಮೆಯೋ ಜಾಸ್ತಿಯೋ ಎಂಬುದನ್ನು ಅವರೇ ಹೇಳಬೇಕು. ನಾವು ಕಮರ್ಷಿಯಲ್ ಬ್ಯಾಂಕಿಗಿಂತ ಕಡಿಮೆ ಇಂಟರೆಸ್ಟು ಚಾರ್ಜು ಮಾಡುತ್ತಿದ್ದೇವೆ. ಕಮರ್ಷಿಯಲ್ ಬ್ಯಾಂಕುಗಳು ಬಡ್ಡಿಯನ್ನು ಸರಕಾರದ ರೇಟಿಗಿಂತ ಜಾಸ್ತಿ ಹಾಕುತ್ತಿದೆ.

8-00 P.M.

ಇನ್ನು ಶ್ರೀ ಪಾಟೀಲ್‌ರವರು ಕ್ರೆಡಿಟ್ ಸ್ಟೆಬಿಲೈಸೇಷನ್ ಫಂಡ್ ಎಂದು ಏನು ಇವೆ ಇವನ್ನು ಅನೇಕ ಸಹಕಾರ ಸಂಘಗಳು ದುರುಪಯೋಗಪಡಿಸುತ್ತಿವೆ ಒಂದು ಒಂದು ರೀತಿಯಾಗಿ ಸ್ವೀಪಿಂಗು ರಿಮಾರ್ಕ್ ಮಾಡಿದರು. ಇದಕ್ಕೆ ಬದಲಾಗಿ ಸರಿಯಾಗಿ ಪಿನ್ ಪಾಯಿಂಟು ಮಾಡುವಂತೆ ಇಂತಹ ಸೊಸೈಟಿಯಲ್ಲಿ ಇಂತಹ ತಪ್ಪುಗಳಾಗಿವೆ ಎಂದು ನಿರ್ದಿಷ್ಟವಾಗಿ ಹೇಳಿದ್ದರೆ ಇದರ ಬಗ್ಗೆ ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳಲು ಸಹಾಯವಾಗುತ್ತಿತ್ತು. ಈ ನಿಧಿಯನ್ನು ಯಾವ ಸಂಘಗಳೇ ಆದರೂ ಇತರ ಕೆಲಸಗಳಿಗೆ ಉಪಯೋಗಮಾಡುವ ಹಾಗಿಲ್ಲ. ಸಹಕಾರ ಸಂಘಗಳಿಗೆ ಏನಾದರೂ ತೊಂದರೆ ಬಂದರೆ ಇಂತಹ ಸಂದರ್ಭಗಳಲ್ಲಿ ಈ ನಿಧಿಯಿಂದ ಹಣ ತೆಗೆದುಕೊಳ್ಳುತ್ತಾರೆ.

Sri H. M. CHANNABASAPPA.—This House will be grateful if Government could provide figures pertaining to the margin of profit that the co-operative institutions make in this transaction of obtaining moneys both from the Reserve Bank and elsewhere and out of the interest they collect from the borrowers, what exactly is the margin of profit that the Government gets as compared with the margin of profit made by commercial banks. The second thing we would like to know is, out of the margin of profit how much of money is disbursed by way of dividends to the shareholders by the co-operative societies and the percentage of dividends that commercial banks give out of the margin of profit. If not today—I admit that it is not possible to give information today—during the course of the week if the Government could collect figures both from the commercial banks and co-operative institutions, and give us, I shall be grateful.

Sri B. L. GOWDA.—We shall do it.

ಮಾನ್ಯ ಸದಸ್ಯರಾದ ಶ್ರೀ ಕೆ. ಹೆಚ್. ಪಾಟೀಲ್‌ರವರು ಸಹಕಾರ ಸಂಸ್ಥೆಗಳನ್ನು ಮಾಡಿದ್ದರೂ ಇದರಿಂದ ಜನರಿಗೆ ಅನುಕೂಲವಾಗುತ್ತಿಲ್ಲ ಎಂದು ಹೇಳಿದರು. ಒಂದು ವಿಚಾರ ಇಲ್ಲಿ ಹೇಳ

(SRI B. L. GOWDA)

ಟೀಕಾಗಿದೆ. ಸಹಕಾರ ಚಳುವಳಿ ಪ್ರಾಮುಖ್ಯವಾಗಿ ಖಾಸಗಿಯವರಿಗೆ ಸೇರಿದಂತಹ ಚಳುವಳಿ. ಖಾಸಗಿಯವರೇ ಇಂತಹ ಸಂಘಗಳನ್ನು ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಅಧಿಕಾರಿಗಳು ಇದ್ದರೆ ಇದರಲ್ಲಿ ಸರಿಯಾಗಿ ಕೆಲಸಗಳು ನಡೆಯುವುದಿಲ್ಲ ಎಂದು ಇದರಲ್ಲಿ ಎಲ್ಲರೂ ಖಾಸಗಿಯವರೇ ಆಡಳಿತವನ್ನು ನಡೆಸುತ್ತಾ ಬರುತ್ತಿದ್ದಾರೆ. ಇವು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಸರಕಾರದ ಮೇಲೆ ಗುರುತರವಾದ ಆಪಾದನೆಗಳನ್ನು ಮಾಡಿದ್ದಾರೆಯೋ ಎನ್ನುವುದನ್ನು ತಾವು ಆಲೋಚನೆ ಮಾಡಬೇಕು. ತಮ್ಮನ್ನು ನಾನು ಇಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು, ಯಾವುದಾದರೂ ಜಿಲ್ಲಾ ಬ್ಯಾಂಕುಗಳು ನಿಯಮವನ್ನು ಮುರಿದು ಮುಂಗಾರು ಬೆಳೆಗೆ ಹಾನಿ ಆಗುವಂತಿದ್ದರೆ, ಅದನ್ನು ಸರಿಪಡಿಸುವುದಕ್ಕಾಗಿ ಅಪೆಕ್ಸ್ ಬ್ಯಾಂಕಿನಿಂದ ಇದಕ್ಕೆ ಸಹಾಯ ಮಾಡಿರುವುದು ನಿಜ. ನಿಜವಾಗಿಯೂ ಎಲ್ಲಕಡೆಗಳಲ್ಲಿಯೂ ಸಹಕಾರ ಪದ್ಧತಿ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳುತ್ತಿಲ್ಲ, ಎಲ್ಲಿ ಖಾಸಗಿ ಮುಖಂಡತ್ವ ಚೆನ್ನಾಗಿದೆಯೋ ಅಲ್ಲಿನ ಕೆಲಸಗಳೂ ಚೆನ್ನಾಗಿ ನಡೆಯುತ್ತಿವೆ. ಕೆಲವು ಕಡೆಗಳಲ್ಲಿ ಚೆನ್ನಾಗಿ ನಡೆಯದೇ ಇರಬಹುದು. ಅದಕ್ಕೆ ಬೇರೆ ಕಾರಣಗಳಿರಬಹುದು. ಎಲ್ಲಿ ಚೆನ್ನಾಗಿ ಕೆಲಸ ನಡೆಯುತ್ತದೆಯೋ ಅಂತಹ ಸಂಘಗಳಲ್ಲಿ ಮುಖಂಡತ್ವ ವಹಿಸಿರುವ ಜನಗಳೂ ಚೆನ್ನಾಗಿ ಕೆಲಸಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಮುಖ್ಯವಾಗಿ ಜನಗಳಿಂದಲೇ ನಡೆಯತಕ್ಕ ಚಳುವಳಿ ಎಂದರೆ ಸಹಕಾರ ಚಳುವಳಿ. ಇಂತಹ ಚಳುವಳಿಯಲ್ಲಿ ಅಲ್ಲಿ ಇಲ್ಲಿ ಕೆಲವು ಲೋಪದೋಷಗಳು ಇರಬಹುದು. ಮಾನ್ಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು ಇಲ್ಲಿ ಮಾತನಾಡುತ್ತಾ ನಾನು ಒಂದು ಕಡೆ ಹೇಳಿರುವ ಭಾಷಣವನ್ನು ಉದಹರಿಸುತ್ತಾ ಒಂದು ಸಹಕಾರ ಸಂಘದಲ್ಲಿ 20 ಲಕ್ಷದಷ್ಟು ಹಣ ದುರುಪಯೋಗವಾಗಿದೆ ಎಂದು ಹೇಳಿದರು ನಿಜ. ಇದರಲ್ಲಿ 40.40 ಲಕ್ಷದಷ್ಟು ಹಣ ನಷ್ಟವಾಗಿದೆ. ಇಂತಹ ಸಹಕಾರ ಸಂಘಗಳಲ್ಲಿ ಸುಮಾರು 240 ಕೋಟಿಯಷ್ಟು ಬಂಡವಾಳ ಹಾಕಿರುವಾಗ ಒಂದು ಕಡೆ 20 ಸಾವಿರ ರೂಪಾಯಿಗಳಷ್ಟು ಮಿಸ್‌ಅಪ್ರೋಪ್ರಿಯೇಟಾಗಿದೆ ಎಂದರೆ ಶೇಕಡಾ 5 ರಷ್ಟು ಇಲ್ಲವೇ ಶೇಕಡಾ 6 ರಷ್ಟು ಆಯಿತು. ಇದಕ್ಕೆ ಕೆಲವು ದೋಷಗಳು ಬಂದಿರಬಹುದು. ಎಲ್ಲ ಕಡೆಯಲ್ಲೂ ಚೆನ್ನಾಗಿ ನಡೆಯುತ್ತಿರುವಾಗ ಅಲ್ಲೋ ಇಲ್ಲೋ ಸ್ವಲ್ಪ ತೊಡಕುಗಳು ಬರಬಹುದು. ಮಾನವನ ಸ್ವಭಾವ ಎಡವುದು ಇದ್ದೇ ಇರುತ್ತದೆ. 210–240 ಕೋಟಿಯಷ್ಟು ಬಂಡವಾಳ ಹಾಕಿ ಕೆಲಸಗಳನ್ನು ನಡೆಸುತ್ತಿರುವಾಗ ಅಲ್ಲಿ ಇಲ್ಲಿ ಕೆಲವು ಲೋಪದೋಷಗಳು ಇರುವುದು ಸ್ವಾಭಾವಿಕ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ತುಮಕೂರು ಜಿಲ್ಲೆಯಲ್ಲಿ ಒಂದೇ ಕಡೆ ಇರುವ ಒಂದು ಸೊಸೈಟಿಯಲ್ಲಿ 40·40 ಲಕ್ಷದಷ್ಟು ಲಾಸ್ ಆಗಿದೆ. ಇದು ತಮ್ಮ ಗಮನಕ್ಕೆ ಬರಲಿಲ್ಲವೇ?

ಶ್ರೀ ಬಿ. ಎಲ್. ಗೌಡ.—ಇಲ್ಲ. ಇಲ್ಲಿ ನನ್ನ ಗಮನಕ್ಕೆ ಬಂದಿರುವುದು ಇಪ್ಪತ್ತು ಸಾವಿರ ಸಹಕಾರ ಸಂಘಗಳಲ್ಲಿ ಸರಕಾರವೇ ಸುಮಾರು 203 ಕೇಸುಗಳನ್ನು ಹಿಡಿದು ಪೋಲೀಸಿನವರಲ್ಲಿ ಕೇಸು ಹಾಕಿ ತಪ್ಪು ಮಾಡಿರುವವರ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಂಡಿದ್ದೇವೆ. ಯಾವಾಗಲೂ ಖಾಸಗೀ ಕ್ಷೇತ್ರದಲ್ಲಿ ನೂರಕ್ಕೆ ನೂರರಷ್ಟು ಚೆನ್ನಾಗಿ ನಡೆಯುತ್ತಿದೆ ಎಂದು ಹೇಳುತ್ತಿಲ್ಲ. ಕಮ್ಮಿ ಪರ್ಸೆಂಟೇಜು ನಷ್ಟವಾಗಿರಬಹುದು, ಕೆಲವು ಕಡೆ ದುರುಪಯೋಗಗಳು ಆಗಿರಬಹುದು. ನಾವೂ ಮಾನವರು, ದೇವತೆಗಳಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ದುರುಪಯೋಗವಾಗತಕ್ಕದ್ದು ಸಹಜ. ಮಾನ್ಯ ಸಚಿವರ ಎಚ್ಚರಿಕೆಗಾಗಿ ಒಂದು ಮಾತು ಹೇಳಬೇಕಾಗಿದೆ. ದುರುಪಯೋಗ ಮಾಡುತ್ತಿರುವವರ ಮೇಲೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತಿಲ್ಲ. ದುರುಪಯೋಗವಾಗುತ್ತಿರುವ ಎಷ್ಟೋ ಇನ್‌ಸ್ಟೆನ್ಸ್‌ಸ್ ತೋರಿಸಿ ದುರುಪಯೋಗವಾಗಿದೆ ಎಂದು ಹೇಳಿದ್ದರೂ ಅಂತಹವರಿಗೆ ಪುನಃ ಹಣವನ್ನು ಕೊಟ್ಟುಬಿಟ್ಟಿದ್ದೀರಿ. ಇದರಿಂದ ಕ್ರಿಮಿನಲ್ ಅಪರಾಧಗಳು ಬೆಳೆಯುತ್ತಾ ಇರುವುದರಿಂದ, ಎಲ್ಲೆಲ್ಲಿ ದುರುಪಯೋಗವಾಗಿದೆ ಎಂದು ಸರಕಾರಕ್ಕೆ ಕಂಡುಬರುತ್ತದೋ ಅಂತಹ ಕಡೆಗಳಲ್ಲಿ ಕ್ರಿಮಿನಲ್ ಪ್ರೊಸೀಜರು ಕೋಡನ್ನು ಅನುಸರಿಸಿ ಏನು ಕಾರ್ಯಕ್ರಮ ತೆಗೆದುಕೊಳ್ಳಬಹುದೋ ಅದರಂತೆ ತೆಗೆದುಕೊಂಡರೆ ಬಹುಶಃ ಎಷ್ಟೋ ಮಟ್ಟಿನ ಸುಧಾರಣೆಯಾಗುತ್ತದೆ.

ಶ್ರೀ ಬಿ. ಎಲ್. ಗೌಡ.—ಮಾನ್ಯ ಸದಸ್ಯರಾದ ಶ್ರೀ ಚನ್ನಬಸಪ್ಪನವರು ನಾನು ಏನು ಹೇಳಬೇಕೆಂದು ಇದ್ದೆನೋ ಅದನ್ನೇ ಅವರು ಇಲ್ಲಿ ಪೂರ್ವವಾಗಿ ನಾನು ಹೇಳುವ ಮೊದಲೇ ತಿಳಿಸಿಬಿಟ್ಟರು. ಈಗಾಗಲೇ ಸರಕಾರ ಇಂತಹ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದರಿಂದ ಶೇಕಡಾ ಐದು, ಆರರಷ್ಟು ಕಡಿಮೆಯಾಗುತ್ತಿದೆ. ಸಹಕಾರ ಸಂಘಗಳಲ್ಲಿ ದುರುಪಯೋಗವಾಗಿದ್ದರೆ ಅವರು ಯಾರೇ ಆಗಿರಲಿ ಅಂತಹವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಇನ್ನು ಆಡಿಟ್ ಸಿಸ್ಟಂನ್ನು ಬೇರೆ ರೀತಿಯಾಗಿ ಮಾಡಬೇಕು ಎಂದು ತಿಳಿಸಿದ್ದಾರೆ. ಸಹಕಾರ ಸಂಘಗಳ ಆಡಳಿತವನ್ನು ನಾವು ಉಪೇಕ್ಷೆ ಮಾಡುತ್ತಿಲ್ಲ. ಸಹಕಾರ ಸಂಘಗಳಿಗೆ ಕೊಡುತ್ತಿರುವ ಹಣ ನಾವು ಕಡಿಮೆ ಎಂದು ತಿಳಿದುಕೊಂಡಿಲ್ಲ ಎಂದು ತಮ್ಮ ಮೂಲಕ ಹೇಳುತ್ತೇನೆ. ದುರುಪಯೋಗ ಮಾಡುವ ವ್ಯಕ್ತಿ ಯಾರೇ ಆಗಿರಲಿ ಅವರ ಮೇಲೆ ಕರುಣೆ ತೋರಿಸುವುದಿಲ್ಲ. ಅಂತಹವರನ್ನೆಲ್ಲಾ ಮಟ್ಟ ಹಾಕಲು ತಯಾರಿದ್ದೇವೆ. ಅನೇಕ ಜನ ವಿರೋಧ ಪಕ್ಷದ ಸದಸ್ಯರು ಸಹಕಾರ ಸಂಘಗಳಲ್ಲಿ ಇದ್ದು ಆಡಳಿತವನ್ನು ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಹಾಗೇ ಇತರ ಪಕ್ಷಗಳವರೂ ಕೆಲವು ಕಡೆಗಳಲ್ಲಿ ಆಡಳಿತ ನಡೆಸಿಕೊಂಡು ಬರುತ್ತಿದ್ದಾರೆ. ಆದರೆ ಕೆಲವರು ಇಲ್ಲಿ ಕೆಲವು ಸಂಘಗಳ ಮೇಲೆ ಸೆಕ್ಷನ್ 54ರ ಪ್ರಕಾರ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ತಿಳಿಸಿದರೂ ತೆಗೆದುಕೊಳ್ಳುತ್ತಿಲ್ಲ ಎಂದು ಹೇಳಿದರು. ನಮ್ಮ ರಾಜ್ಯದಲ್ಲಿ ಈಗಾಗಲೆ ಏಳು ಸಹಕಾರ ಸಂಘಗಳ ಮೇಲೆ ಸೆಕ್ಷನ್ 54 ರ ಪ್ರಕಾರ ತಕ್ಕ ಕ್ರಮ ಕೈಗೊಂಡಿದ್ದೇವೆ. ಇದರಲ್ಲಿ ಆಡಳಿತ ಪಕ್ಷ ಅಥವಾ ವಿರೋಧ ಪಕ್ಷ ಎನ್ನುವುದೇ ಇಲ್ಲ. ಏಳು ಸಹಕಾರ ಸಂಘಗಳಲ್ಲಿ ಆರು ಆಡಳಿತ ಪಕ್ಷಕ್ಕೆ ಸೇರಿದವು ಮತ್ತು ಒಂದು ಮಾತ್ರ ವಿರೋಧ ಪಕ್ಷಕ್ಕೆ ಸೇರಿದ ಸದಸ್ಯರುಗಳಿಂದ ಕೂಡಿರುವುದು. ಇದರಿಂದ ಮಾನ್ಯ ಸದಸ್ಯರು ಹೇಳುವ ಮಾತು ಸತ್ಯಕ್ಕೆ ಎಷ್ಟು ಹತ್ತಿರ ಎನ್ನುವುದನ್ನು ಅವರೇ ಯೋಚನೆ ಮಾಡಬಹುದು. ಕಾಂಗ್ರೆಸ್ಸು ಪಕ್ಷಕ್ಕೆ ಸೇರಿದವರೆಂದು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದನ್ನು ಬಿಡಲಿಲ್ಲ. 54ನೇ ಸೆಕ್ಷನ್ ಪ್ರಕಾರ ಯಾವ ಯಾವ ಸಂಘಗಳಿಗೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದರೆ ಇದರ ವಿವರಗಳನ್ನು ಕೊಡುತ್ತೇನೆ.

Bellary Central Co-operative Society
Gowribidanur Sugar Factory
Gadag Cotton Weavers' Society
Dharwar Oil Co-operative Society
Mysore District Co-operative Bank
Mysore State Cotton Weavers Society
Dharwar Industrial Co-operative Bank.

ಇದರಲ್ಲಿ ಕಾಂಗ್ರೆಸ್ಸು ಸದಸ್ಯರುಗಳೂ ಇದ್ದಾರೆ ಇತರರೂ ಇದ್ದಾರೆ. ಸಹಕಾರ ಚಳುವಳಿಯಲ್ಲಿ ಅಲ್ಲಲ್ಲಿ ಕೆಲವು ಲೋಪದೋಷಗಳು ಇರಬಹುದು. ಸಹಕಾರ ಚಳುವಳಿಯಲ್ಲಿ ನುರಿತಂತಹವರಾದ ಶ್ರೀಮಾನ್ ಜಿ. ರಾಮೇಗೌಡರು ಇಲ್ಲಿ ಬಹಳ ಚೆನ್ನಾಗಿ ಹೇಳಿದರು. ನಮ್ಮ ರಾಜ್ಯದಲ್ಲಿ ಚನ್ನಾಗಿ ನಡೆಯುತ್ತಿರುವಂತಹ ಸಹಕಾರ ಚಳುವಳಿ ಬೇರಾವ ರಾಜ್ಯದಲ್ಲಿಯೂ ಇಷ್ಟು ಮಟ್ಟಿಗೆ ನಡೆಯುತ್ತಿಲ್ಲ. ಇದರೊಳಗೆ ಪಾರ್ಟಿ ಪಾಲಿಟಿಕ್ಸ್ ತರುವಂತಹ ಅನೇಕ ಜನರೂ ಇರುತ್ತಾರೆ. ಆದರೆ ಎಲ್ಲೋ ಅಲ್ಪಸ್ವಲ್ಪ ಸಹಕಾರ ಸಂಘಗಳಲ್ಲಿ ಒಂದು ರೀತಿಯಾದ ರಾಜಕೀಯ ಬೆಳೆಯುತ್ತಿದೆ. ಇಂತಹ ರಾಜಕೀಯಕ್ಕೆ ಅವಕಾಶ ಕೊಡಬಾರದು ಎಂದು ಇಲ್ಲಿ ವಿನಿಮಯಪೂರ್ವಕವಾಗಿ ಹೇಳಬಯಸುತ್ತೇನೆ.

ಮಾನ್ಯ ಪಾಟೀಲರು ವೈಯಕ್ತಿಕವಾಗಿ ನನ್ನ ಮೇಲೆ ಒಂದು ಆಪಾದನೆ ಮಾಡಿದರು. ಕ್ಯಾಟಲ್ ಫೀಡಿಂಗ್ ಪ್ರೋಸೆಸಿಂಗ್ ಆಕ್ಟಿವಿಟಿಯನ್ನು ಎನ್.ಸಿ.ಡಿ.ಸಿ. ರೆಕಗ್ನೈಸ್ ಮಾಡಿಲ್ಲ, ಅದ್ದರಿಂದ ಹುಲ್ಕೋಟಿ ಸೊಸೈಟಿಗೆ ವಿಶೇಷ ಸಿಫಾರಸನ್ನು ಮಾಡಿಲ್ಲ ಎಂದು ಹೇಳಿದೆ. ಇದೇ ತರಹ ಮಂಡ್ಯದಲ್ಲಿರುವ ಸೊಸೈಟಿಗೆ ಹಣ ಸಹಾಯ ಮಾಡಿದ್ದಾರೆ. ಇದರಿಂದ ಮಾನ್ಯ ಉಪಮಂತ್ರಿಗಳು ಬಹಳ ದೊಡ್ಡ ತಪ್ಪು ಮಾಡಿದ್ದಾರೆಂದು ಹೇಳಿದರು. ಮಂಡ್ಯ ಸೊಸೈಟಿಗೆ ಕೊಟ್ಟಿರುವುದು ಸಹಕಾರ ಇಲಾಖೆಯಿಂದ ಎನ್.ಸಿ.ಡಿ.ಸಿ. ಕೊಟ್ಟಿರುವ ಹಣವಲ್ಲ. ಅನಿಮಲ್‌ಹಸ್ಬೆಂಡ್ರಿ ಇಲಾಖೆಗೆ ಕ್ಯಾಟಲ್ ಫೀಡಿಂಗ್ ಸೆಂಟರ್ ಕೇಂದ್ರದಿಂದ ಮಂಜೂರಾಯಿತು. ಅದನ್ನು ಅವರು ಮಾಡುವುದಕ್ಕೆ ತಯಾರಿರಲಿಲ್ಲ. ಯಾವುದಾದರೂ ಸಹಕಾರಿ ಸಂಘ ಮುಂದೆ ಬಂದರೆ ಅದನ್ನು ಮಾಡಬಹುದು ಎಂದು ಇದ್ದುದರಿಂದ ಮಂಡ್ಯದವರು ಮುಂದೆ ಬಂದುದರಿಂದ ಆ ಹಣವನ್ನು ಅವರಿಗೆ ಕೊಟ್ಟಿದೆ. ಎನ್.ಸಿ.ಡಿ.ಸಿ. ಕ್ಯಾಟಲ್ ಫೀಡಿಂಗ್ ಪ್ರೋಸೆಸಿಂಗ್ ಅಕ್ಟಿವಿಟಿಯನ್ನು ಅಪ್ರೂವ್‌ಮಾಡಿಲ್ಲ ಎಂದು ನಾನು ಹೇಳಿದ್ದರೆ ಅದರಿಂದ ತಪ್ಪು ಮಾಡಿದ್ದೇನೆ ಎಂದು ತಿಳಿದುಕೊಂಡಿಲ್ಲ.

ಮಾರ್ಕೆಟಿಂಗ್ ಬಗ್ಗೆ ಹೇಳಿದರು. ಅವರ ಭಾವನೆಗಳನ್ನು ಸ್ವಲ್ಪಮಟ್ಟಿಗೆ ನಾನು ಒಪ್ಪಿಕೊಳ್ಳುತ್ತೇನೆ. ಮಾರ್ಕೆಟಿಂಗ್ ಚೆನ್ನಾಗಿ ಡೆವಲಪ್ ಆಗಿಲ್ಲ, ಎಲ್ಲ ಪ್ರಾಡ್ಯೂಸ್ ಮಾರ್ಕೆಟ್ ಆಗುತ್ತಿಲ್ಲ ಎಂದು ಹೇಳಿದರು. ನಮ್ಮ ರಾಜ್ಯದಲ್ಲಿ ಹತ್ತಿ ಮಾರಾಟ ಸಹಕಾರ ಸಂಘಗಳು ಅನೇಕವಿವೆ.

(ಶ್ರೀ ಬಿ. ಎಲ್. ಗೌಡ)

ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅಡಿಕೆ ಮಾರಾಟ ಸಹಕಾರ ಸಂಘಗಳು, ಏಲಕ್ಕಿ ಮಾರಾಟ ಸಹಕಾರ ಸಂಘಗಳು ಇದ್ದು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳು ಬತ್ತವನ್ನು ಕೊಂಡು ಮಾರತಕ್ಕ ವ್ಯವಸ್ಥೆ ಇದೆ. ಏನೂ ಮಾಡಿಲ್ಲ ಎಂದರೆ ತಪ್ಪಾಗುತ್ತದೆ.

ಗ್ರಾಮಾಂತರ ಜನಗಳಲ್ಲಿ ಸೇಕಡ 46ರಷ್ಟು ಜನ ಸಹಕಾರ ಚಳುವಳಿಯಲ್ಲಿ ಇದ್ದಾರೆ ಎನ್ನುವ ಸಂಖ್ಯೆಯನ್ನು ಕೊಟ್ಟಿರುವುದು ತಪ್ಪು, ಅದು ಕೇವಲ 19 ಪರ್ಸೆಂಟ್ ಎಂದು ಹೇಳಿದರು. 46 ಪರ್ಸೆಂಟ್ ಎನ್ನುವುದು ಸರಿಯಿಲ್ಲ, 36 ಅಥವಾ 38 ಪರ್ಸೆಂಟ್ ಅಗುತ್ತದೆ ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಜನಸಂಖ್ಯೆ 2,60,00,000 ಇದೆ. 60 ಲಕ್ಷ ಜನ ಪಟ್ಟಣಗಳಲ್ಲಿದ್ದರೆ ಗ್ರಾಮಾಂತರ ಪ್ರದೇಶಗಳಲ್ಲಿ ಎರಡು ಕೋಟಿ ಜನರಿದ್ದಾರೆ. ಒಂದು ಸಂಸಾರಕ್ಕೆ ಐದು ಜನ ಎಂದರೆ 40 ಲಕ್ಷ ಸಂಸಾರಗಳಾಗುತ್ತವೆ. 16 ಲಕ್ಷ ಸಂಸಾರಗಳು ಸಹಕಾರ ಚಳುವಳಿಗೆ ಒಳಪಟ್ಟಿವೆ ಎಂದರೆ ಅದು 38 ಪರ್ಸೆಂಟ್ ಆಗುತ್ತದೆ. 19 ಪರ್ಸೆಂಟ್ ಎಂದರೆ ತಪ್ಪಾಗುತ್ತದೆ.

ಮಾನ್ಯ ಪಾಟೀಲರು ಕೆಲವು ಅಧಿಕಾರಿಗಳು ಹತ್ತು ವರ್ಷಕ್ಕೆ ಹೆಚ್ಚಾಗಿ ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿದ್ದಾರೆ ಎಂದು ಹೇಳಿದರು. ಸೆಕ್ರೆಟೇರಿಯಟ್‌ನಲ್ಲಿ ಕೂಡ 10 ವರ್ಷಕ್ಕಿಂತ ಹೆಚ್ಚಾಗಿ ಕೆಲವು ಅಧಿಕಾರಿಗಳಿದ್ದಾರೆ. ಹೆಡ್ ಆಫೀಸಿನಲ್ಲಿ ನುರಿತವರು ವಿಶೇಷವಾದ ತರಪೇತಿಯನ್ನು ಪಡೆದವರೂ ಇದ್ದರೆ ಅವರನ್ನು ಏನು ಮಾಡಬೇಕು. ಹೆಡ್‌ಕ್ವಾರ್ಟರ್ಸ್‌ನಲ್ಲಿ ವಿಶೇಷ ಪರಿಶ್ರಮ ಪಡೆದಿರುವವರನ್ನು ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಿ ಹಾಕಿದರೆ ಚೆನ್ನಾಗಿ ಕೆಲಸ ನಡೆಯುವುದಿಲ್ಲ. ಅಂಥ ಸಂದರ್ಭಗಳಲ್ಲಿ ಒಂದೇ ಕಡೆ ಹೆಚ್ಚು ಕಾಲ ಇರತಕ್ಕ ಸಂದರ್ಭಗಳು ಇರುತ್ತವೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮಂತ್ರಿಯವರು ಈ ರೀತಿ ಉತ್ತರ ಕೊಟ್ಟರೆ ಆಡಳಿತ ದಲ್ಲಿ ಮತ್ತಷ್ಟು ಸಡಿಲವಾಗುತ್ತದೆ. ಸಹಕಾರದೊಳಗೆ ಏನೇನು ಕೆಲಸ ಯಾರು ಬೇಕಾದರೂ ಮಾಡಬಹುದು. ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿರುವ ಜಾಯಿಂಟ್ ರಿಜಿಸ್ಟ್ರಾರ್, ಅಸಿಸ್ಟೆಂಟ್ ರಿಜಿಸ್ಟ್ರಾರ್ ಇವರುಗಳು ಹತ್ತು ವರ್ಷದಿಂದ ಇದ್ದಾರೆ. ಇವರನ್ನು ಬೇರೆ ಕಡೆಗೆ ಹಾಕುವುದಕ್ಕೆ ಅವಕಾಶವಿದೆ.

ಶ್ರೀ ಬಿ. ಎಲ್. ಗೌಡ.—ಅಧಿಕಾರಿಗಳ ಪರವಾಗಿ ಖಂಡಿತ ಮಾತನಾಡುತ್ತಿಲ್ಲ. ನಮ್ಮ ಆಡಳಿತ ನಡೆಯತಕ್ಕ ವಿಧಾನವನ್ನು ತಮ್ಮ ಮುಂದೆ ಇಡಬಯಸುತ್ತೇನೆ. ರಿಜಿಸ್ಟ್ರಾರ್ ಆಫೀಸು ಇರುವುದು ರಾಜ್ಯಕ್ಕೆ ಒಂದೇ ಒಂದು. ಅಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಲ್ಲಿ, ವಿಶೇಷ ಮಾಹಿತಿ ಇರುವವರು ಕೆಲವರಿದ್ದಾರೆ. ಮಾನ್ಯ ಸದಸ್ಯರು ಹೇಳಿದಂತೆ ಅನಾವಶ್ಯಕವಾಗಿ ಇದ್ದರೆ ಬೇರೆ ಕಡೆ ವರ್ಗ ಮಾಡುತ್ತೇನೆ.

ಶ್ರೀಮತಿ ನಾಗರತ್ನಮ್ಮನವರು ಬಹಳ ಭಾವಪೂರಿತವಾಗಿ ಭಾಷಣ ಮಾಡಿದರು. ನಿಜವಾಗಿ ಆ ಪರಿಸ್ಥಿತಿ ಇದೆಯೋ ಏನೋ ಗೊತ್ತಿಲ್ಲ. ಅದರ ಬಗ್ಗೆ ಹೇಳುವುದಕ್ಕೆ ಬೇಕಾದ ಮಾಹಿತಿಯನ್ನು ತರಿಸುವುದಕ್ಕೆ ಆಗಲಿಲ್ಲ. ಯಾರೋ ಒಬ್ಬ ಸೆಕ್ರೆಟರಿ ಬಹಳ ವರ್ಷಗಳಿಂದ ಇದ್ದಾನೆ, ಅವರನ್ನು ತಕ್ಷಣ ಹೊರಕ್ಕೆ ಹಾಕಬೇಕು ಎಂದು ಹೇಳಿದರು. ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಮಾನ್ಯ ನಂಜೇಗೌಡರು ಮಾರ್ಕೆಟಿಂಗ್ ಸೊಸೈಟಿಯಲ್ಲಿ ಬತ್ತದ ಲೆವಿ ವಿಷಯದಲ್ಲಿ ಹೆಚ್ಚು ಹೆಚ್ಚು ತೆಗೆದುಕೊಳ್ಳುತ್ತಿದ್ದಾರೆ, ಸರಿಯಾಗಿ ಹಣ ಪಾವತಿ ಮಾಡುತ್ತಿಲ್ಲ ಎಂದು ಹೇಳಿದರು. ಅದರ ಬಗ್ಗೆ ವಿಚಾರ ಮಾಡಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಮಾನ್ಯ ವಿ. ಎಲ್. ಶಿವಪ್ಪನವರು ಅಲ್ಲಿರುವ ವ್ಯವಸಾಯದ ಮಾರ್ಕೆಂಟಿಗ್ ಸೊಸೈಟಿ ಬಗ್ಗೆ ವಿಶೇಷವಾಗಿ ಹೇಳಿದರು. ನಾನು ಅದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ತರಿಸಿದ್ದೇನೆ. ಜನವರಿ ತಿಂಗಳಿನಲ್ಲಿ ಮೀಟಿಂಗ್ ಕರೆದಿದ್ದರು. ಅಲ್ಲಿರುವ ಸದಸ್ಯರು ಅನೇಕ ವಿಧವಾದ ಅನರ್ಹತೆಯನ್ನು ಪಡೆದಿದ್ದರು. ಆ ದೃಷ್ಟಿಯಿಂದ ಪರಿಶೀಲನೆಗೋಸ್ಕರ ಮೇಲಿನ ಕಚೇರಿಗೆ ಅದೇ ರೀತಿಯಲ್ಲಿ ಚುನಾವಣೆಗಳನ್ನು ನಡೆಸುವುದಕ್ಕೂ ಕ್ರಮ ತೆಗೆದುಕೊಳ್ಳುತ್ತಿದ್ದೇವೆ

ಅಲ್ಲಿನ ಕಾರ್ಯದರ್ಶಿ ದುರದುಷ್ಟವಶಾತ್ ನಿಧನನಾದ. ಆ ಜಾಗವನ್ನು ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಯಾರೋ ಒಬ್ಬ ಅಕೌಂಟೆಂಟಿಗೆ ಪ್ರಮೋಷನ್ ಕೊಟ್ಟರು ಎಂದು ಏನೋ ಹೇಳಿದರು. ಅವರು ಪ್ರಮೋಷನ್ ಬಗ್ಗೆ ಅಪೀಲು ಹೋಗಿದ್ದರು. ಅವರ ಅಪೀಲನ್ನು ಎತ್ತಿಹಿಡಿದು ವಾಪಸು ಕಳಿಸಿದರು. ಹಾಗೆ ಮಾಡಿದಾಗ ನಾವು ಏನು ಮಾಡಬೇಕು ? ಇದರಲ್ಲಿ ನಮ್ಮ ತಪ್ಪು ಯಾವುದೂ ಇಲ್ಲ ಎಂದು ತಮಗೆ ತಿಳಿಸಬಯಸುತ್ತೇನೆ.

ಶ್ರೀ ವಿ. ಎಲ್. ಶಿವಪ್ಪ.—ಕಾನೂನು ಪ್ರಕಾರ ನಡೆಯುತ್ತಿಲ್ಲ ಎಂದು ನಾನು ಬರೆದುದಕ್ಕೆ ಏನು ಕ್ರಮ ತೆಗೆದುಕೊಳ್ಳಲಾಗಿದೆ, ವಿಚಾರಣೆ ನಡೆದಿದೆಯೇ ?

ಶ್ರೀ ಬಿ. ಎಲ್. ಗೌಡ.—ತಾವು ಬರೆದದ್ದು ನನ್ನ ಮುಂದೆ ಇಲ್ಲ, ವಿಚಾರ ಮಾಡುತ್ತೇನೆ. ಎಲ್ಲ ಸದಸ್ಯರೂ ಎತ್ತಿರುವ ಪ್ರತಿಯೊಂದು ವಿಷಯಕ್ಕೂ ಉತ್ತರ ಕೊಡುವುದಕ್ಕೆ ವೇಳೆ ಇಲ್ಲ. ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡಿ ಉಳಿದ ವಿಚಾರಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳು ತ್ತೇನೆಂದು ತಮ್ಮಲ್ಲಿ ಅರಿಕೆ ಮಾಡಿಕೊಂಡಿದ್ದೇನೆ.

ಶ್ರೀಮತಿ ನಾಗಮ್ಮನವರು ಹರಿಜನ ಸೊಸೈಟಿ ಕೇಂದ್ರದಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿದೆ. ತಾಲ್ಲೂಕು ಮಟ್ಟದಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿದರು. ಏನು ವಿಷಯ ಎಂದು ವಿವರಗಳನ್ನು ಕೊಟ್ಟರೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ವಿ. ಎನ್. ಪಾಟೀಲ್ ಅವರು ಹುಮ್ನಾಬಾದ್ ಪ್ರಾಥಮಿಕ ಸಹಕಾರ ಸಂಘ ಚೆನ್ನಾಗಿ ಕೆಲಸ ಮಾಡುತ್ತಿಲ್ಲ, ಭೂ ಅಭಿವೃದ್ಧಿ ಬ್ಯಾಂಕ್ ಚೆನ್ನಾಗಿ ಕೆಲಸ ಮಾಡುತ್ತಿಲ್ಲ, ಯಾರೋ ಒಬ್ಬರಿಗೆ ಬಾವಿಗೆ ಸಾಲ ಕೊಡುತ್ತಿಲ್ಲ ಎಂದು ಒಬ್ಬ ವ್ಯಕ್ತಿಗೆ ಸಂಬಂಧಪಟ್ಟಂತೆ ಹೇಳಿದರು. ನನ್ನ ಗಮನಕ್ಕೆ ಬಂದಿರುವ ಹಾಗೆ ಹುಮ್ನಾಬಾದ್ ಪ್ರಾಥಮಿಕ ಸಹಕಾರ ಬ್ಯಾಂಕ್ ಚೆನ್ನಾಗಿ ಕೆಲಸ ಮಾಡುತ್ತಿದೆ.

ಅನೇಕ ಜನ ಸದಸ್ಯರು ಹರಿಜನರಿಗೆ ಹೌಸಿಂಗ್‌ನಲ್ಲಿ ಕೊಡತಕ್ಕ ಸವಲತ್ತಿನ ಬಗ್ಗೆ ಪ್ರಸ್ತಾಪ ಮಾಡಿದರು. ಎಲ್ಲಿ ಹರಿಜನರ ಅರ್ಜಿ ಬರಲಿ, ಅವನು ಡಿಫಾಲ್ಟರ್ ಆಗಿರಲಿ, ಅದನ್ನು ಮಂಜೂರು ಮಾಡಬೇಕು ಎಂದು ಸ್ಟ್ಯಾಂಡಿಂಗ್ ಇನ್‌ಸ್ಟ್ರಕ್ಷನ್ಸ್ ಎಲ್ಲ ಸಹಕಾರ ಸೊಸೈಟಿಗಳು ಮತ್ತು ಬ್ಯಾಂಕುಗಳಿಗೆ ಕೊಟ್ಟಿದ್ದೇವೆ. ಎಲ್ಲಿಲ್ಲಿ ಅದನ್ನು ಅನುಸರಿಸುತ್ತಿಲ್ಲ ಎಂದು ನನ್ನ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇನೆ.

ಮಾನ್ಯ ಸದಸ್ಯರು ಕೊಟ್ಟ ಅಮೂಲ್ಯವಾದ ಸಲಹೆಗಳಿಗಾಗಿ ನಾನು ಅವರಿಗೆ ಋಣಿಯಾಗಿದ್ದೇನೆ. ಖಾದಿ ಬೋರ್ಡಿನ ವಿಚಾರ ನಂಜೇಗೌಡರು ಪ್ರಸ್ತಾಪಮಾಡಿದರು. ಸಹಕಾರದ ಬಗ್ಗೆ ಹೇಳುತ್ತೇನೆ. ಡೆವಲಪ್‌ಮೆಂಟ್ ಆಫೀಸರ್ ವಿಚಾರ ಹೇಳಿದರು. ಅದು ಇಂಡಸ್ಟ್ರಿಯಲ್ ಇಲಾಖೆಗೆ ಸಂಬಂಧ ಪಟ್ಟಿದ್ದು ಆದುದರಿಂದ ಅವರ ವಿಚಾರ ನಾನು ಹೇಳುವುದಿಲ್ಲ. ಸಹಕಾರಿ ಚಳವಳಿ ಸಾರ್ವತ್ರಿಕ ವಾಗಿ ಖಾಸಗಿ ಚಳುವಳಿ ಅದು ಯಶಸ್ವಿಯಾಗಬೇಕಾದರೆ ಎಲ್ಲರೂ ಸಹಕರಿಸಬೇಕು, ಬರೀ ಸರಕಾರ ದಿಂದ ಮಾತ್ರ ಸಾಧ್ಯವಾಗುವುದಿಲ್ಲ, ನಾವೂ ನೀವೂ ಕೂಡಿ ಕೆಲಸ ಮಾಡಬೇಕು, ಅದಕ್ಕೆ ಸಹಕಾರ ನೀಡಬೇಕು ಎಂದು ಪ್ರಾರ್ಥನೆಮಾಡಿ ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

†ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಅಧ್ಯಕ್ಷರೇ, ಈ ಚರ್ಚೆಯಲ್ಲಿ 18 ಜನರು ಭಾಗವಹಿ ಸಿದ್ದಾರೆ, ಅವರು ಸರಕಾರಕ್ಕೆ ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಸರಕಾರ ಎಲ್ಲಾ ಸೂಚನೆಗಳನ್ನೂ ವಿಚಾರಮಾಡಿ ಯಾವ ಯಾವ ಕ್ರಮ ತೆಗೆದುಕೊಳ್ಳಬಹುದೋ ಅವನ್ನು ತೆಗೆದುಕೊಳ್ಳಲು ಹಿಂದೆಗೆಯುವುದಿಲ್ಲ. ಮುಖ್ಯವಾಗಿ ಒಂದು ವಿಷಯ ನಿಷ್ಕರ್ಷೆಯಾಗು ವುದು ಅವಶ್ಯ ಇದೆ. ಈ ಎರಡು ವರ್ಷಗಳಲ್ಲಿ ನಾನು ಸಹಕಾರಿ ಇಲಾಖೆ ಮಂತ್ರಿಯಾದಮೇಲೆ ಹೊಸ ಸರಕಾರ ರಚನೆಯಾದಮೇಲೆ ಈ ಒಂದು ಚರ್ಚೆಯ ಕಕ್ಷೆಯಲ್ಲಿ ಒಂದು ಪ್ರಾಮುಖ್ಯವಾದ ಮಾತು ಅವತ್ತಿನಿಂದ ಬರುತ್ತಿದೆ. ಏನೆಂದರೆ ಈಗೇನು ಸಹಕಾರಿ ಕ್ಷೇತ್ರವಿದೆ ಅದರೊಳಗೆ ಅವಶ್ಯಕ ವಾದ ಬದಲಾವಣೆಯಾಗಬೇಕಾದ್ದು ಅಗತ್ಯವಾಗಿದೆ. ಇದನ್ನು ಮಾನ್ಯ ಸದಸ್ಯರೂ ಒಪ್ಪಿಕೊಳ್ಳು ತ್ತಾರೆ, ಇಡೀ 20 ಸಾವಿರ ಸಂಸ್ಥೆಗಳೇನಿವೆ ಅವುಗಳಲ್ಲೆಲ್ಲಾ ವ್ಯವಹಾರ ಚೆನ್ನಾಗಿ ನಡೆಯುತ್ತಿದೆ ಎಂದು ಸರಕಾರ ಹೇಳುವುದಿಲ್ಲ. ಎಲ್ಲೆಲ್ಲಿ ನ್ಯೂನತೆಯಿದೆ ಅದನ್ನು ನಮ್ಮ ಉಪಮಂತ್ರಿಗಳು ಒಪ್ಪಿ ಕೊಂಡಿದ್ದಾರೆ. ಆ ನ್ಯೂನತೆಗಳನ್ನು ಸರಕಾರ ಮತ್ತು ಪ್ರತಿನಿಧಿಗಳಾದ ತಾವೂ ಕೂಡಿ ಬಗೆಹರಿಸ ಬೇಕು. ಈ ಕ್ಷೇತ್ರದ ಮಾರ್ಗದರ್ಶನ ಬದಲಾಯಿಸಬೇಕು. ಈಗ್ಯೆ ಏಳೆಂಟು ತಿಂಗಳ ಹಿಂದೆ ಮದ್ರಾಸಿನಲ್ಲಿ ಮುಖ್ಯ ಮಂತ್ರಿಗಳ ಮತ್ತು ಸಹಕಾರ ಮಂತ್ರಿಗಳ ಸಮ್ಮೇಳನವಾಯ್ತು, ಅದು ಕೇಂದ್ರ ಸರಕಾರದ ಸಹಕಾರ ಮಂತ್ರಿಗಳಾದ ಜಗಜ್ಜೀವನರಾಂ ರವರ ಅಧ್ಯಕ್ಷತೆಯಲ್ಲಿ ನಡೆಯಿತು, ಆಗ ರಾಜ್ಯ ಸರಕಾರದವರು ಕಾರ್ಯರೂಪಕ್ಕೆ ತರುವಂತೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕನುಗುಣವಾಗಿ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ತ್ವರೆಯಿಂದ ಕಾರ್ಯಕ್ರಮ ತೆಗೆದು ಕೊಳ್ಳಬೇಕು ಎಂದು ಸಹಕಾರ ಸಂಸ್ಥೆಗಳಲ್ಲಿ ಇಂದು ಇರುವ ದುರಾಡಳಿತವನ್ನು ತಪ್ಪಿಸಲು ರಾಜ್ಯದ ಸಹಕಾರ ಇಲಾಖೆ ಉಪಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ಅವರ ಶಿಫಾರಸಿ ಗಾಗಿ ಕಾತುರತೆಯಿಂದ ಸರಕಾರ ನೋಡುತ್ತಿದೆ. 15–20 ದಿವಸಗಳಲ್ಲಿ ಅದು ಬಂದಮೇಲೆ ಏನು ಬದಲಾವಣೆ ಮಾಡಬೇಕು, ದುರಾಡಳಿತ ನಡೆಸುತ್ತಿರುವ ಸಂಸ್ಥೆಗಳನ್ನು ಹತೋಟಿಗೆ ತರಲು ಏನು

(ಶ್ರೀ ಪಿ. ಎಂ. ನಾಡಗೌಡ)

ಮಾಡಬೇಕು ಎಂದು ಯೋಚನೆಮಾಡಿ ದುರಾಡಳಿತ ಯಾವ ಸಂಘದಲ್ಲಿದೆ ಅಲ್ಲಿ ಬೇಕಾದವರಿರಲಿ ಅವರ ಮೇಲೆ ನಿಷ್ಪಕ್ಷಪಾತವಾಗಿ ಕ್ರಮ ತೆಗೆದುಕೊಳ್ಳುವುದು. ಅದಕ್ಕೆ ಶಕ್ತಿಯಿದೆ ಎಂದು ಬಹಿರಂಗವಾಗಿ ಹೇಳುತ್ತೇನೆ. ಅದನ್ನು ಮಾಡದಿದ್ದರೆ ಮಾನ್ಯ ಸದಸ್ಯರು ಮಾಡಿದ ಉಪದೇಶವನ್ನು ಒಪ್ಪಿಕೊಂಡು ಹೋದಂತಾಗುವುದು. ಇದನ್ನು ಹೇಳಿದ ಮೇಲೆ ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ.

ಇನ್ನೊಂದು ಮಾತು. ಸಮ್ಮೇಳನವೇನು ನಡೆಯಿತು ಅದರ ಹಿನ್ನೆಲೆ ಮುಖ್ಯವಾದುದು. ಈ ಸಂಸ್ಥೆಗಳಲ್ಲಿ ವೆಸ್ಟೆಡ್ ಇಂಟರೆಸ್ಟ್ಸ್ ಇರುವುದನ್ನು ನಿರ್ಮೂಲ ಮಾಡಬೇಕು, ಎಂದು ಕೇಂದ್ರ ಸರಕಾರದ ಆದೇಶವಿದೆ. ನಿಮ್ನವರ್ಗದವರಿಗೆ ಸೌಲಭ್ಯ ಕೊಡಬೇಕು—ಎಂಬ ಇಚ್ಛೆ ಇದೆ. ಯಾವ ಸಂಸ್ಥೆಗಳಲ್ಲಿ ನಿಮ್ನ ಪಂಗಡದವರಿಗೆ ಪ್ರಾತಿನಿಧ್ಯ ಕೊಡಬೇಕು, ಅವರ ವಿಶಿಷ್ಟ ಹಕ್ಕುಗಳನ್ನು ಯಾವ ರೀತಿ ಕಾಪಾಡಬೇಕು ಎಂಬುದನ್ನು ಆಲೋಚನೆ ಮಾಡಿ ದೂರು ಬರುವುದಕ್ಕೆ ಅವಕಾಶವಿಲ್ಲದಂತೆ ರಾಜ್ಯ ಘಟನೆ ಮೂಲಕ ಅವರಿಗೆ ಕೊಟ್ಟಿರುವ ಹಕ್ಕುಗಳನ್ನು ಕಾಪಾಡಲು ಅವನ್ನು ಅಳವಡಿಸಿಕೊಂಡಿದ್ದೇವೆ. ಆದರೆ ಒಂದು ದುರ್ದೈವದ ಮಾತು ನಿಮ್ನವರ್ಗದವರಿಗೆ ಇಂದು ಸಹಕಾರ ಇಲಾಖೆಯಲ್ಲಿ ಅಥವ ಬೇರೆ ಕಡೆ ಶೇಕಡ 18 ರಷ್ಟು ಅವಕಾಶ ಸಿಕ್ಕಿಲ್ಲ ಎಂದು ಹೇಳುತ್ತಿದ್ದಾರೆ. ನಿಮ್ನವರ್ಗದವರಿಗೆ, ಹಿಂದುಳಿದವರಿಗೆ, ಷೆಡ್ಯೂಲ್ಡ್ ಕ್ಯಾಸ್ಟ್ಸ್‌ನವರಿಗೆ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಎಲ್ಲಿ ಸಾಲ ವಗೈರೆ ಕೊಟ್ಟಿಲ್ಲ ಅಲ್ಲಿ ಸರಕಾರ ಸೂಕ್ತ ಕ್ರಮ ಕೈಕೊಳ್ಳುವುದು. ಸರಿಯಾಗಿ ವಿಚಾರ ತಿಳಿಯದೆ ಹೇಳಿದವರಿಗೆ ಕಣ್ಣು, ಕಿವಿ ಇಲ್ಲವೆಂದು ಭಾವಿಸುತ್ತೇನೆ. ಎಲ್ಲಾ ಲಿಸ್ಟ್‌ಗಳನ್ನೂ ಪರಿಶೀಲಿಸಿ ಯಾವ ಯಾವ ಸಂಸ್ಥೆಗಳಲ್ಲಿ ಹಣ ವಿತರಣೆ ಮಾಡುತ್ತಿದ್ದಾರೆ, ಎಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಕೊಡುತ್ತಿದ್ದಾರೆ ಎಂಬುದನ್ನು ನೋಡಬಹುದಾಗಿತ್ತು. ಸರಕಾರದ ನೀತಿಯು ಪ್ರಕಾರ ಅವರಿಗೆ ಕೊಡುತ್ತಿದ್ದಾರೆಂಬ ಪೂರ್ಣ ನಂಬಿಕೆ ನನಗಿದೆ. ಅಭಿವೃದ್ಧಿ ಮಂಡಲಿಯಲ್ಲಿ ಶೇಕಡ 18ಕ್ಕೆ ಅವಕಾಶಮಾಡಬೇಕೆಂದು ಹೇಳಿದ್ದಾರೆ. ಸಾರ್ವಜನಿಕ ಅಭಿವೃದ್ಧಿ ಕಾರ್ಯ ಮಾಡುವಾಗ ರಸ್ತೆ, ಬಾವಿ, ಶಾಲೆ ಕಟ್ಟಡ ಮುಂತಾದುವನ್ನು ಮಾಡುವಾಗ ಹರಿಜನರ ಬಾವಿ ಎಂದು ಈ ದಿವಸ ಹೇಳುವುದಿಲ್ಲ, ಸಾರ್ವಜನಿಕರಿಗಾಗಿ ಮಾಡುವಾಗ ಅದನ್ನು ಎಲ್ಲರೂ ಉಪಯೋಗಿಸಬಹುದು.

ನಮ್ಮ 60 ವರ್ಷದ ಚಳುವಳಿ, ಮಾರ್ಗದರ್ಶನ ಆಗುಹೋಗುಗಳೆಲ್ಲಾ ಸಹಕಾರಿ ಕ್ಷೇತ್ರದಲ್ಲಿ ಆಗಬೇಕು. ಸಹಕಾರಿ ಕ್ಷೇತ್ರ ಚೆನ್ನಾಗಿ ಆಗಬೇಕಾದರೆ ಸರ್ಕಾರದ ಪೂರ್ಣವಾದ ಒಂದು ನಂಬಿಕೆ ಏನೆಂದರೆ ಈ ಆಡಿಟ್ ಪದ್ಧತಿ ಬದಲಾವಣೆಯಾಗಬೇಕು ಎಂದು ತಿಳಿದುಕೊಂಡಿದ್ದೇವೆ. ಇದನ್ನು ಹೋದ ಸಲ ಒಪ್ಪಿಕೊಂಡಿದ್ದೇವೆ, ಹಿಂದೆಯೇ ಸರ್ಕಾರ ಒಪ್ಪಿಕೊಂಡಿದೆ. ಈ ಆಡಿಟ್ ಹಿಂದಿನಿಂದ ಬಂದಂಥ ಒಂದು ಆಡಿಟು. ಇವತ್ತು ಆಡಿಟರ್ಸ್ ನನಗೆ ತಿಳಿದುಬಂದ ಸಂಗತಿ ಏನಂದರೆ 4–8 ವರ್ಷದಿಂದ ಅಪಾಯಿಂಟ್‌ಮೆಂಟ್ ಆಗಿದ್ದರೂ ಕೂಡ ಅವರಿಗೆ ಯಾವ ಎಕ್ಸ್‌ಪೀರಿಯನ್ಸ್ ಇಲ್ಲ, ಕ್ವಾಲಿಫಿಕೇಷನ್ನೂ ಇಲ್ಲ, ಟೆಕ್ನಿಕಲ್ ನಾಲೆಡ್ಜ್ ಇಲ್ಲ. ಅಂಥವರನ್ನು ಶ್ರೀಮಾನ್ ಕೆ. ಎಚ್. ಪಾಟೀಲ್‌ರವರು ಮತ್ತೆ ಪ್ರಮೋಟ್ ಮಾಡ್ರಿ ಎಂದು ಹೇಳುತ್ತಾರೆ.

8-30 P.M.

ಶ್ರೀ ಕೆ. ಎಚ್. ಪಾಟೀಲ್.—ನಾನು ಯಾವಾಗಲೂ ಆ ರೀತಿ ಅಂದಿಲ್ಲ.

ಶ್ರೀ ಪಿ. ಎಂ. ನಾಡಗೌಡ.—ಇದನ್ನು ನಾವು ಬದಲಾವಣೆ ಮಾಡಬೇಕಾದರೆ ಎರಡು ಕಮಿಟಿ ರಿಪೋರ್ಟುಗಳು ನಮ್ಮ ಮುಂದೆ ಇವೆ. ಇದನ್ನು ಸ್ಟೇಟ್ ಅಕೌಂಟ್ಸ್ ಡಿಪಾರ್ಟ್‌ಮೆಂಟಿಗೆ ಕೊಡಬೇಕೇ ಅಥವಾ ಬೇರೆ ಒಂದು ಸಪರೇಟ್ ಡಿಪಾರ್ಟ್‌ಮೆಂಟ್ ಮಾಡಬೇಕೆ ಅಥವಾ ಯಾವ ತರಹ ಎಫೆಕ್ಟೀವ್ ಆಗಿ ಮಾಡಬೇಕೆಂಬುದನ್ನು ಸರ್ಕಾರ ಶೀಘ್ರವಾಗಿ ವಿಚಾರ ಮಾಡಿ ಕಾರ್ಯಗತ ಮಾಡುತ್ತದೆ ಎಂದು ವಿಶ್ವಾಸಪೂರ್ವಕವಾಗಿ ಹೇಳುತ್ತೇನೆ. ಹೋದ ವರ್ಷ ಈ ಮಾತನ್ನು ಹೇಳಿದ್ದೆ. ಒಂದು ಮಾತು ತಿಳಿದುಕೊಳ್ಳಬೇಕು ಆಡಿಟ್ ಮಾಡಿಲ್ಲ ಎಂದು ತಿಳಿದುಕೊಂಡಿದ್ದರೆ ಅದು ತಪ್ಪು. ಇಡೀ ಭಾರತದಲ್ಲಿ ಅಂಕಿ ಅಂಶ ತೆಗೆದುಕೊಂಡು ನೋಡಿದರೆ ನೂರಕ್ಕೆ 98 ರಷ್ಟು ಆಡಿಟ್ ಮಾಡಿದಂತಹ ರಾಜ್ಯ ಯಾವುದಾದರೂ ಇದ್ದರೆ ಅದು ಮೈಸೂರು ರಾಜ್ಯ ಎಂದು ಹೇಳಬಹುದು. ಆದರೆ ಅದರಿಂದ ಪ್ರತಿಫಲ ಇವತ್ತಿನ ದಿವಸ ಎಲ್ಲ ಗುಣಗ್ರಹಣವಾದ ಆಡಿಟ್ ಬೇಕು, ಮತ್ತು ಎಫೆಕ್ಟೀವ್ ಆಡಿಟ್ ಬೇಕು. ಇವತ್ತು ಒಬ್ಬ ಆಡಿಟರ್ ಹೋದರೆ ಯಾವ ಸಂಸ್ಥೆಯ ಅಧ್ಯಕ್ಷರು ಇದ್ದಾರೋ ಅವರ

ನಿರೂಪಣೆಯ ಮೇಲೆ ಆತ ಮಾಡಬೇಕೆಂದರೆ ಹೇಗೆ ಆಗುತ್ತದೆ, ಆದ್ದರಿಂದ ಮಾನ್ಯ ಸದಸ್ಯರು ಈ ವಿಷಯದಲ್ಲಿ ಸಹಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ವಿಜಿಲೆನ್ಸ್ ಸೆಲ್ ಇದೆ. 20 ಸಾವಿರ ಸಹಕಾರ ಸಂಘಗಳು ಇವೆ, ಅವುಗಳಲ್ಲಿರುವ ಸಿಬ್ಬಂದಿ ಬಹಳ ಜಾಸ್ತಿ ಎಂದು ಹೇಳುತ್ತಾರೆ, ಅದು ಸರಿಯಾದ ಮಾತಲ್ಲ. ಬಿ.ಕಾಂ., ಎಂ.ಕಾಂ. ಪಾಸ್ ಮಾಡಿದ ಜನರನ್ನು ತೆಗೆದುಕೊಳ್ಳಬೇಕೆಂದರೆ ಹಣದ ಕೊರತೆಯಿಂದ ಆಗಿಲ್ಲ. ವಿಜಿಲೆನ್ಸ್ ಸೆಲ್‌ನಲ್ಲಿ ತಜ್ಞರನ್ನು ಇಟ್ಟು ಯಾವುದಾದರೂ ತಕರಾರು ಬಂದಲ್ಲಿ ಅಲ್ಲಿಗೆ ಕಳುಹಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಒಪ್ಪಿಕೊಂಡಿದೆ ಎಂಬ ಮಾತನ್ನು ನಾನು ತಿಳಿಸುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಆಡಿಟ್ ಮಾಡಿಲ್ಲ ಅಂತ ಅನ್ನುವುದು ಅಷ್ಟು ಪ್ರಾಮುಖ್ಯವಾದದ್ದಲ್ಲ. ಮಿಸ್ ಅಪ್ರೋಪ್ರಿಯೇಷನ್ ವಗೈರೆ ಅಕ್ರಮಗಳು ಏನು ನಡೆದಿವೆ ಅದರ ಮೇಲೆ ವರ್ಷಾನುಗಟ್ಟಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾ ಇಲ್ಲ ಎಂಬುದು ನಿಮ್ಮ ಮೇಲೆ ಇರತಕ್ಕ ಮುಖ್ಯವಾದ ಅಪಾದನೆ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದು ಸದಸ್ಯರ ಅಭಿಪ್ರಾಯ.

ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಸದಸ್ಯರು ಹೇಳಿರತಕ್ಕ ವಿಷಯ ಸರ್ಕಾರದ ನಜರಿಗೆ ಬಂದಿದೆ. ಸಿವಿಲ್ ಮತ್ತು ಕ್ರಿಮಿನಲ್ ಎರಡೂ ಕೇಸುಗಳನ್ನು ಹಾಕಿದ್ದೇವೆ. ಬೇಕಾದರೆ ವಿವರವಾದ ಪಟ್ಟಿ ಬೇಕೆಂದರೆ ಕೊಡುತ್ತೇನೆ. ನಾಳೆ ಕೊಡಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಶ್ರೀಮಾನ್ ಟಿ. ಪಿ. ಬೋರಯ್ಯನವರು ಒಂದು ವಿಷಯ ಹೇಳಿದರು, ಹತ್ತು ವರ್ಷಗಳ ಹಿಂದೆ ಹತ್ತು ಸಾವಿರ ರೂಪಾಯಿನ ಒಂದು ಮಿಸ್ ಅಪ್ರೋಪ್ರಿಯೇಷನ್ ಕೇಸು ನಾನು ಅಧಿಕಾರದಲ್ಲಿದ್ದಾಗ ನನ್ನ ಮುಂದೆ ಬಂದಿತ್ತು ಅದು ಇವತ್ತಿನವರೆಗೂ ತೀರ್ಮಾನವಾಗಿಲ್ಲ ಕಾರ್ಯಕ್ರಮ ತೆಗೆದುಕೊಂಡಿಲ್ಲ ಎಂದರೆ ಯಾರಿಗೆ ತಾನೆ ಸಹಕಾರ ತತ್ವದಲ್ಲಿ ನಂಬಿಕೆ ಬರುತ್ತದೆ ?

ಶ್ರೀ ಪಿ. ಎಂ. ನಾಡಗೌಡ.—ನೀವು ಇದ್ದಾಗಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿತ್ತು. ನಮ್ಮವರೆಗೂ ಏಕೆ ಬಿಟ್ಟಿರಿ. (ನಗು). ಕೇಂದ್ರ ಸರ್ಕಾರದವರು ಮಾನ್ಯ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದ್ದರು ಅದರ ರಿಪೋರ್ಟು ಬಂದಿದೆ ಅದನ್ನು ಪರ್ಯಾಲೋಚನೆ ಮಾಡುತ್ತೇವೆ. ಷಾರ್ಟ್ ಟರ್ಮ್ ಮತ್ತು ಮಿಾಡಿಯಂ ಕ್ರೆಡಿಟ್‌ನೊಳಗೆ 60-61 ರಲ್ಲಿ 14·15 ಕೋಟಿ ರೂಪಾಯಿಗಳನ್ನು ಬೇಸಾಯದ ಉತ್ಕರ್ಷೆಗೆ ಕೊಟ್ಟಿದ್ದಾರೆ ಅವತ್ತಿನ ದಿವಸ 25.20 ಕೋಟಿ ರೂಪಾಯಿಗಳನ್ನು ಕೊಟ್ಟಿದೆ ಇದು ಸರ್ವಸಾಮಾನ್ಯವಾದ ಮಾತಲ್ಲ. ನಾವು ಈ ಅಂಕಿ ಅಂಶಗಳನ್ನೆಲ್ಲಾ ತೆಗೆದುಕೊಂಡು ಎಲ್ಲಿ ನೂರು ಜನರಿದ್ದಾರೋ ಅಂಥಾ ಸ್ಥಳಗಳಿಗೆಲ್ಲಾ ಈ ಸೌಲತ್ತುಗಳನ್ನು ಕೊಟ್ಟಿದ್ದೇವೆ. ನಾವು ಆ ರಿಜರ್ವ್ ಬ್ಯಾಂಕಿನವರ ಇನ್‌ಸ್ಟ್ರಕ್ಷನ್ ಪ್ರಕಾರ ಕೆಲಸ ಮಾಡುತ್ತಿದ್ದೇವೆ. ನಾವು ಈ ಸಹಕಾರ ಸಂಸ್ಥೆಗಳಲ್ಲಿ ತೊಡಗಿಸಿರತಕ್ಕ ಹಣ ನಾಲ್ಕನೇ ಪಂಚವಾರ್ಷಿಕ ಯೋಜನೆಯ ವೇಳೆಗೆ 50 ಕೋಟಿಗೆ ಹೋಗುತ್ತದೆ. ರಿಜರ್ವ್ ಬ್ಯಾಂಕಿನವರು ದೇಶದಲ್ಲಿ ವ್ಯವಸಾಯಾಭಿವೃದ್ಧಿಗೆ ಎಲ್ಲಿಯವರೆಗೆ ಸಾಲವನ್ನು ಕೊಡಲಾಗುತ್ತದೆಂದು ಕೇಳಿದುದಕ್ಕೆ ಅವರು ಸ್ಕೈ ಹೈಟ್ ಈಸ್ ದಿ ಲಿಮಿಟ್ ಎಂದು ಹೇಳಿದ್ದಾರೆ. ಆದರೆ ಜನರು ಯಾವ ಒಂದು ಉದ್ದೇಶಕ್ಕಾಗಿ, ಯಾವ ಒಂದು ಬಾಬಿಗಾಗಿ ಆ ಹಣವನ್ನು ಒಯ್ಯುತ್ತಾರೋ ಆ ಬಾಬಿಗೇ ಅವರು ಆ ಹಣವನ್ನು ಬಳಸಬೇಕು ಎಂಬ ಒಂದು ಕಡ್ಡಾಯವನ್ನು ಅವರು ಹಾಕಿದ್ದಾರೆ. ಇಷ್ಟರಮಟ್ಟಿಗೆ ಆ ರಿಜರ್ವ್ ಬ್ಯಾಂಕಿನವರು ನಮ್ಮ ವ್ಯವಸಾಯಗಾರರಿಗೆ ಸಹಾಯ ಮಾಡಲು ಮುಂದೆ ಬಂದದ್ದು ಅವರಿಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒಂದು ತೀಕ್ಷ್ಣವಾದ ಪತ್ರವನ್ನು ಬರೆದ ನಂತರವೇ ಅವರು ಮುಂದೆ ಬಂದದ್ದು. ಈ ಅಂಶವನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್.—ರಿಜರ್ವ್ ಬ್ಯಾಂಕಿನವರು ಆ ಷೆಡ್ಯೂಲ್ ಬ್ಯಾಂಕುಗಳವರಿಗೇನೋ ಸಾಲವನ್ನು ವ್ಯವಸಾಯಾಭಿವೃದ್ಧಿಗಾಗಿ ಸ್ಕೈ ಹೈಟಿನವರೆಗೂ ಲಿಮಿಟ್ ಇಟ್ಟುಕೊಂಡು ಹಣ ಕೊಡುತ್ತೇವೆಂದು ಹೇಳಿದ್ದು ಸರಿಯಾದ್ದೆ. ಆದರೆ ಸರ್ಕಾರಿ ಲೆಕ್ಕಪತ್ರಗಳ ಪ್ರಕಾರ ನಮ್ಮ ರಾಜ್ಯದಲ್ಲಿ 15-20 ಮಾತ್ರ ಷೆಡ್ಯೂಲ್ ಬ್ಯಾಂಕುಗಳಿರುತ್ತವೆ. ವ್ಯವಸಾಯಾಭಿವೃದ್ಧಿಗಾಗಿ ಅವುಗಳೆಲ್ಲಕ್ಕೂ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಸಾಲವಾಗಿ ಕೊಡಲಾಗಿದೆ. ಆದರೆ ಹಾಗೆ ಸಾಲವಾಗಿ ಕೊಟ್ಟ ಹಣದಲ್ಲಿ ಬಹು ಪಾಲನ್ನು ಯಂತ್ರೋಪಕರಣಗಳನ್ನು ಕೊಳ್ಳಲು ಖರ್ಚುಮಾಡಿದ್ದಾರೆಂದೂ ಅದರಲ್ಲಿ—ಪ್ರಾಮುಖ್ಯವಾಗಿ ವ್ಯವಸಾಯಾಭಿವೃದ್ಧಿಗೆ ಅಂದರೆ ಭೂಮಿ ಇತ್ಯಾದಿಗಳನ್ನ ಸಮ ಮಾಡುವುದಕ್ಕೆ ಮತ್ತು ನೀರಾವರಿಬಾವಿಗಳನ್ನು ತೋಡುವುದಕ್ಕೆ ಖರ್ಚು

(ಶ್ರೀ ಡಿ. ದೇವರಾಜ ಅರಸ್)

ಮಾಡಿರತಕ್ಕ ಹಣ ಬಹಳ ಕಡಿಮೆ ಎಂಬುದಾಗಿ ತಿಳಿದುಬಂದಿದೆ. ಆ ಅಂಶ ಸರ್ಕಾರದವರ ಗಮನಕ್ಕೂ ಬಂದಿದೆಯೋ ?

ಶ್ರೀ ಪಿ. ಎಂ. ನಾಡಗೌಡ.—ನಾನೀಗ ಸಹಕಾರಿ ಬ್ಯಾಂಕುಗಳ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ಇನ್ನು ಆ ರಿಜರ್ವ್ ಬ್ಯಾಂಕಿನವರು ಹಾಕಿರತಕ್ಕ ಇನ್ನೊಂದು ಷರತ್ತೇನೆಂದರೆ—ಅವರಿಂದ ಸಾಲ ತಂದದ್ದು ಯಾವತ್ತೂ ಸುಸ್ತಿಯಲ್ಲಿ ಉಳಿಯಬಾರದು ಅನ್ನುವುದು ಒಂದು. ಆದರೆ ಶ್ರೀ ಬಿ. ಎಂ. ಸಾಣಿಕೊಪ್ಪ ಅವರು ಮಾತನಾಡುತ್ತಾ, ಬಾರಾಖೂನ್ ಮಾಫ್—ಮಾಡಿದ ಹಾಗೆ ಆಡಳಿತ ನಡೆಯುತ್ತಿದೆ ಅನ್ನುವ ಅರ್ಥ ಬರತಕ್ಕ ರೀತಿಯಲ್ಲಿ - ಆ ಧಾಟಿಯಲ್ಲಿ ಅವರು ಮಾತನಾಡಿದ್ದಾರೆ. ಆದರೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಇತ್ತೀಚೆಗೆ ರಿಜರ್ವ್‌ಬ್ಯಾಂಕಿನವರಿಗೆ ಪತ್ರವೊಂದನ್ನು ಬರೆದ ನಂತರವೇ ಅವರು ಡಿಬೆಂಚರ್ ಮೂಲಕ ನಮಗೆ 2.50 ಕೋಟಿ ರೂಪಾಯಿಗಳ ಸಾಲವನ್ನು ಎತ್ತುವುದಕ್ಕೆ ಅವಕಾಶ ಕೊಟ್ಟರು. ಆದರೆ ಅವರು ಒಂದಾವರ್ತಿ ಸಾಲವನ್ನು ಕೊಟ್ಟ ನಂತರ ಅದು ಭೂಅಭಿವೃದ್ಧಿ ಬ್ಯಾಂಕೇ ಇರಲಿ, ಜಿಲ್ಲಾಭಿವೃದ್ಧಿ ಬ್ಯಾಂಕೇ ಇರಲಿ ಅಲ್ಲಿ ಸಾಲದ ವಸೂಲಿ ಸರಿಯಾಗಿ ನಡೆಯದೆ ಹಣ ಸುಸ್ತಿಯಲ್ಲಿದ್ದರೆ ಅಂಥ ಸಂಸ್ಥೆಗಳಿಗೆ ಮತ್ತೆ ಅವರು ಸಾಲ ನೀಡುವುದಿಲ್ಲ. ಈಗಲೂ ಕೂಡ ಅವರು ನೂರಕ್ಕೆ 90 ರಷ್ಟು ಸೊಸೈಟಿಗಳಿಗೆ ಸಾಲ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಆದರೆ ಅಲ್ಲಿ ಸುಸ್ತಿ ಇರಕೂಡದು.

ಇನ್ನು ಲಾಂಗ್ ಟರ್ಮ್ ಲೋನಿಗೆ ಒಂದೇ ವರ್ಷದಲ್ಲಿ 1967–68ರಲ್ಲಿ 10 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ರೈತರಿಗೆ ಒಟ್ಟು 2.5 ಕೋಟಿ ರೂಪಾಯಿಗಳ ಬೆಲೆಬಾಳತಕ್ಕ ಪಂಪ್ ಸೆಟ್ಟುಗಳನ್ನು ಕೊಡಿಸಲಾಗಿದೆ. ಅಂದರೆ 11 ಸಾವಿರ ಪಂಪ್‌ಸೆಟ್‌ಗಳನ್ನು ರೈತರಿಗೆ ಒದಗಿಸಲಾಗಿದೆ. ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಬಾವಿಗಳನ್ನು ತೆಗೆಸತಕ್ಕ ಬಗ್ಗೆ 13.54 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಅಂದರೆ 3537 ಬಾವಿಗಳಿಗೆ ಹಣವನ್ನು ಕೊಡಲಾಗಿದೆ. ಆ ಪೈಕಿ 9000—10000 ಬಾವಿಗಳು ಈಗಾಗಲೆ ಪೂರ್ಣವಾಗಿ ಬಳಕೆಯಲ್ಲಿರುತ್ತವೆ. ಹೀಗೆ ನಾವು ಈ ಎಲ್ಲ ಕೆಲಸಕಾರ್ಯಗಳನ್ನೂ ಒಂದು ಟಾರ್ಗೆಟ್ ಇಟ್ಟುಕೊಂಡು ಕೆಲಸಮಾಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಯಾವ ಒಂದು ಪಕ್ಷಪಾತವೂ ಇಲ್ಲದೆ—ಇವ ಬಡವ ಬಲ್ಲಿದ ಎಂಬ ಭಿನ್ನಭೇದಕ್ಕೆ ಅವಕಾಶವಿಲ್ಲದಂತೆ ಸಹಾಯ ನೀಡುತ್ತಿದ್ದೇವೆ. ಇದನ್ನು ಆ ರಿಜರ್ವ್ ಬ್ಯಾಂಕಿನವರು ನೋಡಿ ನಮಗೆ ಅವರ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—5 ಸಾವಿರ ರೂಪಾಯಿಗಳ ಸಾಲದಲ್ಲಿ ಒಂದು ಬಾವಿ ಆಗುತ್ತದೆಂದು ಯಾರಾದರೂ ಭಾವಿಸಿದ್ದರೆ ಅದೊಂದು ಭ್ರಾಂತಿ. ಹೀಗಾಗೇ ಅನೇಕ ಕಡೆ ಎಷ್ಟೋ ಬಾವಿಗಳು ಪೂರ್ತಿಯಾಗದೆ ಅರ್ಧ-ಮರ್ಧವಲ್ಲೇ ನಿಂತಿರುತ್ತವೆ. ಅಂಥ ಬಾವಿಗಳಿಗೆ ಮತ್ತೆ ಸರ್ಕಾರದವರು ಸಾಲ ಕೊಡುವುದಕ್ಕಾಗುವುದಿಲ್ಲ, ಆ ರೈತನಲ್ಲಿ ಆ ಕೆಲಸವನ್ನು ಪೂರ್ಣಗೊಳಿಸುವುದಕ್ಕೆ ಹಣವಿಲ್ಲ, ಆ ಕೆಲಸಕ್ಕೆ ಬೇರೆಯವರು ಸಾಲ ಕೊಡುವುದಿಲ್ಲ, ಅಲ್ಲಿ ನೀರು ಬಿದ್ದಿರುವುದಿಲ್ಲ, ಅಂಥ ಬಾವಿಯನ್ನು ನಂಬಿಕೊಂಡು ಆ ರೈತ ಮಾಡಿರತಕ್ಕ ಸಾಲ ತೀರಿಸುವುದಕ್ಕೆ ದಾರಿ ಇರುವುದಿಲ್ಲ. ಹೀಗಾಗಿ ಈ ದಿವಸ ಅನೇಕ ರೈತರು ತಮ್ಮ ಆಸ್ತಿಗಳನ್ನು ಮಾರಾಟ ಮಾಡಿ ಆ ಸಾಲವನ್ನು ತೀರಿಸಬೇಕಾದ ಪರಿಸ್ಥಿತಿ ಉಂಟಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಪಿ. ಎಂ. ನಾಡಗೌಡ.—ಆದರೆ ನಮ್ಮಲ್ಲಿ ಅನೇಕರು ವತನ್ದಾರರಿದ್ದಾರೆ. ಶಿಷ್ಟಜನಾಂಗದವರಿದ್ದಾರೆ. ಅಂಥವರು ಬೇರೆ ಕಮರ್ಷಿಯಲ್ ಬ್ಯಾಂಕುಗಳಿಂದ ಸಾಲ ಪಡೆಯಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಹೇಳಿದ್ದು ತಮಗೆ ಸರಿಯಾಗಿ ಅರ್ಥವಾದಂತೆ ಕಂಡು ಬರುತ್ತಿಲ್ಲ. ಬಾವಿಯನ್ನು ಬಡವನೇ ತೆಗೆಸಲಿ ಅಥವಾ ಶ್ರೀಮಂತನೇ ತೆಗೆಸಲಿ ಖರ್ಚು ಇಬ್ಬರಿಗೂ ಒಂದೇ ಇರುತ್ತದೆ. 5 ಸಾವಿರದಲ್ಲಿ ಒಂದು ಬಾವಿ ಆಗುವುದಿಲ್ಲ. ನೀರೂ ಬೀಳುವುದಿಲ್ಲ. ಕೆಲವು ಕಡೆ 10 ಸಾವಿರ ಖರ್ಚುಮಾಡಿದರೂ ನೀರು ಬಾರದಿರತಕ್ಕ ನಿದರ್ಶನಗಳಿವೆ. ಜನರು ಆ 5 ಸಾವಿರ ಖರ್ಚುಮಾಡಿ ನೀರನ್ನು ಕಾಣದೆ ಕಣ್ಣೀರಿಡುತ್ತಿದ್ದಾರೆ. ಅನೇಕರು ಇಂಥ ಒಂದು ತೊಂದರೆಯಲ್ಲಿದ್ದಾರೆ. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ತಮ್ಮ ನೀತಿಯನ್ನು ಬದಲಾಯಿಸುವುದಕ್ಕಾಗುವುದಿಲ್ಲವೇ ಎಂದು ಕೇಳುತ್ತಿದ್ದೇನೆ.

ಶ್ರೀ ಪಿ. ಎಂ. ನಾಡಗೌಡ.—ನಾವು ಎಕ್ಸ್‌ಪರ್ಟುಗಳನ್ನೂ, ಆ ಎ.ಆರ್.ಸಿ. ಎಕ್ಸ್‌ಪರ್ಟ್‌ಗಳನ್ನೂ ಕೇಳಿ ಇದನ್ನು ನಿಗದಿಮಾಡಿದ್ದೇವೆ. ಅವರು ಎಷ್ಟು ಕೊಡಬಹುದು ಎಂದು ತಿಳಿಸಿದ್ದಾರೋ ಅಷ್ಟನ್ನು ಮಾತ್ರ ನಾವು ಕೊಡುತ್ತಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮಲ್ಲಿ ಅಂಥ ಎಕ್ಸ್‌ಪರ್ಟ್‌ಗಳಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಆದಾಗ್ಯೂ ಅವರು ಹಣ ಕೊಡತಕ್ಕವರು ಅವರನ್ನು ಕೇಳಲೇ ಬೇಕು.

Sri H. M. CHANNABASAPPA.—I am very thankfu ' or the enthu siasm of the Government in financing irrigation wells. Tnat is a very happy augury. But the point is whatever help you give to the farmers, it must be fruitful. Otherwise it will be only floating the figures of the finances that you are giving and not of the wells dug up. I want the Government to be realistic in their approach. It is not good merely financing the amount which is not beneficial to the farmers and the farmers are neither able to dig the wells nor able to pay back the amount to the Government. This precarious condition will prevail ultimately. Therefore merely because the A.R.C. has made a recommendation for giving Rs. 5,000 Government should not act accordingly. If it is a defective recommendation Government has to consider it and set-right. Therefore, I want to the Government to kindly examine the working of the whole scheme, so that the whole scheme may be realistic and beneficial to the farmers.

Sri P. M. NADGOUDA.—I will bear that in mind.

ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ).—ನಾವು ಮಾತನಾಡಬೇಕಾದರೆ, ನಮಗೆ ಕೇವಲ 5 ನಿಮಿಷಗಳ ಅವಕಾಶವನ್ನೂ ಸಹ ಕೊಡುವುದಿಲ್ಲ. ಇವತ್ತು 8ಗಂಟೆಗೆ ಮುಗಿಸುತ್ತೇವೆಂದು ಹೇಳಿದಿರಿ. ಈಗಾಗಲೇ 9 ಗಂಟೆಗೆ ಬಂದಿದೆ. ಹೀಗೆ ಮಾಡುತ್ತಿದ್ದೀರಿ. ಒಬ್ಬರೊಬ್ಬರಿಗೆ ತಾವು ಭಿನ್ನಭಾವ ಮಾಡಬಾರದು. ಮಧ್ಯೆ ಮಧ್ಯೆ ಒಬ್ಬರಿಗೂ ಅವಕಾಶವಿಲ್ಲವೆಂದು ಹೇಳಿ, ಏನಾದರೂ ನಾವು ಮಾತನಾಡುವುದಕ್ಕೆ ಎದ್ದರೆ, ನಮಗೆ ಕೂತುಕೊಳ್ಳುವ ಹಾಗೆ ಹೇಳುತ್ತೀರಿ.

ಉಪಾಧ್ಯಕ್ಷರು.—ತಾವೆಲ್ಲರೂ ಒಪ್ಪುವುದಾದರೆ, ನಾನು ಬೆಳಗಿನವರೆಗೂ ಕೂತಿರುತ್ತೇನೆ.

ಶ್ರೀ ಎಂ. ಎನ್. ರಾಮಣ್ಣ.—ಹಾಗಾದರೆ ರೆಫಿಸ್ಮೇಟರ್ಸ್ ಹೋಟೆಲಿನಿಂದ ನಮಗೆ ಊಟ ತರಿಸಿಕೊಡಬೇಕು.

ಶ್ರೀ ಪಿ. ಎಂ. ನಾಡಗೌಡ.—60 ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿದ್ದೇವೆ. ಸುಮಾರು 15 ಯೋಜನೆಗಳು ನಮ್ಮ ರಾಜ್ಯದಲ್ಲಿ ಅಗ್ರಿಕಲ್ಚರಲ್ ರಿಫೈನಾನ್ಸ್ ಕಾರ್ಪೊರೇಷನ್ನಿನಿಂದ ಮಂಜೂರು ಆಗಿವೆ. ಅವುಗಳ ವಿವರವನ್ನು ತಿಳಿಯಲು ಸದಸ್ಯರಿಗೆ ಅವುಗಳ ಬಗ್ಗೆ ಒಂದು ಪುಸ್ತಕವನ್ನು ಪ್ರಿಂಟ್ ಮಾಡಿ ಕೊಟ್ಟಿದ್ದೇವೆ. 20 ಕೋಟಿ ರೂಪಾಯಿಗಳ ಯೋಜನೆಗಳನ್ನು ಮೈಸೂರು ರಾಜ್ಯಕ್ಕೆ ಕೊಟ್ಟಿದ್ದಾರೆ. ಅಷ್ಟು ದೊಡ್ಡ ಪ್ರಮಾಣದಲ್ಲಿ ಬೇರೆ ಯಾವ ರಾಜ್ಯಕ್ಕೂ ಕೊಟ್ಟಿಲ್ಲ. ಇಲ್ಲಿ ಕೆಲಸ ಕಾರ್ಯಗಳು ಬಹಳ ಚೆನ್ನಾಗಿ ನಡೆದಿವೆ. ಇಲ್ಲಿ ನೈಸರ್ಗಿಕ ಸಂಪತ್ತು ಇದೆ. ಅದನ್ನು ನೋಡಿಕೊಂಡು ಕೊಟ್ಟಿದ್ದಾರೆ. ಇನ್ನು 33 ಯೋಜನೆಗಳನ್ನು ಎ. ಆರ್. ಸಿ. ಗೆ ರಾಜ್ಯ ಸರ್ಕಾರದವರು ಕಳುಹಿಸಿದ್ದಾರೆ. ಅದು 22-23 ಕೋಟಿ ರೂಪಾಯಿಗಳು ಆಗುತ್ತದೆ. ಕೆಲವು ಗ್ರೇಪ್ ಕಲ್ಟಿವೇಷನ್ ಸ್ಕೀಂಗಳು ಮಂಜೂರಾಗಿ ಬಂದಿವೆ. ಇವತ್ತು ಟ್ರಾಕ್ಟರ್ಸ್ ಮತ್ತು ಬುಲ್‌ಡೋಜರ್ಸ್ ಉಪಯೋಗಿಸುವ ಬಗ್ಗೆ ಅಗ್ರಿಕಲ್ಚರಲ್ ರಿಫೈನಾನ್ಸಿಂಗ್ ಕಾರ್ಪೊರೇಷನ್ನಿನವರು ರಿಜರ್ವ್ ಬ್ಯಾಂಕಿನಿಂದ ನೂರು ರೂಪಾಯಿಗಳಿಂದ ಒಂದು ಸಾವಿರ ರೂಪಾಯಿಗಳವರೆಗೆ ಕೊಡುವ ಒಂದು ಹೊಸ ಯೋಜನೆಯನ್ನು ನಿರೂಪಣೆ ಮಾಡಿದ್ದಾರೆ. ಕೆಲವು ಸದಸ್ಯರು ಪ್ರೊಸೆಸಿಂಗ್ ಸೊಸೈಟಿಯ ಬಗ್ಗೆ ಅನೇಕ ಮಾತುಗಳನ್ನು ರಾಜ್ಯ ಸರ್ಕಾರಕ್ಕೆ ಹೇಳಿದರು. ಇವತ್ತಿನ ಅಂಕಿಅಂಶಗಳನ್ನು ತೆಗೆದುಕೊಂಡರೆ, ಮೈಸೂರಿನವರು ಹೆಚ್ಚು ಹೆಮ್ಮೆಪಡಬಹುದು. ಮೊನ್ನೆ ಮಾನ್ಯ ಶ್ರೀ ಜಗಜೀವನ್‌ರಾಮ್ ಅವರು ಬಿದರೆಯಲ್ಲಿ ಸ್ಥಾಪನೆಮಾಡಿರುವ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ನೋಡಿದರೆ ಅಲ್ಲಿ ಸಹಕಾರೀ ಕ್ಷೇತ್ರದಿಂದ ಸೇಕಡ 4 ರಷ್ಟು ಡಿವಿಡೆಂಡ್ ಬಂದಿದೆ. ಇದರಿಂದ ಸರ್ಕಾರಕ್ಕೆ ಹೆಚ್ಚಿನ ಉತ್ಪತ್ತಿ ಬರುತ್ತದೆ. ಅಲ್ಲಿರತಕ್ಕ 5 ಸಹಕಾರಿ ಸಕ್ಕರೆ ಕಾರ್ಖಾನೆಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇವೆ. ಮಾನ್ಯ ಶ್ರೀ ಜಗಜ್ಜೀವನ್‌ರಾಮ್ ಅವರು ಹೇಳಿದ್ದನ್ನು ವರ್ತಮಾನ ಪತ್ರಿಕೆಗಳಲ್ಲಿ ಓದಿರಬಹುದು. ನಮ್ಮ ಮೈಸೂರು ಸಂಸ್ಥಾನಕ್ಕೆ ಎಷ್ಟು ಸಹಕಾರಿ ಸಕ್ಕರೆ ಕಾರ್ಖಾನೆ

(ಶ್ರೀ ಪಿ. ಎಂ. ನಾಡಗೌಡ)

ಗಳನ್ನು ಕೇಳುತ್ತೇವೋ ಅಷ್ಟು ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದಾರೆ. ಇಲ್ಲಿ ಚೆನ್ನಾಗಿ ಕೆಲಸ ಕಾರ್ಯಗಳು ನಡೆಯುತ್ತಾ ಇವೆ. ಮೈಸೂರು ರಾಜ್ಯದಲ್ಲಿ ಒಂದು ಲಕ್ಷ 87 ಸಾವಿರ ಎಕರೆ ಭೂಮಿಯಲ್ಲಿ ಕಬ್ಬು ಬೆಳೆಯುವ ಅವಕಾಶ ಈಗ ಇದೆ. ಇದರ ಪ್ರಮಾಣದ ಮೇಲೆ 12 ಸಾವಿರ ಎಕರೆಗೆ ಒಂದು ಫ್ಯಾಕ್ಟರಿ ಮಾಡ ಬೇಕೆಂದಿದ್ದೇವೆ. ಈ ಸರ್ಕಾರಕ್ಕೆ ಮಾನ್ಯ ಸದಸ್ಯರೆಲ್ಲರೂ ಸಹಕಾರ ಮಾಡಿದರೆ ಎಷ್ಟು ಬೇಕೋ ಅಷ್ಟನ್ನು ಸಹಕಾರೀ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಬಹುದು. ಅದರಿಂದ ರೈತರಿಗೆ ಉಪಯೋಗವಿದೆ. ಗೌರೀಬಿದನೂರು ಸಕ್ಕರೆ ಕಾರ್ಖಾನೆಯ ಬಗ್ಗೆ ಇವತ್ತು ಯಾರೂ ಅದರೊಳಗೆ ಕೈ ಇಡುವ ಹಾಗಿಲ್ಲ. ಸರ್ಕಾರದವರು ಅದಕ್ಕೆ ಎರಡೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ರೀತಿ ರೊಕ್ಕ ಕೊಡುವ ಪರಿಸ್ಥಿತಿ ಸರ್ಕಾರಕ್ಕೆ ಇತ್ತು. ಈಗ ಆ ಪರಿಸ್ಥಿತಿ ಬದಲಾವಣೆಯಾಗಿದೆ. ಇನ್ನು 79 ಸೊಸೈಟಿಗಳು ಕೇಂದ್ರ ಸರಕಾರದ ಕಡೆಯಿಂದ ಮಂಜೂರಾಗಿದೆ. ಅವುಗಳ ಪೈಕಿ 58 ಕಾರ್ಖಾನೆಗಳಲ್ಲಿ ಉತ್ಪತ್ತಿ ಚೆನ್ನಾಗಿ ಆಗುತ್ತಿದೆ. ಪ್ರತಿಯೊಂದು ಸೊಸೈಟಿಯವರೂ ರೈಸ್ ಮಿಲ್ಲನ್ನೂ ಶುರು ಮಾಡಿದ್ದಾರೆ. ಅದನ್ನು ಚೆನ್ನಾಗಿ ನಡೆಯಿಸುವುದಕ್ಕಾಗದೆ, ಅದರ ಆಡಳಿತ ಚೆನ್ನಾಗಿ ಇಲ್ಲದಿದ್ದರೆ, ಅದಕ್ಕೆ ಸಂಬಂಧಪಟ್ಟವರು ರಾಜೀನಾಮೆ ಕೊಡಬೇಕು ಎಂಬುದಾಗಿ ನಾನು ಬಹಿರಂಗವಾಗಿ ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ನೀವು ನಿಮ್ಮ ಪಕ್ಷಕ್ಕೆ ಸುಧಾರಿಸಿ ಎಂಬುದಾಗಿ ಹೇಳುತ್ತೀರಿ.

ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಶ್ರೀ ಪಾಟೀಲ್ ಅವರು ಸುಧಾರಿಸುತ್ತಾರೆ. ಆದ್ದರಿಂದ ಅವರು ಒಪ್ಪಿಕೊಳ್ಳಬೇಕು.

ಶ್ರೀ ಕೆ. ಎಚ್. ಪಾಟೀಲ್.—ಧಾರವಾಡ ಜಿಲ್ಲೆಯ ರೈಸ್‌ಮಿಲ್ಲನ್ನು ತೆಗೆದುಕೊಂಡು ಆಮೇಲೆ 9 ವರ್ಷಗಳವರೆಗೆ ಲಕ್ಷಗಟ್ಟಲೆ ಹಣ ಖರ್ಚುಮಾಡಿ, 4 ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಹಾಕಿದ್ದಾರೆ. ಅಂದಮೇಲೆ ಈಗ ಅದನ್ನು ಎಷ್ಟು ಸುಧಾರಿಸಿದ್ದೀರಿ ?

ಶ್ರೀ ಪಿ. ಎಂ. ನಾಡಗೌಡ.—ಈ ಸಹಕಾರ ಸಂಸ್ಥೆಗೆ ಮಾನ್ಯ ಸದಸ್ಯರೇ ಅಧ್ಯಕ್ಷರು ಇದ್ದರು. ಅವರು ಅಧ್ಯಕ್ಷರಾಗಿದ್ದು ಮಾಡಿರುವ ಆಯಿಲ್ ಸೀಡ್ಸ್ ಫ್ಯಾಕ್ಟರಿಯನ್ನು ಇವತ್ತಿನ ದಿವಸ ನೋಡಿದರೆ ಅದು ಬಹಳ ಮಹತ್ವದ್ದಾಗಿದೆ. ಇನ್ನು ಮಂಡ್ಯದೊಳಗೆ ಒಂದು ಅಸಿಟೇಟ್ ಫ್ಯಾಕ್ಟರಿ ಇದೆ. ರಾ ಮೆಟೀರಿಯಲ್ಸ್ ತರಿಸಿಕೊಂಡು ಉತ್ಪನ್ನ ಮಾಡುವ ಕಾರ್ಖಾನೆ. ಇಲ್ಲಿ ಲಿಂತಾಲ್ ಮತ್ತು ಸಿಂತೆಟಿಕ್ ಪದಾರ್ಥಗಳನ್ನು ಉತ್ಪನ್ನ ಮಾಡಬೇಕಾದರೆ, ಒಂದರಕ್ಕೆ ಐದರಷ್ಟು ಷೇರುಗಳನ್ನು ಕೊಡಬೇಕಾಗುತ್ತದೆ. ಇದನ್ನು ರಾಜ್ಯದ ಹಿತದೃಷ್ಟಿಯಿಂದ ಮಾಡಬೇಕಾಗುತ್ತದೆ. ಇದು ತಪ್ಪೋ ಸರಿಯೋ ಎಂದು ಮಾನ್ಯ ಸದಸ್ಯರು ಹೇಳಬೇಕು. ಇನ್ನೂ ಬಹಳ ಮಹತ್ವವಾದಂಥ ವಿಷಯಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ನನಗೆ ಅವಕಾಶ ಕೊಡುವುದು ಒಮ್ಮೆ ವರ್ಷಕ್ಕೆ. ನಾನು ಎಲ್ಲಕ್ಕೂ ಉತ್ತರವನ್ನು ಹೇಳದೇ ಹೋದರೆ ತಪ್ಪಾಗುವ ದೃಷ್ಟಿ ಬರಬಹುದು. ದಯವಿಟ್ಟು ಮಾನ್ಯ ಸದಸ್ಯರು ಕ್ಷಮಿಸಬೇಕು. ಇವತ್ತಿನ ದಿವಸ ಗ್ರಾಮಾಭಿವೃದ್ಧಿ ಸಾಮೂಹಿಕಾಭಿವೃದ್ಧಿ ಬಗ್ಗೆ ಹೆಚ್ಚು ಮಾತನಾಡಬೇಕೆಂಬ ಅಪೇಕ್ಷೆ ಇತ್ತು. ಧಾರವಾಡದ ಮಹತ್ವ ಯೋಜನೆಗಳ ಬಗ್ಗೆ ಮಂಜೂರಾತಿ ದೊರೆಯಬೇಕೆಂಬ ಉದ್ದೇಶದಿಂದ ಈ ಸಭೆಯ 3 ಜನ ಮಾನ್ಯ ಸದಸ್ಯರು, ಅಂದರೆ, ಶ್ರೀ ಬೊಮ್ಮಾಯಿ ಅವರು, ಶ್ರೀಮತಿ ನಾಗಮ್ಮನವರು ಮತ್ತು ಶ್ರೀ ಸಾಣಿಕೊಪ್ಪ ಅವರು ಮಾತನಾಡಿದರು. ಅದರ ಬಗ್ಗೆ ಉತ್ತರ ಕೊಟ್ಟಿದ್ದಾಗಿದೆ.

ಇನ್ನು ಕುಡಿಯುವ ನೀರಿನ ಯೋಜನೆ ಬಹಳ ಮಹತ್ವದ ಯೋಜನೆ. ನಮ್ಮ ರಾಜ್ಯದೊಳಗೆ 3,700 ಗ್ರಾಮಗಳಲ್ಲಿ ಅದರಲ್ಲಿಯೂ ಮಹಾತ್ಮ ಗಾಂಧಿಯವರ ಶತಾಬ್ದಿವರ್ಷದೊಳಗೆ ಈ ಯೋಜನೆಯನ್ನು ಪೂರ್ತಿಮಾಡಬೇಕೆಂದು ಹಠ ತೊಟ್ಟಿರುವುದರಿಂದ ಅದಕ್ಕೆ ಬೇಕಾಗುವಷ್ಟು ಪೂರ್ಣ ಹಣವನ್ನು ನಾವು ಈಗ ಕೊಟ್ಟಿದ್ದೇವೆ.

9-00 P.M.

ಈ ನಮ್ಮ ಮಹಾತ್ಮಾ ಗಾಂಧೀಜಿಯವರ ಶತಾಬ್ದಿ ವರ್ಷವಲ್ಲಿ ನೂರಕ್ಕೆ 50 ರಷ್ಟಾದರೂ ಮಾಡಬೇಕು. ಈ ಎರಡು ಕೋಟಿ ರೂಪಾಯಿ ಒದಗಿಸಿದ್ದಾರೆ. ಇದಕ್ಕಿಂತ ಮಹತ್ವದ್ದು

ರಾಷ್ಟ್ರೀಯ ನೀರಾವರಿ ಯೋಜನೆ. ಈ ವಿಚಾರದಲ್ಲಿ ನಮ್ಮ ಮಾನ್ಯ ಸದಸ್ಯರ ಎಲ್ಲಾ ಸಹಕಾರ ಬೇಕಾಗಿದೆ. ಇದಕ್ಕೆ ಕೇಂದ್ರ ಸರ್ಕಾರದ ಸಹಾಯವನ್ನು ಇನ್ನೂ ಹೆಚ್ಚು ತೆಗೆದುಕೊಂಡು ಮಾಡಬೇಕು. ಇದನ್ನು ಯಾರೂ ಹೇಳಲಿಲ್ಲ. ಇವತ್ತು ಎಲ್ಲಿ ಕಡು ಬಡ ಗ್ರಾಮಗಳಿವೆ, ಎಲ್ಲಿ ಕುಡಿಯುವ ನೀರಿನ ಬಾವಿ ಇಲ್ಲವೋ, ಎಲ್ಲಿ ನೀರಿನ ವ್ಯವಸ್ಥೆ ಇಲ್ಲದೆ ವಕ್ಕಲುತನಕ್ಕೆ ಅವಕಾಶ ಇಲ್ಲವೋ ಅಂಥ ಕಡೆ, ಅವುಗಳನ್ನು ಉಳಿಸುವುದಕ್ಕೆ ಈಗಾಗಲೇ 662 ಯೋಜನೆಗಳನ್ನು ಮಂಜೂರು ಮಾಡಿದ್ದೇವೆ. 199 ಯೋಜನೆಗಳು ಪೂರ್ತಿಯಾಗಿವೆ. ಇದಕ್ಕೆ ಮೂರು ಕೋಟಿ 25 ಲಕ್ಷ ರೂಪಾಯಿ ಗಳನ್ನು ಮಂಜೂರು ಮಾಡಿದ್ದೇವೆ. ಈ ಯೋಜನೆಗಳಲ್ಲಿ ಕೇಂದ್ರ ಸರ್ಕಾರದ್ದು 50, ರಾಜ್ಯ ಸರ್ಕಾರದ್ದು 4 ಮತ್ತು ಕಾನ್‌ಸ್ಟಿಟ್ಯೂಯೆಂಟ್ ಯುನಿಟಗಳದ್ದು 10. ಇನ್ನು ಮುಂದೆ ಹೊಸ 308 ಯೋಜನೆಗಳನ್ನು 4 ಕೋಟಿ 12 ಲಕ್ಷಕ್ಕೆ, ಸರ್ಕಾರದವರು ಸಿದ್ಧ ಮಾಡಿದ್ದಾರೆ. ಇದನ್ನೆಲ್ಲಾ ಮಂಜೂರು ಮಾಡಬೇಕಾದರೆ, ಮಾನ್ಯ ಸದಸ್ಯರುಗಳ ಬೆಂಬಲ ಬೇಕು. ಈಗ ಸರ್ಕಾರಕ್ಕೆ 325 ಲಕ್ಷ ರೂಪಾಯಿಯ ಸ್ಪಿಲ್ ಓವರ್ ಕೆಲಸಗಳು ಇರುವುದರಿಂದ ಅದನ್ನು ಪೂರ್ತಿ ಮಾಡಿಕೊಂಡು ಈ ನಾಲ್ಕು ಕೋಟಿಯ ಯೋಜನೆಯನ್ನು ಮಾಡಲು ಸ್ವಲ್ಪ ಕಷ್ಟವೇ. ಗಾಂಧೀ ಶತಾಬ್ಧಿಯೊಳಗೆ 100ಕ್ಕೆ 10ರಷ್ಟಾದರೂ ಕೊಡಬೇಕು. ಅದನ್ನು ಎಂಥ ಗ್ರಾಮಗಳಿಗೆ ಕೊಡಬೇಕೆಂಬುದನ್ನು ವಿಚಾರ ಮಾಡುತ್ತಿದ್ದೇವೆ.

ಇನ್ನೊಂದು ಏನೆಂದರೆ, ಈ ಒಂದು ಸ್ಥಾನೀಕ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಒಂದು ಐತಿಹಾಸಿಕ ಘಟನೆ ಈ ವರ್ಷದಲ್ಲಿ ಆಗಿದೆ. ಈ ಸಂಸ್ಥೆಗಳಿಗೆ ಕಂದಾಯವನ್ನು ಕೊಡಬೇಕೆಂದು ಇದೆ. ಇದರಿಂದ ಈ ಸಂಸ್ಥೆಗಳ ಹಣದ ಕೊರತೆಯೂ ದೂರವಾಗುತ್ತದೆ; ಎಂದು ನನಗನಿಸುತ್ತದೆ. ಇದನ್ನು ತಾಲ್ಲೂಕು ಬೋರ್ಡಿಗೆ 50ರಷ್ಟು, ಪಂಚಾಯತಿಗಳಿಗೆ 30ರಷ್ಟು ಕೊಡಬೇಕೆಂದು ಇದೆ. ಆಗ ಅಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಚೆನ್ನಾಗಿ ಮಾಡುವುದಕ್ಕಾಗುತ್ತದೆ. ಸರ್ಕಾರದವರು ಏನಾದರೂ ಈ ಸದನದಲ್ಲಿ ಹೇಳಿದರೆ ಅದನ್ನು ಮಾಡದೆ ಹಿಂದಕ್ಕೆ ಹೋಗುವುದಿಲ್ಲ. ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಯಾವ ಸರ್ಕಾರವೇ ಇರಲಿ, ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇದು ಒಂದು ಹೊಂದಾಣಿಕೆಯ ಮಾತು. ಸುಮ್ಮನೆ ಇಲ್ಲಿ ತಪ್ಪನ್ನು ಹೊರಿಸುತ್ತಿದ್ದಾರೆ. ಇವತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಎಲ್ಲಾ ನಮ್ಮವರು ಆರಿಸಿ ಬಂದಿದ್ದಾರೆ. ಅದು ನಮ್ಮ ದಿಟ್ಟತನದ, ದಕ್ಷತೆಯ ಕೆಲಸದಿಂದ ಎಂದು ಮಾತ್ರ ಹೇಳಬಹುದು. ಅದನ್ನು ಒಬ್ಬರಾದರೂ ಯಾರೂ ಹೇಳಬಾರದೇ ! ಇದನ್ನು ಯಾರು ನೀವು ಸರೋದಾಗೆ ಮಾಡಿದ್ದೀರಿ ಎಂದು ಹೇಳಿಲ್ಲ. ವಿರೋಧಪಕ್ಷದವರು ಚೆನ್ನಾಗಿ ಮಾಡಿದ್ದೀರಿ ಎಂದು ಹೇಳಬಹುದು ಎಂದು ತಿಳಿದುಕೊಂಡಿದ್ದೆ, ಆದರೆ ಅವರೂ ಅದನ್ನು ಹೇಳಿಲ್ಲ. ಇವತ್ತು ಸಾಮುದಾಯಿಕ ಯೋಜನೆಗಳನ್ನು ತೆಗೆದುಹಾಕಬೇಕೆಂದು ಕೆಲವರು ಹೇಳುತ್ತಿದ್ದಾರೆ. ಆದರೆ ಅವನ್ನು ಒಪ್ಪುವುದಕ್ಕಾಗುವುದಿಲ್ಲ. ಇನ್ನೊಂದು ಈ ಅಪ್ಲೈಡ್ ನ್ಯೂಟ್ರಿಶನ್ ಪ್ರೋಗ್ರಾಂ ಅದಕ್ಕೆ ಕೇಂದ್ರ ಸರ್ಕಾರದವರು 30 ಸಾವಿರ ರೂಪಾಯಿ ಕೊಡುತ್ತಿದ್ದಾರೆ. ನಾವೂ 5-6 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. 50–55 ನ್ಯೂಟ್ರಿಶಿಯನ್ ಸ್ಕೀಂಗಳು ನಮ್ಮ ರಾಜ್ಯದಲ್ಲಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಮ್ಮ ಯೋಜನೆಗಳನ್ನು ನಿಮಗೆ ಅನುಗುಣವಾಗಿ ಹಾಕಬೇಕೇ ಹೊರತು, ಅವರು ಹಾಕಿದ್ದನ್ನು ಏಕೆ ನೀವು ಒಪ್ಪಿಕೊಳ್ಳುತ್ತೀರಿ ?

ಶ್ರೀ ಪಿ. ಎಂ. ನಾಡಗೌಡ.—ಕೇಂದ್ರ ಸರ್ಕಾರದವರು ಅದನ್ನು ವಿಚಾರ ಮಾಡುತ್ತಿದ್ದಾರೆ. ಅವರು ನಮಗೆ ರೊಕ್ಕ ಕೊಡುವುದು, ನಾವು ಅದನ್ನು ಮಾಡುವುದು. ಇನ್ನು ಮಾನ್ಯ ಕೆ ಎಚ್. ಪಾಟೀಲರು, ಒಂದು ಕಲರ್ ಗ್ಲಾಸ್ ಹಾಕಿಕೊಂಡು ನಮ್ಮನ್ನು ನೋಡುತ್ತಿದ್ದಾರೆ. ಅವರು ಬಹಳ ಸಂಸ್ಥೆಗಳಲ್ಲಿ ಗದಗಿನಲ್ಲಿ ಇದ್ದಾರೆ. ಸರ್ಕಾರದವರು ಇವತ್ತು 8 ಲಕ್ಷ 43 ಸಾವಿರ ರೂಪಾಯಿಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟಿದ್ದೇವೆ. ಎಷ್ಟು ಕೊಟ್ಟರೂ ಕೂಡ ದುರ್ದೈವದಿಂದ ದೂಷಣೆ ಮಾಡುತ್ತಿದ್ದಾರೆ. ಅದಲ್ಲದೆ, ಸಿವಿಲ್ ಸಪ್ಲೈಸ್, ಫರ್ಟಿಲೈಸರ್ ಇಲಾಖೆಯಿಂದ ಎಲ್ಲಾ ಬೇಕಾದಷ್ಟು ಹಣ ಕೊಟ್ಟಿದ್ದಾರೆ.

ಜಿಲ್ಲಾ ಪರಿಷತ್ ಬಗ್ಗೆ ಒಂದು ಮಾತನ್ನು ನಿರೂಪಣೆ ಮಾಡುತ್ತೇನೆ. ಈ ಜಿಲ್ಲಾ ಪರಿಷತ್ ಬಗ್ಗೆ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡಿ ವರದಿ ಮಾಡಿದಂತಹ ಕಾಯಿದೆ ಲ್ಯಾಪ್ಸ್ ಆಗಿದೆ. ಸರ್ಕಾರದವರು ಈ ಬಿಲ್ಲನ್ನು ತರತಕ್ಕದ್ದು ಉಚಿತವಾಗಿದೆ. ಇದರಲ್ಲಿ ಕೆಲವು ಲೀಗಲ್ ಕಾಂಪ್ಲಿಕೇಷನ್‌ಗಳು ಇವೆ. ಆದ್ದರಿಂದ ಸರ್ಕಾರದವರು ಇದನ್ನು ವಿಚಾರ ಮಾಡುತ್ತಿದ್ದಾರೆ. ಈ ಬಗ್ಗೆ ಮಾನ್ಯ ಸದಸ್ಯರಿಗೆ ಎಷ್ಟು ತೀಕ್ಷಣ ಇದೆಯೋ ಅಷ್ಟೇ ತೀಕ್ಷಣ ಸರ್ಕಾರಕ್ಕೂ ಇದೆ. ಇದನ್ನು ಅತಿ ಶೀಘ್ರದಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

(ಶ್ರೀ ಪಿ. ಎಂ. ನಾಡಗೌಡ)

ಇನ್ನೊಂದು ವಿಚಾರ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯ ವಿಚಾರ ಬಹಳ ಮಹತ್ವದ್ದು ಇದೆ. ಈ ಬಗ್ಗೆ ಹೈಕೋರ್ಟಿನಿಂದ ಈಗತಾನೆ ಜಡ್ಜ್‌ಮೆಂಟ್ ಬಂದಿವೆ. ಸರ್ಕಾರ ಇದನ್ನು ಪೂರ್ಣವಾಗಿ ಯಾವ ರೀತಿಯಿಂದಲೂ ವಿಚಾರ ಮಾಡಿಲ್ಲ. ಸುಮಾರು 100-200 ಪುಟಗಳಷ್ಟು ಜಡ್ಜ್‌ಮೆಂಟ್ ಬಂದಿದೆ. ಸರ್ಕಾರ ಇದನ್ನು ವಿಚಾರ ಮಾಡಿಲ್ಲ. ಡೆಮಾಕ್ರಸಿಯೊಳಗೆ ಹೈಕೋರ್ಟಿನವರು ಮಾಡಿದಂತಹ ತೀರ್ಪನ್ನು ಉಲ್ಲಂಘನೆ ಮಾಡುವ ಹಾಗಿಲ್ಲ. ಅದಕ್ಕೋಸ್ಕರ ಇದನ್ನು ವಿಚಾರ ಮಾಡುತ್ತಿದ್ದೇವೆ.

ಇನ್ನೊಂದು ವಿಚಾರ. ಶ್ರೀಮಾನ್ ಸಿದ್ಧವೀರಪ್ಪನವರು ಈಗ ಈ ಸಭೆಯಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಅವರು ನನಮೇಲೆ ಮೋಸ್ಟ್ ಅನ್‌ಚಾರಿಟಬಲ್ ಚಾರ್ಜಸ್ ಮಾಡಿದ್ದಾರೆ. ನಾನು ಬಹಿರಂಗವಾಗಿ ಹೇಳುತ್ತೇನೆ. ನನ್ನ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ವಿಚಾರಣೆ ಮಾಡಿ ಅವರು ಯಾವ ಶಿಕ್ಷೆಯನ್ನು ಕೊಡುತ್ತಾರೆಯೋ ಅದಕ್ಕೆ ನಾನು ತಯಾರಾಗಿದ್ದೇನೆ. ಪ್ರಜಾಸತ್ತಾತ್ಮಕ ರಾಜ್ಯದಲ್ಲಿ ಯಾವ ಒಬ್ಬ ವ್ಯಕ್ತಿಯೇ ಆಗಲೀ ಯಾವುದೇ ರೀತಿಯಿಂದ ಸರ್ಕಾರದ ಮೇಲಾಗಲೀ ಅಥವಾ ಯಾರ ಮೇಲಾಗಲೀ ರಾಜಕೀಯ ವಿಚಾರಕ್ಕಾಗಿ ಅವರನ್ನು ಡೀ ಮಾರಲೈಜ್ ಮಾಡುವುದು ಚಿಂತಾಜನಕವಾದ ವಿಚಾರ. ಶ್ರೀಮಾನ್ ಸಿದ್ಧವೀರಪ್ಪನವರು ಹಿಂದೆ ಮಂತ್ರಿಗಳಾಗಿದ್ದರು. ಈಗ ಮತ್ತೆ ಅವರಿಗೆ ಮಂತ್ರಿಗಳಾಗಬೇಕೆಂಬ ಹಂಬಲ ಇದೆ. ಆದರೆ ಯಾರ ಮೇಲೇ ಆಗಲೀ ರಾಜಕೀಯ ಉದ್ದೇಶದಿಂದ ಅವರ ಹೆಸರನ್ನು ಕೆಡಿಸುವ ಪ್ರಯತ್ನ ಮಾಡಬಾರದು. ತಲೆಯಮೇಲೆ ಕಲ್ಲು ಬಿದ್ದರೂ ಗುಣ ಬಿಡಬಾರದು ಎಂದು ನಾನು ವರ್ತಿಸುತ್ತಿದ್ದೇನೆ. ಇದು ಸರ್ಕಾರದ ಕ್ಯಾಪಿಟಲ್ ಕ್ಯಾರೆಕ್ಟರ್ ಎಂದು ನಾನು ಧೈರ್ಯವಾಗಿ ಹೇಳುತ್ತೇನೆ. ಆದರೆ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರು ಆ ರೀತಿ ನನ್ನ ಮೇಲೆ ಅಪಾದನೆ ಮಾಡಿರುವುದು ದುರ್ದೈವದ ಮಾತು. ನಾನು ಸ್ವಲ್ಪ ಹೆಚ್ಚು ವೇಳೆಯನ್ನು ತೆಗೆದುಕೊಂಡದ್ದಕಾಗಿ ಅಧ್ಯಕ್ಷರು ನನ್ನನ್ನು ಕ್ಷಮಿಸಬೇಕು ಎಂದು ಹೇಳಿ ಮಾನ್ಯ ಸದಸ್ಯರು ಮಾಡಿದಂತಹ ಟೀಕೆಗಳಿಗೆ ಸಾಧ್ಯವಾದ ಮಟ್ಟಿಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಈ ಬೇಡಿಕೆಯನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳಬೇಕೆಂದು ನಾನು ಕಳಕಳಿಯಿಂದ ಕೇಳಿಕೊಂಡು ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. DEPUTY SPEAKER.—I will put all the Demands to the Vote of the House. The question is :

"That the respective sums not exceeding the amounts mentioned, be granted to the Government to defray the charges which will come in course of payment during the financial year for the year ending 31st March 1970 in respect of Demand Nos. 21, 23 and 25."

The motion was adopted.

As directed by the Speaker, the Demands for grants adopted by the House are reproduced below :

DEMAND No. 21—RURAL DEVELOPMENT

32 Rural Development

"That a sum not exceeding Rs. 1,13,13,000 be granted to the Government to defray the charges which will come in course of payment during the financial year for the period ending 31st day of March 1970 in respect of 'Rural Development'."

DEMAND NO. 23—CO-OPERATION.

34 Co-operation

" That a sum not exceeding Rs. 2,28,78,000 be granted to the Government to defray the charges which will come in course of payment during the financial year for the period ending 31st day of March 1970, in respect of 'Co-operation'."

DEMAND NO. 25—COMMUNITY DEVALOPMENT, ETC.

37 Community Development Projects National Extension Service and Local Development Works.

" That a sum not exceeding Rs. 3,03,24,000 be granted to the Government to defray the charges which will come in course of payment during the financial year for the period ending 31st day of March 1970, in respect of 'Community Development Projects, National Extension Service and Local Development works'. "

Mr. DEPUTY SPEAKER.—The House will now adjourn and meet tomorrow at 8-3^ \.M

The House adjourned at Fifteen Minutes past Nine of the Clock to meet again at Thirty Minutes past Eight af the Clock on Tuesday the 25th March 1969.